KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫ || ಬೆಂಗಳೂರು, ಗುರುವಾರ, ಆಗಸ್ಟ್ ೧೯, ೨೦೧೦ (ಶ್ರಾವಣ ೨೮, ಶಕವರ್ಷ ೧೯೩೨) || ಸಂಚಿಕೆ ೩೩

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ವಿ.ರಾ. ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
918	11.8.2010	No. DCA 6 ARB 2007, Dt. 10.8.2010 – Karnataka Government (Allocation of Business) (Amendment) Rules, 2010.
919	12.8.2010	ಸಂ. ಸಿಆಸುಇ 4 ಸೇನಿಸಿ 2010, ದಿ. 11.8.2010 – ಸಾದಿಲ್ವಾರು ವೆಚ್ಚದಲ್ಲಿ ವೇತನ ಪಡೆಯುತ್ತಿರುವ ಪೂರ್ಣಕಾಲಿಕ ನೌಕರರ ನಿವೃತ್ತಿ ವಯಸ್ಸನ್ನು 60 ವರ್ಷಗಳಿಗೆ ಹೆಚ್ಚಿಸುವ ಬಗ್ಗೆ.
920	12.8.2010	ಸಂ. ಸಿಐ 421 ಎಸ್‌ಪಿಕ್ಯೂ 2010, ದಿ. 12.8.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಬಳ್ಳಾರಿ ಜಿಲ್ಲೆಯ ಬಸವನದುರ್ಗ ಮತ್ತು ಹರವನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ ಭೂಸ್ವಾಧೀನ ಅಧಿಸೂಚನೆ.
921	13.8.2010	ಸಂ. ಸಿಐ 436 ಎಸ್‌ಪಿಕ್ಯೂ 2010, ದಿ. 12.8.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಶಿವಮೊಗ್ಗ ಜಿಲ್ಲೆಯ ಸಿದ್ಲಿಪುರ ಗ್ರಾಮಕ್ಕೆ ಸಂಬಂಧಿಸಿದ ಭೂಸ್ವಾಧೀನ ಅಧಿಸೂಚನೆ.
922	13.8.2010	ಸಂ. ಲೋಇ 49 ಇಎಪಿ 2008, ದಿ. 13.82010 – ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – 2ರ ಅನುಷ್ಠಾನಕ್ಕೆಂದು ಕರ್ನಾಟಕ ಹೆದ್ದಾರಿ ಅಧಿನಿಯಮ 1964ರ ಅಡಿಯಲ್ಲಿ ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಇವರನ್ನು ಹೆದ್ದಾರಿ ಪ್ರಾಧಿಕಾರಿಯೆಂದು (ಹೈವೇ ಅಥಾರಿಟಿ) ನೇಮಿಸುವ ಬಗ್ಗೆ.
923	16.8.2010	No. HD 376 PMS 2010, Dt. 13.8.2010 - Authentication/attestation of original documents – delegation of powers to the Additional Deputy Commissioner & Additional District Magistrate, Bangalore Urban and Additional Deputy Commissioner & Additional District Magistrate, Bangalore Rural – reg.
924	16.8.2010	ಸಂ. ಸಿಐ.113:ಎಂಎಂಎಂ.2010 (ಭಾಗ), ದಿ. 13.8.2010 – ಖನಿಜಗಳನ್ನು ಶೇಖರಿಸಲು ಅದಿರು ದಾಸ್ತಾನು ಪ್ರಾಂಗಣ (Stockyard)ಗಳನ್ನು ಸ್ಥಾಪಿಸಲು ಅನುಮತಿ ನೀಡುವ ಬಗ್ಗೆ.
925	16.8.2010	ಸಂ. ರಾಚುಆ.224.ಇಯುಬಿ.2010, ದಿ. 12.8.2010 – ಸ್ಥಳೀಯ ಸಂಸ್ಥೆಗಳಲ್ಲಿ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ಬಗ್ಗೆ.
926	17.8.2010	ಸಂ. ಸಿಐ 305 ಎಸ್‌ಪಿಕ್ಯೂ 2010, ದಿ. 16.8.2010 – ಕೆ.ಐ.ಎ.ಡಿ. ಕಾಯ್ದೆ ಕಲಂ 3(1) 1(3) 28(1)ರಡಿ ಬೆಂಗಳೂರು ಪೂರ್ವ ತಾಲ್ಲೂಕಿನ ಕಾಡುಬೀಸನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದ ಭೂಸ್ವಾಧೀನ ಅಧಿಸೂಚನೆ.
927	17.8.2010	ಸಂ. ಸಿಆಸುಇ 3 ಚುಅನೇ 2010, ದಿ. 17.8.2010 – ಉಪ ಚುನಾವಣೆ – 2010, ಚುನಾವಣಾಧಿಕಾರಿ ನೇಮಕಾತಿ ಅಧಿಸೂಚನೆ.
928	17.8.2010	ಸಂ. ಸಿಆಸುಇ 3 ಚುಅನೇ 2010, ದಿ. 17.8.2010 – ಉಪ ಚುನಾವಣೆ – 2010, ಉಪ ಚುನಾವಣಾಧಿಕಾರಿ ನೇಮಕಾತಿ ಅಧಿಸೂಚನೆ.
929	18.8.2010	ಸಂ. ಸಿಆಸುಇ 8 ಚುವಿಸ 2010, ದಿ. 17.8.2010 – 44. ಗುಲ್ಬರ್ಗಾ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ಅಧಿಸೂಚನೆ.
930	18.8.2010	ಸಂ. ಸಿಆಸುಇ 8 ಚುವಿಸ 2010, ದಿ. 17.8.2010 – 127. ಕಡೂರು ಕ್ಷೇತ್ರದ ಉಪ ಚುನಾವಣೆಗೆ ಅಧಿಸೂಚನೆ.
931	18.8.2010	ಸಂ. ಸಿಆಸುಇ 70 ಸೇಲೋಸೇ 2009, ದಿ. 17.8.2010 – ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸದಸ್ಯರನ್ನು ನೇಮಿಸಿರುವ ಬಗ್ಗೆ.
932	18.8.2010	ಸಂ. ಸಿಐ.225:ಎಂಎಂಎಂ.2010, ಬೆಂಗಳೂರು, ದಿ. 18.8.2010 – ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ವಿಶೇಷ ಕೋಶವನ್ನು ರಚಿಸುವ ಕುರಿತು.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.

http//www.Kar.nic.in/gazette.

೨೦೧೦-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	22–00	880–00
2.	ಭಾಗ – 2	6–00	244–00
3.	ಭಾಗ – 3	26–00	1061–00
4.	ಭಾಗ – 4	4–00	175–00
5.	ಭಾಗ – 4ಎ	5–00	220–00
6.	ಭಾಗ – 5	22–00	879–00
7.	ಭಾಗ – 6 (ಬೆಂಗಳೂರು)........	9–00	357–00
8.	ಭಾಗ – 6ಎ (ಮೈಸೂರು)........	32–00	1300–00
9.	ಭಾಗ – 6ಬಿ (ಧಾರವಾಡ)	45–00	1790–00
10.	ಭಾಗ – 6ಸಿ (ಗುಲ್ಬರ್ಗ)	30–00	1194–00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 .... (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	94–00	3816–00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೧೦-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಆಗಸ್ಟ್ ೧೯, ೨೦೧೦ (ಶ್ರಾವಣ ೨೮, ಶಕ ವರ್ಷ ೧೯೩೨)	ಸಂಚಿಕೆ ೩೩

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ವಸತಿ ಸಚಿವಾಲಯ

ವಿಷಯ : ದೇವದುರ್ಗ ನಗರ ಆಶ್ರಯ ಸಮಿತಿಗೆ ಅಧ್ಯಕ್ಷರ ಮತ್ತು ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ. ವಇ 42 ಹೆಚ್‌ಎಂ 1999 ದಿನಾಂಕ: 10–05–2000.

2) ಲೋಕ ಶಿಕ್ಷಣ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರ ನಡವಳಿ ಸಂ. ಲೋಶಿ. ಗ್ರಂ. ಸು.ಲಾ/ಸ/219/2010, ದಿನಾಂಕ 17–04–2010.

ಪ್ರಸ್ತಾವನೆ :

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದೆ. ದೇವದುರ್ಗ ಮತಕ್ಷೇತ್ರದ ಶಾಸಕರು ಹಾಗೂ ಲೋಕ ಶಿಕ್ಷಣ, ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಶ್ರೀ ಬಸವರಾಜ, ವಕೀಲರು, ಗೌರಂಪೇಟೆ, ತಾಲ್ಲೂಕು ದೇವದುರ್ಗ ಇವರನ್ನು ದೇವದುರ್ಗ ನಗರ ಆಶ್ರಯ ಸಮಿತಿಯ ಅಧ್ಯಕ್ಷರ ಹುದ್ದೆಗೆ ನೇಮಿಸುವಂತೆ ಸೂಚಿಸಿದ್ದು, ದೇವದುರ್ಗ ನಗರ ಆಶ್ರಯ ಸಮಿತಿಗೆ ಅಧ್ಯಕ್ಷರನ್ನು ಮತ್ತು ಅಧಿಕಾರೇತರ ಸದಸ್ಯರನ್ನು ನೇಮಿಸುತ್ತ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ವಇ 28 ಹೆಚ್‌ಎಎಸ್ 2010, ಬೆಂಗಳೂರು, ದಿನಾಂಕ 12ನೇ ಮೇ 2010

ಶ್ರೀ ಬಸವರಾಜ, ವಕೀಲರು, ಗೌರಂಪೇಟೆ, ತಾಲ್ಲೂಕು ದೇವದುರ್ಗ ಇವರನ್ನು ದೇವದುರ್ಗ ನಗರ ಆಶ್ರಯ ಸಮಿತಿಯ ಅಧ್ಯಕ್ಷರ ಹುದ್ದೆಗೆ ಮತ್ತು ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ರವಿಕುಮಾರ್ ಬಿನ್ ಗೌಡಯ್ಯ ಇಳಿಗೇರ್, ಹೊಸ ಬಸ್ ನಿಲ್ದಾಣದ ಹತ್ತಿರ, ದೇವದುರ್ಗ.	ಹಿಂದುಳಿದ ವರ್ಗ
2	ಶ್ರೀ ಖಾಜಾ ಹುಸೇನ್ ಬಿನ್ ಅಹಮ್ಮದ್ ಹುಸೇನ್ ಖಾಜಿ, ಮುರುಗೆಪ್ಪ ಸಾಹುಕಾರರ ಮನೆ ಹತ್ತಿರ ದೇವದುರ್ಗ.	ಅಲ್ಪಸಂಖ್ಯಾತರು
3	ಶ್ರೀ ತುಳಜಪ್ಪಾ ಬಿನ್ ಬೀಮಪ್ಪ ಛಲವಾದಿ ಓಣಿ, ದೇವದುರ್ಗ	ಪರಿಶಿಷ್ಟ ಜಾತಿ
4	ಶ್ರೀಮತಿ ಯಶೋದಾ ಕೋಂ. ಸಿದ್ದಯ್ಯಸ್ವಾಮಿ, ಪುರಾಣಿಕಮಠ, ಸರೋಜಿನಿ ಓಣಿ, ದೇವದುರ್ಗ.	ಸಾಮಾನ್ಯ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಆರ್. ವಲ್ಲೂರ)

ಪೀಠಾಧಿಕಾರಿ–2 ವಸತಿ ಇಲಾಖೆ

ಪಿ.ಆರ್. 1268

ಉನ್ನತ ಶಿಕ್ಷಣ ಸಚಿವಾಲಯ

ವಿಷಯ: ಅಲಹಾಬಾದ್‌ನ ಪ್ರಯಾಗದಲ್ಲಿರುವ ಹಿಂದಿ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಾ ವಿಶಾರದ ಬಿ.ಇಡಿ ಗೆ ಸಮಾನ ಎಂದು ಮಾನ್ಯತೆ ನೀಡುವ ಬಗ್ಗೆ.

ಓದಲಾಗಿದೆ : 1. ದಿನಾಂಕ 30-6-2009 ರಂದು ನಡೆದ 50 ನೇ ಅಂತರ ವಿಶ್ವವಿದ್ಯಾನಿಲಯ ಮಂಡಳಿ ಸಭೆಯ ನಿರ್ಣಯ.

2. ಸರ್ಕಾರದ ಪತ್ರ ಸಂಖ್ಯೆ: ಇಡಿ 110 ಯುಆರ್‌ಸಿ 2009, ದಿನಾಂಕ 24-8-2009.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 30-6-2009 ರಂದು ನಡೆದ 50ನೇ ಅಂತರ ವಿಶ್ವವಿದ್ಯಾನಿಲಯ ಮಂಡಳಿ ಸಭೆಯಲ್ಲಿ ಕನ್ನಡ ಪಂಡಿತರಿಗೆ ಬಿ.ಇಡಿ. ಶಿಕ್ಷಣಕ್ಕೆ ಅವಕಾಶ ಕಲ್ಪಿಸಿರುವ ಮಾದರಿಯಂತೆ ಸಂಸ್ಕೃತ ಪಂಡಿತರಿಗೂ ಬಿ.ಇಡಿ. ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ಹಾಗೂ ಅಲಹಾಬಾದ್‌ನ ಪ್ರಯಾಗದಲ್ಲಿರುವ ಹಿಂದಿ ಪರಿಗಣಿತ ವಿಶ್ವವಿದ್ಯಾನಿಲಯವು (ಸಾಹಿತ್ಯ ಸಮ್ಮೇಳನ ಅಲಹಾಬಾದ್) ಶಿಕ್ಷಾ ವಿಶಾರದವನ್ನು ಬಿ.ಇಡಿ.ಗೆ ಸಮಾನವೆಂದು ರಾಜ್ಯ ಸರ್ಕಾರವು ಮಾನ್ಯತೆ ಮಾಡಲು ನಿರ್ಣಯಿಸಲಾಯಿತು. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 24-8-2009ರ ಪತ್ರದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಹಾಗೂ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಇವರುಗಳಿಗೆ ಅಂತರ ವಿಶ್ವವಿದ್ಯಾನಿಲಯಗಳ ಮಂಡಳಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಹ ತಿಳಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 110 ಯುಆರ್‌ಸಿ 2009, ಬೆಂಗಳೂರು, ದಿನಾಂಕ 29ನೇ ಏಪ್ರಿಲ್2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಅಲಹಾಬಾದ್‌ನ ಪ್ರಯಾಗದಲ್ಲಿರುವ ಹಿಂದಿ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಾ ವಿಶಾರದ ಪದವಿಯನ್ನು ಬಿ.ಇಡಿ.ಗೆ ಸಮಾನ ಎಂದು ಮಾನ್ಯತೆ ನೀಡಿ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಯು.ಬಿ.ಉಳವಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1269 ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಒಳಾಡಳಿತ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯಲ್ಲಿ ಜಿಲ್ಲಾ ಗೃಹ ರಕ್ಷಕ ದಳದ ಕೇಂದ್ರ ವಲಯ ಕಛೇರಿಯನ್ನು ತೆರೆಯಲು ಹಾಗೂ ಅಲ್ಲಿಗೆ ಜಿಲ್ಲಾ ಸಮಾದೇಷ್ಟರ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1) ಬೆಂಗಳೂರು ಜಿಲ್ಲಾಧಿಕಾರಿಯವರ ಪತ್ರ ಸಂ.ಎಂ.ಎ.ಜಿ.(4)ಎಸ್ ಸಿ.ಆರ್ 2/10-11, ದಿನಾಂಕ 3-4-2010.

2) ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ ಮತ್ತು ಪೌರರಕ್ಷಣಾ ಇಲಾಖೆ ಇವರ ಪತ್ರ ಸಂ. ಆಡಳಿತ (1) 1/ಸಿಜಿಓ/2010-11, ದಿನಾಂಕ 13-4-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಬೆಂಗಳೂರು ಜಿಲ್ಲಾಧಿಕಾರಿಯವರ ಪತ್ರದಲ್ಲಿ ಬೆಂಗಳೂರು ನಗರವು ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರವಾಗಿ ಬೆಳೆದಿದ್ದು, ಸಾಮಾಜಿಕ ಭದ್ರತೆ ಹಿತಾಸಕ್ತಿಯಿಂದ ಈಗಾಗಲೇ ನೇಮಕವಾಗಿರುವ ಗೌರವ ಸಮಾದೇಷ್ಟರ ವತಿಯಿಂದ ಬೆಂಗಳೂರು ವಲಯವನ್ನು ನಿರ್ವಹಿಸಲು ಬಹಳ ಕಷ್ಟವಾಗಿರುತ್ತದೆ. ಈ ಹಿನ್ನಲೆಯಲ್ಲಿ ಬೆಂಗಳೂರು ಕೇಂದ್ರ ವಲಯವನ್ನು ತೆರೆದು ಗೃಹರಕ್ಷಕ ದಳವನ್ನು ಸಾಮಾಜಿಕ ಭದ್ರತೆಯನ್ನು ನಿಯಂತ್ರಣ ಮಾಡುವ ದೃಷ್ಟಿಯಿಂದ ಹಾಗೂ ಕಾರ್ಯ ಒತ್ತಡ ಹೆಚ್ಚಾಗಿರುವ ಹಿನ್ನಲೆಯಲ್ಲಿ ಬೆಂಗಳೂರು ಕೇಂದ್ರ ವಲಯವನ್ನು ಸೃಜಿಸಬೇಕಾಗಿರುತ್ತದೆ. ಹಾಗೂ ಅದರಂತೆ ಸಾಮಾಜಿಕ ಭದ್ರತೆಯನ್ನು ನಿಯಂತ್ರಣ ಮಾಡುವ ದೃಷ್ಟಿಯಿಂದ ಮತ್ತೊಂದು ಗೌರವ ಸಮಾದೇಷ್ಟರನ್ನು ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ ಎಂದು ತಿಳಿಸುತ್ತಾ, ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಇನ್ನೊಂದು ಕೇಂದ್ರ ವಲಯವನ್ನು ಸೃಜಿಸಿದಲ್ಲಿ ಇದರಿಂದ ಯಾವುದೇ ವಿಧವಾದ ಆರ್ಥಿಕ ಒತ್ತಡಗಳು ಏರುವುದು ಕಂಡು

ಬರುತ್ತಿಲ್ಲವಾದ್ದರಿಂದ ಇರುವ ಆರ್ಥಿಕ ಸ್ಥಿತಿಯಲ್ಲೇ ಬೆಂಗಳೂರು ಕೇಂದ್ರಕ್ಕೆ ಹೊಸ ಕೇಂದ್ರ ಗೃಹರಕ್ಷಕ ದಳವನ್ನು ತೆರೆದು ಗೌರವ ಸಮಾದೇಷ್ಠರನ್ನು ನೇಮಕ ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ (2) ಪತ್ರದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ ಮತ್ತು ಪೌರರಕ್ಷಣಾ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಪ್ರಸುತ್ತ ಬೆಂಗಳೂರು ಜಿಲ್ಲಾ ಗೃಹರಕ್ಷಕ ದಳವು ಬೆಂಗಳೂರು ನಗರ ಜಿಲ್ಲೆ (Urban) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಾಗಿ (Rural) ವಿಭಜಿತವಾಗಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರದ ಜನ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರುತ್ತಿದ್ದು, ಸುಮಾರು 80 ಲಕ್ಷ ಜನ ಸಂಖ್ಯೆಯನ್ನು ಮುಟ್ಟುತ್ತಿರುವುದರಿಂದ, ಗೃಹರಕ್ಷಕ ಕಾರ್ಯಚಟುವಟಿಕೆಗಳನ್ನು ಬೆಂಗಳೂರು ಬೃಹತ್ ನಗರ ವ್ಯಾಪ್ತಿಯಲ್ಲಿ ಬಲಗೊಳಿಸಲು ಹಾಗೂ ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗಲು ಬೆಂಗಳೂರು ಕೇಂದ್ರ ವಲಯಕ್ಕೆ ಗೌರವ ಸಮಾದೇಷ್ಟರ ಅಗತ್ಯತೆ ಕಂಡುಬರುತ್ತದೆ. ಪ್ರಸ್ತುತ ಇರುವ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಗೃಹರಕ್ಷಕ ದಳದೊಂದಿಗೆ " ಬೆಂಗಳೂರು ಕೇಂದ್ರ ವಲಯ" ಗೃಹರಕ್ಷಕ ದಳದ ಕಛೇರಿಯನ್ನು ಸೃಜಿಸುವ ವಿಷಯವು ಸಮಂಜಸವಾಗಿರುತ್ತದೆ. ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾದ ಬೆಂಗಳೂರು ಕೇಂದ್ರ ವಲಯ ಗೃಹರಕ್ಷಕ ದಳದ ಕಚೇರಿಯ ಆಡಳಿತ ನಿರ್ವಹಣೆ ಹಾಗೂ ಗೃಹರಕ್ಷಕರಿಗೆ ತರಬೇತಿಯನ್ನು ನೀಡುವಲ್ಲಿ ಗೌರವ ಸಮಾದೇಷ್ಟರಿಗೆ ನೆರವು ನೀಡಲು ಪ್ರಾರಂಭಿಕವಾಗಿ ಅತಿ ಕನಿಷ್ಠ ಮಟ್ಟದಲ್ಲಿ ಈ ಕೆಳಕಂಡ ಲಿಪಿಕ ಹಾಗೂ ಕಾರ್ಯನಿರ್ವಾಹಕ ಸಿಬ್ಬಂದಿಯ ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ.

1.	ಸಹಾಯಕ ಆಡಳಿತಾಧಿಕಾರಿ	–	1 ಹುದ್ದೆ
2.	ಅಧೀಕ್ಷಕರು	–	1 ಹುದ್ದೆ
3.	ಪ್ರಥಮ ದರ್ಜೆ ಸಹಾಯಕ	–	1 ಹುದ್ದೆ
4.	ದ್ವಿತೀಯ ದರ್ಜೆ ಸಹಾಯಕ	–	1 ಹುದ್ದೆ
5.	ಬೆರಳಚ್ಚುಗಾರ	–	1 ಹುದ್ದೆ
6.	ಉಪ ಸಮಾದೇಷ್ಟರು	–	1 ಹುದ್ದೆ
7.	ಬೋಧಕ	–	1 ಹುದ್ದೆ
8.	ಸಹಾಯಕ ಬೋಧಕ	–	2 ಹುದ್ದೆ
9.	ಚಾಲಕ	–	1 ಹುದ್ದೆ
10.	ದಲಾಯತ್	–	1 ಹುದ್ದೆ
11.	ಕಾವಲುಗಾರ	–	1 ಹುದ್ದೆ
	ಒಟ್ಟು	–	12 ಹುದ್ದೆ

ಈ ಹುದ್ದೆಗಳನ್ನು ಹೊಸದಾಗಿ ಸೃಜಿಸುವುದರಿಂದ ವಾರ್ಷಿಕವಾಗಿ ರೂ. 23,40,228 ವೆಚ್ಚ ತಗಲುತ್ತದೆ. ಈ ವೆಚ್ಚವನ್ನು ಪ್ರಸಕ್ತ ಸಾಲಿಗೆ ಹಂಚಿಕೆ ಆಗಿರುವ ಅನುದಾನದಲ್ಲಿ ಲಭ್ಯವಾಗುವ ಉಳಿತಾಯದಲ್ಲಿ ಭರಿಸಲಾಗುವುದು ಎಂದು ತಿಳಿಸಿ ಈ ಕೆಳಕಂಡ ಅಂಶಗಳನ್ನು ಸರ್ಕಾರದ ಪರಿಗಣನೆಗಾಗಿ ಸಲ್ಲಿಸಿದ್ದಾರೆ.

1) ಬೆಂಗಳೂರು ಕೇಂದ್ರ ವಲಯ ಎಂದು ಹೊಸದಾಗಿ ಜಿಲ್ಲಾ ಗೃಹರಕ್ಷಕ ದಳದ ಕಚೇರಿಯನ್ನು ಸ್ಥಾಪಿಸಲು;
2) ಬೆಂಗಳೂರು ಕೇಂದ್ರ ವಲಯ ಗೃಹರಕ್ಷಕ ದಳಕ್ಕೆ ಗೌರವ ಸಮಾದೇಷ್ಠರ ಹುದ್ದೆಯನ್ನು ಸೃಜಿಸುವ ಕುರಿತು;
3) ಅನುಬಂಧ 'ಅ' ರಲ್ಲಿ ಕೋರಿರುವಂತೆ ವಾರ್ಷಿಕ ರೂ. 23,40,228/– ಸರಾಸರಿ ಹೆಚ್ಚುವರಿ ಅವರ್ತಕ ವೆಚ್ಚದಲ್ಲಿ ಬೆಂಗಳೂರು ಕೇಂದ್ರ ವಲಯ ಜಿಲ್ಲಾ ಕಛೇರಿಗೆ ಬೇಕಾಗುವ ಒಟ್ಟು 12 ಹುದ್ದೆಗಳನ್ನು ಹೊಸದಾಗಿ ಸೃಜಿಸಲು;
4) ನೂತನ ಕಚೇರಿಗೆ ಕಟ್ಟಡದ ಬಾಡಿಗೆ, ವಿದ್ಯುತ್ ಮತ್ತು ನೀರಿನ ದರ ರೂ. 4,44,000/– 071 – ಕಟ್ಟಡ ವೆಚ್ಚಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು;
5) ರೂ. 5 ಲಕ್ಷಗಳ ವೆಚ್ಚದಲ್ಲಿ ಒಂದು ಹೊಸ ಜೀಪು ಮತ್ತು ರೂ. 1 ಲಕ್ಷ ವೆಚ್ಚದಲ್ಲಿ 2 ಮೋಟಾರ್ ಸೈಕಲ್ ಖರೀದಿಸಲು ಮತ್ತು ಇಂಧನ ಬಾಬ್ತಿಗಾಗಿ ವಾರ್ಷಿಕವಾಗಿ ರೂ. 1.2 ಲಕ್ಷದಂತೆ ಒಟ್ಟು ರೂ. 7.2 ಲಕ್ಷ 195 ಸಾರಿಗೆ ಲೆಕ್ಕ ಶೀರ್ಷಿಕೆಯಡಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು;

6) ಪೀಠೋಪಕರಣ, ದೂರವಾಣೀ ಅಳವಡಿಕೆ, ಕಂಪ್ಯೂಟರ್ ಇತ್ಯಾದಿ ಉಪಕರಣಗಳನ್ನು ಖರೀದಿಸಲು ಮತ್ತು ಅದರ ನಿರ್ವಹಣೆ ಮತ್ತು ಇತರೆ ಕಛೇರಿ ವೆಚ್ಚಗಳನ್ನು ಭರಿಸಲು ರೂ. 3,56,500/– ವೆಚ್ಚ 051 ಸಾಮಾನ್ಯ ವೆಚ್ಚ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು;

7) ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸಲು ರೂ. 6,38,75,000/– ಸ್ವಚ್ಛತಾ ಭತ್ಯೆ ರೂ. 2,40,000/– ಕವಾಯತು ಭತ್ಯೆ ರೂ. 10,80,000/– ಸೇರಿ ಒಟ್ಟು ರೂ. 6,51,95,000/– 015– ಪೂರಕ ವೆಚ್ಚದಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು;

8) ಗೃಹರಕ್ಷಕರಿಗೆ ಸಮವಸ್ತ್ರಕ್ಕಾಗಿ ರೂ. 12,20,000/– 221– ಸಾಧನ ಮತ್ತು ಸಾಮಗ್ರಿಗಳ ವೆಚ್ಚದ ಅಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು;

9) ರಾಜ್ಯ ಗೃಹರಕ್ಷಕರ ಸಂಖ್ಯಾಬಲವನ್ನು 25,000 ದಿಂದ 26, 000ಕ್ಕೆ ಏರಿಸಲು;

ಈ ಪ್ರಸ್ತಾವನೆಗೆ ಒಟ್ಟು ರೂ. 8,84,500/– ಅನಾವರ್ತಕ ವೆಚ್ಚ ಮತ್ತು ರೂ. 6,93,91,228/– ಅವರ್ತಕ ವೆಚ್ಚ ತಗಲುತ್ತದೆಂದು ತಿಳಿಸಿರುತ್ತಾರೆ.

ಮಹಾಸಮಾದೇಷ್ಟರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಒಇ 49 ಕಗೃಸೇ 2010, ಬೆಂಗಳೂರು, ದಿನಾಂಕ 15ನೇ ಮೇ2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರಿಗೆ ಹೊಸ ಗೃಹರಕ್ಷಕ ದಳ ಕೇಂದ್ರ ವಲಯ ಕಛೇರಿಯನ್ನು ತೆರೆಯಲು ಹಾಗೂ ಇಲ್ಲಿಗೆ ಒಂದು ಜಿಲ್ಲಾ ಗೌರವ ಸಮಾದೇಷ್ಟರ ಹುದ್ದೆಯನ್ನು ಮಾತ್ರ ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಕೇಂದ್ರಕ್ಕೆ ಹೊಸ ಗೌರವ ಸಮಾದೇಷ್ಟರ ಹುದ್ದೆಗೆ ಅಗತ್ಯ ಇರುವ ಸಿಬ್ಬಂದಿಯನ್ನು ಪ್ರಸ್ತುತ ಬೆಂಗಳೂರು ಗ್ರಾಮಾಂತರ ಹಾಗೂ ನಗರ ಜಿಲ್ಲಾ ಕಚೇರಿಗಳಲ್ಲಿ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಮರು ಹಂಚಿಕೆ ಮಾಡಿಕೊಂಡು ಕಾರ್ಯನಿರ್ವಹಿಸಲು ಹಾಗೂ ಸದರಿ ಹೊಸ ಕಛೇರಿ ಸ್ಥಾಪಿಸುವುದರಿಂದ ಕಛೇರಿ ಕಟ್ಟಡ ಬಾಡಿಗೆ, ಪೀಠೋಪಕರಣ ಮತ್ತು ಇತರ ಕಛೇರಿ ವೆಚ್ಚಗಳ ಬಾಬ್ತನ್ನು ಪ್ರಸಕ್ತ ಬೇರೆ ಜಿಲ್ಲಾ ಕಛೇರಿಗಳಿಗೆ ಮಂಜೂರಾಗಿರುವ ರೀತಿಯಲ್ಲಿಯೇ ಮಂಜೂರುಮಾಡಲು ಈ ಮೂಲಕ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಅಇ 134 ವೆಚ್ಚ – 11/2010 ದಿನಾಂಕ: 14/05/2010 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಬಿ.ಎಂ. ಲಕ್ಷೀನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೊಲೀಸ್ ಸಹಾಯಕ ಸೇವೆಗಳು)

ಪಿ.ಆರ್. 1270

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಆರ್. ಪುಟ್ಟರಂಗಯ್ಯ ಬಿನ್ ರಂಗಯ್ಯ ನಿವೃತ್ತ ಶಿಕ್ಷಕ, 8ನೇ ಅಡ್ಡ ರಸ್ತೆ ಎಸ್.ಐ.ಟಿ. ಬಡಾವಣೆ, ತುಮಕೂರು ಇವರ ಮಗನಾದ ಎನ್.ಪಿ. ರಘುನಾಥ್ ಇವರ ಮರಣದ ಬಗ್ಗೆ ಸಿ.ಐ.ಡಿ. ತನಿಖೆ.

ಓದಲಾಗಿದೆ : ಶ್ರೀ ಆರ್. ಪುಟ್ಟರಂಗಯ್ಯ ಇವರ ಮನವಿ ದಿನಾಂಕ 9–4–2010

ಪ್ರಸ್ತಾವನೆ :

ಶ್ರೀ ಆರ್. ಪುಟ್ಟರಂಗಯ್ಯ ಬಿನ್ ರಂಗಯ್ಯ ನಿವೃತ್ತ ಶಿಕ್ಷಕ, 8ನೇ ಅಡ್ಡ ರಸ್ತೆ ಎಸ್.ಐ.ಟಿ. ಬಡಾವಣೆ, ತುಮಕೂರು ಇವರ ಮಗನಾದ ಎನ್. ಪಿ. ರಘುನಾಥ್, ಇವರ ಮರಣದ ಬಗ್ಗೆ ಸಿ.ಐ.ಡಿ. ತನಿಖೆ ನಡೆಸುವಂತೆ ಕೋರಿ ಮೇಲೆ ಓದಲಾದ ಮನವಿಯಲ್ಲಿ ಕೋರಿರುತ್ತಾರೆ.

ಈ ಕೊಲೆಯ ಬಗ್ಗೆ ತುಮಕೂರಿನ ಎನ್.ಇ.ಪಿ.ಎಸ್. ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ.247/2009 ದಾಖಲಾಗಿರುವುದು ಕಂಡು ಬರುತ್ತದೆ.

ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ : ಒಇ 63 ಸಿಐಡಿ 2010, ಬೆಂಗಳೂರು, ದಿನಾಂಕ 13ನೇ ಮೇ 2010

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ ತುಮಕೂರಿನ ಎಸ್.ಐ.ಟಿ. ಬಡಾವಣೆಯ ಶ್ರೀ ಎನ್.ಪಿ. ರಘುನಾಥ್, ಎಂಬುವವರು ದಿನಾಂಕ 21-2-2009ರಂದು ಕೊಲೆಯಾಗಿರುವ ಬಗ್ಗೆ ತುಮಕೂರಿನ ಎನ್.ಇ.ಪಿ.ಎಸ್. ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂ.247/2009ನ್ನು ಮುಂದಿನ ತನಿಖೆಗಾಗಿ ಸಿ.ಐ.ಡಿ.ಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಮೊಕದ್ದಮೆಗೆ ಸಂಬಂಧಿಸಿದ ಕಡತವನ್ನು ಸಿ.ಐ.ಡಿ. ತಂಡಕ್ಕೆ ಹಸ್ತಾಂತರಿಸಲು ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಇವರು ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪಿ.ಶಿವರಾಮ್ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಅಪರಾಧಗಳು)

ಪಿ.ಆರ್. 1271

COMMERCE AND INDUSTRIES SECRETARIAT

Sub :- Approval to the Project Proposal of M/s Rajashree Cements, to enhance the capacity of Captive Power Plant to 185.5 MW.

Read :-1) Govt. Order No. CI 30 SPI 2010 dated : 25.02.2010.
2) Proceedings of the 21st State High Level Clearance Committee (SHLCC) meeting held on 29.03.2010..

Preamble:

M/s Rajashree Cements, had proposed to enhance Cement Plant Capacity from 4.20 Million MTPA to 8.45 Million MTPA & Captive Power Plant Capacity to 130 MW in Sedam Taluk, Gulbarga District, with an investment of Rs. 3000 crores, generating employment to about 400 persons was approved in 20th SHLCC meeting held on 05-01-2010 and accordingly, G.O. read at (1) above was issued.

In the 21st State High Level Clearance Committee (SHLCC) meeting held on 29-03-2010, the proposal of M/s Rajashree Cements to increase the Captive Power Plant Capacity from 58.5 MW to 185.5 MW is approved.

Hence the following Order.

Government Order No. CI 30 SPI 2010, Bangalore, dated : 11th May 2010

Government is pleased to accord in principle approval for the proposal of M/s Rajashree Cements, to increase the captive power plant Capacity from 58.5 MW to 188.5 MW. Incentives, concessions and other conditions remain the same as in G.O. read at (1) above.

By Order and in the name of the Governor of Karnataka

(Aparna Pavate)
Desk Officer (Technical Cell)
Commerce & Industries Department

P.R. 1272

ಸಹಕಾರ ಸಚಿವಾಲಯ

ವಿಷಯ : ರಾಯ್‌ಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆಗೆ ವಾರ್ಷಿಕ ಮಹಾಸಭೆಗಳನ್ನು ನಡೆಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಸಇ 22 ಸಸಕಾ 2009, ದಿನಾಂಕ 08-03-2010.
2) ರಾಯ್‌ಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರಾಯಬಾಗ್ ಇವರ ಪತ್ರ ಸಂಖ್ಯೆ : ರಾಸಸಕಾ/ಠೇವಣಿ/ನಗದೀಕರಣ/2009-10, ದಿನಾಂಕ 24-03-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರ ಆದೇಶದಲ್ಲಿ ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರಾಯಭಾಗದ 2001 ರಿಂದ 2008ರ ವರೆಗಿನ ಸಾಲುಗಳ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ದಿನಾಂಕ 31-03-2010 ರೊಳಗೆ ನಡೆಸಲು ಕಾಲಾವಕಾಶ ನೀಡಿ ಆದೇಶಿಸಲಾಗಿತ್ತು. ಮೇಲೆ (2)ರ ದಿನಾಂಕ 24-03-2010ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು,

ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರಾಯಬಾಗ ಈ ಸಂಸ್ಥೆಗೆ ಸರ್ಕಾರದ ಆದೇಶ ಸಂಖ್ಯೆ : ಸಇ 22 ಸಸಕಾ 2009 ದಿನಾಂಕ 08-03-2010 ರಲ್ಲಿ ಸದರಿ ಸಕ್ಕರೆ ಕಾರ್ಖಾನೆಗೆ 2000-01 ನೇ ರಿಂದ 2008-09ನೇ ಸಾಲುಗಳ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 31-03-2010 ರ ಒಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಲಾಗಿದೆ ಎಂದು ತಿಳಿಸುತ್ತಾ, ಆದರೆ, ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಶ್ರೀ ರೇಣುಕಾ ಸುಗರ್ ಲಿ., ಬೆಳಗಾವಿ ಇವರಿಗೆ ಗುತ್ತಿಗೆ ನೀಡಿದ್ದು. ಗುತ್ತಿಗೆದಾರರಿಂದ ಮೊದಲನೇ ಕಂತಿನ ಹಣ ರೂ. 30.00 ಕೋಟಿ ಪಾವತಿಸಿದ್ದು. ಉಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ಹೆಚ್ಚುವರಿ ಠೇವಣಿ ರೂ. 28.00 ಕೋಟಿಗಳನ್ನು ಭರಿಸಬೇಕಾಗಿದೆ. ಈ ಪೈಕಿ ಗುತ್ತಿಗೆದಾರರು ಆದಾಯ ತೆರಿಗೆ ರೂ. 25,11,60,000-00 ಗಳನ್ನು ಪಾವತಿಸಿರುವರು. ಈ ಹಣದಿಂದ ರೈತರ ಕಬ್ಬಿನ ಬಿಲ್ಲು ಬಾಕಿ, ಬಾಕಿ ವೇತನ, ಭವಿಷ್ಯ ನಿಧಿ, ಅಬಕಾರಿ ತೆರಿಗೆ ಇತ್ಯಾದಿ ಬಾಕಿಗಳನ್ನು ತೀರಿಸುವ ಕೆಲಸ ಬಾಕಿ ಇದೆ. ಇದಲ್ಲದೇ, ಕೇಂದ್ರ ಸರ್ಕಾರದ ನಿಧಿ ಸಾಲ ಇನ್ನಿತರೇ ಬ್ಯಾಂಕಿನ ಸಾಲ ಬಾಕಿ ಇರುತ್ತದೆ. ಈ ಎಲ್ಲಾ ಶಾಸನಬದ್ಧ ಬಾಕಿಗಳನ್ನು ತೀರಿಸುವುದು ಅವಶ್ಯವಾಗಿರುವುದರಿಂದ, ಬಾಕಿಗಳನ್ನು ತೀರಿಸಿದ ನಂತರ ಕಾರ್ಖಾನೆಯ ವಾರ್ಷಿಕ ಮಹಾ ಸಭೆಗಳನ್ನು ಜರುಗಿಸುವುದು ಸೂಕ್ತವೆಂದು ತಿಳಿಸುತ್ತಾ, 2000-01 ರಿಂದ 2008-09ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಗಳನ್ನು 2009-10ನೇ ಸಾಲಿನ ಸರ್ವ ಸದಸ್ಯರು ವಾರ್ಷಿಕ ಮಹಾ ಸಭೆಯೊಂದಿಗೆ ದಿನಾಂಕ 30-09-2010ರ ಒಳಗಾಗಿ ಜರುಗಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 06 ಸಸಕಾ 2010, ಬೆಂಗಳೂರು, ದಿನಾಂಕ: 10ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ, ರಾಯಬಾಗ್ ಇದರ 2000-01 ರಿಂದ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 30-09-2010 ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2010ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಡಿಗೆ ಮೊದಲು ಜಾರಿಯಲ್ಲಿದಂತೆ ಸದರಿ 27(1)ರ ಕಲಂನ ಉಪ ಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ನಂಜುಂಡಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1308 ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದರ 2008-09ರ ವಾರ್ಷಿಕ ಸಾಮಾನ್ಯ ಸಭೆಯನ್ನು ಜರುಗಿಸಲು ಕಾಲಾವಕಾಶ ನೀಡುವ ಕುರಿತು.

ಓದಲಾಗಿದೆ : ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ : ಡಿಎಸ್‌ಕೆ/ಇಎಸ್‌ಟಿಎಸ್/ಎಜಿಎಂ/364/2009-10, ದಿನಾಂಕ : 03-03-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 03-03-2010ರ ಪತ್ರದಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ, ಬೆಂಗಳೂರು ಇವರು ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದರ ಸಕ್ಕರೆ ಘಟಕವನ್ನು ಪ್ರಾರಂಭಿಸುವ ಉದ್ದೇಶದಿಂದ ಕಾರ್ಖಾನೆಯ ಎಲ್ಲರೂ ಮಗ್ನರಾಗಿರುವುದರಿಂದ ಮತ್ತು ಕಾರ್ಖಾನೆಗೆ ಅವಶ್ಯಕವಿರುವ ಹೆಚ್ಚಿನ ಪಾಲು ಬಂಡವಾಳವನ್ನು ಕ್ರೋಢೀಕರಿಸುವಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಆಡಳಿತ ಮಂಡಳಿಯವರೆಲ್ಲರೂ ಕಾರ್ಯ ಮಗ್ನರಾಗಿದ್ದರಿಂದ ಇದರ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 31-03-2010ರ ಒಳಗೆ ಜರುಗಿಸುವ ಬದಲು ದಿನಾಂಕ 30-09-2010ರ ಒಳಗೆ ಜರುಗಿಸಲು ಅನುಮತಿ ನೀಡುವಂತೆ ದಿನಾಂಕ 30-01-2010ರ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಅದರಂತೆ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 30-09-2010ರ ಒಳಗೆ ನಡೆಸಲು ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಇ 04 ಸಸಕಾ 2010, ಬೆಂಗಳೂರು, ದಿನಾಂಕ: 7ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕಾಕತಿ, ಬೆಳಗಾವಿ ಇದರ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 30-09-2010ರ ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1) ರ ಉಪ ಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2010ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಡಿಗೆ ಮೊದಲು ಜಾರಿಯಲ್ಲಿದಂತೆ ಸದರಿ 27(1)ರ ಕಲಂನ ಉಪ ಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ನಂಜುಂಡಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 1316

ಒಳಾಡಳಿತ ಸಚಿವಾಲಯ

ವಿಷಯ : ಆಂತರಿಕ ಭದ್ರತಾ ಘಟಕದಲ್ಲಿ ಹಾಗೂ ಎ.ಎನ್.ಎಫ್. ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿ ಮತ್ತು ಲಿಪಿಕ ವರ್ಗದ ನೌಕರ ವರ್ಗಕ್ಕೆ ಸಮಾನ ದರದಲ್ಲಿ ವಿಶೇಷ ಕರ್ತವ್ಯ ಭತ್ಯೆ ಮಂಜೂರು ಮಾಡುವ ಕುರಿತು.

ಓದಲಾಗಿದೆ : ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರದ ಸಂಖ್ಯೆ ಆರ್.ಎಲ್.ಎನ್./(1)/11/2000-01, ದಿನಾಂಕ 06-12-2009.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 8 ಎಸ್‌ಆರ್‌ಪಿ 2007, ದಿನಾಂಕ 16-05-2007ರಲ್ಲಿ ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ಹೊಸ ವೇತನ ಶ್ರೇಣಿಯನ್ನು ಜಾರಿ ಮಾಡಿದ್ದು ನಕ್ಸಲ್ ನಿಗ್ರಹ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿ ಮತ್ತು ಲಿಪಿಕ ಸಿಬ್ಬಂದಿಗಳಿಗೆ ಮೂಲ ವೇತನದ ಶೇ. 50ರಷ್ಟು ವಿಶೇಷ ಭತ್ಯೆಯನ್ನು ಹೊಸ ವೇತನ ಶ್ರೇಣಿಯಲ್ಲಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಈ ಹಿಂದೆ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 1 ಪಿಓಪಿ 2005 (ಭಾಗ) ದಿನಾಂಕ 21-05-2005ರಲ್ಲಿ ರಾಜ್ಯದ ನಕ್ಸಲೈಟ್ ಚಟುವಟಿಕೆಗಳ ನಿಗ್ರಹಕ್ಕಾಗಿ ಮರುನಿಯೋಜನೆಗೊಂಡ ಎ.ಎನ್.ಎಫ್. ಪಡೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ 1999ರ ವೇತನ ಶ್ರೇಣಿಯಲ್ಲಿನ ಅವರ ಹುದ್ದೆಗಳಿಗೆ ಅನ್ವಯಿಸುವ ಮೂಲ ವೇತನದ ಶೇ. 50ರಷ್ಟು ವಿಶೇಷ ಭತ್ಯೆಯನ್ನು (Special Allowance) ಮಂಜೂರು ಮಾಡಲಾಗಿತ್ತು ಮತ್ತು ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 208 ಪಿಓಪಿ 2008, ದಿನಾಂಕ 12-12-2008ರಲ್ಲಿ ಹೊಸದಾಗಿ ಪ್ರತ್ಯೇಕ ರಾಜ್ಯ ಮಟ್ಟದ ಆಂತರಿಕ ಭದ್ರತಾ ವಿಭಾಗವನ್ನು ಸ್ಥಾಪಿಸಲು ಮಂಜೂರಾತಿ ನೀಡಿದ್ದು ಸದರಿ ಆಂತರಿಕ ಭದ್ರತಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿ ಮತ್ತು ಲಿಪಿಕ ಸಿಬ್ಬಂದಿ ವರ್ಗದವರಿಗೆ ಮೂಲ ವೇತನದ ಶೇ. 50 ರಷ್ಟನ್ನು ಹೆಚ್ಚುವರಿ ವೇತನವನ್ನಾಗಿ (Additional Pay) ನೀಡಲು ಮಂಜೂರಾತಿ ನೀಡಲಾಗಿದೆ.

ಮೇಲ್ಕಂಡ ಸನ್ನಿವೇಶದಲ್ಲಿ ಈ ಹಿಂದೆ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 1 ಪಿಓಪಿ 2005 (ಭಾಗ), ದಿನಾಂಕ 21-05-2005ರಲ್ಲಿ ರಾಜ್ಯದ ನಕ್ಸಲೆಟ್ ಚಟುವಟಿಕೆಗಳ ನಿಗ್ರಹಕ್ಕಾಗಿ ಮರುನಿಯೋಜನೆಗೊಂಡ ಎ.ಎನ್.ಎಫ್. ಪಡೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮಂಜೂರು ಮಾಡಿದ 1999ರ ವೇತನ ಶ್ರೇಣಿಯಲ್ಲಿ ಅವರ ಹುದ್ದೆಗಳಿಗೆ ಅನ್ವಯಿಸುವ ಮೂಲ ವೇತನದ ಶೇ. 50ರಷ್ಟು ವಿಶೇಷ ಭತ್ಯೆ (Special Allowance) ಹಾಗೂ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 208 ಪಿಓಪಿ 2008, ದಿನಾಂಕ 12-12-2008ರಲ್ಲಿ ಆಂತರಿಕ ಭದ್ರತಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಮಂಜೂರು ಮಾಡಿದ್ದ ಅವರ ಮೂಲ ವೇತನದ ಶೇ. 50ರಷ್ಟನ್ನು ಹೆಚ್ಚುವರಿ ವೇತನದ (Additional Pay) ಬದಲಾಗಿ ಆಂತರಿಕಾ ಭದ್ರತಾ ಘಟಕದಲ್ಲಿ ಮತ್ತು ಎ.ಎನ್.ಎಫ್. ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿಗೆ ಮತ್ತು ಲಿಪಿಕ ವರ್ಗದ ನೌಕರ ವರ್ಗಕ್ಕೆ ಏಕರೂಪವಾಗಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 40 ಎಸ್‌ಆರ್‌ಪಿ 2007 (ii) ದಿನಾಂಕ 13-03-2008 ರನ್ವಯ ಕ್ರಮವಾಗಿ ಪೂರ್ವ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನದ ಶೇಕಡಾ 50 ಮತ್ತು

ಶೇಕಡಾ 20 ದರದಲ್ಲಿ ವಿಶೇಷ ಕರ್ತವ್ಯ ಭತ್ಯೆಯನ್ನು (Special Duty Allowance) ಮಂಜೂರು ಮಾಡುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಯಿತು.

ಅದರಂತೆ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 110 ಪಿಒಪಿ 2008, ಬೆಂಗಳೂರು, ದಿನಾಂಕ: 18ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಈ ಹಿಂದೆ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 1 ಪಿಒಪಿ 2005 (ಭಾಗ), ದಿನಾಂಕ 21-05-2005ರಲ್ಲಿ ರಾಜ್ಯದ ನಕ್ಸಲೈಟ್ ಚಟುವಟಿಕೆಗಳ ನಿಗ್ರಹಕ್ಕಾಗಿ ಮರುನಿಯೋಜನೆಗೊಂಡ ಎ.ಎನ್.ಎಫ್. ಪಡೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮಂಜೂರು ಮಾಡಿದ 1999ರ ವೇತನ ಶ್ರೇಣಿಯಲ್ಲಿ ಅವರ ಹುದ್ದೆಗಳಿಗೆ ಅನ್ವಯಿಸುವ ಮೂಲ ವೇತನದ ಶೇ. 50 ರಷ್ಟು ವಿಶೇಷ ಭತ್ಯೆ (Special Allowance) ಹಾಗೂ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 208 ಪಿಒಪಿ 2008, ದಿನಾಂಕ 12-12-2008ರಲ್ಲಿ ಆಂತರಿಕ ಭದ್ರತಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಮಂಜೂರು ಮಾಡಿದ್ದ ಅವರ ಮೂಲ ವೇತನದ ಶೇ. 50 ರಷ್ಟನ್ನು ಹೆಚ್ಚುವರಿ ವೇತನದ (Additional Pay) ಬದಲಾಗಿ ಆಂತರಿಕ ಭದ್ರತಾ ಘಟಕದಲ್ಲಿ ಮತ್ತು ಎ.ಎನ್.ಎಫ್. ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಮತ್ತು ಲಿಪಿಕ ವರ್ಗದ ನೌಕರ ವರ್ಗಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 40 ಎಸ್‌ಆರ್‌ಪಿ 2007 (ii) ದಿನಾಂಕ : 13-03-2008 ರನ್ವಯ ಕ್ರಮವಾಗಿ ಪೂರ್ವ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನದ ಶೇಕಡಾ 50 ಮತ್ತು ಶೇಕಡಾ 20ರ ದರದಲ್ಲಿ ವಿಶೇಷ ಕರ್ತವ್ಯ ಭತ್ಯೆಯನ್ನು (Special Duty Allowance) ಮಂಜೂರು ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಮುಂದುವರೆದು ಆಂತರಿಕ ಭದ್ರತಾ ಘಟಕದಲ್ಲಿ ಮತ್ತು ಎ.ಎಲ್.ಎಫ್. ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಕ್ರಮವಾಗಿ ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 208 ಪಿಒಪಿ 2008, ದಿನಾಂಕ 12-12-2008ರಲ್ಲಿ ಮತ್ತು ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 1 ಪಿಒಪಿ 2005 (ಭಾಗ), ದಿನಾಂಕ 21-05-2005ರಲ್ಲಿ ಮಂಜೂರು ಮಾಡಿರುವ ಇತರ ಪ್ರೋತ್ಸಾಹಗಳನ್ನು ಸದರಿ ಆದೇಶಗಳನ್ನು ಮಂಜೂರು ಮಾಡಿರುವುದನ್ನು ಮುಂದುವರೆಸಲಾಗಿದೆ.

ಸದರಿ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಐಪಿಎಸ್ ವೃಂದದ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಅದೇಶ ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 10 EXP 11/09 ದಿನಾಂಕ : 12-01-2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಬಿ. ಎಂ. ಲಕ್ಷ್ಮೀನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪಿ.ಆರ್. 1317

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : "ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣ ನಿಯಮಗಳು, 1969"ರ ನಿಯಮ 8ಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಪ್ರಸ್ತಾವನೆ :

"ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣ ನಿಯಮಗಳು, 1969" ಅನ್ನು 1967ರಲ್ಲಿ ರೂಪಿಸಲಾಯಿತು ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಯಿತು. ಆದೇಶ ಸಂಖ್ಯೆ : ಸಿಆಸುಇ 546 ಪಿಎಫ್‌ಎಸ್ 79, ದಿನಾಂಕ 01-07-1981ರಲ್ಲಿ, ಈ ನಿಯಮವನ್ನು "ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಸೈನಿಕ ಸನ್ಮಾನ ಗೌರವಧನ ಯೋಜನೆ" ಎಂಬುದಾಗಿ ಬದಲಾಯಿಸಲಾಯಿತು. ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನವನ್ನು ಈ ನಿಯಮಗಳಿಗನುಸಾರವಾಗಿ ನೀಡಲಾಗುತ್ತಿದೆ.

ಆದೇಶ ಸಂಖ್ಯೆ : ಸಿಆಸುಇ 34 ಪಿಎಫ್‌ಜಿ 92, ದಿನಾಂಕ 02-06-1992ರಲ್ಲಿ ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣ ನಿಯಮಗಳು, 1969ರ ಮೇರೆಗೆ ಗೌರವಧನ ಮಂಜೂರು ಮಾಡುವುದಕ್ಕಾಗಿ ಅರ್ಜಿಗಳನ್ನು ಸಲ್ಲಿಸಲು 30-06-1992ನ್ನು ಕೊನೆ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು. ದಿನಾಂಕ 01-01-1983 ರಿಂದ ದಿನಾಂಕ 30-06-1992ರ ನಡುವೆ ಸ್ವೀಕರಿಸಲಾದ ಅರ್ಜಿಗಳಿಗೆ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನವನ್ನು ಆದೇಶದ ದಿನಾಂಕದಿಂದ ಮಂಜೂರು ಮಾಡಲಾಗಿರುತ್ತದೆ. ಆದರೆ, ರಾಜ್ಯದ ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧವಿಲ್ಲದಿರುವುದರಿಂದ, ನ್ಯಾಯಾಲಯದಲ್ಲಿ ದಾಖಲಾಗಿದ್ದ ಕೆಲವು ಪ್ರಕರಣಗಳಲ್ಲಿ, ಅರ್ಜಿ ದಿನಾಂಕದಿಂದ ಗೌರವಧನವನ್ನು ನೀಡುವಂತೆ ಕರ್ನಾಟಕ ಉಚ್ಛ ನ್ಯಾಯಾಲಯವು ನಿರ್ದೇಶಿಸಿದ್ದರಿಂದ, ಅನೇಕ ಮೊಕದ್ದಮೆಗಳಲ್ಲಿ ದೊಡ್ಡ ಮೊತ್ತದ ಬಾಕಿಗಳನ್ನು ಕ್ಲೇಮ್ ಮಾಡಲಾಗಿತ್ತು.

ನಿಯಮಗಳ ಮಟ್ಟಿಗೂ ಸಹ, ಈಗಿರುವ ನಿಯಮಗಳಲ್ಲಿ ಅಸ್ಪಷ್ಟತೆ ಇದ್ದು, ಅದರಲ್ಲಿ ಗೌರವಧನವನ್ನು ಆದೇಶದ ದಿನಾಂಕದಿಂದ ಮಾತ್ರ ಸಂದಾಯ ಮಾಡಬೇಕೆಂದು ನಿರ್ದಿಷ್ಟವಾಗಿ ಸ್ಪಷ್ಟೀಕರಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣ ನಿಯಮಗಳು 1969ರ ನಿಯಮ 8ಕ್ಕೆ ತಿದ್ದುಪಡಿ ತರಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ : ಸಿಆಸುಇ10 ಪಿಎಫ್‌ಜಿ 2006, ಬೆಂಗಳೂರು, ದಿನಾಂಕ: 18ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಸರ್ಕಾರವು "ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣ ನಿಯಮಗಳು, 1969"ರ ನಿಯಮ 8ಕ್ಕೆ ಈ ಕೆಳಗಿನಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

ಪಿಂಚಣಿಯ ಪ್ರಾರಂಭದ ದಿನಾಂಕ :- ಈ ನಿಯಮಗಳ ಅಡಿಯಲ್ಲಿ ನೀಡಲಾದ ಪಿಂಚಣಿ ಪ್ರಾರಂಭವು ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹೆಚ್. ಜಯರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಅಸು-ರಾಜಕೀಯ ವಿಶ್ರಾಂತಿ ವೇತನ-1)

ಪಿ.ಆರ್. 1318

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಹಂಗಾಮಿ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1) ಅದೇಶ ಸಂಖ್ಯೆ : ಪಸಂಮೀ 167 ಪಸಸೇ 2008, ದಿನಾಂಕ 11-05-2009

2) ಪತ್ರ ಸಂಖ್ಯೆ : ಆಪಸಂ/ಸಿಬ್ಬಂದಿ-1(ಅ)/ವಿವ-1/(ಭಾಗ-1)/09-10, ದಿನಾಂಕ : 12-04-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ ಅಡಿಯಲ್ಲಿನ ವಿವಿಧ ವೃಂದಗಳ ಒಟ್ಟು 1004 ಹಂಗಾಮಿ ಹುದ್ದೆಗಳನ್ನು ಇಲಾಖಾ ಹಿತದೃಷ್ಟಿಯಿಂದ ದಿನಾಂಕ : 01-04-2009 ರಿಂದ ದಿನಾಂಕ 31-03-2010 ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರುರವರು ಹಂಗಾಮಿ ಹುದ್ದೆಗಳ ಮುಂದುವರೆಸುವಿಕೆಯ ಅವಧಿ ದಿನಾಂಕ 31-03-2010ಕ್ಕೆ ಮುಕ್ತಾಯಗೊಂಡಿದ್ದು, 1004 ಹುದ್ದೆಗಳ ಪೈಕಿ ಲೆಕ್ಕಶೀರ್ಷಿಕೆ "2403-101-01 ದೊಡ್ಡರೋಗ ನಿರ್ಮೂಲನಾ ಲಸಿಕೆ ಯೋಜನೆ 201-ಪಶುವೈದ್ಯ ಸೇವೆ ಮತ್ತು ಪ್ರಾಣಿ ಆರೋಗ್ಯ ಯೋಜನೆ" ಅಡಿಯಲ್ಲಿನ 14 ಹುದ್ದೆಗಳನ್ನು (ಪಶುವೈದ್ಯಕೀಯ ಪರೀಕ್ಷಕ ವೃಂದದ 12 ಹುದ್ದೆ ಹಾಗೂ ವಾಹನ ಚಾಲಕ ವೃಂದದ 2 ಹುದ್ದೆ) ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸ್ಥಳಾಂತರಗೊಂಡಿರುವುದರಿಂದ ಅವುಗಳನ್ನು ಬಿಟ್ಟು ಉಳಿದ 990 ಹಂಗಾಮಿ ಹುದ್ದೆಗಳನ್ನು ಮುಂದುವರೆಸುವುದು ಅವಶ್ಯಕವಾಗಿರುತ್ತದೆಂದು ತಿಳಿಸಿರುತ್ತಾರೆ. 990 ಹಂಗಾಮಿ ಹುದ್ದೆಗಳ ಪೈಕಿ 111 ಹುದ್ದೆಗಳು ಕೇಂದ್ರ ಕಛೇರಿಯಲ್ಲಿ, 52 ಹುದ್ದೆಗಳು ಸಾಂಖ್ಯಿಕ ಸಂಗ್ರಹ ಮತ್ತು ಅಂಕಿ ಅಂಶ ಕಛೇರಿಯಲ್ಲಿದ್ದು ಉಳಿದೆಲ್ಲಾ ಹುದ್ದೆಗಳನ್ನು ರಾಜ್ಯವಲಯದ ಜಾನುವಾರು ಕ್ಷೇತ್ರಗಳಲ್ಲಿನ ಹುದ್ದೆಗಳಾಗಿರುತ್ತದೆಂದು, ಜಾನುವಾರು ಕ್ಷೇತ್ರಗಳಲ್ಲಿ ಉತ್ತಮ ದೇಶಿಯ, ವಿದೇಶಿಯ ಮಿಶ್ರತಳಿಗಳ ವೀರ್ಯ ಸಂಸ್ಕರಿಸಲು, ರೈತರ ರಾಸುಗಳ ಕೃತಕ ಗರ್ಭಧಾರಣೆಗೆ ಬೇಕಾದ ವೀರ್ಯವನ್ನು ಉತ್ಪಾದಿಸಲು, ತಳಿಗಳನ್ನು ಸಂರಕ್ಷಿಸಲು ವೀರ್ಯ ನಳಿಕೆಗಳನ್ನು ಸರಬರಾಜು ಕಾರ್ಯಕ್ರಮಗಳಿಗಾಗಿ ರೈತರಿಗೆ ಪಶುಪಾಲನೆ ಬಗ್ಗೆ ತರಬೇತಿ ನೀಡುವುದು. ಹೈನುಗಾರಿಕೆ ಶಿಕ್ಷಣಾರ್ಥಿಗಳಿಗೆ ತರಬೇತಿ, ಜಾನುವಾರು ಹಾಗೂ ಕುಕ್ಕುಟ ತಳಿಗಳ ಸಂವರ್ಧನೆ ಚಟುವಟಿಕೆಗಳನ್ನು ನಿರ್ವಹಿಸಲು ಹಾಗೂ ಮೇವು ಬೆಳೆಗಳ ಮಿನಿಕಿಟ್ ಉತ್ಪಾದನೆ, ಸುಧಾರಿತ ತಳಿಗಳ ಹುಲ್ಲಿನ ಬೇರು, ಬೀಜವನ್ನು ರೈತರಿಗೆ ಸರಬರಾಜು ಮಾಡಲು, ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲು, ಇಲಾಖಾ ಅಧಿಕಾರಿ/ಸಿಬ್ಬಂದಿಗೆ ಪುನಶ್ಚೇತನ ತರಬೇತಿ ಹಮ್ಮಿಕೊಳ್ಳಲು, ಹೊಸದಾಗಿ ನೇಮಕಗೊಂಡ ಪಶುವೈದ್ಯಕೀಯ ಪರೀಕ್ಷಕರಿಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ನಿರ್ವಹಿಸಲು ಸದರಿ 990 ಹಂಗಾಮಿ ಹುದ್ದೆಗಳನ್ನು ದಿನಾಂಕ 01-04-2010 ರಿಂದ 2 ವರ್ಷದ ಅವಧಿಗೆ ಇಲ್ಲವೇ ಖಾಯಂ ಆಗಿ ಮುಂದುವರೆಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. 990 ಹಂಗಾಮಿ ಹುದ್ದೆಗಳು ಕೇಂದ್ರ ಕಛೇರಿ, ಸಾಂಖ್ಯಿಕ ಸಂಗ್ರಹ, ಅಂಕಿ ಅಂಶ ಕಛೇರಿ ಹಾಗೂ ಜಾನುವಾರು ಕ್ಷೇತ್ರಗಳಲಿದ್ದು ಇಲಾಖೆಯ ವಿವಿಧ ಯೋಜನೇತರ ಲೆಕ್ಕಶೀರ್ಷಿಕೆ ವ್ಯಾಪ್ತಿಗೆ ಒಳಪಟ್ಟಿದೆ. ಸದರಿ ಹುದ್ದೆಗಳನ್ನು ಇಲಾಖಾ ಕಾರ್ಯಕ್ರಮಗಳ ದೃಷ್ಟಿಯಿಂದ ದೀರ್ಘಕಾಲದಿಂದ ಅಂದರೆ ಸುಮಾರು 30 ವರ್ಷಗಳಿಂದ ಕಾಲಕಾಲಕ್ಕೆ ಮುಂದುವರೆಸಿಕೊಂಡು ಬರಲಾಗುತ್ತಿದೆ. ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು

ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಜಾನುವಾರು ಕ್ಷೇತ್ರಗಳಲ್ಲಿನ ವಿವಿಧ ಕೆಲಸಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸದರಿ ಹಂಗಾಮಿ ಹುದ್ದೆಗಳನ್ನು ಮುಂದುವರೆಸುವುದು ಅತ್ಯವಶ್ಯಕವಾಗಿರುತ್ತದೆ. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರ, ಇಲಾಖಾ ಹಿತದೃಷ್ಟಿಯಿಂದ 990 ಹಂಗಾಮಿ ಹುದ್ದೆಗಳನ್ನು ಇನ್ನೂ ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ 01-04-2010 ರಿಂದ ದಿನಾಂಕ 31-03-2011ರವರೆಗೆ ಮುಂದುವರೆಸಲು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ಆದೇಶ ಸಂಖ್ಯೆ : ಪಸಂಮೀ 186 ಪಸಸೆ 2010, ಬೆಂಗಳೂರು, ದಿನಾಂಕ: 15ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಜಾನುವಾರು ಕ್ಷೇತ್ರಗಳ ಸಮರ್ಪಕ ನಿರ್ವಹಣೆಗಾಗಿ ಇಲಾಖಾ ಹಿತದೃಷ್ಟಿಯಿಂದ ಅನುಬಂಧ-1ರಲ್ಲಿ ನಮೂದಿಸಿರುವ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಯೋಜನೇತರ ಲೆಕ್ಕಶೀರ್ಷಿಕೆಗಳಲ್ಲಿನ ವಿವಿಧ ವೃಂದದಲ್ಲಿನ ಒಟ್ಟು 990 ಹುದ್ದೆಗಳನ್ನು ದಿನಾಂಕ 01-04-2010 ರಿಂದ ದಿನಾಂಕ 31-03-2011ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಮಂಜೂರಾತಿ ನೀಡಿದೆ.

ಹಂಗಾಮಿ ಹುದ್ದೆಗಳನ್ನು ಮುಂದುವರೆಸಲು ತಗುಲುವ ವೆಚ್ಚವನ್ನು 2010-11ನೇ ಸಾಲಿನಲ್ಲಿ ಅನುಬಂಧ-1ರಲ್ಲಿ ನಮೂದಿಸಿರುವ ಯೋಜನೇತರ ಲೆಕ್ಕಶೀರ್ಷಿಕೆಗಳಲ್ಲಿನ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ 10-07-1996ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಪಿ. ನಾಗರಾಜ)

ಪೀಠಾಧಿಕಾರಿ-2

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ)

ಪಿ.ಆರ್. 1319

ಇಂಧನ ಸಚಿವಾಲಯ

ವಿಷಯ : ಮೆ॥ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 10 ಮೆಗಾ ವ್ಯಾಟ್ (1X10) ಸಾಮರ್ಥ್ಯದ ಹೆಚ್ಚುವರಿ ಜಲ ವಿದ್ಯುತ್ ಘಟಕವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಇವರ ಪತ್ರ ಸಂಖ್ಯೆ : ಎ1/ಪಿ1ಎ/2279, ದಿನಾಂಕ : 30/31-03-2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪ್ರಸ್ತುತ ಕೊಪ್ಪಳ ಜಿಲ್ಲೆಯ ತುಂಗಭದ್ರ ನದಿಗೆ ಅಡ್ಡಲಾಗಿ 28.00 ಮೆಗಾ ವ್ಯಾಟ್ (2x9MW+1x10MW) ಸಾಮರ್ಥ್ಯದ ಜಲ ವಿದ್ಯುತ್ ಘಟಕದ ಜೊತೆಗೆ ಮುನಿರಾಬಾದ್ ಪವರ್ ಸ್ಟೇಷನ್‌ಗೆ ಜಲಸಂಪನ್ಮೂಲ ಇಲಾಖೆ ಬಿಡುಗಡೆ ಮಾಡಿರುವ ನೀರನ್ನು ಉಪಯೋಗಿಸಿಕೊಂಡು ಹೆಚ್ಚುವರಿಯಾಗಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ (1x10MW) ಜಲ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅನುಮತಿಯನ್ನು ನೀಡುವಂತೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತುಂಗಭದ್ರಾ ಪ್ರಾಧಿಕಾರವು ಸಹಮತಿಯನ್ನು ನೀಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 134 ಎನ್‌ಸಿಇ 2010, ಬೆಂಗಳೂರು, ದಿನಾಂಕ: 18ನೇ ಮೇ, 2010

ಮೆ॥ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಪ್ರಸ್ತುತ ಕೊಪ್ಪಳ ಜಿಲ್ಲೆಯ ತುಂಗಭದ್ರ ನದಿಗೆ ಅಡ್ಡಲಾಗಿ 28.00 ಮೆಗಾ ವ್ಯಾಟ್ (2x9MW+1x10MW) ಜಲ ವಿದ್ಯುತ್ ಘಟಕದೊಂದಿಗೆ ಹೆಚ್ಚುವರಿಯಾಗಿ 10 ಮೆಗಾ ವ್ಯಾಟ್ (1x10) ಸಾಮರ್ಥ್ಯದ ಜಲ ವಿದ್ಯುತ್ ಘಟಕವನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಜೆ. ಸಂಪತ್ ಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 1320

ENERGY SECRETARIAT

Sub :- Extension of time limit to implement the wind power project in favour M/s Ghevarchand Jain-reg.

Read :-
1. Government Order No. : DE 26 NCE 1999, dated 13-8-1999
2. Show Cause Notice No. : EN 491 NCE 2008, dated 27-12-2008
3. M/s Ghevarchand Jain letter No. : ED/KREDL/Wind/JKP/41-01-209, dated 06-01-2009
4. Proceedings of the meeting held on 19-04-2010

Preamble:

In the Government Order read at (1) above, approval has been accorded for the implementation of 2.00 MW Wind power project to M/s Ghevarchand Jain at Banjegondanahalli, Holalkere Taluk, Chitradurga District.

In the Show Cause Notice read at (2) above, M/s Ghevarchand Jain was asked to show cause why the project has not been implemented even after the 9 years of allotment within 7 days.

In the letter read at (3) above M/s Ghevarchand Jain has stated that the following work have taken up for implementation of the wind power project and requested to extend the time limit for further period of 6 months to implement wind power project :

1. Evacuation approval from KPTCL on 9-02-2001
2. Identification of site
3. Surveying of land and micro sitting for the WEG
4. Placement of order with NEPC. Chennai of 400 K.W. capacity machine
5. Allotment of Civil work/road work to M/s Asad Pasha and Company Engineers and Contractors, Gulbarga.
6. Electrical line survey work
7. Application for land grant to D.C., Chitradurga

The extract of the decision taken in the review meeting of Renewable Energy Projects (Wind/Small Hydro) for Restoration/Time extension held on 19-04-2010 under the Chairmanship of the Additional Chief Secretary to Government, Energy Department read at (2) above is as below :-

> "M/s Ghevarchand Jain :- The proprietor has been allotted 2 MW capacity at Banjagondanahalli (Jogimatti), Chitradurga District : DGM-Wind/RVEP made a quick appraisal about the project progress and action taken by the firm in setting up the project. Though, the project was sanctioned 11 years back but company has only obtained evacuation approval in 2001 which is not valid today. Further, the firm has not submitted the progress subsequently made in taking up the project to KREDL. The proprietor of the firm expressed that he has incurred expenditure of about Rs. 1/- crore and he is serious in developing the project. He also made to commitment that the project will be developed within 15 months.
>
> The members in the meeting expressed that the proprietor is not serious and enormous time delay has taken place. Though it is a fit case for cancellation, however, considering the amount spent by him and that too being a small player, the committee decided to extend the time period for another 12 months from the issue of Government Order with a penalty of Rs. 1.00/-lakhs per MW payable to Managing Director, KREDL, Project remaining un-commissioned by the end of 12 months, the amount will be transferred to Akshaya Shakthi Nidhi of KREDL and the project will be cancelled".

The proposal has been examined in detail and issued following Order :-

Government Order No. EN 491 NCE 2008, Bangalore, dated : 18-05-2010

Government accords approval for the extension of time limit for 12 months from the date of the issue of this Order to M/s Ghevarchand Jain for the implementation of 2.00 MW wind power project at Banjegondanahalli, Holalkere Taluk, Chitradurga District subject to the condition that the company shall pay a penalty of Rs. 1.00 lakh (Rupees one lakh only) per MW to the M.D. KREDL.

If the project remains un-commissioned by the end of 12 months from the date of issue of this Order, the said amount shall be transferred to Akshaya Shakti Nidhi of KREDL Land the project will be cancelled.

By Order and in the name of the Governor of Karnataka

(S. J. Sampath Kumar)
Under Secretary to Government
Energy Department

P.R. 1321

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ದಿನೇಶ್, ಪೊಲೀಸ್ ಉಪಾಧೀಕ್ಷಕರು, ಮಂಡ್ಯ ಉಪ ವಿಭಾಗ, ಮಂಡ್ಯ ರವರ ಮೇಲಿನ ಟ್ರಾಪ್ ಪ್ರಕರಣದಲ್ಲಿ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : 1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಕಛೇರಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಎಂ-19/ಸಿಆರ್-05/2010 ಮಂಡ್ಯ ದಿನಾಂಕ 28-04-2010.

2) ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ:ಸಿಬಿ(5)08/2010-11. ದಿನಾಂಕ 23-04-2010.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರು ಪ್ರಸ್ತಾವನೆ ಸಲ್ಲಿಸಿ, ದಿನಾಂಕ 20-04-2010 ರಂದು ಸಂಜೆ 4-00 ಘಂಟೆಗೆ ಫಿರ್ಯಾದಿ ಶ್ರೀ ಎಂ.ಎಸ್. ಲೋಹಿತ್, ನಂ. 1798, 100 ಅಡಿ ರಸ್ತೆ, ಮಂಡ್ಯ ರವರು ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನ ಅನ್ವಯ ಮೊಕದ್ದಮೆ ಸಂಖ್ಯೆ: 74/2010 ಕಲಂ 3 ಕ್ಲಾಸ್ 1(10) ಎಸ್.ಸಿ / ಎಸ್.ಟಿ. ಆಕ್ಟ್ ಕೂಡ 506 ಐಪಿಸಿ ರೀತ್ಯ ಕೇಸು ದಾಖಲು ಮಾಡಿದ್ದು, ಡಿವೈ.ಎಸ್.ಪಿ. ಮಂಡ್ಯ ಉಪ ವಿಭಾಗದ ಶ್ರೀ ದಿನೇಶ್ ರವರು ಈ ಕೇಸ್‌ನಲ್ಲಿ ಚಾರ್ಜ್‌ಶೀಟ್ ಹಾಕಲು ಫಿರ್ಯಾದಿಯವರಿಂದ ರೂ. 25,000/- ಗಳನ್ನು ಕೇಳಿದ್ದು, ಲಂಚವನ್ನು ಕೊಡದಿದ್ದರೆ ಕೇಸಿನಲ್ಲಿ 'ಬಿ' ರಿಪೋರ್ಟ್ ಹಾಕಿ ಮುಗಿಸುತ್ತೇನೆಂದು ಲಂಚದ ಹಣಕ್ಕೆ ಫಿರ್ಯಾದಿಯವರನ್ನು ಒತ್ತಾಯಿಸಿರುವುದಾಗಿ ವರದಿ ಮಾಡಿರುತ್ತಾರೆ. ಫಿರ್ಯಾದುದಾರರು ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿದ್ದು, ತನಿಖಾಧಿಕಾರಿಯವರು ಮಂಡ್ಯ ಲೋಕಾಯುಕ್ತ ಠಾಣೆಗೆ ಮೊಕದ್ದಮೆ ಸಂಖ್ಯೆ:5/2010 ಕಲಂ 7, 13(1)(ಡಿ) ಸಹಿತ 13(2) ಪಿ.ಸಿ.ಆಕ್ಟ್, 1988ರ ರೀತ್ಯ ಪ್ರಕರಣವನ್ನು ದಾಖಲಿಸಿ ಅದೇ ದಿನ 20-04-2010 ರಂದು ಲೋಕಾಯುಕ್ತ ಬೀಸಿದ ಬಲೆಯಲ್ಲಿ ಸಿಕ್ಕಿಬಿದ್ದಿದ್ದು, ಆರೋಪಿತರಾದ ಶ್ರೀ ದಿನೇಶ್, ಡಿವೈ.ಎಸ್.ಪಿ. ಮಂಡ್ಯ ಉಪ ವಿಭಾಗ, ಮಂಡ್ಯ ರವರು ಲಂಚದ ಹಣ ರೂ. 25,000/- ಗಳನ್ನು ಒತ್ತಾಯ ಮಾಡಿ ಫಿರ್ಯಾದುದಾರರಿಂದ ಪಡೆದುಕೊಂಡಿರುತ್ತಾರೆ. ಈ ಲಂಚದ ಹಣವನ್ನು ವಶಪಡಿಸಿಕೊಂಡು ಲೋಕಾಯುಕ್ತ ತನಿಖಾಧಿಕಾರಿಯವರು ಶ್ರೀ ದಿನೇಶ್, ಉಪಾಧೀಕ್ಷಕರನ್ನು ದಸ್ತಗಿರಿ ಮಾಡಿರುವುದಾಗಿ ವರದಿ ಮಾಡಿರುತ್ತಾರೆ. ಇವರ ವಿರುದ್ಧ ಭ್ರಷ್ಟಾಚಾರ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆಗಳಿರುವುದರಿಂದ ಅವರನ್ನು ಕೂಡಲೇ ಅಮಾನತ್ತಿನಲ್ಲಿರಿಸಿ ಅವರ ಲೀನ್ ಅನ್ನು ಬೇರೆಡೆಗೆ ವರ್ಗಾಯಿಸಲು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರು ಕೋರಿರುತ್ತಾರೆ. ತಮ್ಮ ವರದಿಯೊಡನೆ ಪೋಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇವರ ವರದಿಯ ಪ್ರತಿ, ಎಫ್.ಐ.ಆರ್. ಪ್ರತಿ, ದೂರಿನ ಪ್ರತಿ ಹಾಗೂ ಮಹಜರು ಮತ್ತು ಟ್ರಾಪ್ ಮಹಜರಿನ ಪ್ರತಿಗಳನ್ನು ಹಾಗೂ ಆರೋಪಿತ ಅಧಿಕಾರಿಯವರು ತಾವು ನಿರ್ದೋಷಿ ಎಂದು ಸಲ್ಲಿಸಿರುವ ಮನವಿಯ ಪ್ರತಿಯನ್ನು ಸಹ ಲಗತ್ತಿಸಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ದಿನೇಶ್, ಡಿವೈ.ಎಸ್.ಪಿ. ಮಂಡ್ಯ ಉಪ ವಿಭಾಗ ರವರು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರ ವರದಿಯನ್ವಯ ದಿನಾಂಕ 20-04-2010 ರಂದು ಲೋಕಾಯುಕ್ತ ರವರು ಬೀಸಿದ ಬಲೆಯಲ್ಲಿ ಟ್ರಾಪ್ ಆಗಿರುವುದಾಗಿ ವರದಿಯಾಗಿದ್ದು, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 5(2) ರನ್ವಯ ದಿನಾಂಕ 20-04-2010 ರಿಂದ ಪೂರ್ವಾನ್ವಯವಾಗುವಂತೆ ಸೇವೆಯಿಂದ ಅಮಾನತ್ತುಗೊಳಿಸಲು ಡಿಜಿ ಮತ್ತು ಐಜಿಪಿ ರವರು ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ :. ಒಇ 197 ಪೊಸಿಪ 2010, ಬೆಂಗಳೂರು, ದಿನಾಂಕ: 28ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 5(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ದಿನೇಶ್, ಪೊಲೀಸ್ ಉಪಾಧೀಕ್ಷಕರು, ಮಂಡ್ಯ ಉಪ ವಿಭಾಗ, ಮಂಡ್ಯ ರವರ ವಿರುದ್ಧ ಶಿಸ್ತು ಕ್ರಮ ಕಾಯ್ದಿಟ್ಟು, ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 5(2) ರನ್ವಯ ಇವರನ್ನು ದಸ್ತಗಿರಿ ಮಾಡಿದ ದಿನಾಂಕ 20-04-2010 ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಇವರ ಲೀನ್ ಅನ್ನು ಡಿವೈ.ಎಸ್.ಪಿ. ಡಿ.ಸಿ.ಆರ್.ಬಿ. ಬೆಂಗಳೂರು ಜಿಲ್ಲೆ ಇಲ್ಲಿನ ಹುದ್ದೆಗೆ ಸ್ಥಳಾಂತರಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ದಿನೇಶ್, ಪೊಲೀಸ್ ಉಪಾಧೀಕ್ಷಕರು ರವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98ರ ಅನ್ವಯ ಜೀವನಾಧಾರ ಭತ್ಯೆಯನ್ನು ನೀಡತಕ್ಕದ್ದು.

ಅಮಾನತ್ತಿನ ಅವಧಿಯಲ್ಲಿ ಶ್ರೀ ದಿನೇಶ್, ಪೊಲೀಸ್ ಉಪಾಧೀಕ್ಷಕರು ರವರು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1357

(ಟಿ.ಎನ್.ರವಿಪ್ರಕಾಶ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು)

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ನಗರ ಶೇಷಾದ್ರಿಪುರಂ, ಹನುಮಂತಪುರ ಸ.ನಂ. 55/2 (ಪಿಟಿಎಸ್ ನಂ. 143 ಚಾಲ್ತಾ ನಂ 133 ಮತ್ತು 114) ರಲ್ಲಿನ 1 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (ಎಸ್) ಸಿಆರ್/533/90-91, ದಿ: 24-10-2007.

2) ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ ಕಕೊನಿಮ/ಕಾಶಾ/2/1997-98/341 ದಿನಾಂಕ 30-07-2009

3) ಸರ್ಕಾರದ ಕಾರ್ಯದರ್ಶಿ, ಕಂದಾಯ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಇವರ ಅರೆ ಸರ್ಕಾರಿ ಪತ್ತ ಸಂಖ್ಯೆ: ಕೆಪಿಎಲ್‌ಸಿ/ ಎಲ್‌ಎನ್‌ಡಿ/ 173/2009-10 ದಿ: 05.03.2010.

ಪ್ರಸ್ತಾವನೆ :

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಪತ್ರದಲ್ಲಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಬೆಂಗಳೂರು ನಗರ ಶೇಷಾದ್ರಿಪುರಂ, ಹನುಮಂತಪುರ ಸ.ನಂ. 55/2 (ಪಿಟಿಎಸ್ ನಂ 143, ಚಾಲ್ತಾ ನಂ 133 ಮತ್ತು 114) ರಲ್ಲಿನ 1 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಕಛೇರಿ ಸಂಕೀರ್ಣ ನಿರ್ಮಾಣಕ್ಕಾಗಿ ಮಂಜೂರು ಮಾಡಲು ಸರ್ಕಾರದ ಆದೇಶ ಕೋರಿರುತ್ತಾರೆ.

ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಪತ್ರದ ದಿ: 30.07.2009ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಶೇಷಾದ್ರಿಪುರಂ, ಹನುಮಂತಪುರ ಸ.ನಂ. 55/2 (ಪಿಟಿಎಸ್ ನಂ. 143, ಚಾಲ್ತಾ ನಂ. 133 ಮತ್ತು 114) ರಲ್ಲಿನ 1 ಎಕರೆ ಸರ್ಕಾರಿ ಜಮೀನನ್ನು ಮಂಡಳಿಯು ಈಗಾಗಲೇ ಸ್ವಾಧೀನದಲ್ಲಿದ್ದು, ಮಂಡಳಿಯ ಕಛೇರಿ ಸಂಕೀರ್ಣ ನಿರ್ಮಾಣಕ್ಕೆ ಈ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳ ವರದಿಯನ್ವಯ ಸದರಿ ಜಮೀನಿನ ಕುರಿತು ಶ್ರೀ ಜಿ. ವಿರೂಪಾಕ್ಷ ಸ್ವಾಮಿ ಎನ್ನುವವರು ನಗರ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೂಲ ದಾವೆ ಸಂಖ್ಯೆ:7797/92ನ್ನು ನ್ಯಾಯಾಲಯವು ದಿ: 25.08.2005ರ ಆದೇಶದಲ್ಲಿ ವಜಾಗೊಳಿಸಿರುವುದರಿಂದ ಸದರಿ ಜಮೀನನ್ನು ಕೊಳಚೆ ನಿರ್ಮೂಲನಾ ಮಂಡಳಿಗೆ ಮಂಜೂರು ಮಾಡಲು ಪ್ರಸ್ತಾವಿಸಿರುತ್ತಾರೆ. ಪ್ರಶ್ನಿತ ಜಮೀನು ನಗರ ವ್ಯಾಪ್ತಿಯಲ್ಲಿದ್ದು, ಜಿಲ್ಲಾಧಿಕಾರಿಗಳ ವರದಿಯನ್ವಯ ಮಾರ್ಗಸೂಚಿ ದರದ ಪಟ್ಟಿಯಂತೆ ಪ್ರಸಕ್ತ ಮಾರುಕಟ್ಟೆ ದರ ಪ್ರತಿ ಚದರ ಅಡಿಗೆ ರೂ. 1000/- ಆಗಿರುತ್ತದೆ.

ಸರ್ಕಾರದ ಕಾರ್ಯದರ್ಶಿ, ಕಂದಾಯ ಮತ್ತು ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ದಿ: 05.03.2010ರ ಅರೆ ಸರ್ಕಾರಿ ಪತ್ರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯು ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಸರ್ಕಾರದ ಈ ಜಮೀನನ್ನು ಸಂರಕ್ಷಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಇವರು ಪ್ರಮುಖ ಪಾತ್ರ ವಹಿಸಿರುವುದರಿಂದ ಸದರಿ ಸಂಸ್ಥೆಗೆ ಶೇಕಡ 50ರಷ್ಟು ಮಾರ್ಗಸೂಚಿ ದರ ವಿಧಿಸಿ ಈ ಜಮೀನನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ :. ಆರ್‌ಡಿ 1332 ಎಲ್‌ಜಬಿ 2007, ಬೆಂಗಳೂರು, ದಿನಾಂಕ: 27ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮ 20(1)(ಸಿ)ನ್ನು ಸಡಿಲಿಸಿ ಬೆಂಗಳೂರು ನಗರ, ಶೇಷಾದ್ರಿಪುರಂ, ಹನುಮಂತಪುರ ಸ.ನಂ. 55/2 (ಪಿಟಿಎಸ್ ನಂ. 143, ಚಾಲ್ತಾ ನಂ. 133 ಮತ್ತು 114) ರಲ್ಲಿನ 1 ಎಕರೆ ಸರ್ಕಾರಿ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಕಛೇರಿ ಸಂಕೀರ್ಣ ನಿರ್ಮಾಣಕ್ಕಾಗಿ ಮಾರ್ಗಸೂಚಿ ದರದಲ್ಲಿ ಶೇ 50ರಷ್ಟು ದರ ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1358

(ಇ. ಈಶ್ವರ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ವಿಷಯ : ಶ್ರೀಮತಿ ಡಿ. ನಿರ್ಮಲ, ಉಪ ನಿರ್ದೇಶಕರು (ನಿ), ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಉತ್ತರ ಕನ್ನಡ ಜಿಲ್ಲೆ ಹಾಗೂ ಶ್ರೀ ಎಸ್.ಎಸ್. ಕೂಳಂಬಕರ್, ಲೆಕ್ಕಾಧಿಕ್ಷಕರು (ನಿವೃತ್ತ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಉತ್ತರ ಕನ್ನಡ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ – ಮಂಡನಾಧಿಕಾರಿಯನ್ನು ಬದಲಾಯಿಸುವ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಅನಾಸ 91 ಅಇಸೇ 2004, ದಿ: 27-7-2006.
2) ಸರ್ಕಾರದ ಆದೇಶ ಸಂಖ್ಯೆ: ಅನಾಸ 91 ಆಇಸೇ 2004, ಬೆಂಗಳೂರು, ದಿನಾಂಕ 3.12.2007.
3) ಸರ್ಕಾರದ ಆದೇಶ ಸಂಖ್ಯೆ: ಅನಾಸ 91 ಆಇಸೇ 2004, ಬೆಂಗಳೂರು, ದಿನಾಂಕ 19.12.2009.
4) ಸಂಖ್ಯೆ:ಸಿಎಫ್‌ಎಸ್/ಇಎಸ್‌ಟಿ(2)34/2003-04 ದಿನಾಂಕ 14.5.2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶ್ರೀಮತಿ ಡಿ. ನಿರ್ಮಲ ಉಪ ನಿರ್ದೇಶಕರು (ನಿವೃತ್ತ) ಮತ್ತು ಶ್ರೀ ಎಸ್.ಎಸ್.ಕೊಳಂಬಕರ್, ಲೆಕ್ಕಾಧೀಕ್ಷಕರು, (ನಿವೃತ್ತ) ಇವರುಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಶ್ರೀ ಕೆ. ಈಶ್ವರಭಟ್, ನಿವೃತ್ತ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ದಕ್ಷಿಣ ವಲಯ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ದಕ್ಷಿಣ ವಲಯ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಯು ಬೇರೆ ಇಲಾಖೆಗೆ ವರ್ಗಾವಣೆಗೊಂಡಿರುವುದರಿಂದ ಬದಲಿ ಮಂಡನಾಧಿಕಾರಿಯನ್ನು ನೇಮಿಸಲು ತೀರ್ಮಾನಿಸಿ ಉಪ ನಿರ್ದೇಶಕರು (ಸಂ.ವಿ), ಆಯುಕ್ತರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕೇಂದ್ರ ಕಛೇರಿಯಲ್ಲಿ ಕೆಲಸ ಒತ್ತಡ ಹೆಚ್ಚಾಗಿರುವುದರಿಂದ ಕೇಂದ್ರ ಕಛೇರಿಯ ಉಪ ನಿರ್ದೇಶಕರು (ಸಂ.ವಿ) ರವರ ಬದಲಾಗಿ ಶ್ರೀ ಮತ್ತೂರ್‌ಕರ್ ತಿಪ್ಪಣ್ಣ, ಉಪ ನಿರ್ದೇಶಕರು, ಆನಾಸ ಮತ್ತು ಗ್ರಾವ್ಯ ಇಲಾಖೆ, ದಕ್ಷಿಣ ವಲಯ, ಬೆಂಗಳೂರು ರವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿರುವುದು ಸರಿಯಷ್ಟೆ.

ಮೇಲೆ (4)ರಲ್ಲಿ ಓದಲಾದ ಆಯುಕ್ತರ ಪತ್ರದಲ್ಲಿ ದಕ್ಷಿಣ ವಲಯ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಮತ್ತೂರ್‌ಕರ್ ತಿಪ್ಪಣ್ಣ, ಉಪ ನಿರ್ದೇಶಕರು, ಆನಾಸ ಮತ್ತು ಗ್ರಾವ್ಯ ಇಲಾಖೆ ಇವರು ಬೀದರ್ ಜಿಲ್ಲೆಗೆ ವರ್ಗಾವಣೆಗೊಂಡಿದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಬೀದರ್‌ನಿಂದ ಬೆಂಗಳೂರಿಗೆ ಬಂದು ಹೋಗುವುದು ಕಷ್ಟಸಾಧ್ಯವಾಗುತ್ತದೆಯಾದ್ದರಿಂದ ಶ್ರೀ ಹೆಚ್.ಆರ್. ವಿಜಯಕುಮಾರ್, ಉಪ ನಿರ್ದೇಶಕರು, ಆನಾಸ ಮತ್ತು ಗ್ರಾವ್ಯ ಇಲಾಖೆ, ಪಶ್ಚಿಮ ವಲಯ, ಬೆಂಗಳೂರು ರವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸುವಂತೆ ಕೋರಿರುತ್ತಾರೆ, ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ :. ಆನಾಸ 91 ಆಇಸೇ 2004, ಬೆಂಗಳೂರು, ದಿನಾಂಕ: 25ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಉಪ ನಿರ್ದೇಶಕರು (ಸಂ.ವಿ.) ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುವ ಮೇಲೆ (3)ರಲ್ಲಿ ಓದಲಾದ ಆದೇಶವನ್ನು ಮಾರ್ಪಡಿಸಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 11(5) (ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಿಚಾರಣಾಧಿಕಾರಿಗಳಿಗೆ ವಿಷಯವನ್ನು ಮಂಡಿಸಲು ಶ್ರೀ ಹೆಚ್.ಆರ್. ವಿಜಯಕುಮಾರ್, ಉಪ ನಿರ್ದೇಶಕರು, ಅನಾಸ ಮತ್ತು ಗ್ರಾವ್ಯ ಇಲಾಖೆ, ಪಶ್ಚಿಮ ವಲಯ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ. ವಿಚಾರಣಾಧಿಕಾರಿಗಳು ವಿಚಾರಣೆಯನ್ನು 3 ತಿಂಗಳೊಳಗಾಗಿ ಮುಗಿಸಿ ಸೂಕ್ತ ದಾಖಲೆಗಳೊಂದಿಗೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ನಿರ್ದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1359

(ಪಿ. ಸೋಮಣ್ಣ)

ಪೀಠಾಧಿಕಾರಿ, ಆಹಾರ-1 ಶಾಖೆ,

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಸ್.ಎಸ್. ಮಧು, ಪಿ.ಸಿ. (ನಿಸ್ತಂತು) ಪೊಲೀಸ್ ನಿಯಂತ್ರಣ ಕೇಂದ್ರ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ : 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ (4) ಶಿಕ್ಷೆ/188/08 ಓ.ಬಿ: 496/08 ದಿ: 17-12-2008.

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ: 45/ಅಪೀಲು/ಸಿಬ್ಬಂದಿ-2/2008-09 ಓ.ಬಿ: 302/2008-09 ದಿ: 18-3-09.

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 01-8-09

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)35/2009-10 ದಿನಾಂಕ 11-3-2010.

ಪ್ರಸ್ತಾವನೆ :

ಶ್ರೀ ಎಸ್.ಎಸ್. ಮಧು ಪಿ.ಸಿ. (ನಿಸ್ತಂತು) ಪೊಲೀಸ್ ನಿಯಂತ್ರಣ ಕೇಂದ್ರ, ಶಿವಮೊಗ್ಗ ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಈ ಕೆಳಕಂಡ ಆರೋಪಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

> "ನೀವು ಪಿ.ಸಿ. (ನಿಸ್ತಂತು) ಶ್ರೀ ಎಸ್.ಎಸ್. ಮಧು, ನಿಮ್ಮ ಮೇಲಾಧಿಕಾರಿಯವರು ಕರ್ತವ್ಯದಲ್ಲಿದ್ದಾಗ ಸಮವಸ್ತ್ರದಲ್ಲಿರುವಂತೆಯೂ ಹಿರಿಯ ಅಧಿಕಾರಿ/ಸಿಬ್ಬಂದಿಗಳಿಗೆ ಗೌರವ ನೀಡುವಂತೆ ಸೂಚಿಸಿದ್ದಾಗ್ಯೂ ಸೂಚನೆಯನ್ನು ಧಿಕ್ಕರಿಸಿ ದಿನಾಂಕ: 27-10-08 ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯದಲ್ಲಿ ತೀವ್ರ ಅಶಿಸ್ತು ಮತ್ತು ಬೇಜವಾಬ್ದಾರಿ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಸಮಜಾಯಿಷಿಯನ್ನು ಪಡೆದು, ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 17-12-08ರ ಆದೇಶದಲ್ಲಿ ಅರ್ಜಿದಾರರಿಗೆ "ಛೀಮಾರಿ" ಹಾಕಿದ್ದಾರೆ ಹಾಗೂ ಗೈರು ಹಾಜರಾದ ಅವಧಿ ದಿ: 28-10-2008 ರಿಂದ 14-11-08ರ ವರೆಗಿನ 18 ದಿನಗಳನ್ನು ವೇತನರಹಿತ ರಜೆ ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 18-03-09ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ :. ಒಇ 151 ಪೊಸಿಅ 2009 ಬೆಂಗಳೂರು, ದಿನಾಂಕ: 27ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಎಸ್. ಮಧು ಪಿ.ಸಿ. (ನಿಸ್ತಂತು) ಪೊಲೀಸ್ ನಿಯಂತ್ರಣ ಕೇಂದ್ರ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1360

(ಟಿ.ಎನ್. ರವಿಪ್ರಕಾಶ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

INFRASTRUCTURE DEVELOPMENT SECRETARIAT

Sub : Fee for advisory services by iDeCK for evaluation of project cost of Bangalore International Airport Project.

Ref : 1) G.O.No. IDD 3 DIA 05, dated : 28-3-05.
2) G.O.No. IDD 47 NSW 04, dated : 29-3-05.
3) G.O.No. IDD 36 DIA 05, dated : 28-6-05.
4) Notification No. PWD 32 FC III/2006, dated 18-1-06 and 15-3-06.
5) G.O.No. IDD 110 DIA 05, dated : 4-11-06.
6) Corrigendum 110 DIA 05, dated 12-12-06.
7) G.O.No. IDD 135 DIA 2008, dated : 25-6-2009.
8) Letter No. iDeCK/2009-10/2249, dated 29-3-2010 of MD & CEO, iDeCK.

Preamble :

In G.O. dated 28-3-2005 read at Sl.No. (1) above, Government had released an amount of Rs. 4.75 lakhs for advisory services to iDeCK for evaluations of cost escalation of Bangalore International Airport Project.

2. In G.O. dated 29-3-2005 read at Sl.No. (2), above Government has released Rs. 2.00 Lakhs for project studies entrusted to iDeCK.

3. In G.O. dated 28-6-2008 read at Sl.No. (3) above, an amount of Rs. 2.75 lakhs was released being the fees for III & final Installment of fees to iDeCK for evaluation of cost escalation of BIAP.

4. In G.O. dated 4-11-06 read at Sl.No. (5) above, an amount of Rs. 4.90 lakhs released for project cost review.

5. In G.O. dated 25-6-2009 read at Sl.No. (7) above, an amount of Rs. 4.90 lakhs has been released towards fee for advisory services by iDeCK for evaluation of project cost of Bangalore International Airport project for the quarter ending March 2008.

6. In the letter dated 29-3-2010 read at Sl.No. 8 iDeCK explained the reasons for claim of Rs. 4.90 lakhs (Four Lakhs Ninety Thousand only) being the fees for advisory and other services rendered as part of the cost review report of BIAP during the period April 2008 to December 2009. The proposal has been examined and hence the following order.

GOVERNMENT ORDER NO. : IDD 135 DIA 2008, BANGALORE, DATED : 25-5-2010

After careful examination Government are pleased to release an amount of Rs. 4,90,000/- (Four Lakhs Ninety Thousand only) inclusive of service tax being the fee for advisory services and other services rendered by iDeCK as part of project cost evaluation report of BIAP for the period April 2008 to December 2009.

2. This cost would be met out of the funds available under the Head of Account 3451-00-090-1-06-059 Infrastructure Preliminary Studies-other expenditure for 2010-2011.

3. The Chief Financial Officer, iDeCK would draw this amount on a payee's receipt duly countersigned by the Under Secretary to Government, Infrastructure Development Department.

4. This order is issued in accordance with delegated financial powers to the Secretaries of the department vide G.O. No. FD 1 TFP 2008 dated 16-5-2008.

By Order and in the name of the Governor of Karnataka

P.R. 1372

(N. Manjula Geetha)
Under Secretary to Government
Infrastructure Development Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಆಡಳಿತ ತರಬೇತಿ ಸಂಸ್ಥೆ, ಮೈಸೂರಿನಲ್ಲಿ ದಿನಾಂಕ : 7-6-2010 ರಿಂದ 4-8-2010 ರವರೆಗೆ ನಡೆಯಲಿರುವ Programme on Capacity Building for Revenue officers ತರಬೇತಿ ಕೋರ್ಸಿಗೆ ಕೆ.ಎ.ಎಸ್. ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ : ಆಡಳಿತ ತರಬೇತಿ ಸಂಸ್ಥೆ, ಮೈಸೂರುರವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಆತಸಂ/ತರಬೇತಿ/16/2009-10, ದಿನಾಂಕ : 5-5-2010

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 5-5-2010ರ ಅರೆ ಸರ್ಕಾರಿ ಪತ್ರದಲ್ಲಿ ಆಡಳಿತ ತರಬೇತಿ ಸಂಸ್ಥೆ, ಮೈಸೂರು, ಇಲ್ಲಿ ದಿನಾಂಕ : 7-6-2010 ರಿಂದ 9-6-2010, 1-7-2010 ರಿಂದ 3-7-2010 ಮತ್ತು 2-8-2010 ರಿಂದ 4-8-2010 ರವರೆಗೆ ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು DFID, Training for all ಯೋಜನೆ ಅಡಿಯಲ್ಲಿ

Programme on Capacity Building for Revenue Officers ತರಬೇತಿ ಕೋರ್ಸಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು/ ಸಹಾಯಕ ಆಯುಕ್ತರ ವೃಂದದ ಅಧಿಕಾರಿಗಳನ್ನು ನಿಯೋಜಿಸುವಂತೆ ಮಹಾನಿರ್ದೇಶಕರು ಕೋರಿದ್ದಾರೆ. ಸದರಿ ತರಬೇತಿಗೆ ಮೂರು ತಂಡಗಳಲ್ಲಿ ಪ್ರತಿ ವಿಭಾಗದಿಂದ ಕನಿಷ್ಠ 5 ಅಧಿಕಾರಿಗಳು ಒಟ್ಟು 30 ಅಧಿಕಾರಿಗಳು ಮೀರದಂತೆ ತಪ್ಪದೇ ತರಬೇತಿಗೆ ನಿಯೋಜಿಸುವಾಗ ಇತ್ತೀಚೆಗೆ ಪದೋನ್ನತಿ ಹೊಂದಿದ ಅಧಿಕಾರಿಗಳಿಗೆ ಆದ್ಯತೆ ನೀಡುವಂತೆ ತಿಳಿಸುತ್ತಾ ನಿಯೋಜನೆಗೊಂಡ ಅಧಿಕಾರಿಗಳಿಗೆ ತಪ್ಪದೇ ತರಬೇತಿಗೆ ಹಾಜರಾಗುವಂತೆ ನಿರ್ದೇಶನ ನೀಡುವಂತೆ ಕೋರಿರುತ್ತಾರೆ. ಸರ್ಕಾರವು ಮಹಾನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೂರು ತಂಡಗಳಲ್ಲಿ ಕೆ.ಎ.ಎಸ್. (ಕಿರಿಯ ಶ್ರೇಣಿ) ವೃಂದದ ಅಧಿಕಾರಿಗಳನ್ನು ಪ್ರತಿ ತಂಡದಲ್ಲಿ 30 ಅಧಿಕಾರಿಗಳು ಮೀರದಂತೆ ನಿಯೋಜಿಸಲು ತೀರ್ಮಾನಿಸಿದೆ.

ಮಹಾನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮುಂದಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 169 ಆಸೇಇ 2010, ಬೆಂಗಳೂರು, ದಿನಾಂಕ : 22-5-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮೂರು ತಂಡಗಳಲ್ಲಿ ಕೆ.ಎ.ಎಸ್ (ಕಿ.ಶ್ರೇ) ವೃಂದದ ಅಧಿಕಾರಿಗಳನ್ನು ಪ್ರತಿ ತಂಡದಲ್ಲಿ 30 ಅಧಿಕಾರಿಗಳಂತೆ ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ದಿನಾಂಕ 7-6-2010 ರಿಂದ 9-6-2010ರವರೆಗೆ ಮೊದಲನೆ ತಂಡ, ದಿನಾಂಕ 1-7-2010 ರಿಂದ 3-7-2010ರವರೆಗೆ ಎರಡನೇ ತಂಡ ಮತ್ತು ದಿನಾಂಕ 2-8-2010 ರಿಂದ 4-8-2010ರವರೆಗೆ ಮೂರನೇ ತಂಡದಲ್ಲಿ ಅನುಬಂಧದಲ್ಲಿದ್ದಂತೆ ಕೆ.ಎ.ಎಸ್. (ಕಿ.ಶ್ರೇ) ಅಧಿಕಾರಿಗಳನ್ನು ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರು ನಡೆಸಲಿರುವ ಭಾರತ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ DFID, Training for all ಯೋಜನೆ ಅಡಿಯಲ್ಲಿ Programme on Capacity Building for Revenue Officers ತರಬೇತಿ ಕೋರ್ಸಿಗೆ ನಿಯೋಜಿಸಲಾಗಿದೆ.

ಅಧಿಕಾರಿಗಳು ಸದರಿ ಕೋರ್ಸಿಗೆ ಹಾಜರಾಗುವುದು ಕಡ್ಡಾಯವಾಗಿದ್ದು, ಗೈರು ಹಾಜರಾಗುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ತರಬೇತಿ ಪಡೆದ ನಂತರ ಅನುಭವಗಳ ಕಿರುವರದಿಯನ್ನು ಒಂದು ವಾರದೊಳಗಾಗಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ಹಾಗೆಯೇ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ಈ ತರಬೇತಿಗೆ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಸೂಚಿಸಿದೆ.

ಈ ತರಬೇತಿಗೆ ನಿಯೋಜಿತರಾಗಿರುವ ಅಧಿಕಾರಿಗಳು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗುತ್ತಾರೆ. ತರಬೇತಿಯ ಅವಧಿ ಹಾಗೂ ಅವಶ್ಯಕ ಪ್ರಯಾಣದ ಅವಧಿಯನ್ನು ಕರ್ತವ್ಯದ ಮೇಲೆ ಎಂದು ಪರಿಗಣಿಸಿದೆ.

ಸದರಿ ತರಬೇತಿ ಕುರಿತ ಹೆಚ್ಚಿನ ಮಾಹಿತಿಗಾಗಿ ಶ್ರೀ ಸಿ. ವೆಂಕಟಸುಬ್ಬಯ್ಯ, ನೋಡಲ್ ಅಧಿಕಾರಿ, ಆಡಳಿತ ತರಬೇತಿ ಸಂಸ್ಥೆ (0821-2481144), ಶ್ರೀ ಎ.ಸಿ. ದಿವಾಕರ, ಬೋಧಕರು (ಅ & ಯೋ), ಆಡಳಿತ ತರಬೇತಿ ಸಂಸ್ಥೆ (9448783202) ಹಾಗೂ ಶ್ರೀ ಸಿ. ಅಶೋಕ, ಬೋಧಕರು ರಾಜ್ಯ ನಗರಾಭಿವೃದ್ಧಿ ಸಂಸ್ಥೆ (9900750181) ಇವರನ್ನು ಸಂಪರ್ಕಿಸಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು ಇಲಾಖೆ (ಸೇವೆಗಳು-2)

ಅನುಬಂಧ-1

ದಿನಾಂಕ : 7-6-2010 ರಿಂದ 9-6--2010 ರವರೆಗೆ ಮೊದಲನೆ ತಂಡ

ಕ್ರ. ಸಂ.	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ
1	ವರಕೇಡಿ, ಎಂ.ಪಿ.	ವಿಶೇಷ ಭೂಸ್ವಾಧೀನಾಧಿಕಾರಿ, ಯು.ಕೆ.ಪಿ. ಆಲಮಟ್ಟಿ, ಬಾಗಲಕೋಟೆ ಜಿಲ್ಲೆ
2	ಸಿ. ಬಸವರಾಜ	ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. (ಬಿ.ಎಂ.ಐ.ಸಿ.ಪಿ), ಬೆಂಗಳೂರು
3	ಹರಣಿ ವನಜಕುಮಾರಿ	ಸಹಾಯಕ ಆಯುಕ್ತರು, ಭೂಮಿ ನಿರ್ವಹಣಾ ಕೋಶ, ಕಂದಾಯ ಇಲಾಖೆ, ಬೆಂಗಳೂರು
4	ನೂರುದ್ದೀನ್ ಷರೀಫ್	ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ನೀರಾವರಿ ಯೋಜನೆ, ಹೊಳೆನರಸೀಪುರ, ಹಾಸನ ಜಿಲ್ಲೆ
5	ಎನ್. ಸೂರ್ಯನಾರಾಯಣ	ಸಹಾಯಕ ಆಯುಕ್ತರು (ಆಡಳಿತ) ಬಿ.ಬಿ.ಎಂ.ಪಿ, ಬೆಂಗಳೂರು
6	ಬಿ.ಎನ್. ಸತ್ಯನಾರಾಯಣ	ವಿಶೇಷ ಭೂಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (NHAI), ಬೆಂಗಳೂರು

7	ಮೃತ್ಯುಂಜಯ	ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
8	ಪಿ.ಎಸ್. ಶಿವಪುತ್ರಪ್ಪ	ಸಹಾಯಕ ಆಯುಕ್ತರು (ಕಂದಾಯ), ಗುಲ್ಬರ್ಗಾ ಮಹಾನಗರ ಪಾಲಿಕೆ, ಗುಲ್ಬರ್ಗಾ
9	ಸಿ.ಎನ್. ಶ್ರೀಧರ್	ಆಯುಕ್ತರು, ನಗರ ಸಭೆ, ಸಿರ್ಸಿ, ಉತ್ತರ ಕನ್ನಡ ಜಿಲ್ಲೆ
10	ಎಂ. ಸತೀಶ್ ಕುಮಾರ್	ವಿಶೇಷ ಭೂಸ್ವಾಧೀನಾಧಿಕಾರಿ, ಬಿ.ಎಂ.ಆರ್.ಸಿ.ಎಲ್., ಬೆಂಗಳೂರು
11	ಪಿ. ಲಕ್ಷಮ್ಮ	ಸಹಾಯಕ ಆಯುಕ್ತರು, ಅನಧಿಕೃತ ಕಟ್ಟಡಗಳ ತಡೆ ಕೋಶ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
12	ಷಣ್ಮುಖ, ಡಿ.	ವಿಶೇಷ ಭೂಸ್ವಾಧೀನಾಧಿಕಾರಿ, ಯು.ಕೆ.ಪಿ., ಬಾಗಲಕೋಟೆ
13	ಅಚ್ಚುತ, ಪಿ.	ವಿಶೇಷ ಸಹಾಯಕ ಆಯುಕ್ತರು, ಭೂ ನ್ಯಾಯಮಂಡಳಿ, ಉಡುಪಿ
14	ಮೇರಿ ಮಥಾಯಿಸ್	ವಿಶೇಷ ಸಹಾಯಕ ಆಯುಕ್ತರು, ಭೂ ನ್ಯಾಯ ಮಂಡಳಿ, ಕುಂದಾಪುರ
15	ಕಾವೇರಿಯಪ್ಪ, ಕೆ.ಟಿ.	ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್, ಮಂಗಳೂರು
16	ಟಿ. ವಿಜಯ	ಸಹಾಯಕ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು
17	ವಿಜಯಲಕ್ಷ್ಮಿ ಪೋಳ	ಪುನರ್ವಸತಿ ಅಧಿಕಾರಿ, ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
18	ವಿ.ಬಿ. ದಾಮ್ಮಣ್ಣವರ್	ಕಂದಾಯ ಅಧಿಕಾರಿ, ಬೆಳಗಾವಿ ಮಹಾನಗರ ಪಾಲಿಕೆ, ಬೆಳಗಾವಿ
19	ವಿ. ಶಶಿಕಲಾ	ವಿಶೇಷ ಭೂಸ್ವಾಧೀನಾಧಿಕಾರಿ, ಸಿಂಧನೂರು ಮೆಹಬೂಬ್‌ನಗರ ರೈಲ್ವೇ ಯೋಜನೆ, ಸಿಂಧನೂರು, ರಾಯಚೂರು
20	ಎಂ. ಶ್ರೀರಾಮ ರೆಡ್ಡಿ	ಸಹಾಯಕ ಯೋಜನಾಧಿಕಾರಿ, ಡಿ.ಆರ್.ಡಿ.ಎ ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಬೆಂಗಳೂರು
21	ಡಿ.ಪಿ. ವೆಂಕಟೇಶ್	ವಿಶೇಷ ಭೂಸ್ವಾಧೀನಾಧಿಕಾರಿ, ಕಾವೇರಿ ನೀರಾವರಿ ನಿಗಮ, ರಾಮನಗರ
	ಮುನಿಸ್ವಾಮಿ	ವಿಶೇಷ ಭೂಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ರಾಣೆಬೆನ್ನೂರು
23	ಮಾಳಿಗೆ ಶಂಕರ್	ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಮೈಸೂರು
24	ಹೆಚ್.ಕೆ. ಕೃಷ್ಣಮೂರ್ತಿ	ವಿಶೇಷ ಭೂಸ್ವಾಧೀನಾಧಿಕಾರಿ, ಕಬಿನಿ ನೀರಾವರಿ ಯೋಜನೆ-2 ಮೈಸೂರು
25	ಬಿ. ಬೋರಯ್ಯ	ಸಹಾಯಕ ಆಯುಕ್ತರು (ಜಾರಿದಳ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
26	ಆರ್. ವೆಂಕಟೇಶ	ಉಪ ವಿಭಾಗಾಧಿಕಾರಿ, ಬಳ್ಳಾರಿ ಉಪ ವಿಭಾಗ, ಬಳ್ಳಾರಿ ಜಿಲ್ಲೆ
27	ಮಳ್ಳಿ ಶರಣಬಸಪ್ಪ	ಉಪ ವಿಭಾಗಾಧಿಕಾರಿ, ಕೊಪ್ಪಳ ಉಪ ವಿಭಾಗ, ಕೊಪ್ಪಳ ಜಿಲ್ಲೆ
28	ಮಾಣಿಕಪ್ಪ ಮಂಗಳಗಿ	ವಿಶೇಷ ಭೂಸ್ವಾಧೀನಾಧಿಕಾರಿ, ಕಾರಂಜ ಯೋಜನೆ, ಬೀದರ್
29	ಸುರೇಶ್ ಜಿರ್ಲೆ	ಉಪ ವಿಭಾಗಾಧಿಕಾರಿ, ಗದಗ ಉಪ ವಿಭಾಗ, ಗದಗ
30	ನಾಗೇಂದ್ರಪ್ಪ, ಜಿ.ಕೆ.	ಪರಿಷತ್ ಕಾರ್ಯದರ್ಶಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

(ಹೆಚ್.ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿ.ಆ.ಸು ಇಲಾಖೆ (ಸೇವೆಗಳು-2)

ಅನುಬಂಧ-2

ದಿನಾಂಕ : 1-7-2010 ರಿಂದ 3-7-2010 ರವರೆಗೆ ಎರಡನೇ ತಂಡ

ಕ್ರ. ಸಂ.	ಅಧಿಕಾರಿಯ ಹೆಸರು ಶ್ರೀಯುತರು	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ
1	ಚಿಕ್ಕಪೆಟ್ಟಯ್ಯ, ಕೆ.ಬಿ.	ಸಹಾಯಕ ಆಯುಕ್ತರು, ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್, ಬೆಂಗಳೂರು
2	ಕಾಂತರಾಜ್, ಪಿ.ಎಸ್.	ವಿಶೇಷ ಭೂಸ್ವಾಧೀನಾಧಿಕಾರಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
3	ಗಾಯತ್ರಿ, ಕೆ.ಎಂ.	ಪರಿಷತ್ ಕಾರ್ಯದರ್ಶಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು
4	ಫಾನ್ಸಿಸ್ ವಸಂತ್ ಕುಮಾರ್, ಡಿ.ಆರ್.	Asst, Metropolitan Commissioner, Bangalore Metropolitan Regional Devp. Authority, Bangalore-52
5	ಚೌಹಾಣ್, ಡಿ.ಪಿ	ಉಪ ವಿಭಾಗಾಧಿಕಾರಿ, ರಾಯಚೂರು ಉಪ ವಿಭಾಗ, ರಾಯಚೂರು
6	ರಾಘವೇಂದ್ರ ಹೆಚ್.ಎಸ್.	ಅಧೀನ ಕಾರ್ಯದರ್ಶಿ, Karnataka State Human Rights Commission, Bangalore-01
7	ಈಶ್ವರಪ್ಪ	ವಿಶೇಷ ಭೂಸ್ವಾಧೀನಾಧಿಕಾರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ಬಳ್ಳಾರಿ
8	ಸಂಗಪ್ಪ	ಉಪ ವಿಭಾಗಾಧಿಕಾರಿ, ಗುಲ್ಬರ್ಗಾ ಉಪ ವಿಭಾಗ, ಗುಲ್ಬರ್ಗಾ
9	ಪ್ರವೀಣ್ ಕುಮಾರ್, ಜಿ.ಎಲ್.	ಉಪ ವಿಭಾಗಾಧಿಕಾರಿ, ಸಾಗರ ಉಪ ವಿಭಾಗ, ಶಿವಮೊಗ್ಗ
10	ಅಲ್ಲಪ್ಪ. ಆರ್	ವಿಶೇಷ ಭೂಸ್ವಾಧೀನಾಧಿಕಾರಿ, Indian Oil Corporation, ಬೆಂಗಳೂರು
11	ಶಿವಯ್ಯ, ಬಿ.	ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ನೀರಾವರಿ ಯೋಜನೆ (ಪುನರ್ವಸತಿ), ಹಾಸನ
12	ಮೋಹನ್ ರಾಜು, ಎಸ್.ಟಿ.	ವಿಶೇಷ ಭೂಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ
13	ಪ್ರಕಾಶ್. ಜಿ.ಟಿ. ನಿಟ್ಟಾಲಿ	ವಿಶೇಷ ಭೂಸ್ವಾಧೀನಾಧಿಕಾರಿ, ಹಿಪ್ಪರಗಿ ಯೋಜನೆ, ಅಥಣಿ, ಬೆಳಗಾಂ
14	ಸದಾಶಿವ ಪ್ರಭು, ಬಿ.	ಸಹಾಯಕ ಆಯುಕ್ತರು, ಭೂ ನ್ಯಾಯ ಮಂಡಳಿ, ಮಂಗಳೂರು
15	ಶಶಿಧರ್ ಕುರೇರ	ಉಪ ವಿಭಾಗಾಧಿಕಾರಿ, ತರೀಕೆರೆ ಉಪ ವಿಭಾಗ, ಚಿಕ್ಕಮಗಳೂರು ಜಿಲ್ಲೆ
16	ಪದ್ಮ ಬಸವಂತಪ್ಪ	ಕಂದಾಯ ಅಧಿಕಾರಿ, ಹುಬ್ಬಳ್ಳಿ-ಧಾರವಾಡ ಮುನಿಸಿಪಲ್ ಕಾರ್ಪೊರೇಶನ್, ಹುಬ್ಬಳ್ಳಿ
17	ಇಬ್ರಾಹಿಂ ಮೈಗೂರ್	ವಿಶೇಷ ಭೂಸ್ವಾಧೀನಾಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ, ಜಮಖಂಡಿ
18	ಪ್ರಸನ್ನ, ಹೆಚ್	ಸಹಾಯಕ ಆಯುಕ್ತರು, ಬಸವ ಕಲ್ಯಾಣ ಉಪ ವಿಭಾಗ, ಬಸವ ಕಲ್ಯಾಣ, ಬೀದರ್
19	ಹೆಚ್.ಎಸ್. ರಾಮಕೃಷ್ಣ	ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ, ಬೆಂಗಳೂರು

20	ಲಿಂಗಮೂರ್ತಿ, ಜಿ.	ವಿಶೇಷ ಭೂಸ್ವಾಧೀನಾಧಿಕಾರಿ, ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ
21	ಡಾ॥ ವಾಸಂತಿ ಅಮರ್, ಬಿ.ವಿ.	ಯೋಜನಾ ವ್ಯವಸ್ಥಾಪಕರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು
22	ಸೋಮಶೇಖರ್,ಎಸ್.ಟಿ.	ಸಹಾಯಕ ಆಯುಕ್ತರು, (LAQ), KSHIP, ಬೆಳಗಾಂ
23	ಡಾ॥ ಮಹೇಶ್, ಎಂ.	ಉಪ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
24	ನವೀನ್‌ಕುಮಾರ್ ರಾಜು, ಎಸ್.	ವಿಶೇಷ ಭೂಸ್ವಾಧೀನಾಧಿಕಾರಿ, ಹುಬ್ಬಳ್ಳಿ ಅಂಕೋಲ ರೈಲ್ವೆ ಬ್ರಾಡ್‌ಗೇಜ್ ಯೋಜನೆ, ಕಾರವಾರ
25	ಶಿಲ್ಪ, ಎಂ	ಆಡಳಿತಾಧಿಕಾರಿ, ಕರ್ನಾಟಕ ಭೂಸೇನಾ ನಿಗಮ, ಬೆಂಗಳೂರು
26	ರೂಪಾ, ಐ.ಪಿ.	ಆಡಳಿತಾಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
27	ಬಸವರಾಜು, ಎ.ಬಿ.	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹುಣಸೂರು
28	ನಾಗರಾಜ, ಎನ್.ಎಂ.	ಸಹಾಯಕ ಆಯುಕ್ತರು (ಆರ್. & ಆರ್) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
29	ಭಾರತಿ, ಡಿ.	ಸಹಾಯಕ ಆಯುಕ್ತರು, ಮೈಸೂರು ಉಪ ವಿಭಾಗ, ಮೈಸೂರು
30	ಪ್ರಭು, ಜಿ.	ಸಹಾಯಕ ಆಯುಕ್ತರು, ಪಾಂಡವಪುರ ಉಪ ವಿಭಾಗ, ಮಂಡ್ಯ

(ಹೆಚ್.ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು ಇಲಾಖೆ (ಸೇವೆಗಳು-2)

ಅನುಬಂಧ-3

ದಿನಾಂಕ : 2-8-2010 ರಿಂದ 4-8-2010 ರವರೆಗೆ ಮೂರನೇ ತಂಡ

ಕ್ರ ಸಂ.	ಅಧಿಕಾರಿಯ ಹೆಸರು ಶ್ರೀಯುತರು	ಕಾರ್ಯ ನಿರ್ವಹಿಸುತ್ತಿರುವ ಹುದ್ದೆ
1	ಸುರೇಶ್. ಬಿ. ಇಟ್ನಾಳ್	ಉಪ ವಿಭಾಗಾಧಿಕಾರಿ, ಹಾವೇರಿ ಉಪ ವಿಭಾಗ, ಹಾವೇರಿ
2	ಚಂದ್ರಶೇಖರ್, ಎನ್.	ಮನೆ ಬಾಡಿಗೆ ನಿಯಂತ್ರಣಾಧಿಕಾರಿ, ಬೆಂಗಳೂರು ದಕ್ಷಿಣ,ಬೆಂಗಳೂರು
3	ರೂಪಾಶ್ರೀ	ಉಪ ಕಾರ್ಯದರ್ಶಿ-3, ಬಿ.ಡಿ.ಎ. ಬೆಂಗಳೂರು
4	ವಿಜಯಕುಮಾರ್, ಸಿ.	ಉಪ ವಿಭಾಗಾಧಿಕಾರಿ, ರಾಮನಗರ ಉಪ ವಿಭಾಗ, ರಾಮನಗರ
5	ಪೂರ್ಣಿಮಾ, ಬಿ.ಆರ್.	ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ
6	ಸಿದ್ದಯ್ಯ, ಟಿ.ಎಸ್.	ವಿಶೇಷ ಭೂಸ್ವಾಧೀನಾಧಿಕಾರಿ, ತುಂಗ ಯೋಜನೆ, ಶಿವಮೊಗ್ಗ
7	ವೆಂಕಟೇಶ, ಟಿ.	ಉಪ ವಿಭಾಗಾಧಿಕಾರಿ, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ
8	ಕುಮಾರ	ಸಹಾಯಕ ಆಯುಕ್ತರು, ತುಮಕೂರ ಉಪ ವಿಭಾಗ, ತುಮಕೂರು
9	ನಾಗೇಂದ್ರ ಪ್ರಸಾದ್, ಕೆ.	ಸಹಾಯಕ ಆಯುಕ್ತರು, ಸಕಲೇಶಪುರ ಉಪ ವಿಭಾಗ, ಹಾಸನ ಜಿಲ್ಲೆ
10	ವಿದ್ಯಾಕುಮಾರಿ, ಕೆ.	ಉಪ ವಿಭಾಗಾಧಿಕಾರಿ, ಹುಣಸೂರು ಉಪ ವಿಭಾಗ, ಮೈಸೂರು
11	ಗಂಗಾಧರಸ್ವಾಮಿ, ಜಿ.ಎಂ.	ಸಹಾಯಕ ಆಯುಕ್ತರು, ಬೆಂಗಳೂರು ಉತ್ತರ, ಬೆಂಗಳೂರು
12	ಶಿವಪ್ರಸಾದ್, ಪಿ.ಆರ್.	ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ

13	ಡಾ॥ ಅನುರಾಧ, ಕೆ.ಎನ್.	ಉಪ ಆಡಳಿತಾಧಿಕಾರಿ, ಕಾವೇರಿ ನೀರಾವರಿ ಯೋಜನೆ, ಮೈಸೂರು
14	ಬಾಲಚಂದ್ರ, ಎಸ್.ಎನ್.	ಕಂದಾಯ ಅಧಿಕಾರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು
15	ವೈಶಾಲಿ, ಎಂ.ಎಲ್.	ಸಹಾಯಕ ಆಯುಕ್ತರು, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ
16	ಪ್ರಭುಲಿಂಗ ಕಾವಳಿ ಕಟ್ಟಿ	ಸಹಾಯಕ ಆಯುಕ್ತರು, ಮಂಗಳೂರು ಉಪ ವಿಭಾಗ, ಮಂಗಳೂರು
17	ಗೋವಿಂದ ರೆಡ್ಡಿ	ಉಪ ವಿಭಾಗಾಧಿಕಾರಿ, ಲಿಂಗಸೂರು ಉಪ ವಿಭಾಗ, ರಾಯಚೂರು ಜಿಲ್ಲೆ
18	ವಿಜಯಮಹಾಂತೇಶ, ಬಿ. ದಾನಮ್ಮನವರ್	ಉಪ ವಿಭಾಗಾಧಿಕಾರಿ, ಬೆಳಗಾಂ ಉಪ ವಿಭಾಗ, ಬೆಳಗಾಂ
19	ರಂಗಪ್ಪ, ಎಸ್.	ಸಹಾಯಕ ಆಯುಕ್ತರು, ಮಂಡ್ಯ ಉಪ ವಿಭಾಗ, ಮಂಡ್ಯ
20	ಜಹೀರಾ ನಸೀಂ	ಉಪ ವಿಭಾಗಾಧಿಕಾರಿ, ಬೀದರ್ ಉಪ ವಿಭಾಗ, ಬೀದರ್
21	ಲತಾಕುಮಾರಿ, ಕೆ.ಎಸ್.	ಉಪ ವಿಭಾಗಾಧಿಕಾರಿ, ಸೇಡಂ ಉಪ ವಿಭಾಗ, ಗುಲ್ಬರ್ಗಾ
22	ರಾಜಮ್ಮ. ಎ. ಚೌಡರೆಡ್ಡಿ	ವಿಶೇಷ ಭೂಸ್ವಾಧೀನಾಧಿಕಾರಿ, KHB, ಬೆಂಗಳೂರು
23	ಸತ್ಯಭಾಮ, ಸಿ.	ಸಹಾಯಕ ಆಯುಕ್ತರು (ಜಾಹೀರಾತು), ಬಿ.ಬಿ.ಎಂ.ಪಿ. ಬೆಂಗಳೂರು
24	ಜಾನಕಿ, ಕೆ.ಎಂ.	ಉಪ ವಿಭಾಗಾಧಿಕಾರಿ, ದಾವಣಗೆರೆ ಉಪ ವಿಭಾಗ, ದಾವಣಗೆರೆ
25	ಜಗದೀಶ, ಜಿ.	ಉಪ ವಿಭಾಗಾಧಿಕಾರಿ, ಸಿರ್ಸಿ ಉಪ ವಿಭಾಗ, ಉತ್ತರ ಕನ್ನಡ
26	ಕ್ಯಾಪ್ಟನ್ ಡಾ॥ ರಾಜೇಂದ್ರ, ಕೆ.	ಉಪ ವಿಭಾಗಾಧಿಕಾರಿ, ಜಮಖಂಡಿ ಉಪ ವಿಭಾಗ, ಬಾಗಲಕೋಟೆ
27	ಕಾಶೀನಾಥ ಪವಾರ್	ಉಪ ವಿಭಾಗಾಧಿಕಾರಿ, ಹೊಸಪೇಟೆ ಉಪ ವಿಭಾಗ, ಬಳ್ಳಾರಿ
28	ದಯಾನಂದ, ಕೆ.ಎ.	ಉಪ ವಿಭಾಗಾಧಿಕಾರಿ, ಚಿಕ್ಕಮಗಳೂರು ಉಪ ವಿಭಾಗ, ಚಿಕ್ಕಮಗಳೂರು
29	ಅರ್ಚನ, ಎಂ.ಎಸ್.	ಸಹಾಯಕ ಆಯುಕ್ತರು (ಜಾಹೀರಾತು), ಬಿ.ಬಿ.ಎಂ.ಪಿ, ಬೆಂಗಳೂರು
30	ಶ್ರೀನಿವಾಸ, ಕೆ.	ಉಪ ಮುಖ್ಯ ಆಡಳಿತಾಧಿಕಾರಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು

(ಹೆಚ್.ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು ಇಲಾಖೆ (ಸೇವೆಗಳು-2)

ಪಿ.ಆರ್. 1373

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ಆಹಾರ ಪಾರ್ಕ್ ಯೋಜನೆ ಅನುಷ್ಠಾನಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ : 1) ವಿಶೇಷಾಧಿಕಾರಿಗಳು, ಆಹಾರ ಕರ್ನಾಟಕ ಲಿ., ಇವರ ಪತ್ರ ಸಂಖ್ಯೆ : FKL/32/2010-11,ದಿನಾಂಕ : 26-4-2010.

2) ಆಯುಕ್ತರ, ಪತ್ರ ಸಂಖ್ಯೆ ಎಂಎಸ್ಎಂಇ/ಎಸ್I/ಆಹಾರ ಪಾರ್ಕ್/12/ 2010-11, ದಿನಾಂಕ : 29-4-2010

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯದಲ್ಲಿ 4851-00-800-5-00-132 ಆಹಾರ ಪಾರ್ಕ್ ಅಡಿಯಲ್ಲಿ ಆಹಾರ ಪಾರ್ಕ್ ಅಭಿವೃದ್ಧಿಗೋಸ್ಕರ ರೂ. 1000-00 ಲಕ್ಷಗಳು ಒದಗಿಸಲಾಗಿರುತ್ತದೆ. ಇದರಲ್ಲಿ ವಿಶೇಷ ಘಟಕ ಯೋಜನೆ, ಹಾಗೂ ಗಿರಿಜನ ಉಪ ಯೋಜನೆ ಅಡಿಯಲ್ಲಿನ ಮೊತ್ತ ಹೊರತು ಪಡಿಸಿ ಉಳಿದ ರೂ. 772.50 ಲಕ್ಷಗಳಲ್ಲಿ ರೂ. 386.25 ಲಕ್ಷಗಳನ್ನು ಬಿಡುಗಡೆ ಮಾಡಲು ಅಪರ ನಿರ್ದೇಶಕರು (ಎಂ.ಎಸ್.ಎಂ.ಇ) ಶಿಫಾರಸ್ಸು ಮಾಡಿದ್ದು, ರೂ. 1000-00 ಲಕ್ಷದಲ್ಲಿ ಆರ್ಥಿಕ ಇಲಾಖೆ ಪ್ರತ್ಯಾಯೋಜಿಕ ಅಧಿಕಾರದ ಸರ್ಕಾರಿ ಆದೇಶ ಸಂಖ್ಯೆ : ಆಇ 1 ಟಿಎಫ್‌ಡಿ 2010, ದಿನಾಂಕ 20-4-2010 ರನ್ವಯ ರೂ. 250.00 ಲಕ್ಷ ಬಿಡುಗಡೆ ಮಾಡಬಹುದಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಸಿಐ 352 ಎಸ್‌ಪಿಐ 2008 (ಪಿ), ಬೆಂಗಳೂರು, ದಿನಾಂಕ : 26–5–2010

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2010–2011ರ ಆಯವ್ಯಯದಂತೆ ಆಹಾರ ಪಾರ್ಕ್ ಯೋಜನೆಯನ್ನು ಕಾರ್ಯಗತಗೊಳಿಸಲು ಲೆಕ್ಕಶೀರ್ಷಿಕೆ 4851–00–800–5–00–132 ರಡಿಯಲ್ಲಿ ರೂ. 250.00 ಲಕ್ಷಗಳನ್ನು ಆಹಾರ ಕರ್ನಾಟಕ ನಿಯಮಿತ ಅವರಿಗೆ ಬಿಡುಗಡೆ ಮಾಡಿ ಈ ಮೂಲಕ ಆದೇಶಿಸಿದೆ.

ಸದರಿ ಮೊತ್ತವನ್ನು ವಿಶೇಷ ಅಧಿಕಾರಿಗಳು, ಆಹಾರ ಕರ್ನಾಟಕ ನಿಯಮಿತ, ಬೆಂಗಳೂರು ರವರು ಸ್ವೀಕೃತಿ ರಸೀದಿಯನ್ನು ಸಲ್ಲಿಸಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರ ಮೇಲು ರುಜು ಪಡೆದು ರಾಜ್ಯ ಹುಜೂರ್ ಖಜಾನೆಯಿಂದ ನಗದೀಕರಿಸಿಕೊಳ್ಳುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1374

(ಅಪರ್ಣ ಪಾವಟೆ)
ಪೀಠಾಧಿಕಾರಿ (ತಾಂ.ಕೋ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ದಿನಾಂಕ : 12–3–2010.
2) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/ಆಸರೆ/2726/2010, ದಿನಾಂಕ : 18–5–2010

ಪ್ರಸ್ತಾವನೆ :

ಕಳೆದ ವರ್ಷ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ "ಆಸರೆ" ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಈ ಮನೆಗಳ ಪೈಕಿ ಧಾರವಾಡ ಜಿಲ್ಲೆಯ ಅಹೆಟ್ಟಿ ಗ್ರಾಮದಲ್ಲಿ 55 ಮನೆಗಳನ್ನು ಹಾಗೂ ಬಿಜಾಪುರ ಜಿಲ್ಲೆಯ ತೆಗ್ಗಳ್ಳಿ ಗ್ರಾಮದಲ್ಲಿ 286 ಮನೆಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿತ್ತು. ಆದರೆ ಈ ಎರಡು ಗ್ರಾಮಗಳಲ್ಲಿ ಇದುವರೆವಿಗೂ ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿಲ್ಲವಾದ್ದರಿಂದ ಈ ಎರಡು ಸ್ಥಳಗಳ ಬದಲಾಗಿ ಬೇರೆ ಸ್ಥಳಗಳಲ್ಲಿ ಮನೆಗಳ ನಿರ್ಮಾಣ ಕೈಗೊಳ್ಳಲು ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ಬೆಂಗಳೂರು, ದಿನಾಂಕ : 26ನೇ ಮೇ 2010

ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ನಿರ್ಮಾಣ ಕೈಗೊಳ್ಳಲು ವಹಿಸಿಕೊಟ್ಟ ಧಾರವಾಡ ಜಿಲ್ಲೆಯ ಆಹೆಟ್ಟಿ ಗ್ರಾಮದಲ್ಲಿ 55 ಮನೆಗಳು ಹಾಗೂ ಬಿಜಾಪುರ ಜಿಲ್ಲೆಯ ತೆಗ್ಗಳ್ಳಿ ಗ್ರಾಮದಲ್ಲಿ 286 ಮನೆಗಳ ಬದಲಾಗಿ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಅರಹಟ್ಟಿ ಗ್ರಾಮದಲ್ಲಿ 269 ಮನೆಗಳನ್ನು ನಿರ್ಮಿಸುವಂತೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1375

(ಕೆ.ಆರ್. ವಲ್ಲೂರ)
ಪೀಠಾಧಿಕಾರಿ–2, ವಸತಿ ಇಲಾಖೆ.

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಡಾಃ ಚಿದಾನಂದ ದುಂಡಪ್ಪ, ಸರಿಕಾರ, ವಕೀಲರು ಇವರನ್ನು ವಿಶೇಷ ನ್ಯಾಯವಾದಿಯಾಗಿ ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಕಇ 38 ಎಸ್‌ಎಡಿ 2005, ದಿನಾಂಕ : 02–07–2007.
2. ಪತ್ರ ಸಂಖ್ಯೆ : ಓ.ಸಂಖ್ಯೆ : 660/2008, ದಿನಾಂಕ : 02–07–2008.
3. ಪತ್ರ ಸಂಖ್ಯೆ : ಜಾವಿ/02/ಸಾಮಾನ್ಯ/ನಾಹಜಾನಿ : 2006, ದಿನಾಂಕ :21–11–2009.

ಪ್ರಸ್ತಾವನೆ:

ರಾಜ್ಯದಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸುವ ಸಲುವಾಗಿ ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಸಿ. ಜಗದೀಶ್ ಇವರನ್ನು ವಿಶೇಷ ನ್ಯಾಯವಾದಿಯಾಗಿ ನೇಮಕ ಮಾಡಲಾಗಿತ್ತು. ಅಂತಹ ಪ್ರಕರಣಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಇನ್ನೊಬ್ಬ ವಕೀಲರನ್ನು ವಿಶೇಷ ನ್ಯಾಯವಾದಿಯಾಗಿ ನೇಮಿಸಲು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಕಇ 50 ಎಸ್‌ಎಡಿ 2008, ಬೆಂಗಳೂರು, ದಿನಾಂಕ : 12–05–2010

ಸುಳ್ಳು ಜಾತಿ ಪ್ರಮಾಣ ಪತ್ರಗಳ ಕುರಿತಂತೆ ರಾಜ್ಯದ ಉಚ್ಚ ನ್ಯಾಯಾಲಯ ಹಾಗೂ ಇತರೆ ಅಧೀನ ನ್ಯಾಯಾಲಯಗಳಲ್ಲಿ ಹೂಡಲಾದ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸರ್ಕಾರದ ಪರವಾಗಿ ಹಾಜರಾಗಿ ವಾದಿಸಲು ಡಾಃ

ಚಿದಾನಂದ ದುಂಡಪ್ಪ, ಸರಿಕಾರ, ವಕೀಲರು ನಂ. 272/4, ಚೇತನ ಟಾಕೀಸ್ ಹತ್ತಿರ, ನಾಗವಾರ ಪಾಳ್ಯ, ಸಿ.ವಿ.ರಾಮನ್‌ನಗರ, ಬೆಂಗಳೂರು ಇವರನ್ನು ವಿಶೇಷ ನ್ಯಾಯವಾದಿಯಾಗಿ (special councel) ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಡಾಃ ಚಿದಾನಂದ ದುಂಡಪ್ಪ, ಸರಿಕಾರ, ವಕೀಲರು ಇವರು ಈ ಕೆಳಗಿನಂತೆ ಸಂಭಾವನೆ ಪಡೆಯಲು ಅರ್ಹರಾಗಿರುತ್ತಾರೆ.

Sl.No.	Item	Rs.
1.	Reading fee	5,000.00 per case
2.	Hearing fee	250.00 per day per case
3.	Junior fee	1,000.00 per case
4.	Clerical and Miscellaneous fee	1,000.00 per case

ಡಾಃ ಚಿದಾನಂದ ದುಂಡಪ್ಪ, ಸರಿಕಾರ, ಇವರು ವ್ಯಾಜಗಳ ವಿಲೇವಾರಿ ಕುರಿತಂತೆ ಅಂಕಿ ಅಂಶ ನಮೂದಿಸಿ ಸರ್ಕಾರಕ್ಕೆ ಪ್ರತಿ ತ್ರೈಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಸಂಬಂಧದ ವೆಚ್ಚವನ್ನು ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಕ್ರೋಢೀಕೃತ ಅನುದಾನ) ಅಡಿ ಭರಿಸತಕ್ಕದ್ದು.

ಇದಕ್ಕೆ ಕಾನೂನು, ನ್ಯಾಯ ಮಾನವ ಹಕ್ಕುಗಳ ಇಲಾಖೆ ಹಾಗೂ ಆರ್ಥಿಕ ಇಲಾಖೆ ಇವರ ಸಹಮತಿಯನ್ನು ಕ್ರಮವಾಗಿ ಟಿಪ್ಪಣಿ ಸಂಖ್ಯೆ : ಲಾ/ಎಎಲ್ಎಸ್-1/1504/2009, ದಿನಾಂಕ : 11-12-2009 ಮತ್ತು ಟಿಪ್ಪಣಿ ಸಂಖ್ಯೆ : ಆಇ 749 ವೆಚ್ಚ - 3/2010, ದಿನಾಂಕ : 29-01-2010ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1376

ಎಸ್. ಲೋಕನಾಥ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ-2

ಸಮಾಜ ಕಲ್ಯಾಣ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸಂಗಮೇಶ ಸಾತಗೊಂಡ ಎನ್ನುವವರ ಕೊಲೆ ಬಗ್ಗೆ ಬಿಜಾಪುರ ಜಿಲ್ಲೆಯ ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂ. 159/08ನ್ನು ಸಿ.ಐ.ಡಿಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : 1. ಪ್ರಕರಣ ಸಂ. 4303/09ರಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ದಿನಾಂಕ 08-03-2010ರಂದು ಮಾಡಿರುವ ಆದೇಶ.

ಪ್ರಸ್ತಾವನೆ:

ಶ್ರೀ ಎಂ.ಪಿ. ಆಸಂಗಿ, ಎಂಬುವವರು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ ತಮ್ಮ ಸಂಬಂಧಿ ಶ್ರೀ ಸಂಗಮೇಶ ಸಾತಗೊಂಡ ಎನ್ನುವವರನ್ನು ಕೊಲೆ ಮಾಡಲಾಗಿದ್ದು ಈ ಬಗ್ಗೆ ಬಿಜಾಪುರ ಜಿಲ್ಲೆಯ ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಶರಣಪ್ಪ ಬಬಲಾದಿ ಮತ್ತು ಇತರರ ಮೇಲೆ ಮೊ.ಸಂ. 159/08 ದಾಖಲಾಗಿದ್ದು ಕೊಲೆಯ ತನಿಖೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದು ಇದನ್ನು ಸಿ.ಐ.ಡಿ.ಗೆ ವರ್ಗಾಯಿಸುವಂತೆ ಕೋರಿರುತ್ತಾರೆ. ಮೇಲೆ ಓದಲಾದ ಆದೇಶದಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಈ ದೂರನ್ನು ಪರಿಶೀಲಿಸಿ ಬಿಜಾಪುರ ಜಿಲ್ಲೆಯ ಬಬಲೇಶ್ವರ ಪೊಲೀಸ್ ಠಾಣೆಯ ಮೊ.ಸಂ. 159/08ನ್ನು ತನಿಖೆಗಾಗಿ ಸಿ.ಐ.ಡಿ.ಗೆ ವರ್ಗಾಯಿಸುವಂತೆ ಆದೇಶಿಸಿದೆ.

ಆದುದರಿಂದ ಈ ಆದೇಶ.

ಆದೇಶ ಸಂಖ್ಯೆ: ಒಇ 75 ಸಿಐಡಿ 2010, ಬೆಂಗಳೂರು, ದಿನಾಂಕ : 24-05-2010

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯ ಬಬಲೇಶ್ವರ ಪೊಲೀಸ್ ಠಾಣೆಯ ಮೊಕದ್ದಮೆ ಸಂ. 159/08ನ್ನು ಮುಂದಿನ ತನಿಖೆಗಾಗಿ ಸಿ.ಐ.ಡಿ.ಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಿಜಾಪುರ ಇವರು ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಸಿ.ಐ.ಡಿ. ತಂಡಕ್ಕೆ ಹಸ್ತಾಂತರಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1377

ಪಿ. ಶಿವರಾಮ ಭಟ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಅಪರಾಧಗಳು)

ಇಂಧನ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಇಎನ್ 331 ಎನ್‌ಸಿಇ 2007 ಬೆಂಗಳೂರು, ದಿನಾಂಕ : 25-05-2010

ಸರ್ಕಾರಿ ಆದೇಶ ಸಂಖ್ಯೆ : ಇಎನ್ 331 ಎನ್‌ಸಿಇ 2007 ದಿನಾಂಕ : 25-06-2009ರ ಆದೇಶ ಭಾಗದ ಮೊದಲನೆ ಕಂಡಿಕೆಯಲ್ಲಿ ಈ ಕೆಳಗಿನಂತೆ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು :-

" Weir-Longitude : $75^0$21'55" Latitude : $13^0$14'42"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1378

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮಂಡ್ಯ ಇದರ 2008-09 ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ನಡೆಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಎಂಕೆಟಿ-2/129/ಎಂಸಿಎಸ್/2009-10 ದಿನಾಂಕ : 17-03-2010.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ : 17-03-2010ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮಂಡ್ಯ ಇದರ 2008-09 ನೇ ಸಾಲಿನ ಲೆಕ್ಕಪರಿಶೋಧನ ಕಾರ್ಯವು ಪ್ರಗತಿಯಲ್ಲಿದ್ದು ಮತ್ತು ಸಂಘದ ವಿಶೇಷಾಧಿಕಾರಿಗಳಾಗಿರುವ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ರವರು ಪ್ರಸ್ತುತ 2010ನೇ ಮಾರ್ಚ್ ಅಂತ್ಯಕ್ಕೆ ಸಹಕಾರ ಸಂಘಗಳ ಚುನಾವಣೆಗಳು ನಡೆಯುವುದರಿಂದ, ಈ ಸಂದರ್ಭದಲ್ಲಿ ಪ್ರಾಂತದ 08 ಜಿಲ್ಲೆಗಳ ಚುನಾವಣೆ ಕಾರ್ಯದ ಮೇಲುಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುವುದರಿಂದ ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ಕೂಡ ನಡೆಯಲಿರುವುದರಿಂದ ದಿನಾಂಕ : 02-02-2010 ರಂದು ಜರುಗಿದ ಸಂಘದ ವಿಶೇಷಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ಸಂಘದ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ನಡೆಸಲು ಮತ್ತೆ ಆರು (06) ತಿಂಗಳ ಕಾಲಾವಕಾಶವನ್ನು ಕೋರಿದ್ದು, ಈ ಬಗ್ಗೆ ವಾರ್ಷಿಕ ಮಹಾ ಸಭೆಯಲ್ಲಿ ಚರ್ಚಿಸಿದ್ದು, ಕೆಲವು ಸದಸ್ಯರುಗಳು ಆಡಿಟ್ ವರದಿಯೊಂದಿಗೆ ಮಹಾ ಸಭೆ ನಡೆಸಬೇಕೆಂದು ತಾತ್ಕಾಲಿಕ ಆಡಿಟ್ ವರದಿ ಮಂಡಿಸಬಾರದೆಂದು ಮನವಿ ಮಾಡಿರುವುದರಿಂದ ಸಂಘದ ವಿಶೇಷಾಧಿಕಾರಿಗಳ ಕೋರಿಕೆಯಂತೆ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ರವರ ಶಿಫಾರಸ್ಸಿನಂತೆ ಸಂಘದ 2008-09ನೇ ಸಾಲಿನ ಸರ್ವ ಸದಸ್ಯರ ಮಹಾ ಸಭೆಯನ್ನು ದಿನಾಂಕ : 01-04-2010 ರಿಂದ 30-09-2010 ರೊಳಗೆ ನಡೆಸಲು ಕಾಲಾವಕಾಶ ವಿಸ್ತರಿಸಿ ಆದೇಸ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 74 ಸಂಮಾಸ 2010, ಬೆಂಗಳೂರು, ದಿನಾಂಕ : 19-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121-ಇ ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮಂಡ್ಯ ಇದರ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ : 30-09-2010 ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30-09-2010ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಕಲಂನ ಉಪ ಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1379

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಗುಡುಗಳಲೆ ಗ್ರಾಮದ ಪ್ರದೇಶವನ್ನು ನಾಲೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ನ್ಯಾಯಾಲಯದ ಆದೇಶದಂತೆ ಮುಂಗಡ ಹಣ ಠೇವಣಿ ಮಾಡುವ ಬಗ್ಗೆ.

ಓದಲಾಗಿದೆ :
1. ಎಕ್ಸಿಕ್ಯೂಷನ್ ನಂ. 123/95ರಲ್ಲಿ ಮಡಿಕೇರಿ ಸಿವಿಲ್ ನ್ಯಾಯಾಲಯವು ದಿನಾಂಕ : 10-02-2010 ರಂದು ನೀಡಿದ ತೀರ್ಪು.
2. ಆದೇಶ ಸಂಖ್ಯೆ : ಆರ್‌ಡಿ 3 ಭೂಸ್ವಾದ 2010(ಎಲ್‌ಸಿ), ದಿನಾಂಕ : 11-03-2010.
3. ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರ ದಿನಾಂಕ 09-04-2010ರ ಫ್ಯಾಕ್ಸ್ ಸಂದೇಶ.
4. ದಿನಾಂಕ : 24-05-2010ರಂದು ಕೊನೆಗೊಂಡಿರುವ ಪತ್ರ ಸಂಖ್ಯೆ : ಮುಸದ/ಲೆಶಾಖೆ/ಲೆಸ-1/ಭೂಸ್ವಾಧೀನ/10-11/1175.

ಪ್ರಸ್ತಾವನೆ:

ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಗುಡುಗಳಲೆ ಗ್ರಾಮದಲ್ಲಿ ಶಾಂತವೇರಿ ಪಿಕಪ್ ಕಾಲುವೆ ನಿರ್ಮಿಸಲು ಸದರಿ ಗ್ರಾಮದ ಸ.ನಂ. 19/2, 19/4, 77/2 ಮತ್ತು 77/4ರ ಜಮೀನುಗಳನ್ನು ಹಾಗೂ ಹರೇ ಹೊಸೂರು ರಸ್ತೆ ನಿರ್ಮಿಸಲು ಹುಲ್ಸೆ ಗ್ರಾಮದ ಸ.ನಂ. 63/3 ಮತ್ತು 63/4ರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಹೆಚ್ಚುವರಿ ಪರಿಹಾರ ಧನಕ್ಕಾಗಿ ಶ್ರೀಮತಿ ಬಿ.ಎಲ್. ಚಂದ್ರಮತಿ ಇವರು ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಮಡಿಕೇರಿ ಇಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಸಂಖ್ಯೆ : 9/86ರ ಪ್ರಕರಣವು ವಜಾಗೊಂಡಿದ್ದರಿಂದ, ಈ ತೀರ್ಪು ಅರ್ಜಿದಾರರ ಪರವಾಗಿ ಆಗಿದ್ದು, ಈ ತೀರ್ಪಿನ ವಿರುದ್ಧ ಎಂಎಫ್ಎ ಸಂಖ್ಯೆ : 511/91ರಲ್ಲಿ ಮೇಲ್ಮನವಿ ದಾಖಲಿಸಿರುತ್ತಾರೆ. ಈ ಮೇಲ್ಮನವಿಯಲ್ಲಿ ಮಾನ್ಯ ನ್ಯಾಯಾಲಯವು ರೂ. 28,500/-ಗಳ ಭೂಮೌಲ್ಯವನ್ನು ನಿಗದಿಪಡಿಸಿ ಈ ಮೊತ್ತದ ಮೇಲೆ ಶೇ. 30ರಷ್ಟು ಸೊಲೇಷಿಯಂ ಹಾಗೂ ಶೇ. 12ರಷ್ಟು ಹೆಚ್ಚುವರಿ ಮಾರುಕಟ್ಟೆ ದರವನ್ನು ಅಲ್ಲದೆ, ವಾರ್ಷಿಕ ಶೇ. 9ರಷ್ಟು ಬಡ್ಡಿಯನ್ನು ಜಮೀನನ್ನು ಕಬ್ಜೆ ಪಡೆದ ದಿನಾಂಕದಿಂದ ತದನಂತರ ವಾರ್ಷಿಕ ಶೇ. 15ರಂತೆ ಬಡ್ಡಿಯನ್ನು ಪಾವತಿ ದಿನಾಂಕದವರೆಗೆ ಪಾವತಿಸಲು ತೀರ್ಪು ನೀಡಿದೆ. ಈ ತೀರ್ಪಿನ ಜಾರಿಗಾಗಿ ಅರ್ಜಿದಾರರು ಜಾರಿ ದಾವೆ ಸಂಖ್ಯೆ : 123/95ನ್ನು ದಾಖಲಿಸಿದ್ದು, ಈ ಜಾರಿ ದಾವೆಯಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯವು ದಿನಾಂಕ : 10-02-10 ರಂದು ನೀಡಿದ ತೀರ್ಪಿನಲ್ಲಿ ಡಿಕ್ರಿದಾರರು ರೂ. 13,48,252-00 ಗಳನ್ನು ವಸೂಲಿ ಮಾಡಿಕೊಳ್ಳಲು ಹಾಗೂ ಇದರೊಂದಿಗೆ ದಿನಾಂಕ : 11-02-10 ರಿಂದ ರೂ. 2,09,219-60ಗಳ ಮೇಲೆ ಶೇ. 15ರಂತೆ ಪಾವತಿ ದಿನಾಂಕದವರೆಗೆ ಬಡ್ಡಿ ಪಡೆಯಲು ಅರ್ಹರಾಗಿದ್ದಾರೆಂದು ತಿಳಿಸಿದೆ. ಈ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಲು ಮೇಲೆ(2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ರಿಟ್ ಅರ್ಜಿ ಸಂಖ್ಯೆ : 11671/10ನ್ನು ಮಡಿಕೇರಿ ಉಪ ವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ, ಮಡಿಕೇರಿ ಇವರು ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರೂ. 1,52,903-00ಗಳನ್ನು ಠೇವಣಿ ಮಾಡುವ ಷರತ್ತಿಗೊಳಪಟ್ಟು ದಿನಾಂಕ : 10-02-10ರ ಸಿವಿಲ್‌ನ್ಯಾಯಾಲಯದ ಜಾರಿ ದಾವೆ ಸಂಖ್ಯೆ : 123/95ಕ್ಕೆ ದಿನಾಂಕ : 09-04-10ರಂದು ತಡೆಯಾಜ್ಞೆ ನೀಡಿದೆ. ಅದರಂತೆ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ಮೇಲೆ (3)ರಲ್ಲಿ ಓದಲಾದ ದಿನಾಂಕ : 09-04-10ರ ಫ್ಯಾಕ್ಸ್ ಸಂದೇಶದಲ್ಲಿ ರೂ. 1,52,903-00ಗಳನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲಿ ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ರಾಜ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ತೀರ್ಪಿನ ಪ್ರಕಾರ ನ್ಯಾಯಾಲಯದಲ್ಲಿ ಠೇವಣಿ ಇಡುವ ಸಲುವಾಗಿ ರೂ. 1,52,903-00 ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 115 ಭೂಸ್ವಾಪ್ರ 2000, ಬೆಂಗಳೂರು, ದಿನಾಂಕ : 25-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಗುಡಗಳಲೆ ಗ್ರಾಮದಲ್ಲಿ ಶಾಂತವೇರಿ ಪಿಕಪ್ ಕಾಲುವೆ ನಿರ್ಮಿಸಲು ಹಾಗೂ ಹರೇ ಹೊಸೂರು ರಸ್ತೆ ನಿರ್ಮಿಸಲು ಸ್ವಾಧೀನಪಡಿಸಿಕೊಳ್ಳಲಾದ ಹುಲ್ಸೆ ಗ್ರಾಮದ ಪ್ರಸ್ತಾಪಿತ ಜಮೀನುಗಳಿಗೆ ಹೆಚ್ಚುವರಿ ಪರಿಹಾರ ಧನದ ವಿಷಯದಲ್ಲಿ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 11671/10ರಲ್ಲಿ ದಿನಾಂಕ : 09-04-10ರಂದು ನೀಡಿದ ಮಧ್ಯಂತರ ತೀರ್ಪಿನಂತೆ ರೂ. 1,52,903-00ಗಳನ್ನು (ಒಂದು ಲಕ್ಷದ ಐವತ್ತೆರಡು ಸಾವಿರದ ಒಂಭೈನೂರ ಮೂರು ರೂ.ಗಳು ಮಾತ್ರ) ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಮಾಡುವ ಸಲುವಾಗಿ ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1380

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ಮೋಳೆ ಗ್ರಾಮದಲ್ಲಿನ ಕೃತಕ ಗರ್ಭಧಾರಣಾ ಕೇಂದ್ರವನ್ನು ಉಗಾರ-ಖುರ್ದ ಗ್ರಾಮಕ್ಕೆ ಸ್ಥಳಾಂತರಿಸುವಿಕೆ.

ಓದಲಾಗಿದೆ :
1. ಆದೇಶ ಸಂಖ್ಯೆ : ಪಸಂಮೀ 217 ಪಸಸೇ 2007, ದಿನಾಂಕ : 31-08-2007.
2. ಪತ್ರ ಸಂಖ್ಯೆ : ಪಸಂಮೀ 243 ಪಸಸೇ 2007, ದಿನಾಂಕ : 03-09-2007.
3. ಪತ್ರ ಸಂಖ್ಯೆ : ಆಪಸಂ/ಡಿವಿಡಿ-3/ವಿವ-54/2005-06, ದಿನಾಂಕ : 02-05-2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮೋಳೆ ಗ್ರಾಮದಲ್ಲಿ ಹೊಸದಾಗಿ ಪಶುಚಿಕಿತ್ಸಾಲಯ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಅಥಣಿ ತಾಲ್ಲೂಕು, ಮೋಳೆ ಗ್ರಾಮದಲ್ಲಿ ಒಂದು ಕೃತಕ ಗರ್ಭಧಾರಣಾ ಕೇಂದ್ರವನ್ನು ಪ್ರಾರಂಭಿಸಲು ಹಾಗೂ ಒಂದು ಪಶುವೈದ್ಯಕೀಯ ಪರೀಕ್ಷಕರು, ಒಂದು ಗ್ರೂಪ್-ಡಿ ಹುದ್ದೆಯನ್ನು ದೊಡ್ಡರೋಗ ತಡೆ ಉಕ್ಕಡ ಕಾಗವಾಡ ಸಂಸ್ಥೆಯಿಂದ ಮೋಳೆ ಗ್ರಾಮಕ್ಕೆ ಸ್ಥಳಾಂತರಿಸಲು ಅನುಮತಿ ನೀಡಲಾಗಿದೆ.

3. ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮೋಳೆ ಗ್ರಾಮಕ್ಕೆ ಒಂದು ಪಶುಚಿಕಿತ್ಸಾಲಯ ಹಾಗೂ ಕೃತಕ ಗರ್ಭಧಾರಣಾ ಕೇಂದ್ರ ಮಂಜೂರಾಗಿರುವುದರಿಂದ, ಮೋಳೆ ಗ್ರಾಮದಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಪ್ರಾರಂಭಿಸಲು ನೀಡಿರುವ ಅನುಮತಿಗೆ ತಿದ್ದುಪಡಿ ಮಾಡಿ ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮಕ್ಕೆ ಕೃತಕ ಗರ್ಭಧಾರಣಾ ಕೇಂದ್ರ ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

4. ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮೋಳೆ ಗ್ರಾಮದಲ್ಲಿ ಈಗಾಗಲೇ ಒಂದು ಪಶುಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದ್ದು ಅದೇ ಸ್ಥಳದಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಸಹ ಮಂಜೂರಾಗಿರುವುದರಿಂದ ಮೋಳೆ ಗ್ರಾಮದಲ್ಲಿ ಎರಡು ಪಶುವೈದ್ಯಕೀಯ ಸಂಸ್ಥೆಗಳಿರುತ್ತದೆ. Standard Pattern Norms ಪ್ರಕಾರ ಒಂದು ಗ್ರಾಮಕ್ಕೆ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿರುತ್ತದೆ. ಮೋಳೆ ಗ್ರಾಮದಲ್ಲಿ ಎರಡು ಪಶುವೈದ್ಯಕೀಯ ಸಂಸ್ಥೆಗಳಿರುವುದರಿಂದ ಒಂದು ಹೆಚ್ಚುವರಿಯಾಗಿರುತ್ತದೆ. ಆದ್ದರಿಂದ, ಹೆಚ್ಚುವರಿಯಾಗಿ ಅಸ್ತಿತ್ವದಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು ಅವಶ್ಯವಿರುವ ಗ್ರಾಮಕ್ಕೆ ಸ್ಥಳಾಂತರಿಸಲು ಸರ್ಕಾರ ಉದ್ದೇಶಿಸಿದೆ. ಅಥಣಿ ತಾಲ್ಲೂಕಿನ ಉಗಾರ-ಖುರ್ದ ಗ್ರಾಮಕ್ಕೆ ಪಶುವೈದ್ಯಕೀಯ ಸಂಸ್ಥೆಯನ್ನು ಸ್ಥಳಾಂತರಿಸಿದಲ್ಲಿ ಅಲ್ಲಿನ ರೈತಾಪಿ ವರ್ಗಕ್ಕೆ ಪಶುವೈದ್ಯಕೀಯ ಸೌಲಭ್ಯವನ್ನು ನೀಡುವ ಜೊತೆಗೆ ಜಾನುವಾರುಗಳ ಚಿಕಿತ್ಸೆಗೂ ಸಹ ಅನುಕೂಲವಾಗುತ್ತದೆ ಹಾಗೂ ಕೃಷಿ, ಪಶುಸಂಗೋಪನೆ ಕಾರ್ಯಚಟುವಟಿಕೆಗಳ ಅಭಿವೃದ್ಧಿಗೆ ಉತ್ತೇಜನೆ ನೀಡಿದಂತಾಗುತ್ತದೆ. ಹೆಚ್ಚುವರಿಯಾದ ಕೃತಕ ಗರ್ಭಧಾರಣಾ ಕೇಂದ್ರವನ್ನು ಉಗಾರ-ಖುರ್ದ ಗ್ರಾಮಕ್ಕೆ ಸ್ಥಳಾಂತರಿಸಲು ಸ್ಥಳೀಯ ಶಾಸಕರೂ ಸಹ ಶಿಫಾರಸ್ಸು ಮಾಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮೋಳೆ ಗ್ರಾಮದಲ್ಲಿನ ಕೃತಕ ಗರ್ಭಧಾರಣಾ ಕೇಂದ್ರವನ್ನು ಅದೇ ತಾಲ್ಲೂಕಿನ ಉಗಾರ-ಖುರ್ದ ಗ್ರಾಮಕ್ಕೆ ಹುದ್ದೆ ಸಮೇತ ಸ್ಥಳಾಂತರಿಸಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಆದೇಶ ಸಂಖ್ಯೆ: ಪಸಂಮೀ 143 ಪಸಸೇ 2008, ಬೆಂಗಳೂರು, ದಿನಾಂಕ : 19-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಮೋಳೆ ಗ್ರಾಮದಲ್ಲಿನ ಕೃತಕ ಗರ್ಭಧಾರಣಾ ಕೇಂದ್ರವನ್ನು ಒಂದು ಪಶುವೈದ್ಯಕೀಯ ಪರೀಕ್ಷಕರು ಹಾಗೂ ಒಂದು ಗ್ರೂಪ್-ಡಿ ಹುದ್ದೆಯೊಂದಿಗೆ ಅದೇ ತಾಲ್ಲೂಕಿನ ಉಗಾರ-ಖುರ್ದ ಗ್ರಾಮಕ್ಕೆ ಸ್ಥಳಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1381

ಎಂ.ಪಿ. ನಾಗರಾಜ
ಪೀಠಾಧಿಕಾರಿ-2
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ-ಎ)

ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವಾಲಯ

ವಿಷಯ : ಹಾಸನ ಜಿಲ್ಲೆಯ ಮೀನುಗಾರಿಕೆ ಇಲಾಖೆ ಅಡಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ - ಲೋಕಾಯುಕ್ತ ತನಿಖೆ.

ಓದಲಾಗಿದೆ : ಪತ್ರ ಸಂಖ್ಯೆ : ಎಡಿಎಂ(1)/13/2009-10 ದಿನಾಂಕ : 28-04-2010

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರು ಹಾಸನ ಜಿಲ್ಲೆಯಲ್ಲಿ ಮೀನುಗಾರಿಕೆ ಅಧಿಕಾರಿಗಳಿಂದ ಮೀನು ಕೊಳ ನಿರ್ಮಾಣಕ್ಕಾಗಿ ಸಹಾಯಧನ ನೀಡುವಲ್ಲಿ ಅವ್ಯವಹಾರ ನಡೆದಿದೆ ಎಂಬ ವಿಷಯದ ಬಗ್ಗೆ ದಿನಾಂಕ : 15-03-2010ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಪ್ರಕಟಣೆಯ ಬಗ್ಗೆ ಮೀನುಗಾರಿಕೆ ಉಪ ನಿರ್ದೇಶಕರು, ಮೈಸೂರು ರವರಿಂದ ತನಿಖೆ ನಡೆಸಲಾಗಿದೆ ಎಂದು ತಿಳಿಸಿರುತ್ತಾರೆ, ಮುಂದುವರೆದು, ಸದರಿ ಪ್ರಾಥಮಿಕ ತನಿಖಾ ವರದಿಯಲ್ಲಿ ಹೆಚ್ಚಿನ ಮೀನು ಕೃಷಿ ಕೊಳಗಳನ್ನು ನಿರ್ಮಿಸಬಹುದಾದ ನಿವೇಶನ/ಜಾಗ ಸಮರ್ಪಕವಾಗದಿರುವುದು, ಕೊಳಗಳನ್ನು ನಿರ್ಮಿಸಿದರೂ ಸೂಕ್ತ ನೀರಿನ ವ್ಯವಸ್ಥೆ ಇರದಿರುವುದು ಮತ್ತು ಕೆಲವು ಕೊಳಗಳ ನಿರ್ಮಾಣ ಮತ್ತು ನೀಡಲಾದ ಸಹಾಯಧನದಲ್ಲಿ ವ್ಯತ್ಯಾಸವಾಗಿರುವುದು ಹಾಗೂ ಕೆಲವು ಕೊಳಗಳಿಗೆ ಭೇಟಿ ನೀಡಲಾಗದಂತಹ ಪ್ರದೇಶಗಳಲ್ಲಿ ಮೀನು ಕೃಷಿ ಕೊಳಗಳ ನಿರ್ಮಾಣ ಕೈಗೊಂಡಿರುವುದನ್ನು ನೋಡಿದರೆ ಯೋಜನೆಯ ಅನುಷ್ಠಾನದಲ್ಲಿ ಹಲವಾರು ಲೋಪದೋಷಗಳಾಗಿರುವುದು ಗೋಚರಿಸುತ್ತದೆಂದು ವರದಿ ಮಾಡುತ್ತಾ, ಈ ಲೋಪದೋಷಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ವಿಚಾರಣೆ ನಡೆಸುವುದು ಅವಶ್ಯವಾಗಿದೆ ಎಂದು ಸರ್ಕಾರವನ್ನು ಕೋರಿರುತ್ತಾರೆ.

ಈ ಕುರಿತು ಹೆಚ್ಚಿನ ವಿಚಾರಣೆ ನಡೆಸಲು 1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಪ್ರಕರಣ 7(2ಎ) ಅಡಿಯಲ್ಲಿ ಮಾನ್ಯ ಲೋಕಾಯುಕ್ತರಿಗೆ ವಹಿಸಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ: ಪಸಂಮೀ 75 ಮೀಇಸೇ 2010, ಬೆಂಗಳೂರು, ದಿನಾಂಕ : 20-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹಾಸನ ಜಿಲ್ಲೆಯಲ್ಲಿ ಮೀನು ಕೊಳ ನಿರ್ಮಾಣಕ್ಕಾಗಿ ಸಹಾಯಧನ ನೀಡುವಲ್ಲಿ ಸರ್ಕಾರದ ನೀತಿ ನಿಯಮಗಳನ್ನು ಸರಿಯಾಗಿ ಪಾಲಿಸದೆ ಅವ್ಯವಹಾರ ನಡೆದಿರುವ ಬಗ್ಗೆ ವಿವರವಾದ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕರಣ 7(2ಎ) ಅಡಿಯಲ್ಲಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದೆ.

ಸದರಿ ವಿಚಾರಣೆಗೆ ಸಂಬಂಧಿಸಿದಂತೆ ಪರಿಶೀಲನಾ ಅಂಶಗಳು ಈ ಕೆಳಕಂಡಂತೆ ಇರುತ್ತವೆ.

I. ರೈತರು ಮತ್ತು ಕೃಷಿ ಕಾರ್ಮಿಕರ ಆತ್ಮಹತ್ಯೆ ತಡೆಗಾಗಿ ಕೇಂದ್ರ ಸರ್ಕಾರದ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಮಂಜೂರಾದ ಅನುದಾನದಲ್ಲಿ ಮೀನು ಕೃಷಿ ಕೊಳಕ್ಕೆ ನೀಡಲಾದ ಸಹಾಯಧನದಲ್ಲಿ ಈ ಕೆಳಕಂಡ ಅವ್ಯವಹಾರಗಳು ನಡೆದಿರುವ ಕುರಿತು.

(ಅ)ಮೀನು ಕೃಷಿ ಅಭಿವೃದ್ಧಿ ಪ್ರಾಧಿಕಾರ (ಎಫ್‌ಎಫ್‌ಡಿಎ) ಯೋಜನೆಯಡಿ ಪ್ರತ್ಯೇಕ ಅನುದಾನ ನೀಡುತ್ತಿದ್ದು, ಅದರಡಿಯಲ್ಲಿ ಕೃಷಿ ಹೊಂಡ ನಿರ್ಮಿಸದೇ ಸುಮಾರು ರೂ. 1.06 ಕೋಟಿ ವೆಚ್ಚ ತೋರಿಸಿರುವ ಬಗ್ಗೆ.

(ಆ)ಆತ್ಮಹತ್ಯೆ ತಡೆಗಾಗಿ ವಿದರ್ಭ ಪ್ಯಾಕೇಜಿನಲ್ಲಿ ರೂ. 72.00 ಲಕ್ಷ ಅನುದಾನವನ್ನು ದುರ್ಬಳಕೆ ಮಾಡಿರುವ ಬಗ್ಗೆ.

II. ಮೀನುಗಾರಿಕೆ ಇಲಾಖೆಯಿಂದ ಮೀನು ಕೃಷಿಗಾಗಿ ಕೇಂದ್ರ/ರಾಜ್ಯ ಸರ್ಕಾರಗಳಿಂದ ವಿಶೇಷ ಅನುದಾನ ನೀಡಲಾಗುತ್ತಿದ್ದು, ಒಳನಾಡು ಮೀನು ಕೃಷಿಯಲ್ಲಿ ರೈತರನ್ನು ತೊಡಗಿಸಿ ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕೆನ್ನುವ ಉದ್ದೇಶದಿಂದ ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿರುತ್ತದೆ. ಅದರ ಪ್ರಕಾರ ರೈತರು ತಮ್ಮ ಜಮೀನಿನಲ್ಲಿ ಮೀನು ಕೃಷಿ ಕೈಗೊಳ್ಳಲು ಹೊಂಡ ನಿರ್ಮಾಣಕ್ಕೆ ಸಬ್ಸಿಡಿ ರೂಪದಲ್ಲಿ ಅನುದಾನ ನೀಡುತ್ತಿದ್ದು, ಇದರಡಿ ಕೆಳಕಂಡ ಅವ್ಯವಹಾರ ನಡೆದಿರುವ ಕುರಿತು.

(1) ಅನುದಾನದ ಹಣಕ್ಕಾಗಿ ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಸುಳ್ಳು ದಾಖಲೆ ಸೃಷ್ಟಿಸಿ 2004 ರಿಂದ 2009ರ ಅವಧಿಯಲ್ಲಿ ಕೊಳ ನಿರ್ಮಾಣದ ಹೆಸರಿನಲ್ಲಿ ಭಾರಿ ಅವ್ಯವಹಾರ ನಡೆಸಿರುವ ಬಗ್ಗೆ.

(2) ಅರಸೀಕೆರೆ ತಾಲ್ಲೂಕಿನಲ್ಲಿ ಕುಡಿಯಲು ನೀರು ಇಲ್ಲದೇ ಜನ ಪರದಾಡುತ್ತಿದ್ದು, ಆದರೆ, ಅಲ್ಲಿಯೇ ಅತೀ ಹೆಚ್ಚು ಮೀನು ಕೃಷಿ ಹೊಂಡಗಳನ್ನು ನಿರ್ಮಿಸಿರುವ ಬಗ್ಗೆ.

(3) ರೈತರು ತಮಗೆ ಇರುವ ಒಂದೆರಡು ಎಕರೆ ಜಮೀನಿನಲ್ಲಿಯೇ ಕೃಷಿ ಹೊಂಡ ನಿರ್ಮಿಸಿದ್ದಾಗಿ ಸುಳ್ಳು ದಾಖಲೆ ನೀಡಿ ಅನುದಾನ ಪಡೆದಿರುವ ಬಗ್ಗೆ ಹಾಗೂ ದಾಖಲೆಗಳಿಲ್ಲದೆ 5.01 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಿಸಿದ 21 ಕೊಳಗಳಿಗೆ ಅನುದಾನ ಚೆಕ್ ನೀಡಿರುವುದು. ಈ ಚೆಕ್‌ಗಳು ವಾಪಸ್ಸಾಗಿದ್ದು, ತದನಂತರ ಅದೇ ಫಲಾನುಭವಿಗಳಿಗೆ ಒಳ ಒಪ್ಪಂದ ಮಾಡಿಕೊಂಡು ಒಂದೇ ದಿನ (ಮಾರ್ಚ್-9ರಂದು) ಒಟ್ಟು ರೂ. 3,57,407-00ಗಳ ಚೆಕ್ ವಿತರಿಸಿರುವ ಬಗ್ಗೆ.

(4) ಮೀನು ಕೃಷಿ ಕೊಳ ನಿರ್ಮಾಣಕ್ಕಾಗಿ ಬೇಲೂರು ತಾಲ್ಲೂಕಿನ ಹಿರಿಗರ್ಜೆ (109/1 & 109/2) ಗ್ರಾಮದ ಒಂದೇ ಕಡೆ ಎರಡು ಕೆರೆಗಳಿಗೆ ಅನುಮತಿ ನೀಡಿರುವ ಬಗ್ಗೆ.

(5) ಅರಸೀಕೆರೆ ತಾಲ್ಲೂಕಿನ ನಾಗವೇದಿ ಗ್ರಾಮದಲ್ಲಿ 3 ಕೊಳಗಳಿಗೆ ಸಹಾಯಧನ ವಿತರಿಸಿರುವ ಬಗ್ಗೆ.

(6) ಅರಸೀಕೆರೆ ತಾಲ್ಲೂಕಿನ ಜನ್ನಾವರ, ಮಾಡಾಳು, ಮುದ್ದರಹಳ್ಳಿ, ದೊಡ್ಡಘಟ್ಟ, ಗಂಡಸಿ, ಬೊಮ್ಮೇನಹಳ್ಳಿ ಗ್ರಾಮಗಳಲ್ಲಿ ಕೊಳ ನಿರ್ಮಿಸದೇ ಸಹಾಯಧನ ನೀಡಿರುವ ಬಗ್ಗೆ.

(7) ಸಕಲೇಶಪುರದಲ್ಲಿ ಕೃಷಿಗೆ ಜಮೀನು ಇಲ್ಲದಿದ್ದರೂ ಮೀನು ಕೃಷಿಗೆ ಹೊಂಡ ನಿರ್ಮಿಸಿದ್ದಾಗಿ ಹಳೆ ಸರ್ಕಾರಿ ಕೆರೆಗಳನ್ನೇ ಸ್ವಂತದ ಕೆರೆಗಳೆಂದು ದಾಖಲೆ ತೋರಿಸಿ ಲಕ್ಷಗಟ್ಟಲೆ ಸಹಾಯಧನ ಪಡೆದಿರುವ ಬಗ್ಗೆ.

(8) ರೆಸಾರ್ಟ್, ಹೋಟೆಲ್ ಹಾಗೂ ಹಳೆಯ ಕೆರೆಗಳಿಗೂ ಹೊಸ ಮೀನು ಕೊಳಗಳೆಂದು ದಾಖಲಿಸಿರುವ ಬಗ್ಗೆ.

ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ಶೀಘ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

ಈ ಪ್ರಕರಣಕ್ಕೆ ಅಗತ್ಯವಿರುವ ಮೂಲ ಕಡತಗಳು/ದಾಖಲಾತಿಗಳನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಮಾನ್ಯ ಲೋಕಾಯುಕ್ತರಿಗೆ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1382

ಡಿ.ಎಂ.ರಾಜಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಸಹಕಾರ ಸಚಿವಾಲಯ

ವಿಷಯ : ದಿ ಸಹಸ್ರಾರ್ಜುನ ಸೇವಾ ಕಲ್ಯಾಣ ಸಹಕಾರ ಬ್ಯಾಂಕ್ ನಿ., ಹುಬ್ಬಳ್ಳಿ ಇದರ 2008-09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಯುಬಿಸಿ-5/ಜಿಬಿಎಂ/307/2009-10, ದಿನಾಂಕ 09-03-2010.

ಪ್ರಸ್ತಾವನೆ :

ದಿ ಸಹಸ್ರಾರ್ಜುನ ಸೇವಾ ಕಲ್ಯಾಣ ಸಹಕಾರ ಬ್ಯಾಂಕ್ ನಿ., ಹುಬ್ಬಳ್ಳಿ ಈ ಬ್ಯಾಂಕಿನ 2008-09ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 31-03-2010ರ ವರೆಗೆ ಅವಧಿಯನ್ನು ವಿಸ್ತರಿಸಿ ಅನುಮತಿಯನ್ನು ನೀಡಿದ್ದು, ಸದರಿ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಸಿಬ್ಬಂದಿ ಕೊರತೆಯಿಂದ ಹಾಗೂ 2009-10ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಿಕಟವಾಗಿದ್ದು ಎರಡು ಬಾರಿ ಸಭೆಗಳನ್ನು ನಡೆಸಲು ಬ್ಯಾಂಕಿಗೆ ಆರ್ಥಿಕ ವೆಚ್ಚವಾಗುವುದೆಂದು ಸದರಿ ಬ್ಯಾಂಕಿನ 2008-09ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು 2010ರ ಸೆಪ್ಟೆಂಬರ್‌ನಲ್ಲಿ ನಡೆಸಲು ಸದರಿ ಬ್ಯಾಂಕಿನ ಆಡಳಿತಗಾರರು ಅನುಮತಿಯನ್ನು ಕೋರಿದ್ದು ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 81 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ: 13ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ದಿ ಸಹಸ್ರಾರ್ಜುನ ಸೇವಾ ಕಲ್ಯಾಣ ಸಹಕಾರ ಬ್ಯಾಂಕ್ ನಿ., ಹುಬ್ಬಳ್ಳಿ ಇದರ 2008-09ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 30-09-2010ರವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಗಳು ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ.

27ರ ಪ್ರಕರಣದಲ್ಲಿ :

27ನೇ ಪ್ರಕರಣ ಉಪಪ್ರಕರಣ (1)ರ ಪರಂತುಕದಲ್ಲಿನ **"ಆರು ತಿಂಗಳು"** ಎಂಬ ಪದಗಳಿಗೆ ಬದಲಾಗಿ **"ಹನ್ನೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ :

ಪ್ರಕರಣ 27 (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 30-09-2010ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 27(1)ರ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಆರ್. ಎಸ್. ನೂಲಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 1383

URBAN DEVELOPMENT SECRETARIAT

Sub :- Entrustment of Audit of City Corporations and Urban Local Bodies of the State to the Comptroller and Auditor General of India.

Read :- 1) G.O. No. UDD 98 AHD 2004 dated : 30-05-2005
2) U. O. Note LAW 834 OPN 2005 dated : 02-12-2006
3) D. O. No. Pr. AG(C&CA) DAG (LBA&A)/GP/2009-10/86 dated 24-09-2009

Preamble:

The Eleventh Finance Commission recommended grants for the local bodies with a view to augment the Consolidated Fund of the State to supplement the resources of Panchayat Raj Institutions and Urban Local Bodies. Consequent to this, the Ministry of Finance, Department of Expenditure, Government of India issued guidelines for the utilization of Local Bodies grants, According to these guidelines, the Comptroller & Auditor General of India (C&AG) is to be responsible for exercising control and supervision over proper maintenance of Accounts and their Audit for all the tiers of PRIs & ULBs.The C&AG therefore requested for issue of orders for entrustment of technical guidance and supervision of audit arrangement of Local Bodies.

Accordingly, orders for technical collaboration with the C&AG for Audit of Urban Local Bodies in the State were issued in order dated : 30-05-2005 read at (1) above. However, law Department of the State in its opinion rendered on 2nd December 2006 read at (2) above held that entrustment of test check of accounts of Urban Local Bodies on select percentage basis even under Technical Guidance and Supervising model would require amendment to the existing Statutes. The order dated : 30-05-2005 read at (1) above was therefore kept in abeyance until the amendment was issued to the Act.

According to Section 14 (2) of the Comptroller and Auditor general of India's (DPC) Act, 1971, the C&AG with prior approval of the Governor can audit all receipts and expenditure of any body or authority when the grants to such body from the consolidated Fund of India or of the State in a financial year are not less than Rupees one crore. The Pr AG (C&CA) in D.O. letter dated : 24-09-2009 read at (3) above has requested Government to consider entrusting the audit of accounts of all Urban Local Bodies except Notified Area Committees from the year 2008-09 to the C&AG of India under Section 14(2) of C&AG's (DPC) Act, 1971.

Urban Local Bodies are incurring huge expenditure in schemes like Jawaharlal Nehru National Urban Renewal Mission, Mukya Mantri Nagar Uthan Yojana, etc. Even Union Finance Commissions and State Finance Commissions have encouraged greater devolution of funds to ULBs. Such devolution and large scale investment of public funds in schemes of greater public interest calls for establishment and strengthening of accountability and transparency at all levels.

Even though the Controller State Accounts Department is responsible for audit of Urban Local Bodies in the State, in view of huge capital investment and revenue expenditure incurred by these bodies out of grants released by Government of India devolution of funds based on the recommendations of the Union Finance Commission and the State Finance Commission, an oversight by the C&AG will be very useful. The State Government has therefore decided to have a complementary audit of Accounts of Urban Local Bodies including the City Corporations by the C&AG of India. Hence this order.

Government Order No. UDD 17 SFC 2010, Bangalore, dated : 18-05-2010

1. The Controller, State Accounts Department shall continue to be the Auditor of accounts of Urban Local Bodies.

2. The complementary audit of accounts of Urban Local Bodies in the State including the City Corporations but excluding the Notified area Committees shall be conducted by the C&AG of India under Section 14(2) of the C&AG's (DPC) Act, 1971.
3. The complementary audit shall be from the financial year 2008-09 and onwards.
4. The periodicity of complementary audit shall be as decided by the C&AG of India.
5. The Auditee Institutions shall be responsible for production of all records/registers required for smooth completion of complementary audit.
6. The Inspection Report shall be forwarded to the Auditee Institution with a copy to the Director of Municipal Administration in respect of Urban Local Bodies except the City Corporations.
7. The Inspection Report of City Corporations shall be forwarded to the concerned City Corporation with a copy to the Secretary, Urban Development Department.
8. The Compliance Reports shall be routed through the Director of Municipal Administration in respect of Urban Local Bodies other than City Corporations and in respect of City Corporations, the Compliance Report shall be through the Secretary, Urban Development Department.
9. The Director of Municipal Administration and the Secretary, Urban Development Department shall be responsible for watching Compliance Report, vetting the Compliance Report and for forwarding the Compliance to complementary Audit.
10. Major/Serious irregularities noticed in complementary Audit and proposed for inclusion in the Audit Report of the C&AG shall be brought to notice of the Director of Municipal Administration, Secretary, Urban Development Department for compliance and Finance Department for information.
11. No. fee for complementary Audit shall be levied by the C&AG of India for audit of Urban Local Bodies including City Corporations.
12. The irregularities pointed out by the C&AG during his complementary audit and not noticed by the State Accounts Department in its audit shall be brought to the notice of the Controller, State accounts department for technical guidance by the Director of Municipal Administration and the Secretary Urban Development Department.
13. The Compliance to audit reports of the Controller, State Accounts Department and the monitoring of Compliance Reports shall continue to be done by the Controller, State Accounts Department.
14. Any difficulty in conducting Audit by the Controller, State Accounts Department or in complementary audit by the C&AG of India shall be reported to the Director of Municipal Administration, Secretary, Urban Development Department and Finance Department for initiating remedial action.
15. Order No. UDD 98 AHD 2004 dated: 30-05-2005 regarding Technical Collaboration for audit of Urban Local Bodies in Karnataka, is withdrawn.

By Order and in the name of the Governor of Karnataka

(C. R. Ravindra)

Under Secretary to Government

Urban Development Department

P.R. No. 1384

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಹೆಚ್ಚುವರಿಯಾಗಿ ಒಂದು ಉಪಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಕಸಂವಾ/291/ಕಾ/2010, ದಿನಾಂಕ 17–05–2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 17–05–2010ರ ಅನಧಿಕೃತ ಟಿಪ್ಪಣಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಗೆ ಉಪ ಕಾರ್ಯದರ್ಶಿ ಹುದ್ದೆಯೊಂದನ್ನು ಸೃಜಿಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆಯೆಂದು, ಅದರಂತೆ ಒಂದು ಉಪಕಾರ್ಯದರ್ಶಿ ಹುದ್ದೆಯನ್ನು ಸೃಜಿಸಲು ಹಾಗೂ ಸದರಿ ಹುದ್ದೆಗೆ ಒಬ್ಬ ಉಪಕಾರ್ಯದರ್ಶಿಯನ್ನು

ನೇಮಕಾತಿ ಮಾಡಲು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು ಕೋರಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 445 ಸಆಸೇ 2009, ಬೆಂಗಳೂರು, ದಿನಾಂಕ: 28ನೇ ಮೇ, 2010

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ (Dealing with Kannada, Culture & Information Subject) ಹೆಚ್ಚುವರಿ ವೇತನ ಶ್ರೇಣಿ ರೂ. 20025–28275ರ ಉಪಕಾರ್ಯದರ್ಶಿ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೃಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ 12–05–2010ರ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 366 ವೆಚ್ಚ–12/2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಚ್. ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 1385

ಒಳಾಡಳಿತ ಸಚಿವಾಲಯ

ವಿಷಯ : ಬಿ.ಇ.ಎಲ್. ಡಾ॥ ಅಂಬೇಡ್ಕರ್ ಸಹಕಾರ ಸಂಘ, ಬೆಂಗಳೂರು ಇದರ ವ್ಯವಹಾರದಲ್ಲಿನ ಮೋಸ, ವಂಚನೆ ಮತ್ತು ಹಣ ದುರುಪಯೋಗದ ಬಗ್ಗೆ ಸಿ.ಐ.ಡಿ. ತನಿಖೆ.

ಓದಲಾಗಿದೆ : ಸಹಕಾರ ಇಲಾಖೆಯ ಕಡತ ಸಂ.ಸಿಒ 20 ಸಿಹೆಚ್‌ಎಸ್ 2008

ಪ್ರಸ್ತಾವನೆ :

ಮೇಲೆ ಓದಲಾದ ಸಹಕಾರ ಇಲಾಖೆಯ ಕಡತದಲ್ಲಿ ಸಹಕಾರ ಇಲಾಖೆಯು ಬಿ.ಇ.ಎಲ್. ಕಾರ್ಖಾನೆಯ ಡಾ॥ ಅಂಬೇಡ್ಕರ್ ಸಹಕಾರ ಸಂಘದಲ್ಲಿ ಹಿಂದೆ 1995ನೇ ಸಾಲಿನಿಂದ ದಿನಾಂಕ 31–3–2010ರ ವರೆಗೆ ಅಧಿಕಾರದಲ್ಲಿದ್ದ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಸಿ. ಲಕ್ಷ್ಮಣನ್, ಉಪಾಧ್ಯಕ್ಷರಾದ ಎಸ್. ಆರ್. ನರಸಿಂಹ ಮೂರ್ತಿ ಮತ್ತು ಸಂಘದ ಪದಾಧಿಕಾರಿಗಳು ಅವರ ಅಧಿಕಾರಾವಧಿಯಲ್ಲಿ ಸಹಕಾರ ಸಂಘಗಳ ಕಾಯಿದೆಯನ್ನು ಉಲ್ಲಂಘನೆ ಮಾಡಿ ಬೆಂಗಳೂರು ನಗರದ ಸುತ್ತಮುತ್ತ ಸಂಘದ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ಹಣ ಪಡೆದು, ನೂರಾರು ಎಕರೆ ಜಮೀನು ಖರೀದಿಸಿ ಸಂಘಕ್ಕೆ ಮತ್ತು ಸಂಘದ ಸದಸ್ಯರಿಗೆ ವಿಶ್ವಾಸ ದ್ರೋಹ ಹಾಗೂ ಕೋಟ್ಯಾಂತರ ರೂಪಾಯಿ ಮೋಸ ಮಾಡಿದ್ದು ಸದರಿಯವರ ವಿರುದ್ಧ ಸಿ.ಐ.ಡಿ. ತನಿಖೆ ನಡೆಸಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 90/10ನ್ನು ಐಪಿಸಿ ಕಲಂ 406 ಮತ್ತು 420ರನ್ವಯ ದಾಖಲು ಮಾಡಿರುತ್ತಾರೆ.

ಆದುದರಿಂದ ಈ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಒಇ 28 ಸಿಐಡಿ 2010, ಬೆಂಗಳೂರು, ದಿನಾಂಕ: 31ನೇ ಮೇ, 2010

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಬಿ.ಇ.ಎಲ್. ಕಾರ್ಖಾನೆಯ ಡಾ॥ ಅಂಬೇಡ್ಕರ್ ಸಹಕಾರ ಸಂಘದಲ್ಲಿ ಹಿಂದೆ 1995ನೇ ಸಾಲಿನಿಂದ ದಿನಾಂಕ 31–3–2010ರ ವರೆಗೆ ಅಧಿಕಾರದಲ್ಲಿದ್ದ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಸಿ. ಲಕ್ಷ್ಮಣನ್, ಉಪಾಧ್ಯಕ್ಷರಾದ ಎಸ್. ಆರ್. ನರಸಿಂಹ ಮೂರ್ತಿ ಮತ್ತು ಸಂಘದ ಪದಾಧಿಕಾರಿಗಳು ಅವರ ಅಧಿಕಾರಾವಧಿಯಲ್ಲಿ ಸಹಕಾರ ಸಂಘಗಳ ಕಾಯಿದೆಯನ್ನು ಉಲ್ಲಂಘನೆ ಮಾಡಿ ಬೆಂಗಳೂರು ನಗರದ ಸುತ್ತ ಮುತ್ತ ಸಂಘದ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ಹಣ ಪಡೆದು, ನೂರಾರು ಎಕರೆ ಜಮೀನು ಖರೀದಿಸಿ ಸಂಘಕ್ಕೆ ಮತ್ತು ಸಂಘದ ಸದಸ್ಯರಿಗೆ ವಿಶ್ವಾಸ ದ್ರೋಹ ಹಾಗೂ ಕೋಟ್ಯಾಂತರ ರೂಪಾಯಿ ಮೋಸ ಮಾಡಿರುವುದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 406 ಮತ್ತು 420 ರನ್ವಯ ದಾಖಲಾಗಿರುವ ಮೊ.ಸಂ. 90/10ನ್ನು ಮುಂದಿನ ತನಿಗೆಗಾಗಿ ಸಿ.ಐ.ಡಿ.ಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳನ್ನು ಸಿ.ಐ.ಡಿಗೆ ಹಸ್ತಾಂತರಿಸಲು ಬೆಂಗಳೂರು ನಗರದ ಪೋಲೀಸ್ ಆಯುಕ್ತರು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಪಿ. ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಅಪರಾಧಗಳು)

ಪಿ.ಆರ್. 1386

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಆರ್. ರಾಮಾಂಜನೇಯಲು, ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರ ಮೇಲೆ ವಿಧಿಸಲಾಗಿದ್ದ ದಂಡನೆಯ ಮೇಲೆ ಪರಮಾರ್ಶಿತ ಅರ್ಜಿ.

ಓದಲಾಗಿದೆ : 1) ಸಂಖ್ಯೆ : ಇಡಿ 80 ಡಿಟಿಇ 2003, ದಿನಾಂಕ 10-5-2004ರ ಸರ್ಕಾರದ ನೋಟೀಸು

2) ಸಂಖ್ಯೆ : ಇಡಿ 80 ಡಿಟಿಇ 2003, ದಿನಾಂಕ 16-12-2006ರ ಸರ್ಕಾರದ ಆದೇಶ

ಪ್ರಸ್ತಾವನೆ :

ಶ್ರೀ ಆರ್. ರಾಮಾಂಜನೇಯಲು, ಹಿರಿಯ ಶ್ರೇಣಿ ಉಪನ್ಯಾಸಕರು, ದೂರಸಂಪರ್ಕ ವಿಭಾಗ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇವರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಇವರು ದಿನಾಂಕ 3-12-2001 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ತೀವ್ರ ಸ್ವರೂಪದ ದುರ್ನಡತೆಯನ್ನು ಎಸಗಿದ್ದರು. ಆದುದರಿಂದ ಅವರ ವಿರುದ್ಧ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 11ರ ನಿಯಮದಡಿ ಶಿಸ್ತು ಕ್ರಮವನ್ನು ಕೈಗೊಂಡು ಅವರಿಗೆ ಅನೇಕ ಜ್ಞಾಪನಗಳನ್ನು ನೀಡಲಾಗಿತ್ತು, ಅದರೆ ಅವರು ಅದಕ್ಕೆ ಸ್ಪಂದಿಸಿ ಕರ್ತವ್ಯಕ್ಕೆ ಹಾಜರಾಗಿರಲಿಲ್ಲ. ಆದ್ದರಿಂದ ಅವರ ವಿರುದ್ಧ ತೀವ್ರ ಸ್ವರೂಪದ ದುರ್ನಡತೆಗಾಗಿ ಇಲಾಖಾ ವಿಚಾರಣೆಯನ್ನು ಹೂಡುವುದು ಅಗತ್ಯವಾಗಿತ್ತು.

ಅದರಂತೆ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 11ನೇ ನಿಯಮದಡಿ ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣಾ ಪಟ್ಟಿ ಇತ್ಯಾದಿಗಳೊಂದಿಗೆ ಅವರಿಗೆ ಜಾರಿ ಮಾಡಲು ನೊಂದಾಯಿತ ಅಂಚೆ ಮೂಲಕ ಅವರ ಮನೆಯ ವಿಳಾಸಕ್ಕೆ ಕಳುಹಿಸಲಾಗಿತ್ತು. ಅದು ಜಾರಿಯಾಗದೇ ಅಂಚೆ ಪ್ರಾಧಿಕಾರದಿಂದ ಹಿಂತಿರುಗಿತ್ತು. ನಿಯಮಾನುಸಾರ ಕಾರಣ ಕೇಳುವ ನೋಟೀಸ್ ಜಾರಿಯಾಗದ ಕಾರಣ ದಿನಾಂಕ 05-04-2006ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನ ಪತ್ರಿಕೆಗಳಲ್ಲಿ ಸದರಿ ಸೂಚನೆಗಳನ್ನು ಪ್ರಕಟಿಸಲಾಗಿತ್ತು. ಅದಕ್ಕೂ ಸಹ ಅವರು ಪ್ರತಿಕ್ರಯಿಸಲಿರಲಿಲ್ಲ. ಅಪಾದಿತರ ಗೈರು ಹಾಜರಿಯು ನಾಲ್ಕು ವರ್ಷಗಳಿಗೂ ಮೀರಿದ್ದರಿಂದ ಅವರಿಗೆ ಸರ್ಕಾರಿ ಕೆಲಸದಲ್ಲಿ ಆಸಕ್ತಿ ಇಲ್ಲವೆಂದು ಪರಿಭಾವಿಸಿ ಮೇಲ್ಕಂಡ ನಿಯಮಾವಳಿಯ ಉಪಬಂಧಗಳ ಅನುಸಾರ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿತ್ತು. ಅದರಂತೆ ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದ ಆದೇಶದಲ್ಲಿ ಆಪಾದಿತರ ಮೇಲೆ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 8(xiii)ನೇ ನಿಯಮದಡಿ ಸೇವೆಯಿಂದ ವಜಾಮಾಡುವ ದಂಡನೆಯನ್ನು ವಿಧಿಸಿ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು.

ದಿನಾಂಕ 19-06-2009 ರಂದು ಶ್ರೀ ಆರ್. ರಾಮಾಂಜನೇಯಲು ರವರು ಸರ್ಕಾರಕ್ಕೆ ಮನವಿ ಸಲ್ಲಿಸಿ ನಿವೇದಿಸಿರುವಂತೆ ಆಕಸ್ಮಿಕವಾಗಿ ಘೋರ ಅಪಘಾತಕ್ಕೆ ಒಳಗಾಗಿ ತಲೆಗೆ ಪೆಟ್ಟು ಬಿದ್ದು ಪ್ರಜ್ಞೆ ಕಳೆದುಕೊಂಡು ನಿಮಾನ್ಸ್‌ನಲ್ಲಿ ಹೊರರೋಗಿಯಾಗಿ ದಾಖಲಾಗಿದ್ದು ಆ ಸಂದರ್ಭದಲ್ಲಿ ಅವರ ಕಣ್ಣು ಕಾಣದಂತಾಗಿ ಗಂಟಲಿನ ಸಮಸ್ಯೆಯಿಂದ ಮಾತನಾಡಲು ಧ್ವನಿ ಇಲ್ಲವಾಗಿತ್ತು. ಅದರಿಂದ ಅವರು ಕೆಲಸಕ್ಕೆ ಹಾಜರಾಗಿರಲಿಲ್ಲ. ಈ ಮಧ್ಯೆ ಅವರು ಈ ಕೆಳಕಂಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

ಕ್ರಮ ಸಂಖ್ಯೆ	ಆಸ್ಪತ್ರೆಯ ಹೆಸರು	ಚಿಕಿತ್ಸೆ ಪಡೆದುಕೊಂಡ ಅವಧಿ
(1)	(2)	(3)
1	ನಿಮಾನ್ಸ್, ಬೆಂಗಳೂರು	ದಿನಾಂಕ 09-01-2000 ರಿಂದ 25-09-2002 ವರೆಗೆ
2	ಅಮೃತ ನರ್ಸಿಂಗ್ ಹೋಮ್, ಬಳ್ಳಾರಿ	ದಿನಾಂಕ 20-01-2000 ರಿಂದ ಮೇ 2000 ವರೆಗೆ
3	ಸೆಂಟ್ ಜಾನ್ಸ್, ಆಸ್ಪತ್ರೆ, ಬೆಂಗಳೂರು	ಮೇ 2000 ರಿಂದ ನವೆಂಬರ್ 2001 ವರೆಗೆ
4	ಸರ್ಕಾರಿ ಆಸ್ಪತ್ರೆ, ಬಳ್ಳಾರಿ	ದಿನಾಂಕ 08-06-2000
5	ಸಿ.ಎಂ.ಸಿ. ಆಸ್ಪತ್ರೆ, ವೇಲೂರು	ದಿನಾಂಕ 02-09-2002 ರಿಂದ 15-01-2005 ವರೆಗೆ
6	ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ	ದಿನಾಂಕ 15-01-2005 ರಿಂದ 30-01-2009 ವರೆಗೆ

ಅವರು ಈಗ ಸಂಪೂರ್ಣ ಗುಣಮುಖರಾಗಿದ್ದು ಕಛೇರಿಯಲ್ಲಿ ಕಾರ್ಯನಿರ್ವಯಿಸಲು ಸಿದ್ಧರಾಗಿರುವುದರಿಂದ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಕೋರಿದ್ದಾರೆ.

ಶ್ರೀ ಆರ್. ರಾಮಾಂಜನೇಯಲು ರವರು ಸಲ್ಲಿಸಿರುವ ಸಕಲ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ದಿನಾಂಕ 09-01-2000 ರಿಂದ ನಿರಂತರವಾಗಿ ಚಿಕಿತ್ಸೆ ಪಡೆಯುತ್ತಿರುವುದು ವೈದ್ಯಕೀಯ ಮಂಡಳಿಯು ನೀಡಿರುವ ವರದಿ ಮತ್ತು ದಸ್ತಾವೇಜುಗಳಿಂದ ಸ್ಪಷ್ಟವಾಗಿ ಬಿಂಬಿತವಾಗಿದೆ.

ಆದುದರಿಂದ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 26ನೇ ನಿಯಮಾವಳಿಯಲ್ಲಿ ಈ ಪ್ರಕರಣವನ್ನು ಮೇಲೆ ವಿವರಿಸಿದ ಘಟನಾವಳಿಗಳ ಬೆಳಕಿನಲ್ಲಿ ಪರಾಮರ್ಶಿಸಲಾಗಿದೆ. ಅವರು ಅಪಘಾತಕ್ಕೆ ಗುರಿಯಾಗಿ ಸತತವಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹಿನ್ನೆಲೆಯಲ್ಲಿ ಅವರು ಕರ್ತವ್ಯಕ್ಕೆ ಗೈರುಹಾಜರಾಗಿರುವುದು ಕಂಡುಬರುತ್ತದೆ. ಆದ್ದರಿಂದ ಅವರನ್ನು ಪುನಃ ಕರ್ತವ್ಯಕ್ಕೆ ನೇಮಿಸುವುದು ಸೂಕ್ತವೆಂದು ಸರ್ಕಾರ ನಿರ್ಧರಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 87 ಡಿಟಿಇ 2009, ಬೆಂಗಳೂರು, ದಿನಾಂಕ: 20ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 26(ಎ)ನೇ ನಿಯಮದ ಪ್ರಕಾರ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿ ಹಿರಿಯ ಶ್ರೇಣಿ ಉಪನ್ಯಾಸಕರಾಗಿದ್ದು ಸೇವೆಯಿಂದ ವಜಾಗೊಂಡಿರುವ ಶ್ರೀ ಆರ್. ರಾಮಾಂಜನೇಯಲು ರವರನ್ನು ಸರ್ಕಾರಿ ಸೇವೆಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮರು ನೇಮಿಸಲಾಗಿದೆ ಮತ್ತು ಅವರನ್ನು ಸೇವೆಯಿಂದ ವಜಾ ಮಾಡಿದ ಆದೇಶವನ್ನು ರದ್ದುಗೊಳಿಸಲಾಗಿದೆ. ಸೇವೆಯಿಂದ ವಜಾಗೊಂಡ ದಿನಾಂಕದಿಂದ ಸೇವೆಗೆ ಪುನಃ ನೇಮಕಗೊಳ್ಳುವ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 106(ಎ) ನಿಯಮದ ಪ್ರಕಾರ ವೇತನರಹಿತ ರಜೆ ಎಂದು ವೈದ್ಯಕೀಯ ಆಧಾರದ ಮೇಲೆ ಪರಿಗಣಿಸಲಾಗಿದೆ.

ತಾಂತ್ರಿಕ ಶಿಕ್ಷಣ ನಿರ್ದೇಶಕರು ಶ್ರೀ ಆರ್. ರಾಮಾಂಜನೇಯಲು ರವರನ್ನು ಸೂಕ್ತ ಸ್ಥಾನದಲ್ಲಿ ನೇಮಕ ಮಾಡುವ ಬಗ್ಗೆ ಖಾಲಿ ಹುದ್ದೆಗಳ ವಿವರಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಬಿ. ಎಸ್. ನಾಗರಾಜ್)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಪಿ.ಆರ್. 1387 ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ಮುಖ್ಯ ಹಣಕಾಸು ಅಧಿಕಾರಿಯವರಿಗೆ ಎ.ಸಿ. ಬಿಲ್ ಮೂಲಕ ಖಜಾನೆಯಿಂದ ಹಣ ಸೆಳೆಯಲು ಅಧಿಕಾರ ನೀಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ. : ಹೆಚ್ ಎಫ್ ಡಬ್ಲ್ಯೂ/ಕೆಹೆಚ್ಎಸ್‌ಡಿಆರ್‌ಪಿ/ಎಸ್ಇಸಿಟಿ-1/2006, ದಿನಾಂಕ 30-12-2006.

2) ಸರ್ಕಾರದ ಆದೇಶ ಸಂ. : ಹೆಚ್ಎಫ್‌ಡಬ್ಲ್ಯೂ/ಕೆಹೆಚ್ಎಸ್‌ಡಿಆರ್‌ಪಿ/ಎಸ್ಇಸಿಟಿ-ಜಿಒ 1/2007, ದಿನಾಂಕ 31-07-2008.

3) ಸರ್ಕಾರದ ಆದೇಶ ಸಂ. : ಹೆಚ್ಎಫ್‌ಡಬ್ಲ್ಯೂ/ಕೆಹೆಚ್ಎಸ್‌ಡಿಆರ್‌ಪಿ/ಎಸ್ಇಸಿಟಿ/ಜಿಓ-1/2007, ದಿನಾಂಕ 4-9-2008.

4) ಸರ್ಕಾರದ ಆದೇಶ ಸಂ. : ಹೆಚ್ಎಫ್‌ಡಬ್ಲ್ಯೂ/(ಪಿಆರ್) 63 ಡಬ್ಲ್ಯೂಬಿಎ 2009, ಬೆಂಗಳೂರು, ದಿನಾಂಕ : 21-04-2009.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಯೋಜನೆ ಕಛೇರಿಯಲ್ಲಿ ತುರ್ತು ಸಂದರ್ಭಗಳಲ್ಲಿ ಕಛೇರಿ ವೆಚ್ಚವನ್ನು ಭರಿಸಲು ಸಾಧ್ಯವಾಗುವಂತೆ ರೂ. 75,000-00 ಗಳು ಅಥವಾ ಕಡಿಮೆ ಹಣವನ್ನು ಎ.ಸಿ. ಬಿಲ್ ಮೂಲಕ ಖಜಾನೆಯಿಂದ ಸೆಳೆಯಲು ಯೋಜನೆಯ ಮುಖ್ಯ ಹಣಕಾಸು ಅಧಿಕಾರಿಯವರಿಗೆ ಮೇಲೆ (2) ರಿಂದ (4) ರಲ್ಲಿ ಓದಲಾದ ಸರ್ಕಾರಿ ಆದೇಶಗಳನ್ವಯ ಕ್ರಮವಾಗಿ 2007-08, 2008-09 ಮತ್ತು 2009-10ನೇ ಸಾಲಿನಲ್ಲಿ ಅಧಿಕಾರ ನೀಡಲಾಗಿತ್ತು. ಸದರಿ ಸೌಲಭ್ಯವನ್ನು 2010-11ನೇ ಸಾಲಿನಲ್ಲಿ ಮುಂದುವರೆಸಲು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಕೆಳಕಂಡ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಹೆಚ್ಎಫ್‌ಡಬ್ಲ್ಯೂ (ಪಿಆರ್) 63 ಡಬ್ಲ್ಯೂಬಿಎ 2009, ಬೆಂಗಳೂರು, ದಿನಾಂಕ: 24ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಸರ್ಕಾರವು, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯ ಕಾರ್ಯಚಟುವಟಿಕೆಗಳ ಸಂಬಂಧ ತುರ್ತು ಸಂದರ್ಭಗಳಲ್ಲಿ ವೆಚ್ಚವನ್ನು ಭರಿಸುವ ಸಲುವಾಗಿ 2010-11ನೇ ಸಾಲಿನಲ್ಲಿ ರೂ. 75,000-00 (ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಅಥವಾ ಕಡಿಮೆ ಹಣವನ್ನು ಎ.ಸಿ. ಬಿಲ್ ಮೂಲಕ ಲೆಕ್ಕ ಶೀರ್ಷಿಕೆ "2210-06-800-0-84-051 (ಸಾಮಾನ್ಯ ವೆಚ್ಚಗಳು)" ಅಡಿಯಲ್ಲಿ ಖಜಾನೆಯಿಂದ ಸೆಳೆಯಲು

ಯೋಜನಾ ಕಛೇರಿಯ ಮುಖ್ಯ ಹಣಕಾಸು ಅಧಿಕಾರಿ ಇವರಿಗೆ ಅಧಿಕಾರ ನೀಡಿದೆ ಈ ಸೌಲಭ್ಯವು 31–03–2011ರವರೆಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ. ಶಶಿಧರ್)
ಸರ್ಕಾರದ ಉಪ ಕಾರ್ಯದರ್ಶಿ,
ಕೆಹೆಚ್‌ಎಸ್‌ಡಿಆರ್‌ಪಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿ.ಆರ್. 1388

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಎಂ. ವಿ. ಕೃಷ್ಣಪ್ಪ, ಹಿಂದಿನ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ರವರ ವಿರುದ್ಧ ಇಲಾಖಾ ವಿಚಾರಣಾ–ಆರೋಪ ಮುಕ್ತಾಯಗೊಳಿಸಿರುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 48 ಎಸ್‌ಎಎಂ 2000, ದಿನಾಂಕ 09–04–2001.
2) ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 182 ಕೆಎಂಯು 2007, ದಿನಾಂಕ 28–04–2008.
3) ಅಡಿಷನಲ್ ರಿಜಿಸ್ಟ್ರಾರ್, ವಿಚಾರಣೆಗಳು–3, ಕರ್ನಾಟಕ ಲೋಕಾಯುಕ್ತ, ಬೆಂಗಳೂರ ಅವರ ಪತ್ರ ಸಂಖ್ಯೆ : Lok/ARE-3/ENQ-05/2008-09, ದಿನಾಂಕ 25–11–2009.
4) ಲೋಕಾಯುಕ್ತ ಕರ್ನಾಟಕ ರವರ ಪತ್ರ ಸಂಖ್ಯೆ : Lok/ARE-3/ENQ-05/2008-09, ದಿನಾಂಕ 05–12–2009.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 09–04–2001ರ ಸರ್ಕಾರಿ ಆದೇಶದಲ್ಲಿ ಮೈಸೂರಿನಲ್ಲಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ರಾಜ್ಯದಲ್ಲಿನ ದೇವಾಲಯಗಳ ಸಂರಕ್ಷಣಾ ಕಾರ್ಯದ ಹೆಸರಿನಲ್ಲಿ ಯಾವುದೇ ಸಂರಕ್ಷಣಾ ಕಾಮಗಾರಿಗಳನ್ನು ಮಾಡದೆ ಕೇವಲ ಬೋಗಸ್ ಬಿಲ್ಲುಗಳನ್ನು ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಹಾಗೂ ಈ ಅಕ್ರಮಗಳಿಗೆ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಎಂ. ವಿ. ಕೃಷ್ಣಪ್ಪ ಮತ್ತು ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ ಎಸ್. ಎಂ. ಪೂಜಾರ್ ಅವರುಗಳೇ ಕಾರಣ ಎಂಬುದಾಗಿ ಸಾಕಷ್ಟು ದೂರುಗಳು ಬಂದಿದ್ದರಿಂದ ಸದರಿ ದೂರಿನ ಸತ್ಯಾಸತ್ಯತೆಯನ್ನು ತಿಳಿಯಲು ತನಿಖೆ ನಡೆಸುವ ಸಲುವಾಗಿ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತಕ್ಕೆ ವಹಿಸಿ ಆದೇಶಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 28–04–2008ರ ಸರ್ಕಾರಿ ಆದೇಶದಲ್ಲಿ ಆರೋಪಿತರಾದ ಶ್ರೀ ಎಂ. ವಿ. ಕೃಷ್ಣಪ್ಪ, ಶ್ರೀ ಎಂ. ಎಲ್. ಶಿವಶಂಕರ್ ಮತ್ತು ಶ್ರೀ ಡಿ. ವಿ. ದೇವರಾಜ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಹಿಂದಿನ ನಿರ್ದೇಶಕರುಗಳು ನಿವೃತ್ತರಾಗಿರುವುದರಿಂದ ಇವರ ವಿರುದ್ಧ ವಿಚಾರಣೆ ಹೂಡಲು ಅವಕಾಶವಿರುವುದಿಲ್ಲ. ಆದ್ದರಿಂದ ಶ್ರೀ ಎಂ. ವಿ. ಕೃಷ್ಣಪ್ಪ, ಹಿಂದಿನ ನಿರ್ದೇಶಕರು, ಪ್ರಸ್ತುತ ಪ್ರಾಧ್ಯಾಪಕರು, ಮೈಸೂರು ಇವರ ವಿರುದ್ಧ ಮೇಲ್ಕಂಡ ಆರೋಪ ಕುರಿತು ಇಲಾಖಾ ವಿಚಾರಣೆ ಹಾಗೂ ವರದಿಗಾಗಿ ಪ್ರಕರಣವನ್ನು ಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ 25–11–2009ರ ಪತ್ರದಲ್ಲಿ ಅಡಿಷನಲ್ ರಿಜಿಸ್ಟ್ರಾರ್, ವಿಚಾರಣೆಗಳು–3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯಲ್ಲಿ ನಡೆಯಿತೆನ್ನಲಾದ ಕಾಮಗಾರಿಗಳಿಗೆ ನೀಡಿದ ಹಣ ದುರುಪಯೋಗ ಹಾಗೂ ಕರ್ತವ್ಯಲೋಪದ ಬಗ್ಗೆ ತನಿಖೆ ನಡೆಸಿ ಆರೋಪಿತರಾದ ಶ್ರೀ ಎಂ. ವಿ. ಕೃಷ್ಣಪ್ಪ ಇವರ ವಿರುದ್ಧ ಮಾಡಲಾದ ಯಾವುದೇ ಆರೋಪಗಳು ಸಾಬೀತಾಗಿರುವುದಿಲ್ಲ. "The charges levelled against the DGO have not been proved" ಎಂದು ವರದಿ ನೀಡಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ 05–12–2009ರ ಪತ್ರದಲ್ಲಿ ಶ್ರೀ ಎಂ. ವಿ. ಕೃಷ್ಣಪ್ಪ ಇವರ ವಿರುದ್ಧದ ಆರೋಪಗಳ ಸಾಬೀತಾಗಿಲ್ಲವೆಂಬ ವಿಚಾರಣಾ ವರದಿಯನ್ನು ಅಂಗೀಕರಿಸಿ ಸದರಿ ಅಪಾದಿತರನ್ನು ದೋಷ ಮುಕ್ತರೆಂದು ಅದೇಶಿಸಲು ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುವರು.

ವಿಚಾರಣಾಧಿಕಾರಿಗಳಿಂದ ಬಂದಿರುವ ವರದಿಯನ್ನು ಮತ್ತು ಮಾನ್ಯ ಲೋಕಾಯುಕ್ತರ ಶಿಫಾರಸ್ಸನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ಮಾಡಲಾಗಿರುವ ಎಲ್ಲಾ ಆರೋಪಗಳು ರುಜುವಾತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳ ವರದಿಯಿಂದ ವ್ಯಕ್ತವಾಗುತ್ತದೆ. ವಿಚಾರಣಾಧಿಕಾರಿಗಳ ವರದಿಯನ್ನು ಹಾಗೂ ಮಾನ್ಯ ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿಕೊಂಡು ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 182 ಕೆಎಂಯು 2007, ಬೆಂಗಳೂರು, ದಿನಾಂಕ: 22ನೇ ಮೇ, 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ. ವಿ. ಕೃಷ್ಣಪ್ಪ, ಹಿಂದಿನ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರನ್ನು ಸದರಿ ಆಪಾದನೆಗಳಿಂದ ದೋಷಮುಕ್ತರೆಂದು ಪರಿಗಣಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ. ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1389 ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರದ ರಾಜ್ಯ ಮಟ್ಟದ ಯೋಜನಾ ಪ್ರಸ್ತಾವನೆ ಮತ್ತು ತಡಿಕೆ (Screening) ಮೌಲ್ಯಮಾಪನ ಸಮಿತಿಗೆ ಡಾ॥ ಕೇಸವ ಹೆಚ್. ಕೋರ್ಸೆ ಸಹಾಯಕ ಪ್ರಾಧ್ಯಾಪಕರು, ಎಸ್.ಡಿ.ಎಮ್. ಕಾಲೇಜು, ಉಜಿರೆ ಇವರನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಅಪಜೀ 81 ಎಫ್‌ಪಿಸಿ 2009, ದಿನಾಂಕ 04-01-2010.
2) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರ (ಕಂಪ) ಇವರ ಪತ್ರ ಸಂಖ್ಯೆ : ಕಂಪ/ತಡಿಕೆ/2009-10, ದಿನಾಂಕ : 04-02-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 04-01-2010ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರದ ರಾಜ್ಯಮಟ್ಟದ ಯೋಜನಾ ಪ್ರಸ್ತಾವನೆ ಮತ್ತು ತಡಿಕೆ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ : 04-02-2010ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರ ಇವರು ಡಾ॥ ಕೇಸವ ಹೆಚ್. ಕೋರ್ಸೆ, ಸಹಾಯಕ ಪ್ರಾಧ್ಯಾಪಕರು, ಎಸ್.ಡಿ.ಎಮ್. ಕಾಲೇಜು, ಉಜಿರೆ ಇವರು ಔಷಧಿ ಸಸ್ಯಗಳ ಬಗ್ಗೆ ಜ್ಞಾನ ಹೊಂದಿರುವುದಿರಂದ ಇವರ ಸಲಹೆ ಮತ್ತು ಸೂಚನೆಗಳು ಈ ಸಮಿತಿಗೆ ನೆರವು ನೀಡುತ್ತವೆಯಾದ್ದರಿಂದ ಸದರಿಯನ್ನು ಮೇಲ್ಕಂಡ ಸಮಿತಿಗೆ ನೇಮಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 15 ಎಫ್‌ಪಿಸಿ 2010, ಬೆಂಗಳೂರು, ದಿನಾಂಕ: 17ನೇ ಮೇ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಡಾ॥ ಕೇಸವ ಹೆಚ್. ಕೋರ್ಸೆ, ಸಹಾಯಕ ಪ್ರಾಧ್ಯಾಪಕರು, ಎಸ್.ಡಿ.ಎಮ್. ಕಾಲೇಜು, ಉಜಿರೆ ಇವರನ್ನು ದಿನಾಂಕ 04-01-2010 ರಂದು ರಚಿಸಲಾದ ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರದ ರಾಜ್ಯ ಮಟ್ಟದ ಯೋಜನಾ ಮತ್ತು ತಡಿಕೆ (Screening) ಸಮಿತಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಪಿ. ಆರ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1390 ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವ ತಹಶೀಲ್ದಾರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ : 1. Dy. Superintendent of Police, DCRE, ಬೆಳಗಾಂ ಇವರ ಪತ್ರ ಸಂ.: CV/4/DRCE/BGM/2004, ದಿನಾಂಕ: 15-01-2005.
2. ಸರ್ಕಾರದ ಪತ್ರ ಸಂ.: ಆರ್‌ಡಿ 45 ಎಎಸ್‌ಡಿ 2005, ದಿನಾಂಕ: 08-12-2008.
3. ಜಿಲ್ಲಾಧಿಕಾರಿಗಳು, ಹಾವೇರಿ ಇವರ ಪತ್ರ ಸಂ.: ಸಿಬ್ಬಂದಿ (1) ವಹಿ-89/2008-09, ದಿನಾಂಕ 05-08-2009.
4. ಕಾರಣ ಕೇಳುವ ನೋಟೀಸು ದಿನಾಂಕ: 03-11-2009.

5. ಶ್ರೀ ಟಿ. ರಮೇಶ್, ತಹಶೀಲ್ದಾರ್‌ರವರಿಂದ ಲಿಖಿತ ಉತ್ತರ ದಿನಾಂಕ: 14-12-2009.
6. ಶ್ರೀ ಕೆ.ಎಸ್. ಹೊಸಮನಿ, ನಿವೃತ್ತ ತಹಶೀಲ್ದಾರ್‌ರವರಿಂದ ಲಿಖಿತ ಉತ್ತರ ದಿನಾಂಕ: 11-12-2009.
7. ಶ್ರೀ ಎಸ್.ಆರ್. ವೆಂಕಟೇಶ್, ತಹಶೀಲ್ದಾರ್‌ರವರಿಂದ ಲಿಖಿತ ಉತ್ತರ ದಿನಾಂಕ: 29-01-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರಲ್ಲಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿದಳ, ಬೆಳಗ ಇವರು ಶ್ರೀ ಟಿ. ರಮೇಶ್, ಹಿಂದಿನ ತಹಶೀಲ್ದಾರ್, ಹಾವೇರಿ, ಶ್ರೀ ಎಸ್.ಆರ್. ವೆಂಕಟೇಶ್, ಹಿಂದಿನ ತಹಶೀಲ್ದಾರ್ ಹಾವೇ ಹಾಗೂ ಶ್ರೀ ಕೆ.ಎಸ್. ಹೊಸಮನಿ, ಹಿಂದಿನ ತಹಶೀಲ್ದಾರ್, ಹಾವೇರಿ ಈ ಮೂವರು ತಹಶೀಲ್ದಾರರು ನೀಡಿರುವ ಪರಿಶ ಪಂಗಡದ-ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಶ್ರೀ ಲೋಕೇಶ್, ಹನುಮಂತಪ್ಪ, ಭಜಂತ್ರಿ ಇವರು ಧಾರವಾಡ ವಿದ್ಯಾಲಯದಲ್ಲಿ ಕೆಲಸ ಪಡೆದುಕೊಂಡಿರುವುದರಿಂದ ಸದರಿ 3 ಜನ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕೋರಿದ್ದಾರೆ.

ಅದರಂತೆ, ಕ್ರ.ಸಂ.(2)ರಲ್ಲಿ ಪ್ರಕರಣದಲ್ಲಿ ಭಾಗಿಯಾಗಿರುವ ತಹಶೀಲ್ದಾರರುಗಳ ವಿರುದ್ಧ ಕರಡು ದೋಷಾರೋಪ ಪಟ್ಟಿಗಳನ್ನು (ಅನುಬಂಧ 1 ರಿಂದ 4ರವರೆಗೆ) ದೃಢೀಕೃತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾ ಕಳುಹಿಸಿಕೊಡುವಂತೆ ಕೋರಲಾಗಿತ್ತು. ಆ ಪ್ರಕಾರ ಕ್ರ.ಸಂ.(3)ರಲ್ಲಿ ಜಿಲ್ಲಾಧಿಕಾರಿಗಳು, ಹಾವೇರಿರವರು ಸುಳ್ಳು ಜಾತಿ ಪ್ರಮಾ ಪತ್ರ ನೀಡಿರುವ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಗೆ ಕಾಣಿಸಿದ ತಹಶೀಲ್ದಾರರುಗಳ ವಿರುದ್ಧ ಅನುಬಂಧ 1 ರಿ 4ರವರೆಗೆ ದೋಷಾರೋಪಣಾ ಪಟ್ಟಿ ತಯಾರಿಸಿ ಅನುಬಂಧ-3ಕ್ಕೆ ಸಂಬಂಧಿಸಿದಂತೆ, ದೃಢೀಕೃತ ದಾಖಲೆಗಳನ್ನು ಸರ್ಕಾ ಕಳುಹಿಸಿರುತ್ತಾರೆ.

1) ಶ್ರೀ ಟಿ. ರಮೇಶ್, ಹಿಂದಿನ ತಹಶೀಲ್ದಾರ್, ಹಾವೇರಿ, ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂ ಶಿವಮೊಗ್ಗ.
2) ಶ್ರೀ ಎಸ್.ಆರ್. ವೆಂಕಟೇಶ್, ಹಿಂದಿನ ತಹಶೀಲ್ದಾರ್ ಹಾವೇರಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, KIA BMPCP, ಬೆಂಗಳೂರು.
3) ಶ್ರೀ ಕೆ.ಎಸ್. ಹೊಸಮನಿ, ಹಿಂದಿನ ತಹಶೀಲ್ದಾರ್ ಹಾವೇರಿ (ಪ್ರಸ್ತುತ ನಿವೃತ್ತರು)

ಸದರಿ ಅಧಿಕಾರಿಗಳ ವಿರುದ್ಧ ದೋಷಾರೋಪಣಾ ಪಟ್ಟಿಗಳನ್ನು (ಅನುಬಂಧ 1 ರಿಂದ 4ರವರೆಗೆ) ಮೆ ಕ್ರ.ಸಂ.(4)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿಗೊಳಿಸಿ ಆ ಬಗ್ಗೆ ಅವರ ಲಿಖಿತ ಸಮಜಾಯಿಷಿಯ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದಕ್ಕೆ ಉತ್ತರವಾಗಿ ಶ್ರೀ ಟಿ. ರಮೇಶ್, ತಹಶೀಲ್ದಾರ್, ಶ್ರೀ ಎಸ್.ಆರ್. ವೆಂಕಟೇ ತಹಶೀಲ್ದಾರ್ ಹಾಗೂ ಶ್ರೀ ಕೆ.ಎಸ್. ಹೊಸಮನಿ, ತಹಶೀಲ್ದಾರ್ (ಪ್ರಸ್ತುತ ನಿವೃತ್ತರು) ಇವರು ಕ್ರ.ಸಂ.(5), (6) ಮತ್ತು (7) ಓದಲಾದ ತಮ್ಮ ಲಿಖಿತ ಹೇಳಿಕೆಯಲ್ಲಿ ಸಮಜಾಯಿಷಿಯನ್ನು ನೀಡಿ ದೋಷಾರೋಪಣೆಯನ್ನು ಹೊರಿಸಿರುವ ಆಪಾದನೆಯಿ ಜಾತಿ ಪ್ರಮಾಣ ಪತ್ರ ನೀಡಿದ್ದನ್ನು ಒಪ್ಪಿಕೊಂಡಿದ್ದು, ತಮ್ಮ ವೈಯಕ್ತಿಕದಿಂದಲ್ಲ ಕೇವಲ ಆಕಸ್ಮಿಕವೆಂದು ಹಾಗೂ ಜಾತಿ ಪ್ರಮಾ ಪತ್ರವನ್ನು ರದ್ದುಪಡಿಸಿರುವುದರಿಂದ ತಿಳಿಸಿ ತಮ್ಮನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಅದರಂತೆ, ಆಪಾದಿತರ ಮೇಲೆ ಹೊರಿಸಲಾದ ಆರೋಪ ಹಾಗೂ ಸದರಿ ಆಪಾದನೆಗಳಿಗೆ ಆಪಾದಿತರು ನೀಡಿರ ಹೇಳಿಕೆಯನ್ನು ಪರಿಶೀಲಿಸಿ ಈಗಾಗಲೇ ಜಾತಿ ಪ್ರಮಾಣ ಪತ್ರವನ್ನು ರದ್ದು ಪಡಿಸಿರುವುದರಿಂದ, ಸರ್ಕಾರವು ಈ ಪ್ರಕರಣ ಭಾಗಿಯಾಗಿರುವ 3 ಜನ ಅಧಿಕಾರಿಗಳಾದ ಶ್ರೀ ಟಿ. ರಮೇಶ್, ಹಿಂದಿನ ತಹಶೀಲ್ದಾರ್, ಹಾವೇರಿ, ಶ್ರೀ ಎಸ್.ಆ ವೆಂಕಟೇಶ್, ಹಿಂದಿನ ತಹಶೀಲ್ದಾರ್ ಹಾವೇರಿ, ಶ್ರೀ ಕೆ.ಎಸ್. ಹೊಸಮನಿ, ಹಿಂದಿನ ತಹಶೀಲ್ದಾರ್, ಹಾವೇರಿ (ಪ್ರಸ ನಿವೃತ್ತರು) ಇವರುಗಳಿಗೆ ಎಚ್ಚರಿಕೆ ನೀಡಿ ಈ ಪ್ರಕರಣವನ್ನು ಮುಕ್ತಾಯ ಮಾಡಲು ಸರ್ಕಾರವು ತೀರ್ಮಾನಿಸಿರುತ್ತ ಆದುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 559 ಎಎಸ್‌ಡಿ 2009, ಬೆಂಗಳೂರು, ದಿನಾಂಕ 29-04-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಟಿ. ರಮೇಶ್, ಹಿಂದಿನ ತಹಶೀಲ್ದಾರ್, ಹಾವೆ ಶ್ರೀ ಎಸ್.ಆರ್. ವೆಂಕಟೇಶ್, ಹಿಂದಿನ ತಹಶೀಲ್ದಾರ್, ಹಾವೇರಿ ಮತ್ತು ಶ್ರೀ ಕೆ.ಎಸ್. ಹೊಸಮನಿ, ಹಿಂದಿನ ತಹಶೀಲ್ದಾ ಹಾವೇರಿ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ಹೂಡಲು ಉದ್ದೇಶಿಸಿದ್ದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಪ್ರಕರಣವ ಮುಕ್ತಾಯಗೊಳಿಸಿ ಆದೇಶಿಸಲಾಗಿದೆ. ಶ್ರೀ ಟಿ. ರಮೇಶ್ ಹಾಗೂ ಶ್ರೀ ಎಸ್.ಆರ್. ವೆಂಕಟೇಶ್, ಇವರು ಇನ್ನು ಮು ಇಂತಹ ಪ್ರಕರಣ ಮರುಕಳಿಸದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1247

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಗೋವಿಂದ ಭಟ್, ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ, ಬದಾಮಿ ತಾಲ್ಲೂಕು, ಇವರ ವಿರುದ್ಧ ಇಲಾಖಾ ವಿಚಾರಣೆಯಿಂದ ಕೈಬಿಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 24 ಎಡಿಇ 2009 ದಿನಾಂಕ: 12-10-2009.
2. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಬಾಗಲಕೋಟೆರವರ ಪತ್ರ ಸಂಖ್ಯೆ: ಕಂಶಾ/ಸಿಬ್ಬಂದಿ/3/ವಿವ/03/09-10 ದಿನಾಂಕ: 19-12-2009.
3. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 24 ಎಡಿಇ 2009 ದಿನಾಂಕ: 10-02-2010.
4. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ: ಕಂಶಾ/ಸಿಬ್ಬಂದಿ/3/ವಿವ3/09-10 ದಿನಾಂಕ: 25-03-2010.

...ವನೆ:

ಮೇಲಿನ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ: 12-10-2009ರ ಆದೇಶದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ನೆರೆ ...ತ ಪ್ರದೇಶಗಳಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಭೇಟಿ ನೀಡಿದಾಗ ಅಲ್ಲಿರುವ ಸಾರ್ವಜನಿಕರು ಶ್ರೀ ಎ. ಗೋವಿಂದ ... ವಿಶೇಷ ತಹಶೀಲ್ದಾರ್, ಗುಳೇದಗುಡ್ಡ, ಬದಾಮಿ ತಾಲ್ಲೂಕು. ಬಾಗಲಕೋಟೆ ಜಿಲ್ಲೆ, ಇವರು ನೆರೆ ಪೀಡಿತ ಪ್ರದೇಶಗಳಲ್ಲಿ ...ಹದಿಂದ ಭಾದಿತರಾದ ಜನರ ರಕ್ಷಣೆ ಮಾಡಲು ಕ್ರಮ ಕೈಗೊಂಡಿಲ್ಲವೆಂದು ಹಾಗೂ ದಿನಾಂಕ: 29-09-2009 ರಿಂದ ...10-2009ರ ವರೆಗೆ ಉಂಟಾದ ಅತಿವೃಷ್ಟಿ ಸಂಬಂಧದಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಿಲ್ಲ. ಹಾಗೂ ಸದರಿಯವರು ...ರ್ವಜನಿಕರಿಗೆ ಉಂಟಾಗಿರುವ ತೊಂದರೆಗಳಿಗೆ ಸ್ಪಂದಿಸಿರುವುದಿಲ್ಲ. ಹಾಗೂ ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಜನರ ...ಣೆಗೆ ಕ್ರಮ ಕೈಗೊಳ್ಳದಿರುವುದು ಹಾಗೂ ಗಂಭೀರ ಸ್ವರೂಪದ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ...ರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿ ...ಮ 10(1)(ಡಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎ. ಗೋವಿಂದ ಭಟ್, ವಿಶೇಷ ತಹಶೀಲ್ದಾರ್, ...ದಗುಡ್ಡ ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ...ಾನತ್ತಿನಲ್ಲಿ ಇಡಲಾಗಿತ್ತು.

ಬಾದಾಮಿ ಕ್ಷೇತ್ರದ ಮಾನ್ಯ ಶಾಸಕರು ಮಾನ್ಯ ಕಂದಾಯ ಸಚಿವರಿಗೆ ಮನವಿ ಸಲ್ಲಿಸಿ, ಸದರಿ ಶ್ರೀ ಎ. ಗೋವಿಂದ ...ರವರು ನೆರೆ ಹಾವಳಿ ಸಮಯದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿರುತ್ತಾರೆ. ಇವರ ಬಗ್ಗೆ ಯಾವುದೇ ಲಿಖಿತ ...ರುಗಳು ಇರುವುದಿಲ್ಲವಾದ್ದರಿಂದ ಇವರ ಅಮಾನತ್ತು ಆದೇಶವನ್ನು ರದ್ದುಪಡಿಸಿ, ಸೇವೆಗೆ ನಿಯುಕ್ತಿಗೊಳಿಸಬೇಕೆಂದು ...ರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಎ. ಗೋವಿಂದ ಭಟ್ ವಿಶೇಷ ತಹಶೀಲ್ದಾರ್ ಇವರ ವಿರುದ್ಧ ಇಲಾಖಾ ...ರಣಾ ಕಾಯ್ದಿರಿಸಿ ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತು ಆದೇಶವನ್ನು ತೆರವುಗೊಳಿಸಿ, ಸೇವೆಗೆ ಪುನರ್ ...ಸಲು ನಿರ್ಧರಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (3) ದಿನಾಂಕ: 10-02-2010ರ ಆದೇಶದಲ್ಲಿ ಶ್ರೀ ಎ. ಗೋವಿಂದ ..., ಹಿಂದಿನ ವಿಶೇಷ ತಹಶೀಲ್ದಾರ್ ಗುಳೇದಗುಡ್ಡ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರನ್ನು 1957ರ ಕರ್ನಾಟಕ ನಾಗರೀಕ ...ಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 10(5)(ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ...ಯಿಸಿ ಅವರ ವಿರುದ್ಧದ ಇಲಾಖಾ ವಿಚಾರಣಾ ಕಾಯ್ದಿರಿಸಿ ಕೂಡಲೇ ಜಾರಿಗೆ ಬರುವಂತೆ ಸದರಿಯವರ ಅಮಾನತ್ತನ್ನು ...ಗೊಳಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ದಿನಾಂಕ: 25-03-2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬಾಗಲಕೋಟೆ ... ಇವರು ಶ್ರೀ ಎ. ಗೋವಿಂದ ಭಟ್, ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ ಇವರ ಮನವಿಯ ಬಗ್ಗೆ ವಿಚಾರಣೆ ...ಿ ವರದಿ ಸಲ್ಲಿಸುವಂತೆ ಉಪ ವಿಭಾಗಾಧಿಕಾರಿಗಳು, ಬಾಗಲಕೋಟೆ ಇವರಿಗೆ ಸೂಚಿಸಲಾಗಿತ್ತು. ಅದರಂತೆ ಉಪ ...ಗಾಧಿಕಾರಿಗಳು ವರದಿ ಸಲ್ಲಿಸಿ ಶ್ರೀ ಎ. ಗೋವಿಂದ ಭಟ್, ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ ಇವರ ...ದನೆಗಳನ್ನು ಕುರಿತು ತಹಶೀಲ್ದಾರ್ ಬಾದಾಮಿ ಹಾಗೂ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ ಇವರಿಗೆ ಪತ್ರ ...ುಲಾಗಿತ್ತು. ಸದರಿ ಇಬ್ಬರೂ ಅಧಿಕಾರಿಗಳು ಶ್ರೀ ಎ. ಗೋವಿಂದ ಭಟ್, ಇವರ ಮೇಲಿನ ದೂರುಗಳು ...ತವಾಗಿಲ್ಲವೆಂದು ತಿಳಿಸಿರುತ್ತಾರೆ. ಅದಲ್ಲದೆ ಸ್ಥಳೀಯ ಶಾಸಕರಾದ ಶ್ರೀ ಎಂ.ಕೆ. ಪಟ್ಟಣಶೆಟ್ಟಿ, ಇವರು ಶ್ರೀ ಎ. ಗೋವಿಂದ ..., ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡರವರು ನೆರೆ ಹಾವಳಿ ಸಮಯದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದಾಗಿ ...್ಯ ಕಂದಾಯ ಸಚಿವರಿಗೆ ಪತ್ರ ಬರೆದಿದ್ದಾರೆ. ಕಾರಣ ಮೇಲ್ಕಂಡ ಅಂಶಗಳಿಂದ ಹಾಗೂ ಯಾವುದೇ ನಿರ್ದಿಷ್ಟ ...ವಾದ ಅಪಾದನೆ ರುಜುವಾತು ಮಾಡುವ ದಾಖಲಾತಿಗಳು ಇಲ್ಲದ ಕಾರಣ ದೋಷಾರೋಪಣೆಗಳನ್ನು ಸಿದ್ಧಪಡಿಸಲು ...ವಾಗುವುದಿಲ್ಲವೆಂದು ಉಪ ವಿಭಾಗಾಧಿಕಾರಿಗಳು ವರದಿ ಮಾಡಿರುತ್ತಾರೆ. ಎಂದು ತಿಳಿಸುತ್ತಾ ಸರ್ಕಾರದ ಗಮನಕ್ಕೆ ...ಾ ಮುಂದಿನ ಕ್ರಮಕ್ಕಾಗಿ ವರದಿ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ವರದಿಯನ್ನು ಸರ್ಕಾರವು ಪರಿಶೀಲಿಸಿ. ಜಿಲ್ಲಾಧಿಕಾರಿಗಳ ವರದಿಯಲ್ಲಿ ...ರುವಂತೆ ಶ್ರೀ ಎ. ಗೋವಿಂದ ಭಟ್, ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ, ಬಾದಾಮಿ ತಾಲ್ಲೂಕು,

ಬಾಗಲಕೋಟೆ ಜಿಲ್ಲೆ ಇವರ ವಿರುದ್ಧದ ಅಪಾದನೆಗಳು/ಲಿಖಿತ ದೂರುಗಳು ಇಲ್ಲದಿರುವುದರಿಂದ, ಇಲಾಖಾ ವಿಚಾರಣೆ ನಡೆಸುವ ಅವಶ್ಯಕತೆ ಇಲ್ಲವೆಂದು ತೀರ್ಮಾನಿಸಿ ಸದರಿಯವರ ವಿರುದ್ಧ ಈ ಪ್ರಕರಣದಲ್ಲಿ ಹೂಡಲು ಉದ್ದೇಶಿಸಲಾಗಿದ್ದ ಇಲಾಖಾ ವಿಚಾರಣೆಯಿಂದ ಕೈಬಿಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 24 ಎಡಿಇ 2009 ಬೆಂಗಳೂರು, ದಿನಾಂಕ 05-05-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎ. ಗೋವಿಂದ ಭಟ್, ಹಿಂದಿನ ವಿಶೇಷ ತಹಶೀಲ್ದಾರ್, ಗುಳೇದಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಪ್ರಸ್ತುತ ಸ್ಥಳ ನಿರೀಕ್ಷಣೆಯಲ್ಲಿರುವ ಇವರ ವಿರುದ್ಧ ಅಪಾದನೆ/ದೂರುಗಳು ಇಲ್ಲದಿರುವುದರಿಂದ ಈ ಪ್ರಕರಣದಲ್ಲಿ ಉದ್ದೇಶಿಸಲಾಗಿದ್ದ ಇಲಾಖಾ ವಿಚಾರಣೆಯಿಂದ ಕೈಬಿಟ್ಟು ಆದೇಶಿಸಿದೆ.

ಶ್ರೀ ಎ. ಗೋವಿಂದ ಭಟ್, ಹಿಂದಿನ ತಹಶೀಲ್ದಾರ್, ಗುಳೇದಗುಡ್ಡ, ಇವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 100 (1)(ಬಿ) ರನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 1248

ಆರ್ಥಿಕ ಸಚಿವಾಲಯ

ವಿಷಯ : ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:

1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ-72/2009 ದಿನಾಂಕ: 29-1-2010.
2) ತನಿಖಾಧಿಕಾರಿಯವರ ವರದಿ ದಿನಾಂಕ: 08-01-2010.
3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
4) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ-72/2009 ದಿನಾಂಕ: 15-04-2010.

ಪ್ರಸ್ತಾವನೆ:

ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ವಿರುದ್ಧ ಗುನ್ನೆ ಸಂಖ್ಯೆ: 72/2009 ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (1)ರ ಪತ್ರ ದಿನಾಂಕ: 29-01-2010 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಸಿ) ರಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ದಿನಾಂಕ: 29-1-2010ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1) ಶ್ರೀ ಪಿ. ಸುರೇಶ್, ಬಿನ್. ಪಿ. ರಂಗಯ್ಯ, ನಿತೀಶ್ ಗ್ರಾನೈಟ್ಸ್, ನಂ.75, 76, ಅಂತರಸನಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರು ರವರ ದೂರು ದಿನಾಂಕ: 03-11-2009.
2) ಪ್ರಥಮ ವರ್ತಮಾನ ವರದಿ: ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣದ ಸಂಖ್ಯೆ: 72/2009.
3) ಪ್ರಾಯೋಗಿಕ ಪಂಚನಾಮೆ ದಿನಾಂಕ: 03-11-2009.

4) ಟ್ರ್ಯಾಪ್‌ನ ಮಹಜರ್ ದಿನಾಂಕ: 03-11-2009.

5) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಪಿಹೆಚ್ಐ/ಸಿಎಂಇ/ಲೋಕ್-132/09-10 ದಿನಾಂಕ: 19-11-2009.

6) ಕೃತ್ಯ ನಡೆದ ಸ್ಥಳದ ನಕಾಶೆ: ಸಂಖ್ಯೆ: ಸಕಾಅ/ಕಉವಿ-4/ಕೃತ್ಯ ನಡೆದ ಸ್ಥಳದ ನಕಾಶೆ/09-10/841 ದಿನಾಂಕ: 19-01-2010.

7) ಸಾಕ್ಷಿ ಹೇಳಿಕೆಗಳ ಪಟ್ಟಿ:

1. ಶ್ರೀ ಪಿ ಸುರೇಶ್, ಫಿರ್ಯಾದಿ
2. ಶ್ರೀಮತಿ ಮಂಜುಳ, ಪಂಚರು ಮತ್ತು ನೆರಳು ಸಾಕ್ಷಿದಾರರು
3. ಶ್ರೀ ವಿಶ್ವನಾಥ ಆರಾಧ್ಯ, ಪಂಚರು
4. ಶ್ರೀಮತಿ ಸುಮಿತ್ರ ವಾಣಿಜ್ಯ ತೆರಿಗೆ ಪರಿವೀಕ್ಷಕರು, ಪ್ರತ್ಯಕ್ಷ ಸಾಕ್ಷಿ
5. ಶ್ರೀ ಸೈಯದ್ ಜಮಾಲ್, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ
6. ಶ್ರೀ ವೈ.ಎನ್. ದೇಶಿಕ, ಸಾಕ್ಷಿ
7. ಶ್ರೀ ವೆಂಕಟೇಶ್ ಸಿ. ಪೊಲೀಸ್ ಕಾನ್‌ಸ್ಟೇಬಲ್, ಸಾಕ್ಷಿ
8. ಶ್ರೀ ಕೆ. ರಮೇಶ, ಪೊಲೀಸ್ ಕಾನ್‌ಸ್ಟೇಬಲ್, ಸಾಕ್ಷಿ
9. ಶ್ರೀಮತಿ ಎಂ. ಮಮತ, ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್, ಸಾಕ್ಷಿ
10. ಶ್ರೀ ದಯಾನಂದ, ಪೊಲೀಸ್ ಕಾನ್‌ಸ್ಟೇಬಲ್, ಸಾಕ್ಷಿ.

8) ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ 1

9) ಆಪಾದಿತರಾದ ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ಸಮಜಾಯಿಷಿ.

ತನಿಖಾಧಿಕಾರಿಗಳಾದ ಶ್ರೀ ಕೆ.ಸಿ. ಲಕ್ಷ್ಮಿನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್ ಸಿಟಿ ಡಿವಿಜನ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರುರವರ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 72/2009 ರಲ್ಲಿ ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ 13(2) ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರು ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಫಿರ್ಯಾದಿಯಾದ ಶ್ರೀ ಪಿ. ಸುರೇಶ್, ಬಿನ್. ಪಿ. ರಂಗಯ್ಯ, ನಿತೀಶ್ ಗ್ರಾನೈಟ್ಸ್, ನಂ.-75, 76, ಅಂತರಸನಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರುರವರ ಕಾರ್ಖಾನೆಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ, ಫಿರ್ಯಾದುದಾರರು ಪಾವತಿಸಬೇಕಾದ ತೆರಿಗೆ ಮೊತ್ತ ನಿರ್ಧರಿಸಿ, ಅವರಿಂದ ತೆರಿಗೆ ಮೊತ್ತ ಪಡೆದುಕೊಂಡು ಅಸೆಸ್‌ಮೆಂಟ್ ಆದೇಶ ಹೊರಡಿಸಬೇಕಾಗಿದ್ದುದು ಬಾಕಿ ಇದ್ದ ಕೆಲಸವಾಗಿತ್ತು. ಸದರಿ ಸರ್ಕಾರಿ ಕೆಲಸವನ್ನು ಮಾಡಲು ರೂ. 49,000/- ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ, ಸದರಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ವ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ: 03-11-2009 ರಂದು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ, 3ನೇ ಮಹಡಿ, ಲೆಕ್ಕಪರಿಶೋಧನೆ-61, ಶೇಷಾದ್ರಿಪುರಂ, ಬೆಂಗಳೂರು, ಈ ಸ್ಥಳದಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಅಕ್ರಮ ಸಂಭಾವನೆಯಾದ ರೂ. 49,000/- ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆದು, ಆ ಪೈಕಿ ರೂ. 6,000/- ಗಳನ್ನು ಇತರೆಯವರಿಗೆ ಕೊಡುವಂತೆ ತಿಳಿಸಿ, ಫಿರ್ಯಾದುದಾರರಿಗೆ ವಾಪಸ್ ನೀಡಿ, ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಅಧಿಕಾರಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ, ಫಿನಾಪ್ತಲಿನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ಅಕ್ರಮ ಸಂಭಾವನೆಯಾದ ರೂ. 43,000/- ಗಳನ್ನು ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರಿಂದ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ 3ನೇ ಮಹಡಿ, ಲೆಕ್ಕಪರಿಶೋಧನೆ-61, ಶೇಷಾದ್ರಿಪುರಂ, ಬೆಂಗಳೂರು, ಈ ಸ್ಥಳದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಕೃತ್ಯನಡೆದ ಸ್ಥಳದ ನಕ್ಷೆ, ಆರೋಪಿತರ ಸೇವಾ ವಿವರಗಳು, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕರು, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (4)ರಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರ ಪತ್ರ ದಿನಾಂಕ: 15-04-2010ರ ಹಿನ್ನೆಲೆಯಲ್ಲಿ ಪರಿಷ್ಕೃತ ಆದೇಶ ಹೊರಡಿಸುವ ಅಗತ್ಯ ಕಂಡುಬಂದಿದ್ದು, ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 51 ವಾತೆತ 2009 ಬೆಂಗಳೂರು, ದಿನಾಂಕ: 05-05-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಆರ್. ರಾಜಗೋಪಾಲ್, ಪೀಠಾಧಿಕಾರಿ, ಆರ್ಥಿಕ ಇಲಾಖೆ, ವಾಣಿಜ್ಯ ತೆರಿಗೆ-2 ಶಾಖೆ ಆದ ನಾನು ಆಪಾದಿತ ಅಧಿಕಾರಿಯಾದ ಶ್ರೀಮತಿ ಹೆಚ್.ವಿ. ಸರಸ್ವತಿ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 18ರ ಪ್ರಕಾರ, ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ: 05-05-2010 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1249

ಎಸ್.ಆರ್. ರಾಜಗೋಪಾಲ್

ಪೀಠಾಧಿಕಾರಿ

ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ನೂತನ ಜಿಲ್ಲೆಯಾಗಿ ರಚನೆಗೊಂಡಿರುವ ಯಾದಗಿರಿಗೆ ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಹಾಗೂ ಗುಲ್ಬರ್ಗಾ ಜಿಲ್ಲೆಯಿಂದ ಹುದ್ದೆಗಳನ್ನು ಮರುವಿನ್ಯಾಸಗೊಳಿಸುವಿಕೆ.

ಓದಲಾಗಿದೆ:
(1) ಅಧಿಸೂಚನೆ ಸಂಖ್ಯೆ: ಆರ್‌ಡಿ 59 ಭೂದಾಪು 2008, ದಿನಾಂಕ: 15-09-2009.
(2) ಅರೆಸರ್ಕಾರಿ ಪತ್ರ ಸಂಖ್ಯೆ: ವಿಯಾಜಿ/ಸಿಬ್ಬಂದಿ/01/2009-10, ದಿನಾಂಕ: 28-09-2009.
(3) ಪತ್ರ ಸಂಖ್ಯೆ: ಆಪಸಂ/ಡಿವಿಡಿ-3/ವಿವ-35/2009-10, ದಿನಾಂಕ: 09-11-2009.
(4) ಸರ್ಕಾರಿ ಆದೇಶ ಸಂಖ್ಯೆ: ಕಂಇ/71 ಭೂದಾಪು 2009, ದಿನಾಂಕ: 23-02-2010.

ಪ್ರಸ್ತಾವನೆ:

1. ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಯಾದಗೀರ್, ಶಹಾಪುರ ಹಾಗೂ ಶೋರಾಪುರ್ ತಾಲ್ಲೂಕುಗಳನ್ನೊಳಗೊಂಡಂತೆ ಹೊಸದಾಗಿ ಯಾದಗೀರ್ ಜಿಲ್ಲೆಯನ್ನು ರಚಿಸಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವಿಶೇಷ ಅಧಿಕಾರಿಗಳು, ಯಾದಗೀರ್ ಜಿಲ್ಲೆ, ಇವರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ನೂತನ ಯಾದಗೀರ್ ಜಿಲ್ಲೆಗೆ ಅಗತ್ಯ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡುವಂತೆ ಹಾಗೂ ಹೊಸದಾಗಿ ಸೃಜಿಸಿದ ಎಲ್ಲಾ ಹುದ್ದೆಗಳಿಗೆ ಸಿಬ್ಬಂದಿಯನ್ನು ಭರ್ತಿ ಮಾಡುವಂತೆ ಕೋರಿರುತ್ತಾರೆ.

3. ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಹೊಸ ಜಿಲ್ಲೆಯಲ್ಲಿ ಪ್ರಾರಂಭಿಸಬೇಕಾದ ಉಪನಿರ್ದೇಶಕರ ಕಛೇರಿಗೆ ಹೊಸದಾಗಿ 13 ವಿವಿಧ ವರ್ಗದ ಹುದ್ದೆಗಳನ್ನು ಸೃಜಿಸಿ ಅಗತ್ಯವಾದ ಅನುದಾನ ಒದಗಿಸಲು ಹಾಗೂ ಒಂದು ಅಟೆಂಡರ್ ಹುದ್ದೆಯನ್ನು ಉಪನಿರ್ದೇಶಕರ ಕಛೇರಿ, ಗುಲ್ಬರ್ಗಾದಿಂದ ಯಾದಗಿರಿ ಜಿಲ್ಲೆಗೆ ಮರುವಿನ್ಯಾಸಗೊಳಿಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಕಂದಾಯ ಇಲಾಖೆಯು ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮಾದರಿ ರಚನೆ ಅನ್ವಯ ಅವಶ್ಯಕವಿರುವ ಹುದ್ದೆಗಳಲ್ಲಿ ಶೇ.25ರಷ್ಟು ಹುದ್ದೆಗಳನ್ನು ದ್ಯಕ್ಕೆ ಅಡ್-ಹಾಕ್ ಆಧಾರದ ಮೇಲೆ ಸೃಜಿಸಲು ಮಂಜೂರಾತಿ ನೀಡಿದೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಅವಶ್ಯಕತೆ ಇರುವ ಹುದ್ದೆಗಳನ್ನು ಗುರುತಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಿ ಶೀಘ್ರವಾಗಿ ಭರ್ತಿ ಮಾಡಿಕೊಳ್ಳುವಂತೆ ಮತ್ತು ಈ ಹುದ್ದೆಗಳಿಗೆ ಆಯವ್ಯಯ ಅವಕಾಶವನ್ನು ಸಹ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

5. ನೂತನವಾಗಿ ರಚನೆಗೊಂಡಿರುವ ಯಾದಗಿರಿ ಜಿಲ್ಲೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು (1 ಹುದ್ದೆ), ಸಹಾಯಕ ನಿರ್ದೇಶಕರು (1 ಹುದ್ದೆ) ಕಛೇರಿ ಅಧೀಕ್ಷಕರು (1 ಹುದ್ದೆ), ಪ್ರಥಮ ದರ್ಜೆ ಸಹಾಯಕರು (2 ಹುದ್ದೆ) ದ್ವಿತೀಯ ದರ್ಜೆ ಸಹಾಯಕರು (2 ಹುದ್ದೆ), ಬೆರಳಚ್ಚುಗಾರರು (1 ಹುದ್ದೆ) ಪಶುವೈದ್ಯಕೀಯ ಪರೀಕ್ಷಕರು (1 ಹುದ್ದೆ), ಪಶುವೈದ್ಯಕೀಯ ಸಹಾಯಕರು (1 ಹುದ್ದೆ), ವಾಹನ ಚಾಲಕರು (2 ಹುದ್ದೆ) ಸೇರಿದಂತೆ ಒಟ್ಟು 12 ಅವಶ್ಯಕ ಹುದ್ದೆಗಳನ್ನು ಹೊಸದಾಗಿ ಸೃಜಿಸಬೇಕಾಗಿರುತ್ತದೆ ಹಾಗೂ ಅಟೆಂಡರ್ (1 ಹುದ್ದೆ)ಯನ್ನು ಗುಲ್ಬರ್ಗಾ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಯಾದಗಿರಿ ಜಿಲ್ಲೆಗೆ ಮರುವಿನ್ಯಾಸಗೊಳಿಸಬೇಕಾಗಿರುತ್ತದೆ. ಕಂದಾಯ ಇಲಾಖೆ ದಿನಾಂಕ: 23-02-2010 ರಂದು ಹೊರಡಿಸಿರುವ ಆದೇಶದಲ್ಲಿ ಯಾದಗಿರಿ ಜಿಲ್ಲೆಗೆ ಅವಶ್ಯಕವಿರುವ ಹುದ್ದೆಗಳಲ್ಲಿ ಶೇ.25ರಷ್ಟು ಹುದ್ದೆಗಳನ್ನು ಸದ್ಯಕ್ಕೆ ಅಡ್-ಹಾಕ್ ಆಧಾರದ ಮೇಲೆ ಸೃಜಿಸಲು ಮಂಜೂರಾತಿ ನೀಡಿ ಈ ಬಗ್ಗೆ ಆಯಾ ಇಲಾಖೆಗಳು ಪ್ರತ್ಯೇಕವಾಗಿ ಕ್ರಮ ಕೈಗೊಂಡು ಆದೇಶ ಹೊರಡಿಸಲು ಸೂಚಿಸಿದೆ. ಈ ದಿಸೆಯಲ್ಲಿ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಅಲಂಕಷವಾಗಿ ಪರಿಶೀಲಿಸಿದ ಸರ್ಕಾರ ಯಾದಗೀರ್ ಜಿಲ್ಲೆಗೆ ಸಿಬ್ಬಂದಿ ಮಾದರಿ ಅನ್ವಯ ಅವಶ್ಯಕವಿರುವ ಒಟ್ಟು 13 ಹುದ್ದೆಗಳ ಪೈಕಿ ಸದ್ಯಕ್ಕೆ ಉಪನಿರ್ದೇಶಕರು (1 ಹುದ್ದೆ), ಪ್ರಥಮ ದರ್ಜೆ ಸಹಾಯಕರು (1 ಹುದ್ದೆ) ಬೆರಳಚ್ಚುಗಾರರು (1 ಹುದ್ದೆ) ಪಶುವೈದ್ಯಕೀಯ ಪರೀಕ್ಷಕರು (1 ಹುದ್ದೆ) ಒಳಗೊಂಡಂತೆ ಒಟ್ಟು 4 ಹುದ್ದೆಗಳನ್ನು ಅಡ್-ಹಾಕ್ ಆಧಾರದ ಮೇಲೆ ಸೃಜಿಸಲು ಹಾಗೂ ಒಂದು ಅಟೆಂಡರ್ ಹುದ್ದೆಯನ್ನು ಉಪನಿರ್ದೇಶಕರ ಕಛೇರಿ ಗುಲ್ಬರ್ಗಾದಿಂದ ಯಾದಗಿರಿ ಜಿಲ್ಲೆಗೆ ಮರುವಿನ್ಯಾಸಗೊಳಿಸಲು ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ, ಈ ಆದೇಶ.

ಆದೇಶ ಸಂಖ್ಯೆ: ಪಸಂಮೀ 517 ಪಸಸೇ 2009, ಬೆಂಗಳೂರು, ದಿನಾಂಕ: 6ನೇ ಮೇ 2010.

6. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ನೂತನವಾಗಿ ರಚನೆಗೊಂಡಿರುವ ಯಾದಗಿರಿ ಜಿಲ್ಲೆಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ 4 ಹುದ್ದೆಗಳನ್ನು ಅಡ್-ಹಾಕ್ (Ad-hoc) ಆಧಾರದ ಮೇಲೆ ಸೃಜಿಸಲು ಹಾಗೂ ಒಂದು ಅಟೆಂಡರ್ (ವೇತನ ಶ್ರೇಣಿ ರೂ. 4,800-7,275) ಹುದ್ದೆಯನ್ನು ಉಪನಿರ್ದೇಶಕರ ಕಛೇರಿ, ಗುಲ್ಬರ್ಗಾದಿಂದ ಯಾದಗಿರಿ ಜಿಲ್ಲೆಗೆ ಮರುವಿನ್ಯಾಸಗೊಳಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹುದ್ದೆ	ವೇತನಶ್ರೇಣಿ	ಹುದ್ದೆ ಸಂಖ್ಯೆ
(1)	ಉಪ ನಿರ್ದೇಶಕರು	ರೂ. 18,150-26,925	1
(2)	ಪ್ರಥಮ ದರ್ಜೆ ಸಹಾಯಕರು	ರೂ. 7,275-13,350	1
(3)	ಬೆರಳಚ್ಚುಗಾರರು	ರೂ. 5,800-10,500	1
(4)	ಪಶುವೈದ್ಯಕೀಯ ಪರೀಕ್ಷಕರು	ರೂ. 6,250-12,000	1

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಆರ್. 1250

ಎಂ.ಪಿ. ನಾಗರಾಜ

ಪೀಠಾಧಿಕಾರಿ-2

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ-ಎ).

COMMERCE AND INDUSTRIES SECRETARIAT

Sub: Change of name of Company from M/s SE Steel Ltd., to M/s. Synew Steel Ltd.

Read: 1) G.O.No.: CI 53 SPI 2009 dated: 04-08-2009.

2) Letter from Synew Steel Ltd., dated: 24-12-2009.

Preamble:

M/s. SE Steel Ltd., submitted a proposal for establishment of "Integrated Steel Plant with SEZ Status-4 Million MTPA to be extended to 10 MTPA with 635 MW Captive Power Plant" in 7000 acres of land (Acquisition & Allotment of 5,000 acres of land by KIADB, on consent of landowners as "SUC" and permission to the Company u/s 109 KLR Act to purchase the balance 2,000 acres of land) at Mulvad, Sonihala, Malaghana & Kalgurki Villages, Basavana Bagewadi Taluk, Bijapur District, with an investment of Rs. 49720 crores.

The proposal has been approved in the 17th SHLCC meeting held on 28-01-2009 & G.O. read at (1) above was issued.

Vide letter read at (2) above, the unit has requested for change of name to M/s. Synew Steel Ltd., as the implementing company.

Hence the following order.

Government Order No. CI 53 SPI 2009, Bangalore, Dated: 10-05-2010.

Government is pleased to accord approval to the proposal of M/s. SE Steel Ltd., to change the name from M/s. SE Steel Ltd., to M/s. Synew Steel Ltd., for implementing the project of manufacturing "Integrated Steel Plant with SEZ Status-4 Million MTPA to be extended to 10 MTPA with 635 MW Captive Power Plant" approved" in 17th SHLCC meeting held on 28-01-2009 at Mulvad, Ronihala, Malaghana & Kalgurki Villages, Basavana Bagewadi Taluk, Bijapur District.

By Order and in the name of the Governor of Karnataka

APARNA PAVATE
Desk Officer (Technical Cell)
Commerce & Industries Department

PR No. 1251

COMMERCE AND INDUSTRIES SECRETARIAT

Sub: Approval to the Project Proposal of M/s. Surya Vijayanagar Steels and Power Ltd., for enhancement of integrated Steel Plant capacity from 5 Million MTPA to 6 Million MTPA.

Read: 1) Govt. Order No. CI 43 SPI 2010, Dated: 25-02-2010.
2) Proceedings of the 21st State High Level Clearance Committee (SHLCC) meeting held on 29-03-2010.

Preamble:

M/s. Surya Vijayanagar Steels and Power Ltd., had proposed to establish a "5 Million MTPA Integrated Steel Plant with 500 MW Captive Power Plant" in Bagalkot District, with an investment of Rs. 20,000 crores generating employment to about 10,000 persons. The proposal was approved in 20th SHLCC meeting, held on 05-01-2010 and G.O. read at (1) above has been issued.

The revised proposal of the company to increase the Capacity of Integrated Steel Plant from "5 Million MTPS" to "6 Million MTPA" and investment from 20,000 crores to 24,000 crores was approved in the 21st State High Level Clearance Committee (SHLCC) meeting held on 29-03-2010.

Hence the following order.

Government Order No. CI 43 SPI 2010, Bangalore, Dated: 10-05-2010.

Government is pleased to accord in principle approval to the project proposal of M/s. Surya Vijayanagar Steels and Power Ltd., to increase the Capacity of Integrated Steel Plant from "5 Million MTPA to 6 Million MTPA" investment from Rs. 20,000 crores to 24,000 crores, employment from 10,000 to 1200 persons in Bagalkot District. KIADB to acquire the land on SUC basis. Other terms and conditions of the G.O. No. CI 43 SPI 2010, dated: 25-02-2010 remain the same.

By Order and in the name of the Governor of Karnataka

APARNA PAVATE
Desk Officer (Technical Cell)
Commerce & Industries Department

PR No. 1252

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಲ್ಲಿ ಕಲ್ಯಾಣ ಮಂಟಪದ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1. ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಗುಲ್ಬರ್ಗಾರವರ ಪತ್ರ ಸಂಖ್ಯೆ: ನಪ್ರಾಗು/ತಾಂತ್ರಿಕ/ಎಂ.ಎಸ್.ಕೆ.ವಾ/ಧಕೋ/ಕ.ಮಂಟಪ/2009-10/826. ದಿನಾಂಕ: 02-09-2009 ಮತ್ತು 2261, ದಿನಾಂಕ: 5-03-2010.
2. ದಿನಾಂಕ: 22-12-2008 ರಂದು ವಿಷಯ ಸಂಖ್ಯೆ: 21ರಲ್ಲಿ ಪ್ರಾಧಿಕಾರದ ಸಭೆಯ ನಿರ್ಣಯ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರವರು ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಎಂ.ಎಸ್.ಕೆ. ಮಿಲ್ (ವಾಣಿಜ್ಯ) ಬಡಾವಣೆ ಮತ್ತು ಧರಿಯಾಪೂರ ಕೋಟನೂರ

ಬಡಾವಣೆಗಳಲ್ಲಿ (2) ಪ್ರತ್ಯೇಕ ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ಉದ್ದೇಶಿಸಿ ಲೋಕೋಪಯೋಗಿ ಇಲಾಖೆಯ 2009-10ನೇ ಸಾಲಿನ ದರಪಟ್ಟಿಯನ್ವಯ ಕ್ರಮವಾಗಿ ರೂ. 279.91 ಲಕ್ಷ ಮತ್ತು ರೂ. 215.27 ಲಕ್ಷಗಳಲ್ಲಿ ಬೇಸ್‌ಮೆಂಟ್, ಗ್ರೌಂಡ್ ಮೊದಲನೆ ಮತ್ತು ಎರಡನೆ ಫ್ಲೋರ್ ಕಟ್ಟಲು ವಾಸ್ತುಶಿಲ್ಪಿಯವರಿಂದ ವಿನ್ಯಾಸ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಕಲ್ಯಾಣ ಮಂಟಪಗಳನ್ನು ನಗರಾಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಎಂ.ಎಸ್.ಕೆ. ಮಿಲ್ ವಾಣಿಜ್ಯ ಬಡಾವಣೆಯಲ್ಲಿನ 1130 ಚದರ ಮೀಟರ್ ಪ್ರದೇಶದಲ್ಲಿ ಹಾಗೂ ಧರಿಯಾಪೂರ-ಕೋಟನೂರ ಬಡಾವಣೆಯಲ್ಲಿನ 1292 ಚದರ ಮೀಟರ್ ಪ್ರದೇಶದ ಸಿ.ಡಿ.ಪಿ.ಯಲ್ಲಿ ವಾಣಿಜ್ಯಕ್ಕಾಗಿ ಕಾಯ್ದಿರಿಸಿದ ಎರಡು ನಿವೇಶನಗಳಲ್ಲಿ ಪ್ರಾಧಿಕಾರವು ನಿರ್ಮಿಸಲು ಉದ್ದೇಶಿಸಿರುತ್ತದೆ.

ಗುಲ್ಬರ್ಗಾ ನಗರದಲ್ಲಿ ಸುಸಜ್ಜಿತ ಕಲ್ಯಾಣ ಮಂಟಪಗಳು ಇಲ್ಲದಿರುವುದರಿಂದ ಹಾಗೂ ವಿಶೇಷ ಪ್ರಸ್ತಾವಿತ ಪ್ರದೇಶಗಳಲ್ಲಿ ಕಲ್ಯಾಣ ಮಂಟಪಗಳಿಗೆ ಹೆಚ್ಚಿನ ಬೇಡಿಕೆ ಇರುವುದನ್ನು ಸಮೀಕ್ಷೆ ನಡೆಸಿದ ನಂತರ ತೀರ್ಮಾನಿಸಿ, ಮೇಲೆ ಓದಲಾದ ಕ್ರಮಾಂಕ (2)ರ ಸಭೆಯಲ್ಲಿ ನಿರ್ಣಯಿಸಿ, ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಪ್ರಾಧಿಕಾರವು ತನ್ನ ಸ್ವಂತ ಸಂಪನ್ಮೂಲದಿಂದ ಭರಿಸಲು ಉದ್ದೇಶಿಸಿ, 2009-10ನೇ ಸಾಲಿನ ಪ್ರಾಧಿಕಾರದ ಆಯವ್ಯಯದಲ್ಲಿ ರೂ. 200.00 ಲಕ್ಷಗಳನ್ನು ಕಾಯ್ದಿರಿಸಿಲಾಗಿದೆ ಎಂದು ತಿಳಿಸುತ್ತಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 18(2)ರನ್ವಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಗುಲ್ಬರ್ಗಾದವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 155 ಗುಅಪ್ರಾ 2009, ಬೆಂಗಳೂರು, ದಿನಾಂಕ 05-05-2010.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ನಗರಾಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಎಂ.ಎಸ್.ಕೆ. ಮಿಲ್ ವಾಣಿಜ್ಯ ಬಡಾವಣೆಯಲ್ಲಿನ 1130 ಚದರ ಮೀಟರ್ ಪ್ರದೇಶದಲ್ಲಿ ಹಾಗೂ ಧರಿಯಾಪೂರ-ಕೋಟನೂರ ಬಡಾವಣೆಯಲ್ಲಿನ 1292 ಚದರ ಮೀಟರ್ ಪ್ರದೇಶದ ಸಿ.ಡಿ.ಪಿ.ಯಲ್ಲಿ ವಾಣಿಜ್ಯಕ್ಕಾಗಿ ಕಾಯ್ದಿರಿಸಿದ ಎರಡು ನಿವೇಶನಗಳಲ್ಲಿ ಪ್ರಾಧಿಕಾರವು (2) ಪ್ರತ್ಯೇಕ ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ಲೋಕೋಪಯೋಗಿ ಇಲಾಖೆಯ 2009-10ನೇ ಸಾಲಿನ ದರಪಟ್ಟಿಯನ್ವಯ ಕ್ರಮವಾಗಿ ರೂ. 279.91 ಮತ್ತು ರೂ. 215.27 ಲಕ್ಷಗಳಲ್ಲಿ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರವು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 18(3) ರನ್ವಯ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) ಸದರಿ ಕಾಮಗಾರಿಯನ್ನು ನಿರ್ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000ನ್ನು ಪಾಲಿಸತಕ್ಕದ್ದು.
2) ಕಾಮಗಾರಿಗಳ ಟೆಂಡರ್‌ಗಳನ್ನು ಕರೆಯುವ ಮುನ್ನ ಸರ್ಕಾರದ ಅನುಮೋದನೆ ಪಡೆದು ಆಹ್ವಾನಿಸತಕ್ಕದ್ದು.
3) ಕಾಮಗಾರಿಗಳ ಗುತ್ತಿಗೆ ನೀಡುವ ಮುನ್ನ ನಿಯಮಾವಳಿಯಂತೆ ಸರ್ಕಾರದ ಅನುಮೋದನೆ ಪಡೆದು ಗುತ್ತಿಗೆಯನ್ನು ನೀಡತಕ್ಕದ್ದು.
4) ಸದರಿ ಯೋಜನೆಯನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸತಕ್ಕದ್ದು.
5) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದಲ್ಲ.
6) ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರವು ತನ್ನ ಸ್ವಂತ ಸಂಪನ್ಮೂಲಗಳಿಂದ ಭರಿಸುವುದು ಹಾಗೂ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಡಿ 2008, ದಿನಾಂಕ: 16-05-2008 ರಡಿಯಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1322

ಸಿ.ಟಿ. ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ನಾಗರಾಜು, ಸಹಾಯಕ ಅಭಿಯೋಗ ನಿರ್ದೇಶಕರು, ಆರಕ್ಷಕ ಅಧೀಕ್ಷಕರವರ ಕಛೇರಿ, ಮಡಿಕೇರಿ (ಪ್ರಭಾರ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಿನ್ಸಿಪಾಲ್ ಜೆ.ಎಂ.ಎಫ್.ಸಿ ನ್ಯಾಯಾಲಯ, ಮಡಿಕೇರಿ) ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿಪಿಎನ್.ಸಿಶಾ1:18:2010-11 ದಿನಾಂಕ: 03-05-2010.
2. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ.ಲೋಕ್/ಐಎನ್‌ವಿ(ಜಿ)/ಎಂ-20/ಸಿಆರ್-01/2010/ಮಡಿಕೇರಿ ದಿನಾಂಕ: 13-05-2010.

ಪ್ರಸ್ತಾವನೆ:

ಮೇಲೆ (1)ರ ಓದಲಾದ ದಿನಾಂಕ: 03-05-2010ರ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರವರ ಪತ್ರ ಮತ್ತು ಮೇಲೆ (2)ರಲ್ಲಿ ದಿನಾಂಕ: 13-05-2010ರ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರಗಳಲ್ಲಿ ಮಡಿಕೇರಿ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 1/2010ರ ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀ ನಾಗರಾಜು, ಸಹಾಯಕ ಅಭಿಯೋಗ ನಿರ್ದೇಶಕರು, ಆರಕ್ಷಕ ಅಧೀಕ್ಷಕರವರ ಕಛೇರಿ, ಮಡಿಕೇರಿ ಇವರು ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಿನ್ಸಿಪಾಲ್ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಡಿಕೇರಿ ಇಲ್ಲಿ ಪ್ರಭಾರ ರೀತ್ಯ ಕಾರ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 22-04-2010 ರಂದು ಮಡಿಕೇರಿಯ ಸಿವಿಲ್ ನ್ಯಾಯಾಲಯದ ಸಿ.ಸಿ.ನಂ. 1794/2007ರಲ್ಲಿ ದಾಖಲಾದ ಪ್ರಕರಣದ ಫಿರ್ಯಾದುದಾರರಾದ ಶ್ರೀ ಪಿ.ಟಿ. ಪೂಣಾಚ್ಚ ಬಿನ್ ಲೇಟ್ ಪಿ.ಕೆ. ತಿಮ್ಮಯ್ಯ, ಪಾಲಂಗಾಲ ಗ್ರಾಮ, ಕರಡ ಅಂಚೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರಿಂದ ರೂ. 3,000/- ಲಂಚವನ್ನು ಪಡೆಯುತ್ತಿದ್ದಾಗ ಮಡಿಕೇರಿ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿರುವುದಾಗಿ ತಿಳಿಸಿರುತ್ತಾರೆ.

ಸದರಿ ಆರೋಪಿತ ಸರ್ಕಾರಿ ಅಧಿಕಾರಿಯವರ ಮೇಲೆ ಸದರಿ ಲೋಕಾಯುಕ್ತ ಪೊಲೀಸರು ಗುನ್ನೆ ನಂ.1/2010. ಕಲಂ 7, 13(1)(ಡಿ) ಸಹವಾಚಕ 13(2) ಭ್ರಷ್ಟಾಚಾರ ನಿರೋಧ ಕಾಯಿದೆ 1988ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಸದರಿ ಅಧಿಕಾರಿಯನ್ನು ದಸ್ತಗಿರಿ ಮಾಡಿ ತನಿಖೆ ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಆದಕಾರಣ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1)(ಎ)ರ ರೀತ್ಯಾ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ದಿನಾಂಕ: 22-04-2010 ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಟ್ಟು ಆದೇಶ ಹೊರಡಿಸುವಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಒಇ 131 ಪಿಪಿಇ 2010, ಬೆಂಗಳೂರು, ದಿನಾಂಕ 22ನೇ ಮೇ 2010.

ಮೇಲೆ ವಿವರಿಸಿರುವಂತೆ, ಶ್ರೀ ನಾಗರಾಜು, ಸಹಾಯಕ ಅಭಿಯೋಗ ನಿರ್ದೇಶಕರು, ಆರಕ್ಷಕ ಅಧೀಕ್ಷಕರವರ ಕಛೇರಿ, ಮಡಿಕೇರಿ (ಪ್ರಭಾರ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಿನ್ಸಿಪಾಲ್ ಜೆ.ಎಂ.ಎಫ್.ಸಿ ನ್ಯಾಯಾಲಯ, ಮಡಿಕೇರಿ) ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1)(ಎ)ರ ಅನುಸಾರ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ದಿನಾಂಕ: 22-04-2010 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿದೆ.

ಸದರಿ ಅಧಿಕಾರಿಯವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 98ರ ಅನುಸಾರ ಅಮಾನತ್ತಿನ ಅವಧಿಯಲ್ಲಿ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ನೇಮಕಾತಿ ಪ್ರಾಧಿಕಾರಿ/ಮೇಲಾಧಿಕಾರಿಯ ಪೂರ್ವಾನುಮತಿಯನ್ನು ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1323

ಇಂಧನ ಸಚಿವಾಲಯ

ವಿಷಯ : ಮೆ. ಕಪಿಲ ಮಂಜುಶ್ರೀ ಕಂಪನಿಯ ಹೆಸರನ್ನು M/s Kapila Manjushree Apparels Private Limited ಎಂದು ಬದಲಾಯಿಸಿ ಇವರಿಗೆ ಹಂಚಿಕೆಯಾಗಿರುವ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 4.00 ಮೆಗಾ ವ್ಯಾಟ್‌ನಿಂದ 9.00 ಮೆಗಾ ವ್ಯಾಟ್‌ಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಇಎನ್ 453 ಎನ್‌ಸಿಇ 2009, ದಿನಾಂಕ: 30-04-2010.

2) **ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಕೋಟೆಮಲೆ ಕಿ.ಜ.ವಿ./2010/1347 ದಿನಾಂಕ: 18-05-2010 ಮತ್ತು ಸಂಖ್ಯೆ: ಕೆಆರ್‌ಇಡಿ/06/ಕೋಟೆಮಲೆ ಕಿ.ಜ.ವಿ/2010/1364 ದಿನಾಂಕ: 19-05-2010.**

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ.. ಕಪಿಲ ಮಂಜುಶ್ರೀ ಇವರಿಗೆ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ತಣ್ಣಿಮನಿ ಗ್ರಾಮದ ಬಳಿ ಭಾಗಮಂಡಲ ಪಟ್ಟಣದ ಕೋಟೆಮಲೆ ಎಸ್ಟೇಟಿನ ಮುಖಾಂತರ ಹರಿಯುವ 3 ತೊರೆಗಳಿಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರಗಳಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಿ ಆದೇಶ ಸಂಖ್ಯೆ: ಇಎನ್ 453 ಎನ್‌ಸಿಇ 2009, ದಿನಾಂಕ: 30-04-2010ರಲ್ಲಿ ಸಂಸ್ಥೆಯ ಹೆಸರನ್ನು ಮೆ.. ಕಪಿಲ ಮಂಜುಶ್ರೀ ಎಂದು ನಮೂದಿಸಲಾಗಿದ್ದು, ವಾಸ್ತವವಾಗಿ ಸಂಸ್ಥೆಯ ಹೆಸರು M/s Kapila Manjushree Apparels Private Limited ಎಂಬುದಾಗಿ ಇರುವುದರಿಂದ, ಸರ್ಕಾರದ ಆದೇಶದಲ್ಲಿ ಸಂಸ್ಥೆಯ ಹೆಸರನ್ನು M/s Kaplila Manjushree Apparels Private Limited ಎಂದು ತಿದ್ದುಪಡಿ ಮಾಡಬೇಕೆಂದು ಕೋರಿದ್ದಾರೆ. ಅಲ್ಲದೆ, ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಲು ಆಯ್ಕೆ ಮಾಡಿರುವ ಸ್ಥಳವು ಸ್ವಂತ ಜಮೀನಾಗಿದ್ದು, 4.00 ಮೆಗಾ ವ್ಯಾಟ್ ಬದಲಿಗೆ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಅವಕಾಶವಿದೆ ಎಂದು ತಿಳಿಸಿದ್ದಾರೆ. ಈ ಸಂಬಂಧ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರಿಗೆ ಅಭಿವೃದ್ಧಿದಾರರು ಯೋಜನಾ ವರದಿಯನ್ನು ಸಲ್ಲಿಸಿದ್ದಾರೆಂದು ವರದಿ ಮಾಡುತ್ತಾ, M/s Kapila Manjushree Apparels Private Limited ಇವರಿಗೆ ಹಂಚಿಕೆಯಾಗಿರುವ ಕಿರುಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 4.00 ಮೆಗಾ ವ್ಯಾಟ್‌ನಿಂದ 9.00 ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 453 ಎನಸಿಇ 2009, ಬೆಂಗಳೂರು, ದಿನಾಂಕ: 20-05-2010.

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಸನ್ನಿವೇಶನಗಳ ಹಿನ್ನೆಲೆಯಲ್ಲಿ, ಮೆ.. ಕಪಿಲ ಮಂಜುಶ್ರೀ ಎಂಬ ಕಂಪನಿಯ ಹೆಸರನ್ನು M/s Kapila Manjushree Apparels Private Limited ಎಂದು ಬದಲಾಯಿಸಿದೆ ಹಾಗೂ ಈ ಕಂಪನಿಗೆ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ತಣ್ಣಿಮನಿ ಗ್ರಾಮದ ಬಳಿ ಭಾಗಮಂಡಲ ಪಟ್ಟಣದ ಕೋಟೆಮಲೆ ಎಸ್ಟೇಟಿನ ಮುಖಾಂತರ ಹರಿಯುವ 3 ತೊರೆಗಳಿಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕೋಟೆಮಲೆ ಕಿರು ಜಲ ವಿದ್ಯುತ್ ಯೋಜನೆಯನ್ನು 9.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿಯನ್ನು ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 453 ಎನ್‌ಸಿಇ 2009, ದಿನಾಂಕ: 30-04-2010ರ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1324

ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಸ್.ಆರ್. ಪಾಟೀಲ್, ಹಿಂದಿನ ತಹಶೀಲ್ದಾರ್, ಗಂಗಾವತಿ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸುವ ಕುರಿತು.

ಓದಲಾಗಿದೆ: (1) ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಪತ್ರದ ಸಂಖ್ಯೆ: ಸಿಬ್ಬಂದಿ-1/ಸಿಸಿಎ/2004-05/863, ದಿನಾಂಕ: 03-06-2004.

(2) **ದಿನಾಂಕ: 25-10-04ರ ಕಾರಣ ಕೇಳುವ ನೋಟೀಸ್ ಸಂ.: ಆರ್‌ಡಿ 29 ಎಡಿಇ 2004.**

(3) **ಶ್ರೀ ಎಸ್.ಆರ್. ಪಾಟೀಲ್ ಇವರ ದಿನಾಂಕ: 06-11-2004ರ ಲಿಖಿತ ಸಮಜಾಯಿಷಿ.**

(4) **ಸರ್ಕಾರದ ಆದೇಶ ಸಂ.: ಆರ್‌ಡಿ 29 ಎಡಿಇ 2004, ದಿನಾಂಕ: 09-05-2005.**

ಪ್ರಸ್ತಾವನೆ:

ಶ್ರೀ ಎಸ್.ಆರ್. ಪಾಟೀಲ್, ಇವರು ಹಿಂದೆ ಗಂಗಾವತಿ ತಾಲ್ಲೂಕು ತಹಶೀಲ್ದಾರ್‌ರಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಚುನಾವಣಾ ಕೆಲಸದಲ್ಲಿ ಆಸಕ್ತಿ ವಹಿಸದೆ, ದಿನಾಂಕ: 11-04-2004ರ ಮಧ್ಯಾಹ್ನ ಗೈರು ಹಾಜರಾಗಿದ್ದು, ಚುನಾವಣಾ ಕೆಲಸಕ್ಕೆ ನಿಯೋಜಿಸಬೇಕಾದ ಸಿಬ್ಬಂದಿಯ ತರಬೇತಿಗಾಗಿ ಯಾವ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿರದೆ ಹಾಗೂ ಎಲೆಕ್ಟ್ರಾನಿಕ್ ಮತ ಯಂತ್ರಗಳ ತೃಪ್ತಿಕರ ಕಾರ್ಯ ನಿರ್ವಹಣೆ ಬಗ್ಗೆ ಅವುಗಳನ್ನು ಪರೀಕ್ಷಿಸದೆ ಸರಿಪಡಿಸುವ ಕೆಲಸ ನಡೆಯುತ್ತಿರುವಾಗ ಸಮಯಕ್ಕೆ ಸರಿಯಾಗಿ ಹಾಜರಾಗದೆ, ಹಾಗೂ ಚುನಾವಣೆಯ ದಿನ ಹಾಗೂ ಚುನಾವಣೆಯ ಮರುದಿನ ಅಂದರ ದಿನಾಂಕ: 20-04-2004 ಹಾಗೂ 21-04-2004ರಂದು ಚುನಾವಣಾ ಕೆಲಸಕ್ಕೆ ಗೈರು ಹಾಜರಾಗಿ ಚುನಾವಣಾ ಕಾರ್ಯ ನಿರ್ವಹಿಸುವಲ್ಲಿ ನಿರ್ಲಕ್ಷತೆ ತೋರಿ ಕರ್ತವ್ಯ ಲೋಪ ಎಸಗಿದ್ದು, ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸುವಂತೆ ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 03-06-2004ರ ಪತ್ರದಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರ ಮೇರೆಗೆ ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿತರ ವಿರುದ್ಧ ಆರೋಪ ಪಟ್ಟಿಗಳನ್ನು (ಅನುಬಂಧ-1 ರಿಂದ 4ರವರೆಗೆ) ಜಾರಿ ಮಾಡಿ ಸದರಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆಗಳನ್ನು ಸಲ್ಲಿಸಲು ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿನಾಂಕ: 25-10-2004 ರಂದು ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲಾಗಿತ್ತು. ಸದರಿ ತಿಳುವಳಿಕೆ ಪತ್ರಕ್ಕೆ ಅನುಗುಣವಾಗಿ ಶ್ರೀ ಎಸ್.ಆರ್. ಪಾಟೀಲ್‌ರವರು ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ದಿನಾಂಕ: 06-11-2004 ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅವರ ವಿರುದ್ಧದ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆಯಂದು ತಿಳಿಸಿ ಆ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ ಹಾಗೂ ಸದರಿ ಆರೋಪಗಳಿಂದ ಕೈಬಿಡುವಂತೆ ಕೋರಿರುತ್ತಾರೆ.

ಆರೋಪಿತರ ವಿರುದ್ಧದ ಆರೋಪಗಳು ಹಾಗೂ ಅವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ನಿರ್ಧರಿಸಿ ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಓದಲಾದ ಕ್ರ.ಸಂ. (4)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಆರ್. ಪಾಟೀಲ್, ಹಿಂದಿನ ತಹಶೀಲ್ದಾರ್, ಗಂಗಾವತಿ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇವರ ವಿರುದ್ಧ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಜರುಗಿಸಲು ಶ್ರೀ ಕುಲಕರ್ಣಿ ರಾಮರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ತುರುವಿಹಾಳ್ ಪೋಸ್ಟ್, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿಯ ಕೇಂದ್ರಾಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಶ್ರೀ ಕುಲಕರ್ಣಿ ರಾಮರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರು ಅನಾರೋಗ್ಯದಿಂದ ಬಳಲುತ್ತಿರುವುದಾಗಿ ಹಾಗೂ, ಇಲಾಖಾ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ಈ ಬಗ್ಗೆ ಬೇರೆ ವ್ಯವಸ್ಥೆ ಮಾಡಿಕೊಳ್ಳಲು ಕೋರಿರುತ್ತಾರೆ. ಈ ಬಗ್ಗ ಸರ್ಕಾರವು ಪರಿಶೀಲಿಸಿ, ಸದರಿಯವರ ಬದಲಿಗೆ ಶ್ರೀ ಫ.ನಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು, ಗಣಪತಿ ಗುಡಿ ಹತ್ತಿರ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ-580002 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ತಹಶೀಲ್ದಾರ್, ಗಂಗಾವತಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ.: ಆರ್‌ಡಿ 29 ಎಡಿಇ 2004, ಬೆಂಗಳೂರು, ದಿನಾಂಕ: 07–05–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಗಳ ನಿಯಮ 11 ರಡಿಯಲ್ಲಿ ಪ್ರದತ್ತವಾದ ಅಧಿಕಾರಿಯನ್ನು ಚಲಾಯಿಸಿ, ಶ್ರೀ ಕುಲಕರ್ಣಿ ರಾಮರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಇವರ ಬದಲಿಗೆ ಶ್ರೀ ಘ.ಸಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗಣಪತಿ ಗುಡಿ ಪತ್ತಿರ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ–580012 ಇವರನ್ನು ವಿಚಾರಣಾಧಿಕರಿಯನ್ನಾಗಿ ನೇಮಿಸಿದೆ.

ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಯವರ ಮುಂದೆ ಮಂಡಿಸಲು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಹಶೀಲ್ದಾರ್, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸಿ ಸ್ಥಳದಲ್ಲಿ ಇಲಾಖಾ ವಿಚಾರಣೆಯನ್ನು ನಡಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶವನ್ನು ಮಾಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಯನ್ನು ನಡೆಸಲು, ಸಿಆಸು ಇಲಾಖೆಯ ಟಿಪ್ಪಣಿ ಸಂ.: ಸಿಆಸುಇ 33 ಕೆಇವಿ 2008, ದಿನಾಂಕ: 12–06–2008ರಲ್ಲಿ ಸಹಮತಿಸಿದೆ. ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರಿ ಆದೇಶ ಸಂ.: ಸಿಆಸುಇ 22 ಸೇಇವಿ 2007, ದಿನಾಂಕ: 11–04–2008ರನ್ವಯ ರೂ. 8,000/– (ಎಂಟು ಸಾವಿರ ರೂಪಾಯಿಗಳು ಮಾತ್ರ) ಗಳ ಸಂಚಿತ ಸಂಭಾವನೆಯನ್ನು ಹಾಗೂ ರೂ. 1,500/– (ಒಂದು ಸಾವಿರದ ಐದುನೂರು ರೂಪಾಯಿಗಳು ಮಾತ್ರ)ಗಳ ವಾಹನ ಭತ್ಯೆ (ಕನ್ವೇಯನ್ಸ್ ಅಲೋಯನ್ಸ್)ಯನ್ನು ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ಇವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿಗಳು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ)ರಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ, ಜರುಗಿಸಿ ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1325

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಇಂಧನ ಸಚಿವಾಲಯ

ವಿಷಯ : M/s Suzlon Infrastructure Services Limited ಇವರಿಗೆ 250.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಬಗ್ಗೆ.

ಓದಲಾಗಿದೆ:

1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಆರ್‌ಎಲ್–ವಿಎಲ್–IV/2009/1176 ದಿನಾಂಕ: 6/9–03–2009.
2. ದಿನಾಂಕ: 23–10–2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.
3. ಸರ್ಕಾರ ಪತ್ರ ಸಂಖ್ಯೆ: ಇಎನ್ 204 ಎನ್‌ಸಿಇ 2009 ದಿನಾಂಕ: 05–12–2009.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/08/ಎಸ್‌ಐಎಸ್‌ಎಲ್/2009/3815 ದಿನಾಂಕ: 19/21–11–2009 ಮತ್ತು ಸಂಖ್ಯೆ: ಕೆಆರ್‌ಇಡಿ/08/ಎಸ್‌ಐಎಸ್‌ಎಲ್/2010/113 ದಿನಾಂಕ: 12/15–01–2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Sarjan Realities Ltd. ಇವರಿಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು [illegible] ಮೆಗಾ ವ್ಯಾಟ್

ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ ಮಂಡಿಸಲಾಗಿತ್ತು. ಸಮಿತಿಯ ನಿರ್ಣಯವು ಈ ಕೆಳಗಿನಂತಿರುತ್ತದೆ:-

"M/s. Sarjan Realities Limited – (972.86 MW)

M/s. Sarjan Realities Limited is a sister company of M/s. Suzlon Energy Limited. The Committee noted that 1600 MW is the balance of allotment made to be developed by M/s. Suzlon and its sister companies. Noted that this year's target was 150 MW.

The consensus was to allot 250 MW out of the request for 972.85 MW, in the Districts of Bagalkot, Bijapur, Gulbarga, Koppal, Raichur, Bidar and Tumkur, MD, KREDL was instructed to call M/s. Suzlon for discussions and prepare a plan to commission at least 250 MW before 2010".

ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ದಿನಾಂಕ: 23-10-2009 ಹಂಚಿಕೆ ಸಮಿತಿಯ ನಿರ್ಣಯದಂತೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು M/s Sarja Realities Limited ಇವರ ಉದ್ದೇಶಿತ 972.85 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 250 ಮೆಗ ವ್ಯಾಟ್ ಸಾಮರ್ಥ್ಯಕ್ಕೆ ಸೀಮಿತಗೊಳಿಸಿ, ಹಂಚಿಕೆ ಆದೇಶವನ್ನು M/s Sarjan Realities Limited ಹೆಸರಿನ ಬದಲಾಗಿ M Suzlon Infrastructure Service Limited ಹೆಸರಿನಲ್ಲಿ ನೀಡಬೇಕೆಂದು ಶಿಫಾರಸ್ಸು ಮಾಡಿ ಮಾರ್ಪಡಿಸಿರುವ ಯೋಜನ ನಕ್ಷೆಯೊಂದಿಗೆ ಮರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಕಂಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂ.: ಇಎನ್ 204 ಎನ್‌ಸಿಇ 2009, ಬೆಂಗಳೂರು, ದಿನಾಂಕ: 20-05-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, M/s Suzlon Infrastructure Services Limited ಇವರಿ ರಾಯಚೂರು, ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಟ್ಟು 250.2 ಮೆಗಾ ವ್ಯಾಟ್ ಸಾಮರ್ಥ್ಯ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗೆ ವಿವರಿಸಿರುವಂತೆ ಈ ಆದೇಶದಲ್ಲಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ:-

Sl. No.	Topo Sheet No.	Proposed capacity in MW	Near by villages of the proposed area and district	Geographical area description of the project
1	57 A/5	4.2 MW	Gudadur Raichur District	It is a plain area with no significant orientation located on the NE Hiremanapura & spread around Gudadur village. It appears to agriculture lands and is covered in the following geographical c ordinates: Latitude: 15°46°11"- 15°49'49" N Longitude: 76°16'39"-76°20'33"E Ridge peaks: 683, 690,647,659,644 & 651 Amsl.
2	57 A/2 57 A/3 57 A/6 & 57 A/7	22.8 MW	Chikamuki, Gasaladoodi, Chamalapura, Irakallaguda & Hire Sulikeri, Arsinakeri, Rampur, Obalabandi, Ramdurga & Mettagal Raichur district.	The nature of the proposed area consists of agriculture activity and the major portion of the area is having number of non-contiguous East West oriented hillocks with open scrub features and are covered in 4 toposheets. They are identified as Part-I, Part-II, Part-III & Part-IV. The number of village and peaks covered in the following Geographical co-ordinates: Latitude: 15°26'44"-15°33'47" N Longitude: 76°12'12" – 76°23'11"3 Ridge peaks: 645, 640, 680, 656, 621, 617, 677, 682, 684, 648, 69 & 712 Amsl.
3	57 A/6 & 57 A/10	4.2 MW	Nishi Gudda Raichur district	The proposed area is no high raised plain with predominant orientation in NW-SE directions located on the East of Kottapura. I is also called as Nishani Gudda. The area is covered with Cactus part of it has open scrub features. It is held in the following geographical co-ordinates: Latitude: 15°37'30"-15°49'45" N Longitude: 76°29'10"-76°31'23" E

				Ridge peaks: 588, 521 & 570 Amsl.
4	57 B/9	28.2 MW	Nallabanda, Vaddinakatte, Choranura, Jiginihalli, Obalapura, Swamihalli, Sheliyappanahalli, Pakkurthi, Appayyanahalli, Mahadevapur, Nagarahunshi, Bellary district.	The proposed area is of complex in nature and falls in the Reserved Forest Gudikote Sanjeevarayanakote & Thoranur. The part of the area has fairly dense scrub, open scrub and also shows the presence of rocky knobs, boulders and sheet rocks. The entire area is situated in Thoranur Town, Bellary district and is comes under the following Geographical co-ordinates: Latitude: $14^0$50'16"-$14^0$58'56" N Longitude: $76^0$30'0" – $76^0$44'13" E Ridge peaks: 701, 734, 722, 788, 725, 787, 729, 705, 800, 708, 762, 780, 739, 718, 817, 745, 748, 703, 826, 806, 813, 786, 706, 686, 721m Amsl.
5	56 D/7	37.8 MW	Hulagbal Mavinbhavi, Nagarbetta, Yanniwadgeri, Kodekai, Budihal, Uppaldinni, Hanchnal, Kadarhal, Dyamonal, Malur, Bandeppanhalli, Kolihal, Gundaknal, Talikota, Bijapur (25 MW and Gulbarga-12.8 MW Districts.	A large area is proposed, which is spread across Nalatvadi, Taikoto, Kolilhali, Jomalapur, Narayanapur etc. Further, it is complex in nature & consists of forest and non-forest stony waste, open scrub, graval waste etc and the entire area bisects by a river called Don-R. Further the part of the area is covered in the Thangarbal Reserve Forest, The identified area is having several peaks and is covered in the following Geographical co-ordinates: Latitude: $16^0$15'0"-$16^0$30'0" N Longitude: $76^0$15'0"-$76^0$30'0" E Ridge peakes: 538, 644, 516, 513, 505, 495, 516, 524, 509, 496, 493, 532, 528, 523, 528, 545, 550, 563, 557, 519, 525m Amsl.
6	57 A/1 & 57 A/5	50.40 MW	Yergeri, Kalalbandi, Chalageri, Talageri, Kushtagi, Datihal, Ilkal, Alempurpet, Hire Signagutti, Chik Otgeri, Gumgeri, Gonal, Hire Mannapur, Kandgal, Raichur Districts.	The identified area is spread across 2 topo sheets (57A/1and 57 A/5) the area appears to be general plain with higher elevation and some areas are having rocks and boulders and would be having multiple ownership. Further, it has number of villages & peaks and is covered in the following Geopgraphical co-ordinates: Latitude: $15^0$45'0"-$16^0$0'0" N Longitude: $76^0$0'0"-$76^0$20'28" E Ridge peaks: 648, 651, 657, 653, 665, 653, 699, 683, 660, 636, 651, 652, 651, 640, 653, 644, 646, 557, 596, 603, 610, 653, 649, 636, 651, 631, 625, 609, 597, 613, 619m Amsl.
7	56 D/11 & 56 D/12	15.60 MW	Gonavatala, Guntagola, Ramaroti, Parampur, Gurgunta, Honhalli, Kalapur, Linsugur, Bijapuri Gulbarga	The identified area is covered in 2 topo sheets & situated on South of Krishna river and spread around Parmpura and Honahalli villages. Further, it is situated in the lingasugur reserve forest and is of open scrub type. The identified area is having serval peaks and is covered in the following Geographical co-ordinates: Latitude: $16^0$10'11"-$16^0$18'28" N Longitude: $76^0$30'0"-$76^0$37'21" E Ridge peaks: 476, 439, 531, 532, 528, 492, 484, 487, 497, 549, 505 520, 484, 504m Amsl.
8	57 A/6	34.20 MW	Sidlabhavi, Nagarhal, Bachinhal, Umloti, Katapur, Akalkupi, Hire Khed, Warankhed, Hulihaider, Magnakal, Raichur district.	The proposed area is of cultivable and non cultivable type & has presence of streams and water bodies and roads runs on N-S directions in it the major portion of the area lies in the forest and has open scrub features. Further, it consists of rocks, cactus in the non-cultivable area The identified area is having several peaks and is covered in the following Geographical co-ordinates: Latitude: $15^0$34'36"-15^0'45'0" N Longitude: $76^0$15'16"-$76^0$29'49" E Ridge peaks: 603, 585, 565, 597, 572, 594, 526, 516, 584, 562, 483, 529, 500, 530, 561, 552, 575, 592, 580m Amsl.
9	56 D/8	29.40 MW	Nalatvad, Bijjur, Talikota, Anehosur,	The proposed area is of low lying type and a part of it has non cultivable and open scrub type. The area is divided into parts and are located on the N-W and S-E of Krishna river. Further, it has

			Gonwatal, Bhupur, Lipperpet, Nagarhal, Purnpet, Mudgal, Nandawadgi, Hirelakkihal, Bijapur Districts.	tributaries and streams connecting to Krishna river. The area would not be wind potential on prima facie. The identified area is having several peaks and is covered in the following Geographical co-ordinates: Latitude: 16°0'0"-16°15'0" N Longitude: 76°15'0"-76°30'0" E Ridge peaks: 565, 487, 529, 552, 527, 521, 567, 562, 577, 534, 597, 600, 585, 510, 552, 572, 542, 544, 519, 513, 537, 527, 508, 512m Amsl.
10	57 A/5	20.40 MW	Hire Mannapur, Bennihatti, Mudenur, Jumlapur, Garjanhal, Wirapur, Hire Bhergi, Tawargeri, Nandapur, Raichur District.	The proposed area is a mixture of complex and non complex. The non-complex is of open scrub type and consists of rocks and boulders. The area generally has tributarties and the state highways runs in the 4 directions from tawargeri. The identified area is having several peaks and is covered in the following Geographical co-ordinates: Latitude: 15°45'0"-15°53'16" N Longitude: 76°17'14"-76°29'43" E Ridge peaks: 622, 640, 603, 607, 589, 582, 591, 565, 562, 527, 501, 520, 525, 546m Amsl.
11	48 N/6 & 48 N/10	3.00 MW	Agasanahalli, Nandihalli Haveri district.	The proposed area consists of independent NW-SE oriented ridges located on South & Southwest of Byadgi village; each ridges are having peaks and are held in the following geographical co-ordinates: Latitude: 14°38'3"-14°40'0" N Longitude: 75°25'0"-75°30'15" E Ridge peaks: 684, 670, 664, 696, 666, 661 & 698 Amsl.
	Total	250.2 MW		

1. ಈ ಯೋಜನೆಯನ್ನು Financial closure ಸಾಧಿಸಿದ 24 ತಿಂಗಳುಗಳ ಒಳಗಾಗಿ ಪ್ರಾರಂಭ ಮಾಡತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಯೋಜನಾಭಿವೃದ್ಧಿದಾರರು ರೂ. 400ರ ಛಾಪಾ ಕಾಗದವಲ್ಲಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೋ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್‌ಗಳ ಸಂಖ್ಯೆ)
• 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
• 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
• 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
• 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ/ವಾಣಿಜ್ಯ & ಕೈಗಾರಿಕೆ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು.
7. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಅಥವಾ ಯೋಜನೆಯ ವ್ಯಾಪ್ತಿಯಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಪಿ.ಪಿ.ಎ. ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
8. ಕಾಲ ಕಾಲಕ್ಕೆ ಇರುವ ನೀತಿ ನಿಯಮಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.
9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗಿರುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1326

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ENERGY SECRTARIAT SECRETARIAT

Sub : Extension of time limit to implement the wind power projects in favour M/s ITC Limited-reg.

Read:
1) G.O. No. EN 84 NCE 2010,dated 06.03.2010.
2) G.O. No. EN 85 NCE 2010,dated 06.03.2010.
3) G.O. No. EN 86 NCE 2010,dated 06.03.2010.
4) G.O. No. EN 87 NCE 2010,dated 06.03.2010.
5) G.O. No. EN 88 NCE 2010,dated 06.03.2010.
6) G.O. No. EN 89 NCE 2010,dated 06.03.2010.
7) G.O. No. EN 90 NCE 2010,dated 06.03.2010.
8) G.O. No. EN 91 NCE 2010,dated 06.03.2010.
9) G.O. No. EN 92 NCE 2010,dated 06.03.2010.
10) Letter No. KRED/08/ITC/2010/1150, Dated 27/28.04.2010.

PREAMBLE:-

In the Government Orders read at Sl.No: (1) to (6) M/sITC Limited was accorded permission for 126 MW Wind power capacity for implementation subject to condition that the project shall be commissioned by 31st March 2010.

In the Government Ordes read at Sl.No: (7) to (9) M/s ITC Limited was accorded permissxion for 6.3 MW Wind power capacity for implementation subject to condition that the project shall be commissioned by 30th April 2010.

In the letter read at (10) above, the Managing Directyor,KREDL has reported that the developer has requested to extend the time limit up to 90 days from the date of expiry,for completion of all formalities that are required for commissioning the project. Accordingly, he has sent aproposal requesting to Revalidate the Government Orders read at 01 to 09 for a further period of 90 days from the date of expiry mentioned in the above Government Orders.

The proposal has been examined in detail and issued following Order:-

GOVERNMENT ORDER NO: EN 84 NCE 2010 (part), BANGALORE, DATED: 21.05.2010

Government accords approval for the extention of days (Ninety) time limit from the date of expiry to implement the wind power projects in favour of M/s ITC Limited as detailed below:-

Sl. No.	Company name	Capacity (MW)	Location	Government Order Number and date	Date of Expiry
1	M/s ITC Limited	2.1	Konchigere village, Siraguppa Taluk, BellaryDistrict (SND-01)	No.En 84 NCE 2010 Dated: 06.03.2010	31.03.2010
2	M/s ITC Limited	2.1	Konchigere village, Siraguppa Taluk, BellaryDistrict (SND-03)	No.En 85 NCE 2010 Dated: 06.03.200	31.03.2010
3	M/s ITC Limited	2.1	Konchigere village, Siraguppa Taluk, BellaryDistrict (SND-04)	No.En 86 NCE 2010 Dated: 06.03.2010	31.03.2010
4	M/s ITC Limited	2.1	Konchigere village, Siraguppa Taluk, BellaryDistrict (SND-05)	No.En 87 NCE 2010 Dated: 06.03.2010	31.03.2010
5	M/s ITC Limited	2.1	Konchigere village, Siraguppa Taluk, BellaryDistrict (SND-06)	No.En 88 NCE 2010 Dated: 06.03.2010	31.03.2010
6	M/s ITC Limited	2.1	Hagaluru village, Siraguppa Taluk, BellaryDistrict (SND-07)	No.En 89 NCE 2010 Dated: 06.03.2010	31.03.2010
7	M/s ITC Limited	2.1	Hagaluru village, Siraguppa Taluk, BellaryDistrict (SND-08)	No.En 90 NCE 2010 Dated: 06.03.2010	31.04.2010
8	M/s ITC Limited	2.1	Hagaluru village, Siraguppa Taluk, BellaryDistrict (SND-09)	No.En 91 NCE 2010 Dated: 06.03.2010	31.04.2010
9	M/s ITC Limited	2.1	Hagaluru village, Siraguppa Taluk, BellaryDistrict (SND-11)	No.En 92 NCE 2010 Dated: 06.03.2010	31.04.2010

The other terms and conditions of the original allotment orders shall be inforce.

P.R.NO.1327

By Order and in the name of the Governor of Karnataka

S.J. SAMPATH KUMAR
Under Secretary to Government
Energy Department.

COMMERCE & INDUSTRIES SECRETARIAT

Sub : Approval to the proposal M/s. Surya Vijayanagar Steel & Power Ltd., to change the name of the company as- M/s. Surya Vijayanagar Cement LTD., to implement the cement manufacturing unit.

Read: 1) Govt. Order No: CI 139 SPI 2010, dated : 29.04.2010
2)Representation of the company, dated: 04.05.2010.

PREAMBLE:-

M/s. Surya Vijayanagar Steel & Power Ltd., had proposed to establish" a "5 Million MTPA Cement Plant" based on slag produced in their Steel Plant at Bagalkot Disttrict, with an Investment of Rs. 2690 crores, generating employment to about 100 persons. It was also approved that if enough limestone is not available in Bagalkot District, Gulbarga District could also be considered for putting up a clinker

In the 21st State High level Clearance Committee (SHLCC) meeting held on 29.03.2010, the proposal of the Company was approved and G.O. read at (1) above has been issued.

M/s. Surya Vijayanagar Steel & Power Ltd., vide letter (2) above, have requested to change the name of the company as-M/s. Surya Vijaynagar Cement LTD., to implement the cement project.

Hence the following Order:-

GOVERNMENT ORDER NO: CI 139 SPI 2010, BANGALORE, DATED: 14.05.2010

Government is pleased to accord approval to change the name of the company from "M/s. Surya Vijayanagar Steel & Pow Ltd., to "M/S. Surya Vijayanagar Cement LTD., to establish a "5 Million MTPA Cement Plant" based on slag produced in their Steel Plant at Baagalkot/Gulbarga Districts, with an investment of Rs. 2690 crores, generating employment to about 1000 person and infrastructure facilities, incentives, concessions and other terms and conditions remainsthe same asin the G.O. read at (1) above.

P.R.NO.1328

By Order and in the name of the Governor of Karnataka
APARNA PAVATE
Desk Officer(Technical Cell)
Commerce & Industries Department.

COMMERCE & INDUSTRIES SECRETARIAT

Sub : Approval to the proposal M/s. Surya Vijayanagar Steel & Power Ltd., to change the name of the company as- M/s. Surya Global Steel Tubes LTD., to implement the steel pipe manufacturing unit.

Read: 1) Govt. Order No: CI 140 SPI 2010, dated : 27.04.2010
2)Representation of the company, dated: 04.05.2010.

PREAMBLE:-

M/s. Surya Vijayanagar Steel & Power Ltd., had proposed to establish" Steel ERW black & GI pipe-2 LTPA" manufacturing unit in Shimoga District, with an investment of Rs.150 srors, generating employment to about 1000 persons.

In the 21st State High level Clearance Committee (SHLCC) meeting held on 29.03.2010, the proposal of the Company was approved and G.O. read at (1) bove has been issued.

M/s. Surya Vijayanagar Steel & Power Ltd., vide letter (2) above, hve requested to change the name of the company as-M/s. Surya Global Steel Tubes LTD., to implement the Steel pipe manufacturing unit.

Hence the following Order:-

GOVERNMENT ORDER NO: CI 140 SPI 2010 BANGALORE, DATED: 17.05.2010

Government is pleased to accord approval to change the name of the company from "M/s. Surya Vijayanagar Steel & Power Ltd., to "M/S. **Surya Global Steel Tubes LTD.,** to establish a "steel ERW Black & GI pipe-2 LTPA" manufacturing unit in Shimoga District, with an investment of Rs.150 crores, generating employment to about 1000 persons and other infrastructure facilities, incentives, concessions and other terms and conditions remain the same as in the G.O. read at (1) above.

By order and in the name of the Governor of Karnataka

P.R.NO.1329

APARNA PAVATE
Desk Officer(Technical Cell)
Commerce & Industries Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ ಸಚಿವಾಲಯ

ವಿಷಯ : ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)ಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ, 2005ರನ್ವಯ ನೋಡಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಜನಸ್ಪಂದನ), ಇವರ ದಿನಾಂಕ: 10.02.2010ರ ಅ.ಸ. ಪತ್ರ ಸಂಖ್ಯೆ: ಸಿಆಸುಇ 57 ಆರ್‌ಟಿಐ 2009

ಪ್ರಸ್ತಾವನೆ:

1. ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 5ರ ಸಂಪೂರ್ಣ ಅನುಷ್ಠಾನಕ್ಕಾಗಿ ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಉಪಕಾರ್ಯದರ್ಶಿ, ಹಾಗೂ ಅದಕ್ಕೂ ಮೇಲ್ಪಟ್ಟ ಹುದ್ದೆಯನ್ನು ಹೊಂದಿದ ಅಧಿಕಾರಿಯನ್ನು ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಬೇಕೆಂದು, ಮೇಲೆ ಓದಲಾದ ದಿನಾಂಕ: 10.02.2010ರ ಅ.ಸ. ಪತ್ರದನ್ವಯ ಸೂಚಿಸಲಾಗಿದೆ. ಅದರಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ಸಂಬಂಧಿಸಿದಂತೆ, ನೋಡೆಲ್ ಅಧಿಕಾರಿಯನ್ನು ನಾಮ ನಿರ್ದೇಶಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಇಆಇ 2010, ಬೆಂಗಳೂರು, ದಿನಾಂಕ: 19ನೇ ಮೇ 2010

2. ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ-5ರ ಸಂಪೂರ್ಣ ಅನುಷ್ಠಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)ಗೆ ಸಂಬಂಧಿಸಿದಂತೆ ಮಾತ್ರ ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಇವರನ್ನು ನೋಡಲ್ ಅಧಿಕಾರಿಯನ್ನಾಗಿ ಈ ಮೂಲಕ ನಾಮ ನಿರ್ದೇಶಿಸಲಾಗಿದೆ.

ಪಿ.ಆರ್.ನಂ. 1330

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಎಸ್. ಪ್ರಸನ್ನ ಕುಮಾರ್
ಪೀಠಾಧಿಕಾರಿ-1. (ಇ-ಆಡಳಿತ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : ಕೇಂದ್ರೀಯ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಭೂಮಿಯನ್ನು ಒದಗಿಸುವ ಬಗ್ಗೆ- ಖಾಸಗಿ ಭೂಮಿಯ ಸ್ವಾಧೀನಕ್ಕೆ ಹೆಚ್ಚುವರಿ ಪರಿಹಾರ ಹಣ ಮಂಜೂರು ಮಾಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂ. ಆರ್‌ಡಿ 8 ಎಲ್‌ಜಿಜಿ 2008, ದಿನಾಂಕ 22-10-2008
2. ಸರ್ಕಾರದ ಆದೇಶ ಸಂ. ಇಡಿ 91 ಯುಜಿವಿ 2007, ದಿನಾಂಕ 29-01-2009
3. ಜಿಲ್ಲಾಧಿಕಾರಿಗಳು, ಗುಲ್ಬರ್ಗ ಜಿಲ್ಲೆ, ಗುಲ್ಬರ್ಗ ಇವರ ಪತ್ರ ಸಂ. ಕಂ: ಭೂಸ್ವಾ-403/08-09, ದಿನಾಂಕ 11-03-2010
4. ಕೇಂದ್ರೀಯ ವಿಶ್ವವಿದ್ಯಾಲಯ, ಗುಲ್ಬರ್ಗ ಇದರ ಕುಲಪತಿಯವರ ಪತ್ರ ಸಂ. Cuk/vcps/2008-10/1255/4, ದಿನಾಂಕ 25-03-2010

ಪ್ರಸ್ತಾವನೆ:

1. ಗುಲ್ಬರ್ಗ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ಕೇಂದ್ರೀಯ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ 500 ಎಕರೆ ಜಮೀನನ್ನು ಮಂಜೂರು ಮಾಡಬೇಕೆಂಬ ಈ ಇಲಾಖೆಯ ಕೋರಿಕೆಯ ಹಿನ್ನೆಲೆಯಲ್ಲಿ, ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗುಂಚಿ ಗ್ರಾಮದ ಸರ್ವೆ ನಂ. 196/1ರಲ್ಲಿ 184.03 ಎಕರೆ ಮತ್ತು ಸುಂಟನೂರು ಗ್ರಾಮದ ಸರ್ವೆ ನಂ 10ರಲ್ಲಿನ

101.36 ಎಕರೆ ಸರ್ಕಾರಿ ಜಮೀನು, ಹೀಗೆ ಒಟ್ಟು ವಿಸ್ತೀರ್ಣ 285.39 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಡಿ ಕಾಯ್ದಿರಿಸಿ ಉನ್ನತ ಶಿಕ್ಷಣ ಇಲಾಖೆಗೆ ವರ್ಗಾಯಿಸಲು ಮೇಲೆ (1) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕಂದಾಯ ಇಲಾಖೆಯು ಆದೇಶಿಸಿದೆ.

2. ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗುಂಚಿ ಹಾಗೂ ಸುಂಟನೂರು ಗ್ರಾಮಗಳಲ್ಲಿನ ಸರ್ವೆ ನಂ. 175, 177, 178/1 179ರಿಂದ 188ಗಳಲ್ಲಿ ಸರ್ಕಾರಿ ಭೂಮಿಗೆ ಹೊಂದಿಕೊಂಡಿರುವ 300 ಎಕರೆ ಕ್ಷೇತ್ರವನ್ನು ತ್ವರಿತವಾಗಿ ಒಪ್ಪಂದ ಐತೀರ್ಪು ಪ್ರಕಾರ ಸ್ವಾಧೀನಪಡಿಸಿಕೊಳ್ಳಲು ರೂ.450.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗ ಇವರಿಗೆ ಮೇಲೆ (2) ರಲ್ಲಿ ಓದಲಾದ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿದೆ.

3. ಈ ಕೇಂದ್ರೀಯ ವಿಶ್ವವಿದ್ಯಾನಿಲಯಕ್ಕೆ ಕನಿಷ್ಠ 500 ಎಕರೆ ಜಮೀನನ್ನು ನೀಡಲು ತೀರ್ಮಾನವಾಗಿರುವುದರಿಂದ, ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗುಂಚಿ ಮತ್ತು ಸುಂಟನೂರು ಗ್ರಾಮಗಳಲ್ಲಿ ಲಭ್ಯವಿರುವ 285.39 ಎಕರೆ ಸರ್ಕಾರಿ ಜಮೀನು ಮತ್ತು ಅದಕ್ಕೆ ಹೊಂದಿಕೊಂಡಿರುವ 308 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದು, ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಹೊರಡಿಸಿ ಭೂ ಮಾಲೀಕರಿಗೆ ಜಾರಿಗೊಳಿಸಲಾಗಿದೆ. ಈ ಮಧ್ಯೆ ಭೂ ಮಾಲೀಕರು ತಮ್ಮ ಜಮೀನುಗಳಿಗೆ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಲು ಕೋರಿದಾಗ, ದಿನಾಂಕ 18-5-2009 ರಂದು ಜಿಲ್ಲಾ ಭೂ ಬೆಲೆ ನಿರ್ಧರಣಾ ಸಮಿತಿಯು ಸಭೆಯನ್ನು ಜರುಗಿಸಿ ಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಲಾಗಿದೆ. ಭೂ ಸ್ವಾಧೀನಪಡಿಸಿಕೊಂಡು, ನಿಯಮಗಳಂತೆ ಭೂ ಪರಿಹಾರ ನಿಗದಿಪಡಿಸಿದ ನಂತರ ಭೂ ಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡುತ್ತಾರೆ. ನ್ಯಾಯಾಲಯಗಳು ಕ್ಯಾಪಿಟಲೈಜೇಷನ್ ಪದ್ಧತಿ ಅನುಸರಿಸಿ ಭೂಸ್ವಾಧಿನಾಧಿಕಾರಿಗಳು ನೀಡಿದ ಬೆಲೆಗಿಂತ ಎರಡರಿಂದ ಮೂರು ಪಟ್ಟು ಹೆಚ್ಚಿಸಿ ಜಮೀನಿನ ಬೆಲೆಯನ್ನು ನಿಗದಿಪಡಿಸುತ್ತಿದ್ದಾರೆ. ಈ ಕಾರಣದಿಂದ ಜಮೀನು ನೀಡುವ ಮತ್ತು ಪಡೆಯುವ ಇಲಾಖೆ/ಸಂಸ್ಥೆಯ ನಡುವೆ ಒಪ್ಪಂದ ಬೆಲೆಯನ್ನು ನಿಗದಿಪಡಿಸಲಾಗಿರುತ್ತದೆ. ಒಪ್ಪಂದದ ಬೆಲೆಯನ್ನು ನೀಡಿದಾಗ ಹೆಚ್ಚಿನ ಬೆಲೆಗಾಗಿ ನ್ಯಾಯಾಲಯಕ್ಕೆ ಹೋಗಲು ಅವಕಾಶವಿರುವುದಿಲ್ಲ. ಕಡಗುಂಜಿ ಗ್ರಾಮದಲ್ಲಿ ಒಂದು ಎಕರೆ ಕೃಷಿ ಭೂಮಿಯ ಸರಾಸರಿ ಮಾರುಕಟ್ಟೆ ಬೆಲೆ ರೂ.76,362/- ಆಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ: ಆರ್ ಡಿ 13 ಭೂಸ್ವಾಧ 2006, ದಿನಾಂಕ 24-2-2006ರ ಅನ್ವಯ ನೊಂದಣಿ ಸರಾಸರಿ ಬೆಲೆಯು ಎರಡು ಪಟ್ಟು ಬೆಲೆ ಅಂದರೆ, ರೂ.1,52,724/- ಗಳನ್ನು ನಿಗದಿಪಡಿಸಬಹುದಾಗಿರುತ್ತದೆ. ಆದರೆ, ಸದರಿ ಜಮೀನುಗಳೂ ಜಿಲ್ಲಾ ಕೇಂದ್ರವಾದ ಗುಲ್ಬರ್ಗಾದಿಂದ ಕೇವಲ 20 ಕಿ.ಮೀ. ಅಂತರದಲ್ಲಿದ್ದು, ಗುಲ್ಬರ್ಗಾ-ಆಳಂದ ರಾಜ್ಯ ಹೆದ್ದಾರಿ (ರಿಬ್ಬನಪಲ್ಲಿ-ವಾಗ್ದಂ) ಮುಖ್ಯರಸ್ತೆಗೆ ಹೊಂದಿಕೊಂಡಿದೆ ಎಂದೂ, ರೈತರು ಸ್ಟಾಂಪ್‌ಡ್ಯೂಟಿ ಹಣ ಉಳಿತಾಯ ಮಾಡುವ ದೃಷ್ಠಿಯಿಂದ ಹೆಚ್ಚಿನ ಬೆಲೆಗೆ ಜಮೀನಿನ ಖರೀದಿ ನಡೆದಿದ್ದರೂ, ಅದನ್ನೂ ಕಡಿಮೆ ಬೆಲೆಗೆ ನೊಂದಣಿ ಮಾಡುವುದರಿಂದ ನೊಂದಣಿ ಬೆಲೆಯು ವಾಸ್ತವವಾಗಿರುವುದಿಲ್ಲ. ಆದ್ದರಿಂದ ತಮ್ಮ ಜಮೀನುಗಳಿಗೆ ರೂ.3ರಿಂದ 4ಲಕ್ಷ ನೀಡಬಹುದು ಎಂದು ರೈತರು ಅಭಿಪ್ರಾಯಪಟ್ಟಿರುತ್ತಾರೆ. ರೈತರ ಈ ಬೇಡಿಕೆಯನ್ನು ಬೆಲೆ ನಿರ್ಧರಣಾ ಸಮಿತಿಯ ಅಧ್ಯಕ್ಷರು ಜಮೀನುಗಳ ಗುಣಧರ್ಮ, ಅದರಲ್ಲಿನ ಬೆಳೆ ಪದ್ಧತಿ, ಜಮೀನುಗಳಿಗಿರುವ ರಸ್ತೆಯ ಸೌಲಭ್ಯ, ಸದ್ಯ ಗ್ರಾಮದಲ್ಲಿ ಚಾಲ್ತಿಯಲ್ಲಿರುವ ಜಮೀನು ಮಾರಾಟದ ಬೆಲೆ ಇತ್ಯಾದಿಗಳನ್ನು ಪರಿಗಣಿಸಿ ಖುಷ್ಕಿ ಜಮೀನುಗಳಿಗೆ ಎಕರೆಯೊಂದಕ್ಕೆ ರೂ. 2.50 ಲಕ್ಷ ಮತ್ತು ನೀರಾವರಿ ಜಮೀನುಗಳಿಗೆ ರೂ.3.00 ಲಕ್ಷ ಒಪ್ಪಂದದ ಬೆಲೆಯನ್ನು ನೀಡಲಾಗುವುದೆಂದು ಘೋಷಿಸಿದಾಗ ಅದಕ್ಕೆ ಭೂಮಾಲೀಕರು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಹಾಗೆಯೇ ಹೆಚ್ಚುವರಿ 32.11 ಎಕರೆ ಜಮೀನನ್ನು ಭೂಸ್ವಾಧೀನ ಕ್ಷೇತ್ರಕ್ಕೆ ಒಳಪಡಿಸಬೇಕಾಗಿದೆ. ಇದಕ್ಕೆ ಎಕರೆ ಒಂದಕ್ಕೆ ರೂ. 2.50 ಲಕ್ಷದಂತೆ ಬೆಲೆ ನಿಗದಿಮಾಡಲಾಗಿದೆ ಎಂದು ಗುಲ್ಬರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನ 308 ಎಕರೆ ಖಾಸಗಿ ಜಮೀನುಗಳ ಭೂ ಪರಿಹಾರ ಹಣ ಪಾವತಿಗಾಗಿ ಒಟ್ಟು ರೂ.8,81,68,750/- ಗಳ ಅವಶ್ಯಕತೆಯಿದ್ದು ಇದರಲ್ಲಿ ಈಗಾಗಲೇ ದಿನಾಂಕ: 29-01-2009ರಂದು ರೂ.4.50 ಕೋಟಿಗಳು ಬಿಡುಗಡೆಯಾಗಿದೆ. ಈಗ ಪ್ರಸ್ತಾಪಿಸಿದಂತೆ, ಬಾಕಿ ರೂ.4,31,68,750/- ಗಳು ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳು, ಗುಲ್ಬರ್ಗಜಿಲ್ಲೆ, ಗುಲ್ಬರ್ಗಾ ಇವರು ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ತಿಳಿಸಿರುತ್ತಾರೆ.

4. ಗುಲ್ಬರ್ಗದಲ್ಲಿ ಪ್ರಾರಂಭವಾಗಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ನಿರ್ಮಾಣ ಪ್ರಾರಂಭವಾಗಿದೆ. ಕಟ್ಟಡದ ವಾಸ್ತುಶಿಲ್ಪಿಯನ್ನು ಮತ್ತು ಯೋಜನಾ ನಿರ್ವಹಣಾ ಸಲಹೆಗಾರರನ್ನು ಅಂತಿಮಗೊಳಿಸಲಾಗಿದ್ದು, ನಿರ್ಮಾಣದ ಅಂದಾಜು ವೆಚ್ಚಗಳ ತಯಾರಿಕೆಯು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಯವರು ತಿಳಿಸುತ್ತಾ, ಭೂಸ್ವಾಧೀನಕ್ಕೆ ಅಗತ್ಯ ಬಳಕೆ ಹಣವನ್ನು ಶೀಘ್ರವಾಗಿ ಬಿಡುಗಡೆಗೊಳಿಸಬೇಕೆಂದು ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

5. ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಯವರು, ಗುಲ್ಬರ್ಗ ಜಿಲ್ಲೆ ಗುಲ್ಬರ್ಗಾ ಇವರ ಪ್ರಸ್ತಾವನೆಯ ಮೇಲೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ ಇಡಿ 91 ಯುಜಿವಿ 2007, ಬೆಂಗಳೂರು ದಿನಾಂಕ: 14-05-2010

ಗುಲ್ಬರ್ಗಾದಲ್ಲಿ ಸ್ಥಾಪನೆಯಾಗಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಂಪಸ್‌ಅನ್ನು ರಚಿಸುವ ಸಲುವಾಗಿ ಸ್ವಾಧೀನವಾಗುತ್ತಿರುವ ಖಾಸಗಿ ಭೂಮಿಗೆ ಹೆಚ್ಚುವರಿ ಪರಿಹಾರ ಮೊತ್ತ ರೂ.431.68.00 ಲಕ್ಷಗಳನ್ನು ಜಿಲ್ಲಾಧಿಕಾರಿ, ಗುಲ್ಬರ್ಗ ಜಿಲ್ಲೆ, ಗುಲ್ಬರ್ಗ ಇವರಿಗೆ ಈ ಕೆಳಕಂಡ ರೀತಿಯಲ್ಲಿ ಮತ್ತು ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಅನುಮೋದಿಸಲಾಗಿದೆ.

(1) ಜಿಲ್ಲಾ ಭೂ ನಿರ್ಧರಣಾ ಸಮಿತಿ ಸಭೆಯಲ್ಲಿ ನಿಗದಿಪಡಿಸಿದ ಮಾರುಕಟ್ಟೆ ಬೆಲೆಗೆ ಖಾಸಗಿ ಜಮೀನನ್ನು ಖರೀದಿಸಲು (ಸ್ವಾಧೀನಕ್ಕೆ ಒಳಪಟ್ಟ ಖುಷ್ಕಿ ಜಮೀನು ಒಂದು ಎಕರೆಗೆ ರೂ.2.50 ಲಕ್ಷದಂತೆ ನೀರಾವರಿ ಜಮೀನಿಗೆ ಒಂದು ಎಕರೆಗೆ ರೂ.3.00 ಲಕ್ಷದಂತೆ;):

(2) ಸ್ವಾಧೀನಕ್ಕೆ ಒಳಪಟ್ಟಿರುವ ಹೆಚ್ಚುವರಿ ಕ್ಷೇತ್ರ 32.11 ಎಕರೆ ಜಮೀನಿನ ಖರೀದಿಗೆ (ಒಂದು ಎಕರೆಗೆ ರೂ.2.50 ಲಕ್ಷದಂತೆ):

(3) ಭೂ ಸ್ವಾಧೀನವನ್ನು ಮಾಡುವಾಗ ಭೂಮಿಗೆ ದರವನ್ನು ಕೆಲವು ಮಾನದಂಡಗಳನ್ನನುಸರಿಸಿ, ನಿಗದಿಪಡಿಸಬೇಕೆಂದು ಸೂಚಿಸಲಾಗಿದೆ.

(4) ಮೇಲ್ಕಂಡ ಮೊತ್ತವನ್ನು 2010-11ನೇ ಆರ್ಥಿಕ ಸಾಲಿನ ಪೂರಕ ಅಂದಾಜುಗಳು-1ರಲ್ಲಿ ಒದಗಿಸುವ ಮೊತ್ತದಿಂದ ಬಿಡುಗಡೆ ಮಾಡಲಾಗುವುದು.

2) ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂ. ಎಫ್ ಡಿ 340 Exp.8/2010, ದಿನಾಂಕ 05-04-2010ರ ಮೂಲಕ ನೀಡಿರುವ ಅನುಮೋದನೆಯನುಸಾರ ಹಾಗೂ ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ಷೆಡ್ಯೂಲ್ 1ರ ಐಟಂ 15ರ ಪಾವಿಜೋ ರೀತ್ಯ ಹೊರಡಿಸಲಾಗಿದೆ.

ಪಿ.ಆರ್.ನಂ. 1331

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಬಿ.ಉಳವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು).

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣಾ ಸ್ಥಾವರವನ್ನು ಸ್ಥಾಪಿಸಲು ಅನುದಾನ ಬಿಡುಗಡೆ- ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1) ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ನಿರ್ದೇಶಕರ ಪತ್ರ ಸಂಖ್ಯೆ: ಎಸ್ ಯು ಪಿ/ಪಿಸಿಬಿಎಲ್/70/06/07/10-11, ದಿನಾಂಕ: 08.02.2010.

2) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಿರಿಯ ಪರಿಸರ ಅಧಿಕಾರಿಯ ಪತ್ರ ಸಂಖ್ಯೆ: ಪಿಸಿಆರ್/4/ಬಿಎಂಡಬ್ಲ್ಯೂ-09-ಹೆಚ್ 2468 ದಿನಾಂಕ: 26.03.2010.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ, ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯು ಅಸ್ಥಿ ಚಿಕಿತ್ಸೆ ಆಧಾರಿತ (ರೆಫೆರಲ್) ಕೇಂದ್ರವಾಗಿರುತ್ತದೆ. ಸಂಸ್ಥೆಗೆ ಅಪಘಾತಕ್ಕೀಡಾದ ಮತ್ತು ದಿನನಿತ್ಯದ ಕೀಲು ಮತ್ತು ಮೂಳೆಗಳ ಚಿಕಿತ್ಸೆಗಾಗಿ ಬೆಂಗಳೂರಿನ ಸುತ್ತಮುತ್ತಲಿಂದ ಮತ್ತು ಸದರಿ ವಿಷಯದಲ್ಲಿ ಹೆಚ್ಚಿನ ಮಾಹಿತಿ ಅಥವಾ ಉಲ್ಲೇಖಕ್ಕಾಗಿ ರೋಗಿಗಳು ಬರುತ್ತಿರುವುದರಿಂದ, ಸದರಿ ಸಂಸ್ಥೆಯ ನಿರ್ದೇಶಕರು ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣಾ ಸ್ಥಾವರವನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗೆ ರೂ.37.00.000/-ಗಳ ಅಂದಾಜು ವೆಚ್ಚದ ಪಟ್ಟಿಯನ್ನು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿರುತ್ತಾರೆ. ಯೋಜನೆಯ ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣಾ ಸಲಹೆಗಾರರು, ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣಾ ಸ್ಥಾವರವನ್ನು ಸ್ಥಾಪಿಸುವ ಬಗ್ಗೆ ಸಿದ್ಧಪಡಿಸಿರುವ ವಿನ್ಯಾಸವನ್ನು ಉಲ್ಲೇಖ (2)ರನ್ವಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮೋದಿಸಿದೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂ: ಹೆಚ್ಎಫ್‌ಡಬ್ಲ್ಯೂ/ಕೆಹೆಚ್ಎಸ್‌ಡಿಆರ್‌ಪಿ/ಹೆಚ್‌ಸಿಡಬ್ಲ್ಯೂಎಮ್/ಎಸ್‌ಜಿ3/33/2009-10 ಬೆಂಗಳೂರು, ದಿನಾಂಕ: 20-05-2010.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೆಹೆಚ್ಎಸ್‌ಡಿಆರ್‌ಪಿ ಯೋಜನಾ ವತಿಯಿಂದ ಎಸ್‌ಐಸಿಎಫ್ ಅಡಿಯಲ್ಲಿ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ದ್ರವ್ಯ ತ್ಯಾಜ್ಯ ವಸ್ತುಗಳ ನಿರ್ವಹಣಾ

ಸ್ಥಾವರವನ್ನು ಸ್ಥಾಪಿಸಲು ಅಂದಾಜು ವೆಚ್ಚ ರೂ. 37,00,000/- (ಮುವತ್ತೇಳು ಲಕ್ಷ ರೂಪಾಯಿಗಳು ಮಾತ್ರ)ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1332

ಎಂ. ಶಶಿಧರ್
ಸರ್ಕಾರದ ಉಪ ಕಾರ್ಯದರ್ಶಿ
ಕೆಹೆಚ್ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಒಳಾಡಳಿತ ಸಚಿವಾಲಯ

ತಿದ್ದುಪಡಿ

ನಂ : ಒಇ 53 ಕಸ್ಸೆಸೇ 2009 ಬೆಂಗಳೂರು, ದಿನಾಂಕ:19/05/2010

ಸರ್ಕಾರಿ ಆದೇಶ ಸಂಖ್ಯೆ: ಒಇ 52 ಕಸ್ಸೆಸೇ 99, ದಿನಾಂಕ: 25-06-99ರ ಆದೇಶ ಭಾಗದಲ್ಲಿನ 3ನೇ ಕಂಡಿಕೆಯಲ್ಲಿ ಬಿ.ಎಸ್.ಎಫ್: ಆರ್.ಪಿ.ಎಫ್. ಪದದ ನಂತರ "ಸಿ. ಆರ್.ಪಿ.ಎಫ್" ಎಂಬ ಪದವನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1333

ಬಿ.ಎಂ. ಲಕ್ಷ್ಮೀ ನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
ಪೊಲೀಸ್ ಸಹಾಯಕ ಸೇವೆಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 29 ಹೆಚ್ಎಸ್‌ಡಿ 2010 ಬೆಂಗಳೂರು, ದಿನಾಂಕ: 22.05.2010

ವಿಷಯ : 2010-11ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವಾನಿರತ ದಂತ ಆರೋಗ್ಯಾಧಿಕಾರಿಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸುವ ಬಗ್ಗೆ.

ಉಲ್ಲೇಖ : 1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಎಲ್ಆರ್‌ಒ /98/2009-10 ದಿನಾಂಕ: 21/05/2010
2. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರುರವರ ಪತ್ರ ಸಂಖ್ಯೆ: ಪಿಜಿಇಟಿ-10/ಕೌನ್ಸಿಲಿಂಗ್/01-2010-11 ದಿನಾಂಕ: 21/05/2010

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ದಂತ ಆರೋಗ್ಯಾಧಿಕಾರಿಗಳು 2010-11 ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅರ್ಜಿ ಸಲ್ಲಿಸಿ, ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಉಲ್ಲೇಖ-2 ರಲ್ಲಿ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿರುವಂತೆ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಆಯ್ಕೆ ಪಟ್ಟಿಯೊಂದಿಗೆ ಉಲ್ಲೇಖ-1 ರಲ್ಲಿ ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೂಡಲೇ ಜಾರಿಗೆ ಬರುವಂತೆ ಈ ಅಧಿಸೂಚನೆಯ ಅನುಬಂಧದಲ್ಲಿರುವ 11 ದಂತ ಆರೋಗ್ಯಾಧಿಕಾರಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಿರುವ ವಿಷಯ ಮತ್ತು ಕಾಲೇಜುಗಳಿಗೆ ನಿಯೋಜಿಸಲಾಗಿದೆ.

2. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಸಂಬಂಧಿಸಿದ ಮೇಲಾಧಿಕಾರಿಗಳು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಹಾಗೂ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಂತೆ ನಮೂನೆ 19 ಮತ್ತು 19-ಎ ಹಾಗೂ ಪೆನಾಲ್ಟಿ ಬಾಂಡ್ ಪಡೆದು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

3. ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಸೇವಾನಿರತ ದಂತ ಆರೋಗ್ಯಾಧಿಕಾರಿಗಳು ಸ್ನಾತಕ್ಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ನಂತರ ವ್ಯಾಸಂಗದ ರಜೆ ಅಥವ ಪ್ರತಿನಿಯೋಜನಾ

ರಿಯಾಯಿತಿ ಸೌಲಭ್ಯ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರತ್ಯೇಕವಾಗಿ ಪರಿಶೀಲಿಸಿ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ ಕ್ರಮ ತೆಗದುಕೊಳ್ಳಲಾಗುವುದು. ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಮಂಜೂರಾತಿ ಇಲ್ಲದೇ ಈ ಅಭ್ಯರ್ಥಿಗಳು ವೇತನ/ರಜೆಯ ವೇತನ ಪಡೆಯಲು ಅವಕಾಶವಿರುವುದಿಲ್ಲ.

4. 2010-11ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾದ ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸೇವಾನಿರತ ವೈದ್ಯರು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸು ಪ್ರಾರಂಭವಾಗುವವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಮುಂದುವರಿಯುವುದು ಹಾಗೂ ತದನಂತರ ಕರ್ತವ್ಯದಿಂದ ಬಿಡುಗಡೆಗೊಳ್ಳತಕ್ಕದ್ದು. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಸಂಬಂಧಿಸಿದ ಮೇಲಾಧಿಕಾರಿಗಳು ಅದರಂತೆ ಕ್ರಮತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ.

5.ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 693 ವೆಚ್ಚ-5 : 2008 ದಿನಾಂಕ: 31-05-2008 ರಲ್ಲಿ 5 ವರ್ಷಕ್ಕಿಂತ ಕಡಿಮೆ ಸರ್ಕಾರಿ ಸೇವೆ ಸಲ್ಲಿಸಿರುವ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ನಡೆಸುತ್ತಿರುವ ವೈದ್ಯಾಧಿಕಾರಿಗಳಿಂದ ಪರಿಷ್ಕೃತ ಕರಾರು ಬಂಧ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

6.ಸ್ನಾತಕೋತ್ತರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ಮೇಲಿನ ಅಂತಿಮ ತೀರ್ಮಾನಕ್ಕೆ ಈ ಆದೇಶವು ಒಳಪಟ್ಟಿರುತ್ತದೆ.

ಈ ಅಧಿಸೂಚನೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಆಇ 02 ಎಸ್ಆರ್ಎ 2008 ದಿನಾಂಕ: 05-06-2008ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು-1)

ಅನುಬಂಧ

2010-11ನೇ ಸಾಲಿಗೆ ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸಬೇಕಾದ ದಂತ ಆರೋಗ್ಯಾಧಿಕಾರಿಗಳ ಪಟ್ಟಿ.

ಕ್ರಮ ಸಂಖ್ಯೆ	ಸೇವಾ ನಿರತ ದಂತ ಆರೋಗ್ಯಾಧಿಕಾರಿಯ ಹೆಸರು & ಕಾರ್ಯ ನಿರ್ವಹಿಸುತ್ತಿರುವ ಸ್ಥಳ	ಆಯ್ಕೆ ಮಾಡಿದ ಸ್ನಾತಕೋತ್ತರ ವಿಷಯ	ಆಯ್ಕೆ ಮಾಡಿದ ಕಾಲೇಜಿನ ಹೆಸರು
1	ಡಾ: ಶಾಂತಲ. ಕೆ. ಎಸ್ ಜಿಲ್ಲಾ ಆಸ್ಪತ್ರೆ, ಧಾರವಾಡ.	ಎಂಡಿಎಸ್(ಆರ್ಥೋಡಾಂಶಿಯಾ)	ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ
2	ಡಾ: ನವೀನ್.ಸಿ.ಆರ್ ಸಾರ್ವಜನಿಕ ಆಸ್ಪತ್ರೆ. ತುರುವೇಕೆರೆ, ತುಮಕೂರು ಜಿಲ್ಲೆ.	ಎಂಡಿಎಸ್(ಆರ್ಥೋಡಾಂಶಿಯಾ)	ಆರ್.ವಿ.ಡೆಂಟಲ್ ಕಾಲೇಜು, ಬೆಂಗಳೂರು
3	ಡಾ: ನಾಗೇಂದ್ರ ಗುಪ್ತ ಸಾರ್ವಜನಿಕ ಆಸ್ಪತ್ರೆ, ಚಿಕ್ಕಬಳ್ಳಾಪುರ	ಎಂಡಿಎಸ್(ಕನ್ಸರ್‌ವೇಟಿವ್ ಡೆಂಟಿಸ್ಟ್ರಿ)	ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ. ಬೆಂಗಳೂರು
4	ಡಾ: ಜಯದೀಪ್.ಎನ್.ಎ ಸಮುದಾಯ ಆರೋಗ್ಯ ಕೇಂದ್ರ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.	ಎಂಡಿಎಸ್ (ಓರಲ್ ಸರ್ಜರಿ)	ಎ.ಜೆ.ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್, ಮಂಗಳೂರು
5	ಡಾ: ಸೈಯದ್ ಜಿಯಾವುದ್ದೀನ್ ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ	ಎಂಡಿಎಸ್(ಕನ್ಸರ್‌ವೇಟಿವ್ ಡೆಂಟಿಸ್ಟ್ರಿ)	ಎ.ಇ.ಸಿ.ಎಸ್ ಮಾರುತಿ ಡೆಂಟಲ್ ಕಾಲೇಜು, ಬೆಂಗಳೂರು

6	ಡಾ: ಸುಧೀರ್ ರಾಯ್ಕರ್ ಸಾರ್ವಜನಿಕ ಆಸ್ಪತ್ರೆ, ಯಲಬುರ್ಗಾ	ಎಂಡಿಎಸ್(ಆರ್ಥೋಡಾಂಶಿಯಾ)	ಎಂ.ಎಸ್. ರಾಮಯ್ಯ ಡೆಂಟಲ್ ಕಾಲೇಜು, ಬೆಂಗಳೂರು
7	ಡಾ: ವೇಣುಗೋಪಾಲ್.ಜಿ.ಎಸ್ ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ	ಎಂಡಿಎಸ್(ಆರ್ಥೋಡಾಂಶಿಯಾ)	ಕೆ.ಎಲ್.ಇ ಡೆಂಟಲ್ ಕಾಲೇಜು, ಬೆಂಗಳೂರು
8	ಡಾ: ಶಶಿಕಿರಣ್.ಜೆ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ	ಎಂಡಿಎಸ್(ಕನ್ಸರ್‌ವೇಟಿವ್ ಡೆಂಟಿಸ್ಟ್ರಿ)	ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.
9	ಡಾ: ಮಂಜುನಾಥ್ ಮೆಸ್ತಾ ತಾಲ್ಲೂಕು ಆಸ್ಪತ್ರೆ, ಕುಂದಾಪುರ	ಎಂಡಿಎಸ್(ಕನ್ಸರ್‌ವೇಟಿವ್ ಡೆಂಟಿಸ್ಟ್ರಿ)	ಬಾಪೂಜಿ ಡೆಂಟಲ್ ಕಾಲೇಜ್, ದಾವಣಗೆರೆ
10	ಡಾ: ಮಹೇಶ್. ಟಿ. ಭಜಂತ್ರಿ ಸಮುದಾಯ ಆರೋಗ್ಯ ಕೇಂದ್ರ, ಹಾನಗಲ್, ಹಾವೇರಿ ಜಿಲ್ಲೆ.	ಎಂಡಿಎಸ್ (ಪಿಡೋಡಾಂಶಿಯಾ)	ಕಾಲೇಜ್ ಆಫ್ ಡೆಂಟಲ್ ಸೈನ್ಸ್, ದಾವಣಗೆರೆ.
11	ಡಾ: ರಾಜು.ಬಿ. ರಾಂಪುರ್ ಸಾರ್ವಜನಿಕ ಆಸ್ಪತ್ರೆ, ಸೇಡಂ, ಯಾದಗಿರಿ ಜಿಲ್ಲೆ.	ಎಂಡಿಎಸ್(ಓರಲ್ ಮೆಡಿಸನ್)	ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು-1)

ಪಿ. ಆರ್. 1338

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 265 ಹೆಚ್‌ಎಸ್‌ಹೆಚ್ 2010 ಬೆಂಗಳೂರು, ದಿನಾಂಕ: 22.05.2010

ವಿಷಯ : 2010-11 ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳನ್ನು ಸೇವಾನಿರತ ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸುವ ಬಗ್ಗೆ.

ಉಲ್ಲೇಖ : 1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಜೆಆರ್‌ಒ(ಎಂ)48/2009-10 ದಿನಾಂಕ: 21/05/2010
2. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರುರವರ ಪತ್ರ ಸಂಖ್ಯೆ:ಪಿಜಿಇಟಿ-10/ಕೌನ್ಸಿಲಿಂಗ್/01-2010-11 ದಿನಾಂಕ: 21/05/2010

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು 2010-11ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಅರ್ಜಿ ಸಲ್ಲಿಸಿ, ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ಇವರು ಉಲ್ಲೇಖ-2 ರಲ್ಲಿ ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿರುವಂತೆ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಆಯ್ಕೆ ಪಟ್ಟಿಯೊಂದಿಗೆ ಉಲ್ಲೇಖ-1 ರಲ್ಲಿ ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೂಡಲೇ ಜಾರಿಗೆ ಬರುವಂತೆ ಈ ಅಧಿಸೂಚನೆಯ ಅನುಬಂಧದಲ್ಲಿರುವ 67 ವೈದ್ಯಾಧಿಕಾರಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಿರುವ ವಿಷಯ ಮತ್ತು ಕಾಲೇಜುಗಳಿಗೆ ನಿಯೋಜಿಸಲಾಗಿದೆ.

2. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಸಂಬಂಧಿಸಿದ ಮೇಲಾಧಿಕಾರಿಗಳು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಹಾಗೂ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಂತೆ ನಮೂನೆ 19 ಮತ್ತು 19-ಎ ಹಾಗೂ ಪೆನಾಲ್ಟಿ ಬಾಂಡ್ ಪಡೆದು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

3. ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಸೇವಾನಿರತ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ನಂತರ ವ್ಯಾಸಂಗದ ರಜೆ ಅಥವಾ ಪ್ರತಿನಿಯೋಜನಾ ರಿಯಾಯತಿ ಸೌಲಭ್ಯ ಮಂಜೂರಾತಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರತ್ಯೇಕವಾಗಿ ಪರಿಶೀಲಿಸಿ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ದಿನಾಂಕದಿಂದ ಜಾರಿಗೆ ಬರುವಂತೆ ಸರ್ಕಾರದ ಮಂಜೂರಾತಿ ಇಲ್ಲದೇ ಈ ಅಭ್ಯರ್ಥಿಗಳು ವೇತನ/ರಜೆಯ ವೇತನ ಪಡೆಯಲು ಅವಕಾಶವಿರುವುದಿಲ್ಲ.

4. 2010-11 ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾದ ಈ ಅಧಿಸೂಚನೆಯ ಅನುಬಂಧದಲ್ಲಿ ತಿಳಿಸಿರುವ ಸೇವಾನಿರತ ವೈದ್ಯರು ಸಂಬಂಧಪಟ್ಟ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸು ಪ್ರಾರಂಭವಾಗುವವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿ ಮುಂದುವರಿಯುವುದು ಹಾಗೂ ತದನಂತರ ಕರ್ತವ್ಯದಿಂದ ಬಿಡುಗಡೆಗೊಳ್ಳತಕ್ಕದ್ದು. ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಸಂಬಂಧಿಸಿದ ಮೇಲಾಧಿಕಾರಿಗಳು ಅದರಂತೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ.

5. ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 693 ವೆಚ್ಚ-5 : 2008 ದಿನಾಂಕ: 31-05-2008 ರಲ್ಲಿ 5 ವರ್ಷಕ್ಕಿಂತ ಕಡಿಮೆ ಹಾಗೂ 3 ವರ್ಷ ಮೇಲ್ಪಟ್ಟು ಸರ್ಕಾರಿ ಸೇವೆ ಸಲ್ಲಿಸಿರುವ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ನಡೆಸುತ್ತಿರುವ ವೈದ್ಯಾಧಿಕಾರಿಗಳಿಂದ ಪರಿಷ್ಕೃತ ಕರಾರು ಬಂಧ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

6. ಸ್ನಾತಕೋತ್ತರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿಯ ಮೇಲಿನ ಅಂತಿಮ ತೀರ್ಮಾನಕ್ಕೆ ಈ ಆದೇಶವು ಒಳಪಟ್ಟಿರುತ್ತದೆ.

ಈ ಅಧಿಸೂಚನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ 02 ಎಸ್‌ಆರ್‌ಎ 2008 ದಿನಾಂಕ: 05-06-2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು-1)

<u>ಅನುಬಂಧ</u>

2010-11 ನೇ ಸಾಲಿಗೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಆಯ್ಕೆ ಹೊಂದಿರುವ ಸೇವಾ ನಿರತ ವೈದ್ಯರುಗಳ ವಿವರ

ಕ್ರ ಸಂ.	ವೈದ್ಯರ ಹೆಸರು ಮತ್ತು ಕಾರ್ಯನಿರತ ಸ್ಥಳ	ಆಯ್ಕೆ ಮಾಡಿಕೊಂಡಿರುವ ವಿಷಯ	ಆಯ್ಕೆ ಮಾಡಿಕೊಂಡಿರುವ ವೈದ್ಯಕೀಯ ವಿದ್ಯಾಲಯ
1	ಡಾ: ರೇಖಾ ಸಿ. ಚಾಮರಾಜೇಂದ್ರ ಆಸ್ಪತ್ರೆ, ಹಾಸನ	ಎಂಡಿ ಆರ್‌ಡಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
2	ಡಾ: ನರಸಿಂಹಮೂರ್ತಿ ಎನ್. ಪ್ರಾ.ಆ.ಕೇಂದ್ರ, ಗೊಟ್ಟಿಗೆರೆ, ಬೆಂ.ದ. ತಾ: ಬೆಂಗಳೂರು ನಗರ ಜಿಲ್ಲೆ	ಎಂ.ಎಸ್.ಆರ್ಥೋ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
3	ಡಾ: ವಿಶ್ವನಾಥಗೌಡ ಎಂ.ಜಿ. ಸಾ.ಆ.ಇಂದಿರಾನಗರ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು	ಎಂಡಿ. ಪಿಡಿಯಾ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
4	ಡಾ: ರಾಜೇಶ್ವರಿ ಬಿ.ಕೆ. ಜಿಲ್ಲಾ ಆಸ್ಪತ್ರೆ, ಮಡಿಕೇರಿ	ಎಂ.ಎಸ್. ಒಬಿಜಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
5	ಡಾ: ಚೇತನ್ ಎಂ. ಪ್ರಾ.ಆ.ಕೇಂದ್ರ ದೊಡ್ಡ ಅಗ್ರಹಾರ ಶಿರಾ, ತಾ: ತುಮಕೂರು ಜಿಲ್ಲೆ	ಎಂಡಿ. ಸ್ಕಿನ್ & ವಿಡಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
6	ಡಾ: ಚಂದ್ರಕಾಂತ ಎಸ್. ಜವಳಿ, ಪ್ರಾ.ಆ.ಕೇಂದ್ರ, ಅಮೀನಗಡ, ಹುನಗುಂದ ತಾಲ್ಲೂಕು ಬಾಗಲಕೋಟೆ ಜಿಲ್ಲೆ	ಎಂ.ಡಿ. ಜಿಎಂ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
7	ಡಾ: ವಿಶ್ವನಾಥ ಎಸ್.ಎಂ. ಸಾಲಿಮಠ ಪ್ರಾ.ಆ.ಕೇಂದ್ರ, ಮುಳಗುಂದ, ಗದಗ ತಾ: ಜಿಲ್ಲೆ	ಎಂ.ಡಿ. ಜಿಎಂ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

8	ಡಾ: ಭಾಗ್ಯಲಕ್ಷ್ಮೀ. ಕೆ (ಡಿಓಎಂಎಸ್ 30/04/2005) ನೇತ್ರ ತಜ್ಞರು, ಜಿಲ್ಲಾ ಸರ್ಕಾರಿ ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ	ಎಂ.ಎಸ್. ನೇತ್ರ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
9	ಡಾ: ನರಸಿಂಹಮೂರ್ತಿ ಡಿ.ಆರ್. ಡಿಟಿಓ, ಚಿಕ್ಕಬಳ್ಳಾಪುರ	ಎಂಎಸ್ ಜಿಎಸ್	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
10	ಡಾ: ಅನಿಲ ಎಸ್. ಕಾನಡೆ, ಪ್ರಾ.ಆ.ಕೇಂದ್ರ, ಮದಭಾವಿ, ಬೆಳಗಾಂ	ಡಿಎಂಆರ್‌ಡಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
11	ಡಾ: ಶ್ರೀನಿವಾಸ ಬಿ.ಜಿ. ಸಾ.ಆ. ಹೊಸಕೋಟೆ, ಬೆಂಗಳೂರು ಗ್ರಾ.	ಎಂ.ಎಸ್ ಜಿ.ಎಸ್	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
12	ಡಾ: ಮಂಜನಾಯ್ಕ, ಪ್ರಾ.ಆ.ಕೇಂದ್ರ, ಕೊಂಡಜ್ಜಿ, ಹರಿಹರ ತಾ: ದಾವಣಗೆರೆ ಜಿಲ್ಲೆ	ಎಂಎಸ್ ಜಿಎಸ್	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
13	ಶೋಭಾ ಎಂ.ಜೆ. ಪ್ರಾ.ಆ.ಕೇಂದ್ರ, ಕೆ. ಹೊನ್ನಲಗೆರೆ, ಮದ್ದೂರು ತಾ: ಮಂಡ್ಯ ಜಿಲ್ಲೆ	ಡಿಜಿಓ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
14	ಡಾ: ಗಿರೀಶ್ ಆರ್. (ಡಿವಿಡಿ– 30/10/2000) ಜಿಲ್ಲಾ ಆಸ್ಪತ್ರೆ, ಚಾಮರಾಜನಗರ	ಎಂಡಿ. ಪೆಥಾ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
15	ಡಾ: ಶಿವರಾಮಕೃಷ್ಣ ಎಂ.ಡಿ. ಪ್ರಾ.ಆ.ಕೇಂದ್ರ, ಕೀಳನಪುರ, ಮೈಸೂರು ತಾ: ಜಿಲ್ಲೆ	ಎಂ.ಡಿ. ಫಾರ್ಮ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
16	ಡಾ: ಮಂಜುಳಾ ದೇವಿ ಎಂ. ಪ್ರಾ.ಆ.ಕೇಂದ್ರ, ಶಿವಗಂಗೆ, ನೆಲಮಂಗಲ ತಾ: ಬೆಂ. ಗ್ರಾ ಜಿಲ್ಲೆ	ಎಂ.ಎಸ್.ಇಎನ್‌ಟಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
17	ಡಾ: ಸುಮಿತ್ರ. ಕೆ. ಜಿಲ್ಲಾ ಆಸ್ಪತ್ರೆ, ರಾಮನಗರ	ಡಿಎ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
18	ಡಾ: ರಾಜು ಜಿ. ಪ್ರಾ.ಆ.ಕೇಂದ್ರ. ಹಾಲೇನಹಳ್ಳಿ, ದೊಡಬಳ್ಳಾಪುರ ತಾಲ್ಲೂಕು, ಬೆಂ.ಗ್ರಾ.	ಎಂಡಿ ಅನೆಸ್ಥಿ	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
19	ಡಾ: ವಿದ್ಯಾ ಶಂಕರಪ್ಪ ಯಡದಳ್ಳಿ, ಸಾ.ಆ. ಬೈಲಹೊಂಗಲ, ಬೆಳಗಾಂ ಜಿಲ್ಲೆ	ಎಂಎಸ್ ಓಬಿಜಿ	ಕಿಮ್ಸ್, ಹುಬ್ಬಳ್ಳಿ
20	ಡಾ: ಮಕಾನದಾರ ಆರ.ಎ. ಪ್ರಾ.ಆ.ಕೇಂದ್ರ, ಕರಗಾಂವ, ಚಿಕ್ಕೋಡಿ, ಬೆಳಗಾಂ	ಎಂಡಿಜಿಎಂ	ಕಿಮ್ಸ್, ಹುಬ್ಬಳ್ಳಿ
21	ಡಾ: ರೇಖಾ ಎಸ್. ಬಿಬಿಎಂಪಿ	ಎಂ.ಡಿ. ಕಮ್ಯೂನಿಟಿ ಮೆಡಿಸಿನ್	ಕಿಮ್ಸ್, ಬೆಂಗಳೂರು
22	ಡಾ: ಗಿರೀಶ್ ಆರ್. ಪ್ರಾ.ಆ.ಕೇಂದ್ರ, ಸೋಲೂರು, ಮಾಗಡಿ ತಾ; ರಾಮನಗರ ಜಿಲ್ಲೆ	ಎಂ.ಎಸ್.ಜಿ.ಎಸ್	ಕಿಮ್ಸ್, ಹುಬ್ಬಳ್ಳಿ
23	ಡಾ: ಚಿಲ್ಲೂರ ಮಠ ಆರ್. ಆರ್. (ಡಿಓಎಂಎಸ್ 28/3/2003) ಜಿಲ್ಲಾ ಆಸ್ಪತ್ರೆ ಬಾಗಲಕೋಟೆ	ಡಿಜಿಓ	ಕಿಮ್ಸ್, ಹುಬ್ಬಳ್ಳಿ
24	ಡಾ: ಕಲಾವತಿ ಎಸ್.ಡಿ. ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಮೈಸೂರು	ಡಿಜಿಓ	ಕಿಮ್ಸ್, ಹುಬ್ಬಳ್ಳಿ
25	ಡಾ: ಮುಡಕಲಕಟ್ಟಿ ಎನ್.ಎಂ. (ಡಿಪ್ಲೋಮೋ ಇಎನ್‌ಟಿ 03/08/94) ಜಿಲ್ಲಾ ಆಸ್ಪತ್ರೆ, ಗದಗ.	ಎಂ.ಡಿ.ಜಿ.ಎಂ	ಕಿಮ್ಸ್, ಹುಬ್ಬಳ್ಳಿ
26	ಡಾ:ಬಾಬು ಮಹೇಂದ್ರ ಪ್ರಸಾದ್.ಎನ್ ಸಾ.ಆ.ಕೆ.ಆರ್.ಪುರಂ. ಬೆಂ.ನಗರ ಜಿಲ್ಲೆ	ಎಂಡಿ ಪೆಥಾ	ಕಿಮ್ಸ್, ಬೆಂಗಳೂರು

27	ಡಾ: ಶಿವರಪ್ಪ ಎಂ. ಜಿಲ್ಲಾ ಕ್ಷ.ನಿ.ಕೇಂದ್ರ, ಉ.ಕ. ಕಾರವಾರ	ಎಂಎಸ್‌ಜಿಎಸ್	ಕಿಮ್ಸ್, ಬೆಂಗಳೂರು
28	ಡಾ: ಸ್ವಾಮಿ.ಎಂ.ಎಸ್ ಸಾ.ಆ.ಕೆ.ತಿಪಟೂರು ತಾ: ತುಮಕೂರು ಜಿಲ್ಲೆ	ಎಂಡಿ ಆರ್‌ಡಿ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
29	ವಸಂತಲಕ್ಷ್ಮೀ ಎ.ವಿ. ಸಾ.ಆ. ಪಾಂಡವಪುರ, ಮಂಡ್ಯ ಜಿಲ್ಲೆ	ಎಂಎಸ್ ಓಬಿಜಿ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
30	ಡಾ: ಕಿರಣ್ ಎಸ್.ಹೆಚ್. ಜಿಲ್ಲಾ ಆಸ್ಪತ್ರೆ, ದಾವಣಗೆರೆ	ಎಂ.ಎಸ್.ಆಪ್ತಾಲ್	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
31	ಡಾ: ಪುರುಷೋತ್ತಮ ಪ್ರಾ.ಆ.ಕೇಂದ್ರ, ನೇರಳೇಕೆರೆ, ತುಮಕೂರು ಜಿಲ್ಲೆ.	ಎಂ.ಡಿ ಜಿ.ಎಂ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
32	ಡಾ: ರೇವಣ್ಣ. ಎಂ ಪ್ರಾ.ಆ.ಕೇಂದ್ರ, ಅಡಗೂರು, ಕೆ.ಆರ್.ನಗರ ತಾ: ಮೈಸೂರು ಜಿಲ್ಲೆ	ಎಂಎಸ್‌ಜಿಎಸ್	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
33	ಡಾ: ಮಂಜುನಾಥ ಎಂ.ಡಿ. ಸ.ಆ.ಕೇಂದ್ರ, ಬನ್ನೂರು, ಟಿ.ನರಸೀಪುರ ತಾ: ಮೈಸೂರು ಜಿಲ್ಲೆ.	ಡಿಎಂಆರ್‌ಡಿ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
34	ಡಾ: ರಾಜಲಕ್ಷ್ಮೀ.ವಿ. (ಅರವಳಿಕೆ 15/09/2004) ಜಿಲ್ಲಾ ಆಸ್ಪತ್ರೆ, ಬೆಳಗಾಂ	ಎಂ.ಡಿ ಅನೇಸ್ಥಿ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
35	ಡಾ: ಹೊಸಮನಿ ಶಾಂತ ಶಿವಪ್ಪ. ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ	ಎಂಡಿ ಪೆಥಾ	ಜೆ.ಜೆ. ಮೆಡಿಕಲ್ ಕಾಲೇಜ್, ದಾವಣಗೆರೆ
36	ಡಾ: ಮೋಹನ್ ಕುಮಾರ್. ಎ ಪ್ರಾ.ಆ.ಕೇಂದ್ರ, ಬನ್ನಿತಾಳಪುರ, ಗುಂಡ್ಲುಪೇಟೆ ತಾ: ಚಾಮರಾಜನಗರ.	ಎಂ.ಡಿ.ಜಿ.ಎಂ	ಎಂ.ಎಂಸಿ. ಮೈಸೂರು
37	ಡಾ: ಶಿವಕಿರಣ್ ಸಿ.ಎಸ್. ಪ್ರಾ.ಆ.ಕೇಂದ್ರ, ಹೊನ್ನೂರು, ದಾವಣಗೆರೆ	ಎಂ.ಡಿ.ಪಿಡಿಯಾ	ಎಂ.ಎಂಸಿ. ಮೈಸೂರು
38	ಡಾ: ಜೈಪ್ರಕಾಶ್ ಹೆಚ್.ಆರ್. ಪ್ರಾ.ಆ.ಕೇಂದ್ರ, ಬರಗ, ಚಾ.ರಾ.ನಗರ ಜಿಲ್ಲೆ	ಎಂ.ಎಸ್ ಜಿ.ಎಸ್	ಎಂ.ಎಂಸಿ. ಮೈಸೂರು
39	ಡಾ: ನವೀನ್ ಚಂದ್ರ. ಎಸ್ ಪ್ರಾ.ಆ.ಕೇಂದ್ರ, ಬೆಳ್ಳಾಳೆ ಪಾಂಡವಪುರ ತಾ: ಮಂಡ್ಯ	ಎಂ.ಎಸ್ ಓಬಿಜಿ	ಎಂ.ಎಂಸಿ. ಮೈಸೂರು
40	ಡಾ: ಪೂರ್ಣಿಮಾ.ಎ.ಎಸ್ ಪ್ರಾ.ಆ.ಕೇಂದ್ರ ವಿಶ್ವೇಶ್ವರನಗರ, ಮೈಸೂರು	ಡಿಜಿಓ	ಎಂ.ಎಂಸಿ. ಮೈಸೂರು
41	ಡಾ: ಹರಿಲಾಲ್‌ನಾಯಕ್ ಎಂ.ಎಲ್. ಸ.ಆ.ಕೇಂದ್ರ, ಹಿರೀಸಾವೆ, ಚನ್ನರಾಯಪಟ್ಟಣ ತಾ: ಹಾಸನ ಜಿಲ್ಲೆ	ಎಂಡಿ ಅನೇಸ್ಥಿ	ಎಂ.ಎಂಸಿ. ಮೈಸೂರು
42	ಡಾ: ಆನಂದಕುಮಾರ್ ವಿ. ಪ್ರಾ.ಆ.ಕೇಂದ್ರ, ಬೀರುಂಡಿ, ಮೈಸೂರು ತಾ:	ಎಂ.ಎಸ್.ಜಿ.ಎಸ್	ಎಂ.ಎಂಸಿ. ಮೈಸೂರು
43	ಡಾ: ಜಯಮಾಲ.ವಿ ಗಿರಿಯಾ ಬೋವಿಪಾಳ್ಯ, ಆರೋಗ್ಯ ಕೇಂದ್ರ, ಮೈಸೂರು	ಡಿಸಿಹೆಚ್	ಎಂ.ಎಂಸಿ. ಮೈಸೂರು
44	ಡಾ: ಯಶರಾಜ್ ಜೆ. ಪ್ರಾ.ಆ.ಕೇಂದ್ರ, ಹುಣಸನಹಳ್ಳಿ ರಾಮನಗರ ಜಿಲ್ಲೆ	ಎಂ.ಡಿ.ಪೆಥಾ	ಎಂ.ಎಂಸಿ. ಮೈಸೂರು

45	ಡಾ: ಬಿರಾದಾರ ಪಾಟೀಲ ಜಿ.ಎ. ಪ್ರಾ.ಆ.ಕೇಂದ್ರ ಕಸಬಾಜಂಬಗಿ, ಮುಧೋಳ ತಾ: ಬಾಗಲಕೋಟೆ ಜಿಲ್ಲೆ	ಎಂ.ಎಸ್.ಆರ್ಥೋ	ವಿಮ್ಸ್, ಬಳ್ಳಾರಿ
46	ಡಾ: ಸುಧಾರಾಣಿ ಸಿ.ಎನ್. (ಡಿಜಿಓ, 23/04/97)	ಎಂ.ಎಸ್. ಓಬಿಜಿ	ವಿಮ್ಸ್, ಬಳ್ಳಾರಿ
47	ಡಾ: ಕಿರಣ ವಿ. ಕುಲಕರ್ಣಿ, ಸಾ.ಆ. ಸಿರ್ಸಿ, ಉ.ಕ.	ಎಂ.ಡಿ.ಜಿ.ಎಂ.	ವಿಮ್ಸ್, ಬಳ್ಳಾರಿ
48	ಡಾ: ಪ್ರತೀಬಾ. ಎಂ.ಎಸ್ ಪ್ರಾ.ಆ.ಕೇಂದ್ರ, ಅಕ್ಕೂರು ಹೊಸಹಳ್ಳಿ, ಚನ್ನಪಟ್ಟಣ ತಾ: ರಾಮನಗರ ಜಿಲ್ಲೆ	ಎಂ.ಎಸ್.ಜಿ.ಎಸ್	ವಿಮ್ಸ್, ಬಳ್ಳಾರಿ
49	ಡಾ: ಮುರಳೀಧರ್.ವಿ ಪ್ರಾ.ಆ.ಕೇಂದ್ರ, ಕವಲೂರು, ಕೊಪ್ಪಳ ಜಿಲ್ಲೆ.	ಎಂ.ಡಿ ಜಿ.ಎಂ	ವಿಮ್ಸ್, ಬಳ್ಳಾರಿ
50	ಡಾ: ಭಾನುರೇಖಾ ಈ. ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ	ಎಂ.ಎಸ್.ಆಪ್ತಾಲ್	ವಿಮ್ಸ್, ಬಳ್ಳಾರಿ
51	ಡಾ: ಶುಭ ಕೆ.ಜೆ. ಸ.ಆ.ಕೇಂದ್ರ, ಬನ್ನೂರು, ಟಿ.ನರಸೀಪುರ ತಾ: ಮೈಸೂ	ಎಂ.ಡಿ ಜಿ.ಎಂ	ಎಂಎಸ್ ರಾಮಯ್ಯ, ಮೆಡಿಕಲ್ ಕಾಲೇಜು, ಬೆಂಗಳೂರು
52	ಡಾ: ಬಸ್ತಿ ಸುನೀತ ದೇವೇಂದ್ರ, (ಡಿಜಿಓ 23/11/99) ಪ್ರಾ.ಆ.ಕೇಂದ್ರ, ಬಾಣಾವರ, ಅರಸೀಕೆರೆ ತಾ: ಹಾಸನಜಿಲ್ಲೆ	ಎಂಎಸ್‌ಜಿಎಸ್	ಎಂಎಸ್ ರಾಮಯ್ಯ, ಮೆಡಿಕಲ್ ಕಾಲೇಜು, ಬೆಂಗಳೂರು
53	ಡಾ: ಸುಮ ಕೆ.ಎಸ್. ಪ್ರಾ.ಆ.ಕೇಂದ್ರ, ಎಂ.ಜಿ.ಪಾಳ್ಯ, ರಾಮನಗರ ಜಿಲ್ಲೆ	ಡಿಜಿಓ	ಎಂಎಸ್ ರಾಮಯ್ಯ, ಮೆಡಿಕಲ್ ಕಾಲೇಜು, ಬೆಂಗಳೂರು
54	ಡಾ: ರೇಖಾ ಎನ್. ಆರೋಗ್ಯ ಕೇಂದ್ರ, ಕೋರಮಂಗಲ, ಬಿಬಿಎಂಪಿ	ಎಂ.ಡಿ. ಪೆಥಾ	ಎಂಎಸ್ ರಾಮಯ್ಯ, ಮೆಡಿಕಲ್ ಕಾಲೇಜು, ಬೆಂಗಳೂರು
55	ಡಾ: ಹರಿಪ್ರಸಾದ್.ಸಿ. 2002 ಖಜ ಂಠಿಠಿಡಿಣಜಜ ಪ್ರಾ.ಆ.ಕೇಂದ್ರ. ಮಿರಲೆ, ಮೈಸೂರು ಜಿಲ್ಲೆ.	ಎಂ.ಎಸ್.ಆರ್ಥೋ	ಕಸ್ತೂರ್ ಬಾ ವೈದ್ಯಕೀಯ ಮಹಾವಿದ್ಯಾಲಯ, ಮಂಗಳೂರು
56	ಡಾ: ನಿವೇದಿತಾ ಆರ್. ಪ್ರಾ.ಆ.ಕೇಂದ್ರ. ಉದಯಪುರ. ಹಾಸನಜಿಲ್ಲೆ	ಎಂ.ಡಿ.ಪೀಡಿಯಾ	ಕೆ.ವಿ.ಜಿ. ಮೆಡಿಕಲ್ ಕಾಲೇಜ್, ಸೂಳ್ಯ
57	ಡಾ: ಸುರೇಶ ಗುಂಡಪಲ್ಲಿ, ಸ.ಆ.ಕೇಂದ್ರ, ಬ್ಯಾಡಗಿ, ಹಾವೇರಿ ಜಿಲ್ಲೆ	ಎಂ.ಡಿ ಪೀಡಿಯಾ	ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್, ಬೆಂಗಳೂರು
58	ಡಾ: ಶಶಿಕಲಾ. ಎಸ್. ಆರೋಗ್ಯ ಕೇಂದ್ರ, ಕೋಡಿಹಳ್ಳಿ, ಐಪಿಪಿ 8, ಬಿಬಿಎಂಪಿ ಬೆಂಗಳೂರು	ಡಿಸಿಹೆಚ್	ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್, ಬೆಂಗಳೂರು
59	ಡಾ: ಸುನೀತ ಎನ್. (ಡಿಪ್ಲೋಮೋ ಇನ್‌ಆಪ್ತೋ, 1/10/2000) ಸಾ.ಆ. ಯಲಹಂಕ, ಬೆಂ.ನಗರ ಜಿಲ್ಲೆ	ಎಂಡಿಆರ್‌ಟಿ	ಕಿದ್ವಾಯಿ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ, ಬೆಂಗಳೂರು
60	ಡಾ: ಬಸವಂತರಾವ ಗುಮ್ಮೆದ, (ಡಿಸಿಹೆಚ್ 23/11/2001) ಜಿಲ್ಲಾ ಆಸ್ಪತ್ರೆ ಬೀದರ್	ಎಂಡಿಜಿಎಂ	ಎಂ.ಆರ್. ಮೆಡಿಕಲ್ ಕಾಲೇಜ್, ಗುಲ್ಬರ್ಗ
61	ಡಾ: ರಂಗನಾಥ್ ಎಂ.ಪಿ. ಪ್ರಾ.ಆ.ಘಟಕ, ತಿಪ್ಪೂರು, ಗುಬ್ಬಿ ತಾ: ತುಮಕೂರು	ಎಂ.ಎಸ್.ಜಿ.ಎಸ್	ಎಂ.ಆರ್. ಮೆಡಿಕಲ್ ಕಾಲೇಜ್, ಗುಲ್ಬರ್ಗ
62	ಡಾ: ವಾಹಿದ್ ಖಾನ್, ಶಾಸಕರ ಭವನ ಆಸ್ಪತ್ರೆ, ಬೆಂಗಳೂರು	ಎಂ.ಡಿ. ಕಮ್ಯೂನಿಟಿ ಮೆಡಿಸನ್	ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಮಂಗಳೂರು

63	ಡಾ: ಉದಯಕುಮಾರ್ (ಅನಸ್ತೇಶಿಯಾ 31/03/2004) ಜಿಲ್ಲಾ ಆಸ್ಪತ್ರೆ, ಉಡುಪಿ	ಎಂ.ಎಸ್.ಜಿ.ಎಸ್	ಫಾದರ್‌ಮುಲ್ಲರ್ ವೈದ್ಯಕೀಯ ಮಹಾವಿದ್ಯಾಲಯ, ಮಂಗಳೂರು
64	ಡಾ: ವಿಜಯಕುಮಾರ್ ಆರ್. ಸುಧಾರಿತ ಕುಷ್ಠರೋಗ ನಿಯಂತ್ರಣ ಘಟಕ, ಆನೇಕಲ್, ಬೆಂ.ನಗರ	ಎಂಡಿಜಿಎಂ	ಫಾದರ್‌ಮುಲ್ಲರ್ ವೈದ್ಯಕೀಯ ಮಹಾವಿದ್ಯಾಲಯ, ಮಂಗಳೂರು
65	ಡಾ: ಸುನಿತ.ಎನ್. ಸ.ಆ.ಕೇಂದ್ರ, ಕಬ್ಬೂರು, ಚಿಕ್ಕೋಡಿ ತಾ: ಬೆಳಗಾಂ ಜಿಲ್ಲೆ	ಎಂ.ಎಸ್.ಜಿ.ಎಸ್	ಆದಿಚುಂಚನಗಿರಿ ಆಫ್ ಮೆಡಿಕಲ್ ಸೈನ್ಸಸ್, ಬೆಂಗಳೂರು
66	ಪ್ರಕಾಶ್ ಎಸ್, ನಾಯಕ್ ಆಗಿಅ 1998 ಸಾರ್ವಜನಿಕ ಆಸ್ಪತ್ರೆ, ಶಿರಗುಪ್ಪ ತಾ: ಬಳ್ಳಾರಿ ಜಿಲ್ಲೆ	ಎಂ.ಎಸ್.ಆಪ್ತಾಲ್	ಆದಿಚುಂಚನಗಿರಿ ಆಫ್ ಮೆಡಿಕಲ್ ಸೈನ್ಸಸ್, ಬೆಂಗಳೂರು
67	ಡಾ: ಹೇಮರಾಜು ಜಿ. ತಾ: ಆ. ಮಳವಳ್ಳಿ, ಮಂಡ್ಯ ಜಿಲ್ಲೆ	ಎಂ.ಡಿ.ಅನಸ್ಥೇ	ವೈದೇಹಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಂಗಳೂರು

ಪಿ.ಆರ್. 1339

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು–1)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ತನ್ವೀರ್ ಉಲ್ಲಾಖಾನ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ನಿಡಸಾರೆ, ಕುಣಿಗಲ್ ತಾಲ್ಲೂಕು, ತುಮಕೂರು ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ

ಓದಲಾಗಿದೆ : ಆಯುಕ್ತರು, ಆಕುಕ ಸೇವೆಗಳು, ಇವರ ಪತ್ರ ಸಂಖ್ಯೆ: ಜೆಆರ್‌ಓ (ಎಂ) /58/2009–10 ದಿನಾಂಕ: 26/03/2010

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಮೇಲೆ ಓದಲಾದ ಪತ್ರದಲ್ಲಿ, ಡಾ: ತನ್ವೀರ್ ಉಲ್ಲಾಖಾನ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ನಿಡಸಾರೆ, ಕುಣಿಗಲ್ ತಾಲ್ಲೂಕು, ತುಮಕೂರು ಇವರು ದಿನಾಂಕ: 18/02/2008 ರಂದು ಸೇವೆಗೆ ಸೇರಿದ್ದು, ಅಂದಿನಿಂದಲೇ ಸರ್ಕಾರದ ಅನುಮತಿ ಇಲ್ಲದೇ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿದ್ದು, ಸೇವೆಗೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಸದರಿ ವೈದ್ಯರು ಖಾಯಂಪೂರ್ವ ಸೇವಾವಧಿಯಲ್ಲಿ ಅನಧಿಕೃತ ಗೈರುಹಾಜರಾಗಿ ಕರ್ತವ್ಯಚ್ಯುತಿ ಎಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣೆ) ನಿಯಮಗಳು 1977 ರ ನಿಯಮ 5(1)(ಬಿ) ರನ್ವಯ ಸೇವೆಯಿಂದ ವಿಮೋಚನೆಗೊಳಿಸುವಂತೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 190 ಹೆಚ್‌ಎಸ್‌ಹೆಚ್ 2010, ಬೆಂಗಳೂರು ದಿನಾಂಕ: 21/05/2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ , ಡಾ: ತನ್ವೀರ್ ಉಲ್ಲಾಖಾನ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ನಿಡಸಾರೆ, ಕುಣಿಗಲ್ ತಾಲ್ಲೂಕು, ತುಮಕೂರು ಇವರು ಖಾಯಂಪೂರ್ವ ಸೇವಾವಧಿಯಲ್ಲಿ ದಿನಾಂಕ: 18/02/2008 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವುದರಿಂದ ಯಾವ ಉದ್ದೇಶದಿಂದ ಇವರನ್ನು ವೈದ್ಯಾಧಿಕಾರಿ ಹುದ್ದೆಗೆ ನೇಮಕ ಮಾಡಲಾಗಿತ್ತೋ, ಆ ಉದ್ದೇಶ ಈಡೇರಿದಂತಾಗಿರುವುದಿಲ್ಲ. ಆದ್ದರಿಂದ ಇವರು ಇಲಾಖೆಯ ವೈದ್ಯಾಧಿಕಾರಿ ಹುದ್ದೆಗೆ ಸೂಕ್ತವಲ್ಲವಾದ್ದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ(ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6(1)(2) ರಡಿಯಲ್ಲಿ ದಿನಾಂಕ: 18/02/2008ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1340

ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು–1)

COMMERCE AND INDUSTRIES SECRETARIAT

Sub: Allotment of alternative 600 acres of land to M/s. Maharashtra Seamless Ltd.

Read: 1) Govt. Order No. CI 239 SPI 2009, Dated: 30-09-2009.

2) Proceedings of the 21st State High Level Clearance Committee (SHLCC) meeting held on 29-03-2010.

Preamble:

The proposal of M/s. Maharashtra Seamless Ltd., to establish Spong Iron, Pig Iron, Billets in I Phase, seamless pipes in II phase, in 600 acress of land to be purchased U/s 109 of KLR Act at Kunikere village, Koppal Taluk and District, with an investment of Rs. 600 crores and employment to about 614 persons, was approved in 18th SHLCC meeting held on 24-06-2009 and G.O. read at (1) above has been issued.

In the 21st State High Level Clearance Committee (SHLCC) meeting held on 29-03-2010, the committee accepted the recommendation of Deputy Commissioner, Koppal to permit M/s. Xindia Steels Ltd., to purchase originally identified 1201 acres of land at Kunikere Village and to identify alternative 600 acres of land for allotment to M/s. Maharashtra Seamless Ltd. The Tahasildhar, Koppal was ordered to identify alternative land at Hirebagnal Village and at Halavarthi Village that could be considered for acquisition to M/s. Maharashtra Seamless Ltd.

Hence the following Order.

Government Order No. CI 239 SPI 2009, Bangalore, Dated: 27-05-2010.

Government is pleased to accord approval to the recommendation of Deputy Commissioner; Koppal to permit M/s. X India Steels Ltd., to purchase originally identified 1201 acres of land at Kunikere Village and to identify alternate 600 acres of land to M/s. Maharashtra Seamless Ltd. The Tahasildhar, Koppal has identified land at Hirebagnal Village measuring "197 acres 4 guntas and at Halavarthi Village 568 acres 28 guntas that could be considered for acquisition to M/s. Maharashtra Seamless Ltd. Approval is also accorded to permit M/s. Maharashtra Seamless Ltd., to purchase alternative 600 acres of land out of the above identified land U/s. 109 of KLR Act.

Other terms and conditions, infrastructure facilities, incentives and concessions remain the same as in G.O. read at (1) above.

By Order and in the name of the Governor of Karnataka

APARNA PAVATE

Desk Officer (Technical Cell)

Commerce & Industries Department

PR No. 1341

ವಸತಿ ಸಚಿವಾಲಯ

ವಿಷಯ : ಬಿಜಾಪುರ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂ. ವಇ/42ಹೆಚ್ಎಎಂ/1999, ದಿನಾಂಕ: 10-05-2000.

2. ಸರ್ಕಾರದ ಆದೇಶ ಸಂ. ವಇ/18/ಹೆಚ್ಎಎಸ್/2008, ದಿನಾಂಕ 16-09-2009.

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ (1)ರಲ್ಲಿ ಓದಲಾದ ಆದೇಶದನ್ವಯ ಮತ್ತು ಮೇಲೆ (2)ರಲ್ಲಿ ಓದಲಾದ ಆದೇಶವನ್ನು ಮುಂದುವರೆಸುತ್ತಾ, ಬಿಜಾಪುರ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 24 ಹೆಚ್ಎಎಸ್ 2010, ಬೆಂಗಳೂರು, ದಿನಾಂಕ 18-05-2010.

ಬಿಜಾಪುರ ನಗರ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ದಸ್ತಗೀರ್ ಮೌಲಾಸಾಬ್ (ಮೆಹಬೂಬ್), ಕನ್ನಡಿ ಬಿಜಾಪುರ ತಾಲ್ಲೂಕು ಮತ್ತು ಜಿಲ್ಲೆ	ಅಲ್ಪಸಂಖ್ಯಾತರು

2	ಶ್ರೀ ರಾಜಶೇಖರ ಭಜಂತ್ರಿ ಬಿನ್ ಬಸಪ್ಪ ಭಜಂತ್ರಿ, ಬಿಜಾಪುರ	ಪರಿಶಿಷ್ಟ ಜಾತಿ
3	ಶ್ರೀ ಷಣ್ಮುಖ ಮಡಿವಾಳ ಬಿನ್ ಚಿದಾನಂದ ಮಡಿವಾಳ, ಬಿಜಾಪುರ	ಹಿಂದುಳಿದ ವರ್ಗ
4	ಶ್ರೀಮತಿ ಮಾಲಾ ಶಿಂಧೆ ಕೋ: ವಸಂತ ಶಿಂಧೆ, ಬಿಜಾಪುರ	ಸಾಮಾನ್ಯ (ಮಹಿಳೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1342

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2 ವಸತಿ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಬಿ. ಕೃಷ್ಣಮೂರ್ತಿ, ಎ.ಪಿ.ಸಿ.-139, ಡಿ.ಎ.ಆರ್. ಬಳ್ಳಾರಿ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಳ್ಳಾರಿ ಇವರ ಆದೇಶ ಸಂಖ್ಯೆ: 41/ಪಿಆರ್ 2009 ಜಿ.ಆ. ಸಂಖ್ಯೆ: 32/2009, ದಿನಾಂಕ 30-04-2009.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ ಇವರ ಆದೇಶ ಸಂಖ್ಯೆ: 9/ಅಪೀಲು/ಸಿಬ್ಬಂದಿ 2/2009-10 ಓ.ಬಿ. 139/2009-10, ದಿನಾಂಕ: 11-09-09.
3. ಅರ್ಜಿದಾರರ ಪರಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 19-10-09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2) 53/2009-10 ದಿನಾಂಕ: 17-02-10.

ಪ್ರಸ್ತಾವನೆ:

ಶ್ರೀ ಬಿ. ಕೃಷ್ಣಮೂರ್ತಿ ಎ.ಪಿ.ಸಿ.-139, ಡಿ.ಎ.ಆರ್. ಬಳ್ಳಾರಿ ಜಿಲ್ಲೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

"ಅನಧಿಕೃತವಾಗಿ ಕರ್ತವ್ಯಕ್ಕೆ ಗೈರುಹಾಜರಾಗಿ ಕರ್ತವ್ಯದಲ್ಲಿ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ತೋರಿಸಿದ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಳ್ಳಾರಿ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 30-04-09ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ, ದಿನಾಂಕ: 11-02-09 ರಿಂದ 29-03-09ರ ವರೆಗಿನ ಒಟ್ಟು 47 ದಿನಗಳನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 106(ಎ) ರಂತೆ ಸಂಬಳರಹಿತ ರಜೆಯೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 11-09-2009ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 187 ಪೊಶಿಅ 2009, ಬೆಂಗಳೂರು, ದಿನಾಂಕ 20–05–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಿ. ಕೃಷ್ಣಮೂರ್ತಿ ಎ.ಪಿ.ಸಿ.–139, ಡಿ.ಎ.ಆರ್. ಬಳ್ಳಾರಿ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1343

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ. ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಇವರ ಆದೇಶ ಸಂಖ್ಯೆ: ಶಿಕ್ಷೆ/ಜಿಎಸ್/09/2006–2007 ಓಬಿ/ಸಿವಿಲ್ 178/06–07 ದಿನಾಂಕ: 22–11–06
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ: ಅಪೀಲು/30/2006–07 ದಿನಾಂಕ: 15–02–07.
3. ಅರ್ಜಿದಾರನ ಪರಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 13–08–07.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)73/2007–08 ದಿನಾಂಕ: 02–11–2007.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 60 ಸಿಎನ್‌ಎಸ್ 09 ದಿನಾಂಕ: 22–7–2009 ಮತ್ತು 01–12–09.

ಪ್ರಸ್ತಾವನೆ:

ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ. ಇವರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

> "ನಂಜನಗೂಡು ಗ್ರಾಮಾಂತರ ಠಾಣೆಗೆ 2006ನೇ ಸಾಲಿನ ಮೇ ಮಾಹೆಯಲ್ಲಿ ಒಟ್ಟು 405 ವಾರೆಂಟ್‌ಗಳು ಕಾರ್ಯಗತಕ್ಕೆ ಬಂದಿದ್ದು, ಅವುಗಳಲ್ಲಿ 84 ವಾರೆಂಟ್‌ಗಳು ಮಾತ್ರ ಕಾರ್ಯಗತವಾಗಿದ್ದು, 72 ವಾರೆಂಟ್‌ಗಳು ಕಾರ್ಯಗತವಾಗದೇ ಇದ್ದು, 241 ವಾರೆಂಟ್‌ಗಳು ಕಾರ್ಯಗತಕ್ಕೆ ಬಾಕಿ ಇರುತ್ತದೆ. ವಾರೆಂಟ್ ಕಾರ್ಯಗತದ ಪ್ರಗತಿಯು ಶೇಕಡವಾರು ಪ್ರಮಾಣ 54% ಇರುತ್ತದೆ. ಆದ್ದರಿಂದ ಅತಿ ಕಡಿಮೆ ಮಟ್ಟದಲ್ಲಿ ವಾರೆಂಟ್ ಕಾರ್ಯಗತಗೊಳಿಸಿರುವ ಬಗ್ಗೆ ನಿಮ್ಮ ವಿವರಣೆಯನ್ನು ದಿನಾಂಕ: 11–07–2006 ರಂದು ಕೇಳಲಾಗಿದ್ದು, ನೀವು ವಿವರಣೆ ಸಲ್ಲಿಸಿರುವುದಿಲ್ಲವಾದ್ದರಿಂದ ದಿನಾಂಕ: 01–08–06 ರಂದು ಮತ್ತೊಮ್ಮೆ ಈ–ಮೇಲ್ ಸಂದೇಶ ನೀಡಿರುತ್ತಾರೆ. ಆದರೂ ಸಹ ನೀವು ಬೇಜವಾಬ್ದಾರಿ ಹಾಗೂ ನಿರ್ಲಕ್ಷತೆಯಿಂದ ವರದಿ ಸಲ್ಲಿಸದೇ ಮೇಲಾಧಿಕಾರಿಗಳ ಸೂಚನೆಯನ್ನು ಉಲ್ಲಂಘಿಸಿ ಅಶಿಸ್ತು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ. ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 22–01–06ರ

ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ 6 ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 15-02-2007ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪ್ರಕರಣದಲ್ಲಿನ ಅರ್ಜಿದಾರರ ಪಾತ್ರವನ್ನು ಗಮನಿಸಿದಲ್ಲಿ ದಂಡನೆಯ ಪ್ರಮಾಣವು ಹೊರಿಸಲಾದ ಆರೋಪಕ್ಕೆ ಅಧಿಕವಾಗಿದೆ ಎಂದು ಪರಿಗಣಿಸಿ ಶಿಸ್ತು ಪ್ರಾಧಿಕಾರದ ದಂಡನೆಯನ್ನು ಭಾಗಶಃ ಮಾರ್ಪಡಿಸುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು. ಆಯೋಗವು ಸರ್ಕಾರದ ಪ್ರಸ್ತಾವನೆಗೆ ಓದಲಾದ (5)ರ ಪತ್ರಗಳಲ್ಲಿ ಸಹಮತಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ (ವ್ಯವಹಾರಗಳ ನಿರ್ವಹಣೆ) ನಿಯಮಗಳು 1977, ಮೊದಲನೇ ಷೆಡ್ಯೂಲ್ ಐಟಂ 20ರನ್ವಯ ಕ್ರಮಕೈಗೊಂಡು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 345 ಪೊಸಿಅ 2007, ಬೆಂಗಳೂರು, ದಿನಾಂಕ 20-05-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಪ್ರಭಾಕರ್, ಪಿ.ಎಸ್.ಐ., ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ ಇವರಿಗೆ ಶಿಸ್ತು ಪ್ರಾಧಿಕಾರವು 22-11-06ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1344

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎ.ಕೆ. ಪಾಟೀಲ್ ಸಿಪಿಸಿ ಮತ್ತು ಶ್ರೀ ಡಿ.ವಿ. ಜಡಗಿ ಸಿ.ಎಚ್.ಸಿ., ನಂದಗಡ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಇವರ ಆದೇಶ ಸಂಖ್ಯೆ: ಸಿಬ್ಬಂದಿ 2/ಇವಿ/12/2006 ಆ.ಪು. ಸಂಖ್ಯೆ: 619/2007 ದಿನಾಂಕ: 20-06-07.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರ ಆದೇಶ ಸಂಖ್ಯೆ: ಅಪೀಲು/161/ಉವ/2006 ದಿನಾಂಕ: 03-10-07.
3. ಅರ್ಜಿದಾರರುಗಳ ಪರಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 10-10-08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)77-78/2008-09 ದಿನಾಂಕ: 25-09-2009

ಪ್ರಸ್ತಾವನೆ:

ಶ್ರೀಯುತರಾದ ಎ.ಕೆ. ಪಾಟೀಲ್ ಸಿಪಿಸಿ ಮತ್ತು ಶ್ರೀ ಡಿ.ವಿ. ಜಡಗಿ ಸಿ.ಎಚ್.ಸಿ. ನಂದಗಡ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರುಗಳು ಕರ್ತವ್ಯದಲ್ಲಿ ಘೋರ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ನೋರ್ವ ಸಿಬ್ಬಂದಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರೊಂದಿಗೆ 8ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ:

1. "ಆಪಾದಿತ ಪೊಲೀಸ್ ಅಧಿಕಾರಿ ಸಿಪಿಸಿ-1976 ಎಲ್. ವಾಯ, ಗಾಡಿವಡ್ಡರ, ನಂದಗಡ ಪೊಲೀಸ್ ಠಾಣೆರವರಾದ ಆಪಾದನೆ:1: ನೀವು ಹಾಗೂ ನಿಮ್ಮ ಇಬ್ಬರು ಮಕ್ಕಳೊಂದಿಗೆ ದಿನಾಂಕ: 31-05-2006 ರಂದು 2330 ಗಂಟೆಯ ಸುಮಾರಿಗೆ

ಸಿಪಿಸಿ 1517 ಎಸ್.ಎ. ತೊಲಗಿ ನಂದಗಡ ಪೊಲೀಸ್ ಠಾಣೆ, ವಿನಾಕಾರಣ ಇವರ ಮನೆಯ ಬಾಗಿಲು ಒದ್ದು ಒಳಗೆ ಹೋಗಿ ಸಿಪಿಸಿ-1517 ಎಸ್.ಎ. ತೊಲಗಿ ಇವರ ಪತ್ನಿ ಹಾಗೂ ಮಕ್ಕಳಿಗೆ ಅವಾಚ್ಯ ಶಬ್ದಗಳಲ್ಲಿ ಬೈದು ಹೊಡಿಬಡಿ ಮಾಡಿ ನಿಮ್ಮ ಕರ್ತವ್ಯದಲ್ಲಿ ಅತೀವ ಹಾಗೂ ಘೋರ ದುರ್ನಡತೆ ಪ್ರದರ್ಶಿಸಿರುವಿರಿ.

2. ಆಪಾದಿತ ಪೊಲೀಸ್ ಅಧಿಕಾರಿ:1 ಸಿಪಿಸಿ 1976 ಎಲ್. ವಾಯ, ಗಾಡಿವಡ್ಡರ, ನಂದಗಡ ಪೊಲೀಸ್ ಠಾಣೆರವರಾದ ನೀವು ಹಾಗೂ ಆಪೊಅ:2-ಸಿಪಿಸಿ-2176 ಎ.ಕೆ. ಪಾಟೀಲ ಹಾಗೂ ಆ.ಪೊ.ಅ.-3. ಸಿ.ಎಚ್.ಸಿ. 1946 ಡಿ.ವ್ಹಿ. ಜಡಗಿ ಇಬ್ಬರೂ ನಂದಗಡ ಪೊಲೀಸ್ ಠಾಣೆರವರು ಕೂಡಿ ಮೇಲಾಧಿಕಾರಿಗಳ ಅವಹೇಳನ ಮಾಡುವುದು, ಪೊಲೀಸ್ ಠಾಣೆಯ ಸಹದ್ಯೋಗಿ ಸಿಬ್ಬಂದಿಯವರ ಕೂಡಾ ಜಗಳವಾಡುವುದು ಬೈಯುವುದು ಮಾಡುತ್ತಾ ಪೊಲೀಸ್ ಇಲಾಖೆಯ ಹೆಸರು ಕೆಡಿಸುವಂತಹ ಅಪಕೃತ್ಯಗಳನ್ನು ಎಸಗಿ ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆ ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 20-06-07ರ ಆದೇಶದಲ್ಲಿ ಇವರ ವೇತನವನ್ನು ಇವರ ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ಇಳಿಸಲಾಗಿದೆ. ಸದರಿಯವರು ಹೊಸದಾಗಿ ವೇತನ ಬಡ್ತಿಗಳನ್ನು ಗಳಿಸುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರು ಶಿಸ್ತು ಪ್ರಾಧಿಕಾರಿಗಳ ದಂಡನಾದೇಶವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 59(1)(ಬಿ)ಗೆ ವ್ಯತಿರಿಕ್ತವಾಗಿರುವುದರಿಂದ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ ಅರ್ಜಿದಾರರುಗಳ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಮೂರು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 03-10-2007ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣಾ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾದಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 335 ಪೊಸಿಅ 2008, ಬೆಂಗಳೂರು, ದಿನಾಂಕ 20-05-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎ.ಕೆ. ಪಾಟೀಲ್ ಸಿಪಿಸಿ ಮತ್ತು ಶ್ರೀ ಡಿ.ವಿ. ಜಡಗಿ ಸಿ.ಎಚ್.ಸಿ., ನಂದಗಡ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1345

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಂದಾಯ ಸಚಿವಾಲಯ

ವಿಷಯ : ಶ್ರೀ ಯು.ಜಿ. ನಾಯಕ್, ಹಿಂದಿನ ಉಪ ತಹಶೀಲ್ದಾರ್, ನಾಡಕಛೇರಿ, ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು, (ಪ್ರಸ್ತುತ ನಿವೃತ್ತ ತಹಶೀಲ್ದಾರ್) ಇವರ ವಿರುದ್ಧ ಇಲಾಖಾ ವಿಚಾರಣೆ – ಅಂತಿಮ ಆದೇಶ ಕುರಿತು.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಪ್ರಸ್ತಾವನೆ ಪತ್ರ ಸಂಖ್ಯೆ : ಸಿಬ್ಬಂದಿ (3) : ವಿವ:24/2005-06, ದಿನಾಂಕ 29-10-2005, 12-11-2007.
2. ಸರ್ಕಾರದ ಕಾರಣ ಕೇಳುವ ನೋಟೀಸು : ದಿನಾಂಕ 29.05.2006.
3. ಶ್ರೀ ಯು.ಜಿ. ನಾಯಕ್ ಇವರ ಲಿಖಿತ ಸಮಜಾಯಿಷಿ ದಿ : 14-08-2006.
4. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 61 ಎಡಿಇ 2005, ದಿನಾಂಕ 22-08-2008.
5. ಸರ್ಕಾರದ ಆದೇಶ ಸಂ : ಆರ್‌ಡಿ 61 ಎಡಿಇ 2005, ದಿನಾಂಕ 11-12-2008.
6. ವಿಚಾರಣಾಧಿಕಾರಿಗಳ ವರದಿ ದಿನಾಂಕ : 26-06-2009.
7. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ 08-09-2009.
8. ಶ್ರೀ ಯು.ಜಿ. ನಾಯಕ್ ಇವರ ಲಿಖಿತ ಸಮಜಾಯಿಷಿ ದಿ : 23-09-2009.

ಪ್ರಸ್ತಾವನೆ :

ಶ್ರೀ ಯು.ಜಿ. ನಾಯಕ್, ಇವರು ಹಿಂದೆ ಉಪ ತಹಶೀಲ್ದಾರ್, ನಾಡಕಛೇರಿ, ಕೋಣಂದೂರು, (ಪ್ರಸ್ತುತ ನಿವೃತ್ತ ತಹಶೀಲ್ದಾರ್) ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ನೋಣಬೂರು ಗ್ರಾಮದ ಸ.ನಂ. 162ರ ಜಮೀನಿನ ಖಾತೆದಾರರ ಹೆಸರು ಮತ್ತು ಅಧಿಬೋಗದಾರಿಕೆ ಹಕ್ಕು ಪತ್ರ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸದೇ, ಗ್ರಾಮ ಲೆಕ್ಕಾಧಿಕಾರಿಗಳು ನೀಡಿದ ವರದಿಯನ್ನು ಮಾತ್ರ ಪರಿಶೀಲಿಸಿ, ನೋಣಬೂರು ಸರ್ವೆ ನಂ. 162 ರಲ್ಲಿ 1-06 ಎಕರೆ ತರಿ ಜಮೀನನ್ನು ಅಧಿಬೋಗದಾರಿಕೆ ಹಕ್ಕು ಮಂಜೂರಾತಿ ಪೂರ್ವದಲ್ಲಿಯೇ ಶ್ರೀ ಹರನಾಥ್‌ಭಟ್ ಬಿನ್ ಅನಂತ ಪದ್ಮನಾಭ ಭಟ್ ಇವರ ಹೆಸರಿಗೆ ಖಾತೆ, ಪಹಣಿ ಬದಲಾವಣೆ ಮಾಡಿ ಜುಬಾನಿ ಹಿಸ್ಸೆ ಪತ್ರದ ಮೇಲೆ ಎಂ.ಆರ್.9 :94-95, ದಿನಾಂಕ 10.4.95 ರಂತೆ ಅಕ್ರಮವಾಗಿ ಮ್ಯೂಟೇಷನ್ ಅನ್ನು ದೃಢೀಕರಿಸಿ, ಕಾನೂನನ್ನು ಉಲ್ಲಂಘನೆ ಮಾಡಿ, ಕರ್ತವ್ಯ ನಿರ್ಲಕ್ಷ ಮತ್ತು ಬೇಜವಾಬ್ದಾರಿಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) 1966ರ ನಿಯಮಾವಳಿಗಳನ್ನು ಉಲ್ಲಂಘಿಸಿರುವ ಆರೋಪದ ಮೇರೆಗೆ ಶಿಸ್ತು ಕ್ರಮ ಜರುಗಿಸುವಂತೆ ಮೇಲೆ ಓದಲಾದ ಕ್ರ.ಸಂ. (1), ದಿನಾಂಕ : 29-10-2005 ರಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆ ಅನ್ವಯ, ಸರ್ಕಾರವು ಶ್ರೀ ಯು.ಜಿ. ನಾಯಕ್, ತಹಶೀಲ್ದಾರ್, ಇವರಿಗೆ ದೋಷಾರೋಪಣಾ ಪಟ್ಟಿ (ಅನುಬಂಧ 1 ರಿಂದ 4 ರವರೆಗೆ) ಸಿಸಿಎ ನಿಯಮಾವಳಿ ಅನ್ವಯ, ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ : 29-05-2006 ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು. ಸದರಿ ನೋಟೀಸಿಗೆ ಶ್ರೀ ಯು.ಜಿ. ನಾಯಕ್ ಮೇಲೆ ಓದಲಾದ ಕ್ರ.ಸಂ. ದಿನಾಂಕ 14-08-2006 ರಲ್ಲಿ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗೆಳೆದು ನಿಯಮಾನುಸಾರ ಮ್ಯೂಟೇಷನ್ ಮಂಜೂರು ಮಾಡಲಾಗಿದೆ ಎಂದು ತಿಳಿಸಿ, ಆರೋಪದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸದರಿಯವರ ಲಿಖಿತ ಸಮಜಾಯಿಷಿಯನ್ನು ಸರ್ಕಾರವು ಪರಿಶೀಲಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂದು ಹಾಗೂ ಈ ವಿಚಾರಣೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ರಡಿಯಲ್ಲಿ ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ **ಶ್ರೀ ಎಸ್.ಜಿ. ಪಲ್ಲೇದ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವೇದಿಕೆ, ಗದಗ್, ಗದಗ್ ಜಿಲ್ಲೆ** ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು **ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ** ಉಲ್ಲೇಖಿತ (4)ರ ದಿನಾಂಕ : 22.2.2008 ರ ಆದೇಶದಲ್ಲಿ ನೇಮಿಸಲಾಗಿತ್ತು.

ಶ್ರೀ ಎಸ್.ಜಿ. ಪಲ್ಲೇದ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಸರ್ಕಾರಕ್ಕೆ ದಿನಾಂಕ 29-08-2008 ರಲ್ಲಿ ಮನವಿ ಸಲ್ಲಿಸಿ, ತಾವು ಗದಗ್ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಪೂರ್ಣಕಾಲಿಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದು, ಜೊತೆಗೆ ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿ ಅಂತ ಪ್ರಭಾರನಾಗಿ ಕೆಲಸ ನಿರ್ವಹಿಸುತ್ತಿರುವುದಾಗಿ, ಈ ಕಾರಣ ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸುವುದು ಸಾಧ್ಯವಾಗುವುದಿಲ್ಲವೆಂದು

ತಿಳಿಸುತ್ತಾ, ಈ ಬಗ್ಗೆ ಬೇರೆ ವ್ಯವಸ್ಥೆ ಮಾಡಿಕೊಳ್ಳಲು ಕೋರಿದ್ದರು. ಸದರಿಯವರ ಮನವಿಯನ್ನು ಸರ್ಕಾರವು ಪರಿಶೀಲಿಸಿ, ಈ ಪ್ರಕರಣಕ್ಕೆ ಬೇರೆ ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರನ್ನು ನೇಮಿಸಲು ತೀರ್ಮಾನಿಸಿ, ಮೇಲೆ ಓದಲಾದ ಕ್ರ.ಸಂ. (5) ರಲ್ಲಿ ಇಲಾಖಾ ವಿಚಾರಣೆ ನಡೆಸಲು ನಿಯೋಜಿಸಲಾಗಿದ್ದ ಶ್ರೀ ಎಸ್.ಜಿ. ಪಲ್ಲೇದ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಗ್ರಾಹಕರ ವೇದಿಕೆ, ಗದಗ್ ಜಿಲ್ಲೆ ಇವರ ಬದಲಿಗೆ ಶ್ರೀ ಎಸ್. ಸುಬ್ಬಾರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು #1033, 9ನೇ 'ಬಿ' ಮೇನ್, ಜ್ಯೂಡಿಷಿಯಲ್ ಲೇಔಟ್, ಜಿ.ಕೆ.ವಿ.ಕೆ. ಪೋಸ್ಟ್, ಬೆಂಗಳೂರು-560065 ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (6) ರಲ್ಲಿ ಅಧಿಬೋಗದಾರಿಕೆ ಹಕ್ಕು ಮಂಜೂರಾತಿ ಪೂರ್ವದಲ್ಲಿಯೇ ಬಾಕಿ ಪಹಣಿ ಬದಲಾವಣೆ ಮಾಡಿ ಜುಬಾನಿ ಹಿಸ್ಸೆ ದೃಢೀಕರಿಸಿ, ಕಾನೂನು ಉಲ್ಲಂಘನೆ ಮಾಡಿ ಕರ್ತವ್ಯ ನಿರ್ಲಕ್ಷ ಮತ್ತು ಬೇಜವಾಬ್ದಾರಿಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) 1966ರ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ ಎಂದು ಹೊರಿಸಲಾದ ಆರೋಪಕ್ಕೆ ವಿಚಾರಣಾಧಿಕಾರಿಗಳು ಈ ಕೆಳಗಿನಂತೆ ವರದಿ ಸಲ್ಲಿಸಿರುತ್ತಾರೆ.

1.	ಸಾರ್ವಜನಿಕ ಪ್ರಾಧಿಕಾರ	ಮುದ್ರಾಂಕ ಭಂಡಾರ (ಖಜಾನೆ ಇಲಾಖೆ) ವಿಧಾನಸೌಧ, ಬೆಂಗಳೂರು.
2.	ಸಾರ್ವಜನಿಕ ಮಾಹಿತಿ ಅಧಿಕಾರಿ	ಜಿಲ್ಲಾ ಖಜಾನಾಧಿಕಾರಿಗಳು
3.	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಖಜಾನಾಧಿಕಾರಿಗಳು
4.	ಮೇಲ್ಮನವಿ ಪ್ರಾಧಿಕಾರ	ಖಜಾನೆ ನಿರ್ದೇಶಕರು, ಬೆಂಗಳೂರು.

ದಿನಾಂಕ: 07.07.2010
ಸ್ಥಳ: ಬೆಂಗಳೂರು
ಪಿ.ಆರ್.1177

ಜಿಲ್ಲಾ ಖಜಾನಾಧಿಕಾರಿಗಳು,
ಮುದ್ರಾಂಕ ಭಂಡಾರ,
ವಿಧಾನಸೌಧ, ಬೆಂಗಳೂರು.

OFFICE OF THE ASSISTANT COMMISSIONER OF COMMERCIAL TAXES, LOCAL VAT OFFICE-045, BANGALORE

(Notified Authority under Rule 6(i) of the CST (Karnataka) Rule 1957)

TIN:29240327158, Dated:16th July, 2010

Sl. No.	Name of the declaration Form declared obsolete and invalid No.	Name & Address of the dealer to whom forms were issued by Dept.	To whom the forms were issued by the dealer	Date from which declared obsolete and reasons	Name of the Circle issuing the Form	Remarks
1.	Form C bearing No. bearing No.KA-C/01 0045691	M/s Sobha Developers Ltd., No.43, II Floor, Dickenson Road, Bangalore-42	M/s Hytek Marketing, Pune, Maharastra	15.06.2010	LVO-045, Bangalore	C Form was lost in their custody and intimated accordingly.

PR-1152

Assistant Commissioner of Commercial Taxes, LVO-045, Bangalore.

ಮಾನ್ಯ 1ನೇ ಸಂಚಾರಿ ಎಂ.ಎಂ. ನ್ಯಾಯಾಲಯ, ಮೇಯೋಹಾಲ್, ಬೆಂಗಳೂರುನಗರ

ವಿಷಯ: ವಾರಸುದಾರರಿಲ್ಲದ ವಾಹನಗಳ ಮಾಲೀಕರನ್ನು ಪತ್ತೆ ಮಾಡುವ ಸಲುವಾಗಿ ಪ್ರಕಟಣೆ.

ಉಲ್ಲೇಖ: 1) ಏರ್‌ಪೋರ್ಟ್ ಪೊಲೀಸ್ ಠಾಣೆಯ ಮೊ.ಸಂಖ್ಯೆ:10/05 ಕಲಂ 98 ಕೆ.ಪಿ.ಆಕ್ಟ್.

2) ಏರ್‌ಪೋರ್ಟ್ ಪೊಲೀಸ್ ಠಾಣೆಯ ಠಾಣಾಧಿಕಾರಿ ರವರ ಕೋರಿಕೆ ಪತ್ರ ದಿನಾಂಕ:09.06.2010.

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಏರ್‌ಪೋರ್ಟ್ ಪೊಲೀಸ್ ಠಾಣಾ ಮೊ.ಸಂಖ್ಯೆ:10/05 ಕಲಂ.98 ಕೆ.ಪಿ.ಆಕ್ಟ್ ಕೇಸಿನಲ್ಲಿ ಮತ್ತು 1ನೇ ಸಂಚಾರಿ ಎಂ.ಎಂ. ನ್ಯಾಯಾಲಯದ ಸಿ.ಸಿ. ನಂ.133/10 ರಲ್ಲಿನ ಆರೋಪಿತ ಸೈಯದ್ ನದೀಮ್ ಈತನು ದಿನಾಂಕ:22.02.2010 ರಂದು ತನ್ನ ತಪ್ಪನ್ನು ಒಪ್ಪಿಕೊಂಡಿದ್ದು. ಆ ಮೇರೆಗೆ ಮಾನ್ಯ ನ್ಯಾಯಾಲಯವು ಆರೋಪಿಗೆ 500/–ರೂ. ದಂಡವನ್ನು ವಿಧಿಸಿದ್ದು, ಆರೋಪಿತನಿಂದ ವಶಪಡಿಸಿಕೊಂಡಿದ್ದ ಈ ಕೆಳಕಂಡ ವಾಹನಗಳು ಸುಮಾರು 5 ವರ್ಷಗಳಿಂದ ಏರ್‌ಪೋರ್ಟ್ ಪೊಲೀಸ್ ಠಾಣೆಯ ಆವರಣದಲ್ಲಿಯೇ ಉಳಿದುಕೊಂಡಿದ್ದು, ಮಳೆ ಹಾಗೂ ಬಿಸಿಲಿನಿಂದ ಒಣಗಿ ತುಕ್ಕು ಹಿಡಿದು ಹಾಳಾಗಿ ಪ್ರಯೋಜನಕಾರಿಯಾಗದೆ ಉಳಿದಿದೆ. ಈ ಕೆಳಕಂಡ ವಾಹನಗಳ ವಾರಸುದಾರರ ಪತ್ತೆಗಾಗಿ ಎಲ್ಲಾ ಪ್ರಯತ್ನ ಮಾಡಿದಾಗ್ಯೂ ಪತ್ತೆಯಾಗಿರುವುದಿಲ್ಲ. ಸದರಿ ವಾಹನಗಳ ಪರಿಸ್ಥಿತಿಯು ಕೆಟ್ಟು ತುಕ್ಕು ಹಿಡಿಯುತ್ತಿದ್ದು ಈ ವಾಹನಗಳನ್ನು ಶೀಘ್ರ ವಿಲೇವಾರಿ ಮಾಡದಿದ್ದಲ್ಲಿ ಇವುಗಳ ಮೌಲ್ಯವು ದಿನಗಳದಂತೆ ಕಡಿಮೆಯಾಗುವುದರಿಂದ ಸದರಿ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಸಾರ್ವಜನಿಕ ಬಹಿರಂಗ ಹರಾಜು ಮಾಡಿ ಹಣವನ್ನು ಸರ್ಕಾರಿ ಖಜಾನೆಗೆ ಪಾವತಿ ಮಾಡಲು ಈ ಬಗ್ಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲು ಠಾಣಾಧಿಕಾರಿಗಳು ಏರ್‌ಪೋರ್ಟ್ ಪೊಲೀಸ್ ಠಾಣೆರವರು ಕೋರಿರುತ್ತಾರೆ.

ಆದುದರಿಂದ ಸದರಿ ಈ ಕೆಳಕಂಡ ವಾಹನಗಳ ಮಾಲೀಕರನ್ನು ಪತ್ತೆ ಹಚ್ಚಲು ಪ್ರಕಟಿಸಲಾಗಿದೆ.

Sl. No.	Crime No. & Sec of Law	Vehicle	Reg.No.	Chassis No.	Engine No.	Remarks
1.	10/05 u/s 98 KP Act	Maruthi Van	KA-05-M-4171	-	ST91-IN 911452	Conviction on 22.02.2010
2.	- Do -	Maruthi Van	KA-01-N-1166	-	84745	Conviction
3.	- Do -	Maruthi Van	AP-11-E-6055	-	ST91-IN 255603	on 22.02.2010
4.	- Do -	Maruthi Van	-	-	-	Conviction
5.	- Do -	Maruthi Van	AP-13-D-4623	SB308-IN38734	F6B-IN544740	on 22.02.2010
6.	- Do -	Maruthi Van	AP-10-J-8285	SB308-IN 823132	F2B-IN 1231520	Conviction
7.	- Do -	Auto Rickshaw	KA-03-B-2976	S742769	24M5KIC 04191	on 22.02.2010

ಮಹಾನಗರ ದಂಡಾಧಿಕಾರಿ, ಒಂದನೇ
ಸಂಚಾರಿ ನ್ಯಾಯಾಲಯ, ಮೇಯೋಹಾಲ್,
ಬೆಂಗಳೂರು–01.

ಮಾನ್ಯ 1ನೇ ಸಂಚಾರಿ ಎಂ.ಎಂ. ನ್ಯಾಯಾಲಯ, ಮೇಯೋಹಾಲ್, ಬೆಂಗಳೂರುನಗರ

ವಿಷಯ: ವಾರಸುದಾರರಿಲ್ಲದ ವಾಹನಗಳ ಮಾಲೀಕರನ್ನು ಪತ್ತೆ ಮಾಡುವ ಸಲುವಾಗಿ ಪ್ರಕಟಣೆ.

ಉಲ್ಲೇಖ: 1) ಏರ್‌ಪೋರ್ಟ್ ಪೊಲೀಸ್ ಠಾಣೆಯ ಮೊ.ಸಂಖ್ಯೆ:11/06 ಕಲಂ 98 ಕೆ.ಪಿ.ಆಕ್ಟ್.

2) ಏರ್‌ಪೋರ್ಟ್ ಪೊಲೀಸ್ ಠಾಣೆಯ ಠಾಣಾಧಿಕಾರಿ ರವರ ಕೋರಿಕೆ ಪತ್ರ ದಿನಾಂಕ:09.06.2010.

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಏರ್‌ಪೋರ್ಟ್ ಪೊಲೀಸ್ ಠಾಣಾ ಮೊ.ಸಂಖ್ಯೆ:11/06 ಕಲಂ.98 ಕೆ.ಪಿ.ಆಕ್ಟ್ ಕೇಸಿನಲ್ಲಿ ಮತ್ತು 1ನೇ ಸಂಚಾರಿ ಎಂ.ಎಂ. ನ್ಯಾಯಾಲಯದ ಸಿ.ಸಿ. ನಂ.394/10 ರಲ್ಲಿನ ಆರೋಪಿತನಾದ

ಸಾಕಿ ಅಜ್ಗರ್ ಮತ್ತು ಅಬ್ದುಲ್‌ಶೂಕುರ್ ಇವರು ದಿನಾಂಕ:19.04.2010 ರಂದು ತನ್ನ ತಪ್ಪನ್ನು ಒಪ್ಪಿಕೊಂಡಿದ್ದು, ಆ ಮೇರೆಗೆ ಮಾನ್ಯ ನ್ಯಾಯಾಲಯವು ಆರೋಪಿಗಳಿಗೆ ತಲಾ 500/-ರೂ. ದಂಡವನ್ನು ವಿಧಿಸಿದ್ದು, ಆರೋಪಿತರಿಂದ ವಶಪಡಿಸಿಕೊಂಡಿದ್ದ ಈ ಕೆಳಕಂಡ ವಾಹನಗಳು ಸುಮಾರು 4 ವರ್ಷಗಳಿಂದ ಏರ್‌ಪೋರ್ಟ್ ಪೊಲೀಸ್ ಠಾಣೆಯ ಆವರಣದಲ್ಲಿಯೇ ಉಳಿದುಕೊಂಡಿದ್ದು, ಮಳೆ ಹಾಗೂ ಬಿಸಿಲಿನಿಂದ ಒಣಗಿ ತುಕ್ಕು ಹಿಡಿದು ಹಾಳಾಗಿ ಪ್ರಯೋಜನಕಾರಿಯಾಗದೆ ಉಳಿದಿದೆ. ಈ ಕೆಳಕಂಡ ವಾಹನಗಳ ವಾರಸುದಾರರ ಪತ್ತೆಗಾಗಿ ಎಲ್ಲಾ ಪ್ರಯತ್ನ ಮಾಡಿದಾಗ್ಯೂ ಪತ್ತೆಯಾಗಿರುವುದಿಲ್ಲ. ಸದರಿ ವಾಹನಗಳ ಪರಿಸ್ಥಿತಿಯು ಕೆಟ್ಟು ತುಕ್ಕು ಹಿಡಿಯುತ್ತಿದ್ದು ಈ ವಾಹನಗಳನ್ನು ಶೀಘ್ರ ವಿಲೇವಾರಿ ಮಾಡದಿದ್ದಲ್ಲಿ ಇವುಗಳ ಮೌಲ್ಯವು ದಿನಗಳದಂತೆ ಕಡಿಮೆಯಾಗುವುದರಿಂದ ಸದರಿ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಸಾರ್ವಜನಿಕ ಬಹಿರಂಗ ಹರಾಜು ಮಾಡಿ ಹಣವನ್ನು ಸರ್ಕಾರಿ ಖಜಾನೆಗೆ ಪಾವತಿ ಮಾಡಲು ಈ ಬಗ್ಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲು ಠಾಣಾಧಿಕಾರಿಗಳು ಏರ್‌ಪೋರ್ಟ್ ಪೊಲೀಸ್ ಠಾಣೆರವರು ಕೋರಿರುತ್ತಾರೆ.

ಆದುದರಿಂದ ಸದರಿ ಈ ಕೆಳಕಂಡ ವಾಹನಗಳ ಮಾಲೀಕರನ್ನು ಪತ್ತೆ ಹಚ್ಚಲು ಪ್ರಕಟಿಸಲಾಗಿದೆ.

Sl. No.	Crime No. & Sec of Law	Vehicle	Reg.No.	Chassis No.	Engine No.	Remarks
1.	11/06 u/s 98 KP Act	Bajaj Kawasaki	KA-03-E-5456	30C121000	30E119432	Conviction on 19.04.2010
2.	- Do -	Yamaha RX 135	KA-03-EG-6353	02EGTL-530425	4TL-530425	Conviction on 19.04.2010
3.	- Do -	Suzuki Samurai	DL3-SF-8235	7301F351135	30E119432	Conviction on 19.04.2010
4.	- Do -	Kinetic Honda	KA-02-U-4190	-	362128H.F.	Conviction on 19.04.2010
5.	- Do -	Bajaja Chetak	KA-03-L-2008	060934331	06E970157	Conviction on 19.04.2010
6.	- Do -	Bajaj Chetak	CNX-1334	05C8210139189	05E8205140918	Conviction on 19.04.2010

ಮಹಾನಗರ ದಂಡಾಧಿಕಾರಿ, ಒಂದನೇ
ಸಂಚಾರಿ ನ್ಯಾಯಾಲಯ,
ಮೇಯೋಹಾಲ್, ಬೆಂಗಳೂರು-01.

ಪಿ.ಆರ್.1203

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂಖ್ಯೆ: ಆಸಾಂನಿ/168/ಆಡಳಿತ-2/2007-08, ಬೆಂಗಳೂರು, ದಿನಾಂಕ:27ನೇ ಜುಲೈ, 2010

ವಿಷಯ: ಶ್ರೀ ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಚೇರಿ, ಯಲಬುರ್ಗಾ, ಇವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವುದರ ಕುರಿತು.

ಉಲ್ಲೇಖ: 1) ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ ಇವರ ಪತ್ರದ ಸಂಖ್ಯೆ: ಜಿಸಂಕೊ/ಆಡಳಿತ-1/ಅಗೈಹಾ/2009-10 ದಿನಾಂಕ 29.01.2010.

2) ಈ ನಿರ್ದೇಶನಾಲಯದ ಪತ್ರದ ಸಂಖ್ಯೆ: ಆಸಾಂನಿ/168/ಆಡಳಿತ-2/07-08/2306, ದಿನಾಂಕ 24.04.2010.

3) ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರು ಶ್ರೀ ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಚೇರಿ, ಯಲಬುರ್ಗ, ಇವರಿಗೆ ಹೊರಡಿಸಲಾದ ದಿನಾಂಕ: 20.05.2010ರ "ಕಾರಣ ಕೇಳುವ ಜ್ಞಾಪನ" ಹಾಗೂ ನಂತರದ ಪತ್ರ ವ್ಯವಹಾರಗಳು.

ಸ್ತಾವನೆ:

ಈ ನಿರ್ದೇಶನಾಲಯದ ಸಾಂಖ್ಯಿಕ ನಿರೀಕ್ಷಕರ ವೃಂದದ ಶ್ರೀ ಕೆ.ಚಂದ್ರಶೇಖರ, ಇವರು ತಾಲ್ಲೂಕು ಪಂಚಾಯತ್ ಲಬುರ್ಗಾ, (ಕೊಪ್ಪಳ ಜಿಲ್ಲೆ), ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಂಚಾಯತ್, ಯಲಬುರ್ಗಾ, ಇವರು ಅವರು ಪತ್ರದ ಸಂಖ್ಯೆ: ತಾಪಯ/ಸಿಬ್ಬಂದಿ/ಪ್ರಗತಿ ಸಹಾಯಕ/2006-07, ದಿನಾಂಕ: .11.2006ರಲ್ಲಿ **ಶ್ರೀ ಕೆ. ಚಂದ್ರಶೇಖರ, ಪ್ರಗತಿ ಸಹಾಯಕರು, ಅವರ ಅನಧಿಕೃತ ಗೈರು ಹಾಜರಾತಿ ಹಾಗೂ ಅತೃಪ್ತಿಕರ ಕಾರ್ಯ ರ್ವಹಣೆ** ಕಾರಣದಿಂದ ಅವರ ಸೇವೆಯು ಆ ಕಚೇರಿಯಲ್ಲಿ ಅಗತ್ಯವಿಲ್ಲವೆಂದು **ದಿನಾಂಕ:18.11.2006ರಿಂದ** ಡುಗಡೆಗೊಳಿಸಿದ್ದರು ಹಾಗೂ ಈ ಪತ್ರವನ್ನು "ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ" ಇವರಿಗೆ ಹಾಗೂ ಕೆ. ಚಂದ್ರಶೇಖರ, ಪ್ರಗತಿ ಸಹಾಯಕರಿಗೆ ಜಾರಿ ಮಾಡಿದ್ದರು.

ಮೇಲೆ ತಿಳಿಸಲಾದ ಪತ್ರದ **ದಿನಾಂಕ:15.11.2006ನ್ನು,** ಈ ನಿರ್ದೇಶನಾಲಯಕ್ಕೆ ಕಳುಹಿಸಿರಲಿಲ್ಲವಾದ್ದರಿಂದ, ಜಿಲ್ಲಾ ಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರ ಕಚೇರಿಯಲ್ಲಿ ಸ್ವೀಕೃತಿಯಾಗಿದ್ದ ಈ ಪತ್ರದ ಪ್ರತಿಯನ್ನು ಈ ನಿರ್ದೇಶನಾಲಯಕ್ಕೆ ಕ್ಷಣ ಸಲ್ಲಿಸಿದ್ದಲ್ಲಿ ದಿನಾಂಕ:18.11.2006ರಿಂದ ಬಿಡುಗಡೆಗೊಂಡಿದ್ದ ಶ್ರೀ ಕೆ.ಚಂದ್ರಶೇಖರ, ಅವರಿಗೆ ತಕ್ಷಣ ಪರ್ಯಾಯ ದ್ದೆಗೆ ನೇಮಕಾತಿ ಮಾಡಬಹುದಾಗಿತ್ತು ಅಥವಾ ಬಿಡುಗಡೆ ಆದೇಶದಲ್ಲಿದ್ದ ಅವರು ಕೇಂದ್ರ ಕಚೇರಿಯಲ್ಲಿ ವರದಿ ಾಡಿಕೊಳ್ಳದೆ ನಿರಂತರವಾಗಿ ಅನಧಿಕೃತ ಗೈರು ಹಾಜರಾಗಿದ್ದ ಅವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಬಹುದಾಗಿತ್ತು ದರೆ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ ಜಿಲ್ಲೆ ಇವರ ಈ ಮಾಹಿತಿಯನ್ನು ಈ ನಿರ್ದೇಶನಾಲಯಕ್ಕೆ ತಿಳಿಸದೆ ದ್ದುದರಿಂದ ಹಾಗೂ ಈ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗದೆ ಇದ್ದುದರಿಂದ, **ಾಂಕ:17.11.2006ರಿಂದ ದಿನಾಂಕ:22.08.2007ರ** ವರೆಗೆ (10 ತಿಂಗಳಷ್ಟು ಅವಧಿ) ಅನಧಿಕೃತ ಗೈರು ಹಾಜರಾತಿ ನಂತರ **ಾಂಕ:23.08.2007ರ** ಆದೇಶದಲ್ಲಿ ಅವರಿಗೆ ಪರ್ಯಾಯ ಹುದ್ದೆಗೆ (ತಾಲ್ಲೂಕು ಕಚೇರಿ, ಕೊಪ್ಪಳ ಜಿಲ್ಲೆಗೆ) ನೇಮಕಾತಿ ಾಡುವಂಥಹ ಪರಿಸ್ಥಿತಿಗೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಹಾಗೂ ಈ ಕಚೇರಿಯ **ಆಡಳಿತ ವಿಭಾಗದ ಸಿಬ್ಬಂದಿಯು ವಾಬ್ದಾರರಾಗಿರುತ್ತಾರೆ.**

ಮೇಲಿನ ದಿನಾಂಕ:17.11.2006ರಿಂದ ದಿನಾಂಕ:22.08.2007ರ ವರೆಗಿನ ಅನಧಿಕೃತ ಗೈರು ಹಾಜರಿ ನಂತರ, ಾಂಕ: 23.08.2007ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ ಶ್ರೀ.ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರನ್ನು ಈ ರ್ದೇಶನಾಲಯದ ಆದೇಶದ ದಿನಾಂಕ:23.08.2007ರಲ್ಲಿ ತಾಲ್ಲೂಕು ಕಚೇರಿ, ಯಲಬುರ್ಗ (ಕೊಪ್ಪಳ ಜಿಲ್ಲೆ) ಇಲ್ಲಿ ಮಕಾತಿ ಮಾಡಲಾಗಿತ್ತು.

ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಪತ್ರದ ದಿನಾಂಕ:24.01.2008ರಲ್ಲಿ ಹಾಗೂ ನಂತರದ ಅರೆ ಸರ್ಕಾರಿ ತ್ರದ ದಿನಾಂಕ:25.05.2009ರಲ್ಲಿ ಶ್ರೀ.ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ದಿನಾಂಕ:17.11.2006ರಿಂದ ಾಂಕ:22.08.2007ರ ವರೆಗಿನ ಅನಧಿಕೃತ ಗೈರು ಹಾಜರಾತಿ ಕುರಿತು ಶಿಸ್ತು ಕ್ರಮ/ಇಲಾಖಾ ವಿಚಾರಣೆ ಕೈಗೊಳ್ಳುವ ಕುರಿತು ಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ ಇವರಿಗೆ ಹೊರಡಿಸಲಾಗಿತ್ತು. ಆದರೆ ಇಂತಹ ಸರಳವಾದ ನಧಿಕೃತ ಗೈರು ಹಾಜರಿಯಂತಹ ಪ್ರಕರಣಗಳನ್ನು ನಿಯಮಾನುಸಾರ ಪರಿಶೀಲಿಸಿ, ಕೊಪ್ಪಳ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಚೇರಿಯು ಸೂಕ್ತವಾದ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಶ್ರೀ ಕೆ. ಚಂದ್ರಶೇಖರ, ಅವರು ಇಲ್ಲಿಯುವರೆಗೂ ಸೇವೆಯಲ್ಲಿ ುಂದುವರೆಯುವ ಸಾಧ್ಯತೆ ಇರಲಿಲ್ಲವಾದ್ದರಿಂದ, ಪ್ರಸ್ತುತ ಪರಿಸ್ಥಿತಿಗೆ ಜಿಲ್ಲಾ ಸಾಂಖ್ಯಿಕ ಕಚೇರಿ, ಕೊಪ್ಪಳ, ಇಲ್ಲಿಯ **ಆಡಳಿತ ಾಗದ** ಸಿಬ್ಬಂದಿಯೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

ಆದೇಶದ ದಿನಾಂಕ: 23.08.2007ರಲ್ಲಿ ತಾಲ್ಲೂಕು ಕಚೇರಿ, ಯಲಬುರ್ಗ, ಇಲ್ಲಿ ನೇಮಕಾತಿಗೊಂಡ ಸಾಂಖ್ಯಿಕ ರೀಕ್ಷಕರಾದ ಶ್ರೀ ಕೆ.ಚಂದ್ರಶೇಖರ ಇವರ ಮುಂದುವರೆದ ಅನಧಿಕೃತ ಗೈರು ಹಾಜರಿ ಹಾಗೂ ಕರ್ತವ್ಯ ಲೋಪದ ರಣದಿಂದ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ನೀಡಿದ ಅವರ ವಿರುದ್ಧದ ದೂರನ್ನು ಪರಿಶೀಲಿಸಿ ಈ ನಿರ್ದೇಶನಾಲಯದ ದೇಶದ ಸಂಖ್ಯೆ:ಆಸಾಂನಿ/**180/ಆಡಳಿತ 2007-08 ದಿನಾಂಕ:22.08.2008**ರಲ್ಲಿ ಸದರಿ ಸಾಂಖ್ಯಿಕ ನಿರೀಕ್ಷಕರನ್ನು ರ್ಯನಿರ್ವಾಹಕ ಅಭಿಯಂತರ ಕಚೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ, ಇಲ್ಲಿ ನೇಮಕಾತಿ ಮಾಡಲಾಗಿತ್ತು.

ಅದೇ ಶ್ರೀ ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಮೇಲಿನ ಕಂಡಿಕೆಯಲ್ಲಿ ವಿವರಿಸಿದಂತೆ ಅವರನ್ನು ನೇಮಕಾತಿ ಡಲಾಗಿದ್ದ ಲೋಕೋಪಯೋಗಿ ಇಲಾಖೆ, ಧಾರವಾಡ, ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅವರ ಅದೇ ನಧಿಕೃತ ಗೈರು ಹಾಜರಾತಿಯ ಪ್ರವೃತ್ತಿಯನ್ನು ಮುಂದುವರೆಸಿದ್ದರಿಂದ ದಿನಾಂಕ:19.05.2009ರಂದು ಅವರಿಗೆ ಆ

ಕಚೇರಿಯಿಂದ ಜ್ಞಾಪನ ಹೊರಡಿಸಲಾಗಿತ್ತು ಹಾಗೂ ಅವರನ್ನು ಬಿಡುಗಡೆ ಮಾಡುವ ಕುರಿತು ಆ ಇಲಾಖೆಯು ಆಂತರಿಕವಾಗಿ ಅನೇಕ ಪತ್ರ ವ್ಯವಹಾರ ಮಾಡಲಾಗಿತ್ತು ಅಂತಿಮವಾಗಿ ಅವರನ್ನು ಆ ಕಚೇರಿಯಿಂದ **ದಿನಾಂಕ:31.07.2009ರಂದು ಬಿಡುಗಡೆಗೊಳಿಸಿ, ಮಾತೃ ಇಲಾಖೆಗೆ ಹಿಂತಿರುಗಿಸಲಾಗಿತ್ತು.**

ಮೇಲಿನ ಕಂಡಿಕೆಯಲ್ಲಿ ವಿವರಿಸುವಂತೆ ಶ್ರೀ ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರನ್ನು ಲೋಕೋಪಯೋಗಿ ಇಲಾಖೆ, ಧಾರವಾಡ, ಇಲ್ಲಿಂದ ದಿನಾಂಕ:31.07.2009ರಿಂದ ಅನ್ವಯವಾಗುವಂತೆ ಮಾತೃ ಇಲಾಖೆಗೆ ಹಿಂತಿರುಗಿಸದೆ ತಕ್ಷಣ ಪರ್ಯಾಯ ಹುದ್ದೆಗೆ ನೇಮಕಾತಿಗಾಗಿ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಳ್ಳತಕ್ಕದ್ದಾಗಿದ್ದರೂ, **ಒಂದು ತಿಂಗಳ ನಂತರ ಅಂದರೆ ದಿನಾಂಕ:28.08.2009ರಂದು** ಕೇಂದ್ರ ಕಚೇರಿಯಲ್ಲಿ ವರದಿ ಸಲ್ಲಿಸಿದ್ದರಿಂದ ಅವರ ಕೋರಿಕೆ ಅನ್ವಯ ಅವರನ್ನು ಈ ನಿರ್ದೇಶನಾಲಯದ ಆದೇಶದ ಸಂಖ್ಯೆ: ಆಡಳಿತ/288/2009-10 ದಿನಾಂಕ:03.09.2009ರಲ್ಲಿ ತಾಲ್ಲೂಕು ಕಚೇರಿ, ಯಲಬುರ್ಗ ಇಲ್ಲಿ ನೇಮಕಾತಿ ಮಾಡಲಾಗಿದ್ದರಿಂದ ಅವರು **ದಿನಾಂಕ:11.09.2009ರಂದು** ಆ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಒಟ್ಟಾರೆ ಜಿಲ್ಲಾ ಸಾಂಖ್ಯಿಕ ಅಧಿಕಾರಗಳು, ಕೊಪ್ಪಳ, ಇವರ ಪತ್ರದ ಸಂಖ್ಯೆ: ಜಿಸಂಕೊ/ಆಡಳಿತ-1/ಅಗೈಹಾ/2009-10 ದಿನಾಂಕ:29.01.2010ರಲ್ಲಿ ಸಲ್ಲಿಸಲಾದ ಶ್ರೀ ಕೆ.ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರ ಸೇವಾ ಚರಿತ್ರೆಯನ್ನು ಪರಿಶೀಲಿಸಲಾಗಿ 2006ರಿಂದ ಇತ್ತೀಚಿಗೆ ಅವರು ಈ ಕೆಳಗೆ ವಿವರಿಸಲಾದ ಅವಧಿಯಲ್ಲಿ ಸರ್ಕಾರದ ಕರ್ತವ್ಯಕ್ಕೆ **"ಅಧಿಕೃತ ಗೈರು ಹಾಜರಾಗಿರುವುದು ಕಂಡು ಬರುತ್ತದೆ"**

ಕ್ರಮ ಸಂಖ್ಯೆ	ರಿಂದ	ವರೆಗೆ	ದಿನಗಳು
1.	14.07.2006	16.11.2006	126
2.	17.11.2006	22.08.2007	278
3.	01.01.2008	11.03.2008	061
4.	01.07.2008	30.08.2008	071
5.	10.10.2008	19.11.2008	041
6.	28.11.2008	21.01.2009	055
7.	16.02.2009	31.07.2009	166
8.	01.08.2009	27.08.2009	027
9.	04.09.2009	10.09.2009	007
	ಒಟ್ಟು ದಿನಗಳು		**832**

ಮೇಲಿನ ಒಟ್ಟು 832 ದಿನಗಳ ಅನಧಿಕೃತ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ 106-ಎರ ಅನ್ವಯ, ಆಗಾಗ್ಗೆ ಸಂಬಂಧಿಸಿದ ಕಚೇರಿ, ಮುಖ್ಯಸ್ಥರು **"ವೇತನ ರಹಿತ ರಜೆ"** ಎಂದು ಪರಿಗಣಿಸಿ ಆದೇಶ ಹೊರಡಿಸಲಾಗಿದೆಯಾದರೂ, ಅದೇ ನಿಯಮಗಳ ಅನ್ವಯ, ಅವರ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸುವ ಕುರಿತು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರು ಪ್ರಸ್ತಾವನೆ ಸಲ್ಲಿಸದೆ ಇದ್ದುದರಿಂದ, ಆ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಯಾವುದೇ ಕ್ರಮ ಜರುಗಿಸುವುದು ಸಾಧ್ಯವಾಗಿಲ್ಲವಾದ್ದರಿಂದ, ಈ ಪರಿಸ್ಥಿತಿಗೆ ಕೊಪ್ಪಳ ಜಿಲ್ಲಾ ಸಾಂಖ್ಯಿಕ ಕಚೇರಿಯ **ಆಡಳಿತ ವಿಭಾಗದ ಸಿಬ್ಬಂದಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.** ಅದೇ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಕೆ.ಚಂದ್ರಶೇಖರ, ಇವರು ದಿನಾಂಕ:22.02.2010ರಿಂದ ಅವರ ಅನಧಿಕೃತ ಗೈರು ಹಾಜರಾತಿ ಪ್ರವೃತ್ತಿಯನ್ನು ಮುಂದುವರೆಸಿರುವುದು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರು ಅವರಿಗೆ **ದಿನಾಂಕ:20.05.2010ರಂದು ಹೊರಡಿಸಲಾದ "ಕಾರಣ ಕೇಳುವ ಜ್ಞಾಪನದ"** ಅನ್ವಯ ಕಂಡು ಬರುತ್ತದೆ.

In Government official memorandum No. DPAR 3 SDB 94 dated 26-2-1994 on "unauthorized obsence of Government employees-instructions to deal with such cases", it is stated that:

According to Rule 108 of KCSR, Government servant who remains absent from duty without leave for a period of 4-months or more may be liable to be dismissed from service after following procedure said down in KCS (CCA) Rules 1957.

(a) Where the unauthorized absence exceeds four months, the appointing authority should immediately place the Government Servant under suspension.

(b) ಸರ್ಕಾರದ ಅದೇ ಅಧಿಕೃತ ಜ್ಞಾಪನ ಕಂಡಿಕೆ (4)ರಲ್ಲಿ "The Head of the office under whose jurisdiction the Government servant was working should send a report promptly where the unauthorized absence exceeds a period of 15-days" ಎಂದು ನಿರ್ದೇಶಿಸಲ್ಪಟ್ಟಿದೆ.

ಆದರೆ ದಿನಾಂಕ: 22.02.2010ರಿಂದ (ಅಂದರೆ 4 ತಿಂಗಳುಗಳಿಗಿಂತ ಹೆಚ್ಚಿನ ಅವಧಿ) ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಶ್ರೀ ಕೆ. ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರ ಅನಧಿಕೃತ ಗೈರು ಹಾಜರಾತಿ 15 ದಿನಗಳು ಮೀರಿದ ತಕ್ಷಣ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಚೇರಿಯು ನೇಮಕಾತಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿಲ್ಲ, ಹಾಗೂ ಅವರ ಅನಧಿಕೃತ ಗೈರು ಹಾಜರಾತಿ 4 ತಿಂಗಳುಗಳಿಗೆ ಮೀರಿದ್ದರೂ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ನಿರ್ಧಿಷ್ಟವಾದ ವರದಿ ಸಲ್ಲಿಸದೆ ಅವರ ಕಛೇರಿ ಆದೇಶದ **ಸಂಖ್ಯೆ:ಜಿಸಂಕೋ/ಆಡಳಿತ-1/05/2010-11 ದಿನಾಂಕ:03.07.2010ರಲ್ಲಿ** ಈ ಸಾಂಖ್ಯಿಕ ನಿರೀಕ್ಷಕರ ದಿನಾಂಕ: 22.02.2010ರಿಂದ **4 ತಿಂಗಳ** ಅವರ ಅನಧಿಕೃತ ಗೈರು ಹಾಜರಾತಿಯನ್ನು **ಸಕ್ರಮಗೊಳಿಸಿ ಆಡಳಿತಾತ್ಮಕ ಸಮಸ್ಯೆಗೆ ಕಾರಣರಾಗಿದ್ದರಿಂದ** ಹಾಗೂ ಇಂತಹ ಆದೇಶವನ್ನು ಹೊರಡಿಸಿ ಅ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಯಾವುದೇ ಕ್ರಮ ವಹಿಸದಂತೆ ತಡೆಗಟ್ಟಲು ಪ್ರಯತ್ನಿಸಿರುತ್ತಾರೆ ಹಾಗೂ **ದಿನಾಂಕ:22.02.2010ರಿಂದ** ಅನಧಿಕೃತ ಗೈರು ಹಾಜರಾದ ಈ ಸಾಂಖ್ಯಿಕ ನಿರೀಕ್ಷಕರು, ಕರ್ತವ್ಯಕ್ಕೆ **ಹಾಜರಾದ ಕುರಿತು** ಮಾಹಿತಿ ನೀಡದೆ ಕೇಂದ್ರ ಕಚೇರಿಯನ್ನು ಸಂಪೂರ್ಣವಾಗಿ ಕತ್ತಲಲ್ಲಿಟ್ಟಿರುವುದಲ್ಲದೆ, ತಪ್ಪು ಮಾಹಿತಿ ನೀಡಿದ್ದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಕಡತದ ದೃಢೀಕೃತ ಝೆರಾಕ್ಸ್-ಪ್ರತಿಯನ್ನು ತಕ್ಷಣ ಸಲ್ಲಿಸುವಂತೆ ಹಾಗೂ ಈ ಕಡತವನ್ನು ನಿರ್ವಹಿಸಿದ ಆಡಳಿತ ವಿಭಾಗದ ಸಿಬ್ಬಂದಿಯನ್ನು ಅಮಾನತ್ತುಗೊಳಿಸುವುದರ ಸಹಿತವಾಗಿ ಅವರ **ವಿರುದ್ಧ ಕ್ರಮ ಜರುಗಿಸುವ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ.**

ಆದಾಗ್ಯೂ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ ಇವರು ಶ್ರೀ ಕೆ. ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರ ಅನಧಿಕೃತ ಗೈರು ಹಾಜರಾತಿ ಕುರಿತು ಮೇಲೆ ತಿಳಿಸಲಾದ ಸರ್ಕಾರದ ಅಧಿಕೃತ ಜ್ಞಾಪನದ ಅನ್ವಯ ಹಾಗೂ ಮೇಲೆ ತಿಳಿಸಲಾದ ನಿಯಮಗಳ ಅನ್ವಯ ನೇರವಾಗಿ ಇಲಾಖಾ ಮುಖ್ಯಸ್ಥರಾದ ಶಿಸ್ತು ಪ್ರಾಧಿಕಾರಕ್ಕೆ ವರದಿ ಸಲ್ಲಿಸದಿದ್ದರೂ, **ದಿನಾಂಕ: 22.02.2010ರಿಂದ** ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಈ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದನ್ನು ಕಾಯ್ದಿರಿಸಿ, ಅವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವುದು ಅಗತ್ಯವಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಕಚೇರಿ ಆದೇಶ ಸಂಖ್ಯೆ: ಆಡಳಿತ/325/2010-11

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣದಿಂದ, ಶ್ರೀ ಕೆ. ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರ ನಿರಂತರವಾದ ಅನಧಿಕೃತ ಗೈರು ಹಾಜರಾತಿ ವಿಶೇಷವಾಗಿ **ದಿನಾಂಕ: 22.02.2010ರಿಂದ** ಇಲ್ಲಿಯವರೆಗಿನ (ಅಂದರೆ 4 ತಿಂಗಳುಗಳಿಗಿಂತ ಹೆಚ್ಚಿನ ಅವಧಿ) ಸರ್ಕಾರದ ಸೇವೆಗೆ ಅವರ ಅನಧಿಕೃತ ಗೈರು ಹಾಜರಾತಿಯನ್ನು ತೀವ್ರವಾಗಿ ಪರಿಗಣಿಸಿ ಹಾಗೂ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಗಳು, 1966ರ ನಿಯಮ-3ನ್ನು ಉಲ್ಲಂಘಿಸಿ ಸರ್ಕಾರದ ನೌಕರನೊಬ್ಬನಿಗೆ ಸಲ್ಲದ ರೀತಿಯಲ್ಲಿ ವರ್ತಿಸಿದ್ದರಿಂದ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಶಿಸ್ತು ಪ್ರಾಧಿಕಾರವಾದ ನಾನು ಕರ್ನಾಟಕ ನಾಗರೀಕ ಸೇವಾ (ನಿಯಂತ್ರಣ, ಅಪೀಲು ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಯಲಬುರ್ಗಾ(ಕೊಪ್ಪಳ ಜಿಲ್ಲೆ) **ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.**

ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957ರ ನಿಯಮ 98(1)(ಎ)ರ ಅನ್ವಯ ಅವರು ಜೀವನ ನಿರ್ವಹಣಾ ಭತ್ಯೆಯನ್ನು ಪಡೆಯಲು ಅರ್ಹರಾಗಿದ್ದರೂ, ಅದೇ ನಿಯಮಗಳ ನಿಯಮ:98(2)ರಲ್ಲಿ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರನು ಯಾವುದೇ ಉದ್ಯೋಗದಲ್ಲಿ/ವ್ಯವಹಾರದಲ್ಲಿ/ ವೃತ್ತಿಯಲ್ಲಿ ನಿರತರಾಗಿರತಕ್ಕದ್ದಲ್ಲ ಹಾಗೂ ಅದೇ ನಿಯಮಗಳ ನಿಯಮ

104(2)ರ ಅನ್ವಯ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರನು ತನ್ನ ಕಚೇರಿ ಇರುವ ಸ್ಥಳದಲ್ಲಿ ವಾಸಿಸುತ್ತಿದ್ದ ಹೊರತು 98ನೇ ನಿಯಮದ ಮೇರೆಗೆ ಆತನಿಗೆ ಜೀವನ ನಿರ್ವಹಣಾ ಭತ್ಯೆಯನ್ನು ಮಂಜೂರು ಮಾಡತಕ್ಕದ್ದಲ್ಲವಾದ್ದರಿಂದ ನಿರಂತರವಾಗಿ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿ ಹೊಂದಿರುವ ಇವರು ಕೇಂದ್ರ ಸ್ಥಾನದಲ್ಲಿರುವ ಸಾಧ್ಯತೆ ಇಲ್ಲವಾದ್ದರಿಂದ ಅವರಿಗೆ ಜೀವನ ನಿರ್ವಹಣಾ ಭತ್ಯೆಯನ್ನು ನೀಡುವ ಪೂರ್ವದಲ್ಲಿ ಮೇಲಿನ ನಿಯಮಗಳನ್ನು ಪ್ರತಿ ತಿಂಗಳು ಪಾಲಿಸ ತಕ್ಕದ್ದೆಂದು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ ಇವರಿಗೆ ಸೂಚಿಸಲಾಗಿದೆ.

ಶ್ರೀ ಕೆ. ಚಂದ್ರಶೇಖರ, ಸಾಂಖ್ಯಿಕ ನಿರೀಕ್ಷಕರು, ಇವರು ದಿನಾಂಕ:22.02.2010ರಿಂದ ಅನಧಿಕೃತ ಗೈರು ಹಾಜರಾಗಿದ್ದರೂ, ಕೇವಲ ಅವರಿಗೆ ದಿನಾಂಕ:20.05.2010ರಂದು ಹೊರಡಿಸಲಾದ ಜ್ಞಾಪನದ ಪ್ರತಿಯನ್ನು ಈ ನಿರ್ದೇಶನಾಲಯಕ್ಕೆ ಕಳುಹಿಸಿದ್ದನ್ನು ಹೊರತುಪಡಿಸಿ, ಅವರ ಅನಧಿಕೃತ ಗೈರು ಹಾಜರಾತಿ ಕುರಿತು ಯಾವುದೇ ನಿರ್ಧಿಷ್ಟವಾದ ಪ್ರಸ್ತಾವನೆಯನ್ನು ಸಲ್ಲಿಸದೆ ಇರುವ ಕುರಿತು ಹಾಗೂ ಅನಧಿಕೃತ ಗೈರು ಹಾಜರಾಗಿದ್ದ ಅವರು, ನಿರಂತರವಾದ ಅನಧಿಕೃತ ಗೈರು ಹಾಜರಾತಿ ನಂತರ ಕರ್ತವ್ಯಕ್ಕೆ ಹಾಜರಾಗದೆ ಇದ್ದಾಗಲೂ, ಅವರ ಅನಧಿಕೃತ ಗೈರು ಹಾಜರಾತಿಯನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರ ಕಛೇರಿ ಆದೇಶದ ಸಂಖ್ಯೆ:ಆಡಳಿತ/1/05/2010-11, ದಿನಾಂಕ:03.07.2010ರಲ್ಲಿ ನಿಯಮಗಳ ವಿರುದ್ಧ ಸಕ್ರಮಗೊಳಿಸಿ ಆಡಳಿತಾತ್ಮಕ ಸಮಸ್ಯೆಗೆ ಕಾರಣರಾದ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯ ಆಡಳಿತ ವಿಭಾಗದ ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸುವುದರ ಕುರಿತು ತಕ್ಷಣ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಕೊಪ್ಪಳ, ಇವರಿಗೆ ಸೂಚಿಸಲಾಗಿದೆ.

ಹೆಚ್.ಇ. ರಾಜಶೇಖರಪ್ಪ

ಪಿ.ಆರ್.1188 ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್-18/ಎಫ್‌ಸಿ/2010, ದಿನಾಂಕ:21ನೇ ಜುಲೈ, 2010

ಅರ್ಜಿದಾರರು:

1) ಎಲ್ಯ ಮಹಾಬೆನ್ (70 ವರ್ಷ)
ಬಿನ್ ದಿ: ಥೋಮಸ್ ಮಹಾಬೆನ್.
2) ಸರೋಜಿನಿ ಮಹಾಬೆನ್ (65 ವರ್ಷ)
ಕೋಂ ಎಲ್ಯ ಮಹಾಬೆನ್,
3) ಪ್ರತಿಭಾ ಆರ್. ಪುತ್ರನ್ (40 ವರ್ಷ)
ಕೋಂ ರಾಜೀವ್ ಎಸ್. ಪುತ್ರನ್,
ಎಲ್ಲರ ವಾಸ: ಮಜಲು ಮನೆ, ಕೋಡಾಶ್ರಮ ಅಂಚೆ, ಕೊಡವೂರು ಗ್ರಾಮ, ಉಡುಪಿ.

ಪ್ರತಿವಾದಿಗಳು:

1) ಉದಯ (37 ವರ್ಷ) ಬಿನ್ ಮೋನಪ್ಪ ಪೂಜಾರಿ, ವಿಳಾಸ: "ಮೋಹನ ಸದನ", ಆರ್.ಟಿ.ಓ. ಕಛೇರಿ ಹಿಂಬದಿ, ಉಡುಪಿ.
2) ದಿ ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ., ಬ್ರಾಂಚ್ ಆಫೀಸು, ವಿಷ್ಣು ಪ್ರಕಾಶ್ ಬಿಲ್ಡಿಂಗ್, 2ನೇ ಮಹಡಿ, ಉಡುಪಿ.

ಅಧಿಸೂಚನೆ

ಅರ್ಜಿದಾರರಾದ ಶ್ರೀ ಎಲ್ಯಾ ಮಹಾಬೆನ್ ಇವರು ತಮ್ಮ ಮಗನಾದ ಸುನಿಲ್ ಕುಮಾರ್ ಇವರು 1ನೇ ಪ್ರತಿವಾದಿಗಳಿಗೆ ಸೇರಿದ ಗೂಡ್ಸ್ ಟೆಂಪೋ ಸಂಖ್ಯೆ: ಕೆಎ-19-ಬಿ-0936 ನಲ್ಲಿ ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:23.05.2010ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿದ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಕೆ.ಜಿ. ಜಾನ್ಸನ್

ಪಿ.ಆರ್.1166 ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ: ಡಬ್ಲ್ಯೂಸಿಎ/ಎಫ್/ಎಸ್ಆರ್-18/2010, ದಿನಾಂಕ:11ನೇ ಜೂನ್, 2010

ಅರ್ಜಿದಾರರು:

1) ಶ್ರೀ ದೇವೇಗೌಡ (ಅ) ದ್ಯಾವಪ್ಪ ಬಿನ್ ಲೇಟ್ ಅಣ್ಣೇಗೌಡ

2) ಶ್ರೀಮತಿ ಜಯಮ್ಮ ಕೋಂ ದೇವೇಗೌಡ (ಅ) ದ್ಯಾವಪ್ಪ.

ವಾಸ:ಬಸವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ಪ್ರತಿವಾದಿಗಳು:

1) ಶ್ರೀ ಎಂ.ಪಿ. ಜಯರಾಮ ಬಿನ್ ಪುಟ್ಟೇಗೌಡ, ಮಲ್ಲಿತಮ್ಮನಹಳ್ಳಿ ಗ್ರಾಮ, ಗಂಜಲಗೂಡು ಅಂಚೆ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು.

2) ಶಾಖಾ ವ್ಯವಸ್ಥಾಪಕರು, ಶ್ರೀ ರಾಮ್‌ಜನರಲ್ ಇನ್‌ಶೂರೆನ್ಸ್ ಕಂ.ಲಿ., ಜಯಪುರ, ರಾಜಸ್ಥಾನ ರಾಜ್ಯ.

ಪ್ರತಿನಿಧಿಸುವವರು: ಬೆಂಗಳೂರು ಶಾಖೆ.

3) ಜನರಲ್ ಮ್ಯಾನೇಜರ್, ಕುಮಾರಸ್ವಾಮಿ ಮಿನರಲ್ಸ್, ಬಳ್ಳಾರಿ.

4) ದಿ ಓರಿಯಂಟಲ್ ಇನ್‌ಶೂರೆನ್ಸ್ ಕಂ.ಲಿ., ಬಳ್ಳಾರಿ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಬಿ.ಡಿ. ಕುಮಾರ್ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:16.04.2009 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

ಪಿ.ಆರ್.1174

IN THE COURT OF COMMISSIONER FOR WORKMEN'S COMPENSATION, BIDAR

No. LOB/WCA/Cr-F-30/2010

Applicants: V/s

Syed Ghudu Meeyan S/o Syed Saiban Sab.
Age:29 Yrs. Occup: Labour,
R/o Hamilapur, Bidar, and 3 others.

Respondents:

1) Shulekha Bai W/o Kailash.
M.P. of Kunal Crushar , Hamilapur, Bidar.
2) Deepak Kumar Agarwa
M.P.of Kunal Crushar, Hamilapura, Bidar.
3) Muqeem Supervisor of Kunal Crushar, Hamilapur, Bidar.

PROCLAIMATION

Sri/Smt. Syed Ghudu Sab W/o. F/o. S/o. M/o Khairunnisa Begum, R/o Hameelapur, Bidar have/has filed application in this Court claiming compensation stating that Late: Khairunnise Begum, was working as Labour Under the Respondent No.I he met with an accident arising out of and during the course of employment as a result he died on 10.03.2009.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner for workmen's
Compensation, Bidar.

PR-1175

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಕಾಅಕೊ/ಕಾನಪ/ಮ.ಪ್ರ/ಸಂಖ್ಯೆ–148/2009, ದಿನಾಂಕ:24ನೇ ಅಕ್ಟೋಬರ್, 2009

ಅರ್ಜಿದಾರರು:

1) ಶ್ರೀಮತಿ ಗಾಯತ್ರಿ ಗಂಡ: ಲೇಟ್ ಗಾದಿಲಿಂಗಪ್ಪ, 20 ವರ್ಷ (ಮೃತನ ಹೆಂಡತಿ)

2) ಸಿದ್ದವ್ವ ಗಂಡ ಲೇಟ್ ರೇವಣ್ಣ, 40 ವರ್ಷ (ಮೃತನ ತಾಯಿ), ವಾಸ: ಗಾದಿಗನೂರು, ಹೊಸಪೇಟೆ (ತಾ), ಹಾಲಿವಾಸ: ಕಿನ್ನಾಳ ಗ್ರಾಮ, ಜಿ:ಕೊಪ್ಪಳ.

ಪ್ರತಿವಾದಿಗಳು:

1) ಶ್ರೀಮತಿ ನೆಲ್ಲುಡಿ ಬಸಮ್ಮ ಗಂಡ: ಎನ್. ಪಂಪಣ್ಣ, ಟ್ರಾಕ್ಟರ್ ಮಾಲೀಕರು, ಟ್ರಾಕ್ಟರ್ ನಂ.ಕೆಎ–35/ಟಿ–4057, ಟ್ರಾಲಿ ನಂ.ಕೆಎ–35/ಟಿ–4058, ವಾಸ: ಗಾದಿಗನೂರು, ತಾ:ಹೊಸಪೇಟೆ.

2) ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಡಿವಿಜನಲ್ ಆಫೀಸ್, ಯಲಮಾಂಚಲಿ ಕಾಂಪ್ಲೆಕ್ಸ್, 1ನೇ ಮಹಡಿ, ಸ್ಟೇಷನ್ ರೋಡ್, ಹೊಸಪೇಟೆ.

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಗಾದಿಲಿಂಗಪ್ಪ ರವರು ಪ್ರತಿವಾದಿಯವರಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ದಿನಾಂಕ:21.09.2008 ರಂದು ಕೆಲಸದಿಂದುಂಟಾದ ಅಪಘಾತದಿಂದ ಮೃತ ಹೊಂದಿರುತ್ತಾರೆ, ಎಂದು ವಿವರಿಸುತ್ತಾ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923ರ ಅಡಿಯಲ್ಲಿ ಪರಿಹಾರ ಧನ ಕೋರಿ ಅವಲಂಬಿತ ವಾರಸುದಾರರೆಂದು ಹೇಳಿಕೊಂಡು ಮೃತ: ಗಾದಿಲಿಂಗಪ್ಪ ಇವರ ವಾರಸುದಾರರಾದ ಶ್ರೀಮತಿ ಗಾಯತ್ರಿ ಗಂಡ ಲೇಟ್ ಗಾದಿಲಿಂಗಪ್ಪ (ಮೃತನ ಹೆಂಡತಿ) ಹಾಗೂ ಸಿದ್ದವ್ವ ಗಂಡ ಲೇಟ್ ರೇವಣ್ಣ (ಮೃತನ ತಾಯಿ) ಎಂಬುವವರು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದಕಾರಣ ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ತಾವೇನಾದರೂ ಅಥವಾ ತಾವೂ ಸಹ ಮೃತ ಹೊಂದಿದವರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಿದ ಅಥವಾ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ಅಥವಾ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ 30 ದಿನಗಳೊಳಗಾಗಿ ಆಕ್ಷೇಪಣೆ ಅಥವಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮತ್ತು ಸದರಿ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಅಥವಾ ಅರ್ಜಿ ಬಾರದಿದ್ದಲ್ಲಿ ಸದರಿ ಅವಧಿ ಮುಗಿದ ನಂತರ ಮೇಲ್ಕಾಣಿಸಿದ ಅರ್ಜಿದಾರರ ಅರ್ಜಿಯನ್ನೇ ಮುಂದಿನ ವಿಚಾರಣೆಗಾಗಿ ತೆಗೆದುಕೊಳ್ಳಲಾಗುವುದೆಂದು ಈ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೊಪ್ಪಳ ಜಿಲ್ಲೆ, ಕೊಪ್ಪಳ.

ಪಿ.ಆರ್.1180

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ: ಡಬ್ಲ್ಯೂಸಿಎ/ಎಫ್/ಎಸ್ಆರ್–19/2010, ದಿನಾಂಕ:

ಅರ್ಜಿದಾರರು:

1) ಶ್ರೀಮತಿ ಸುಜಾತ ಕೋಂ ಲೇ: ಪರಮೇಶ್

2) ಎಂ.ಪಿ. ಕಾವ್ಯ ಬಿನ್ ಲೇ: ಪರಮೇಶ್

3) ಎಂ.ಪಿ. ರಾಮ್ ಪ್ರಸಾದ್ ಬಿನ್ ಲೇ: ಪರಮೇಶ್

4) ಅಣ್ಣೇಗೌಡ ಬಿನ್ ಸಣ್ಣ ದೊಡ್ಡೇಗೌಡ, ಕೇರಾಫ್ ಹೆಚ್.ಎಸ್. ರಾಜಪ್ಪ, ಎಲ್ಲೂರು, ಗುಡ್ಡೇನಹಳ್ಳಿ ಕೊಪ್ಪಲು, ಕಂದಲಿ ಅಂಚೆ, ಹಾಸನ ತಾಲ್ಲೂಕು.

ಪ್ರತಿವಾದಿಗಳು:

1) ಎ.ಆರ್. ಕುಮಾರ್ ಬಿನ್ ರಂಗೇಗೌಡ ಅಂಕಪುರ ಗ್ರಾಮ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು.

2) ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಹರ್ಷಮಹಲ್ ರಸ್ತೆ, ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ರಘು, ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:03.04.2010 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಹಾಸನ ಉಪವಿಭಾಗ, ಹಾಸನ.

ಪಿ.ಆರ್.1181

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪವಿಭಾಗ–3, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಐ.ಟಿ.ಐ. ಆವರಣ, ಬೆಂಗಳೂರು–560 029

ಪ್ರಕರಣ ಸಂಖ್ಯೆ:ಸಿಡಬ್ಲ್ಯೂಸಿ:ಎಫ್‌ಸಿ/ಸಿಆರ್–21/10, ದಿನಾಂಕ:26ನೇ ಜುಲೈ, 2010

ಅರ್ಜಿದಾರರು:

1) ಶ್ರೀ ಅಲ್ಲು ಭಗತ್
2) ಶ್ರೀಮತಿ ದೇವಂತಿದೇವಿ
ಪುಂಜಾವರ ವ್ಹಿಲೇಜ್ ಪೋಸ್ಟ್, ಜಿ:ಸಿವೋನ್, ಬಿಹಾರ, Now at ಬೆಂಗಳೂರು.

ಪ್ರತಿವಾದಿಗಳು:

1) ಮೆ॥ ಪ್ರೊಪ್ರೈಟರ್ ಪ್ರೈಮವೇರಾ ಪ್ರೋಜೆಕ್ಟ್ ಎನ್–ಕನ್ಸ್ಟ್ರಕ್ಷನ್ ಲಿ., ಬೆಂಗಳೂರು
2) ಮೆ॥ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ., ಬೆಂಗಳೂರು.

ಪ್ರಕಟಣೆ

ಅರ್ಜಿದಾರರಾದ ಶ್ರೀ ಅಲ್ಲುಭಗತ್ ಮತ್ತು ಶ್ರೀಮತಿ ದೇವಂತಿದೇವಿ ಇವರುಗಳು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ದಿವಂಗತ ಶ್ರೀ ಥೋಟನ್‌ಭಗತ್ ಇವರು ಪ್ರತಿವಾದಿ 1 ಇವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತ ಹೊಂದಿ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ ತಾವು ಮೃತರ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದೇನೆಂದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ–3, ಬೆಂಗಳೂರು.

ಪಿ.ಆರ್.1182

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ

ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಎಫ್‌ಸಿ–1/2009,

ಅರ್ಜಿದಾರರು:

1) Smt. Shanthamma K. W/o Late: K.M. Balasubramnyam

ಪ್ರತಿವಾದಿಗಳು:

1) Mr. R. Ashok Kumar Reddy S/o R. Chinnasha Reddy R/o Door No.17-67 Tavali Street, Palamaner- AP-517408.

2) Sri Lokeshwara K. S/o Late: K.M. Balasubramnyam

3) Rajesh K. S/o Late: K.M. Balasubramnyam

4) K.M. Munirathnam S/o Muniswamy, All are Residing at 2nd Cross Kuruberpet, Kolar.

2) the New India Assurance Co.Ltd., Branch Office Bangalure Manssion, 2nd Floor Doddapet, Kolar-563101.

ಅಧಿಸೂಚನೆ

ಅರ್ಜಿದಾರರಾದ Smt. Shanthamma K. ಅವರು ತಮ್ಮ ಗಂಡ Late: K.M. Balasubramnyam ಅವರು 1ನೇ ಪ್ರತಿವಾದಿ Mr. R. Ashok Kumar ರವರ ಬಳಿ ಚಾಲಕ: ಕ್ಲೀನರ್: ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:20/21.08.2008 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ, ಈ ಅಧಿಸೂಚನೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:15.07.2010ರಂದು ನೀಡಲಾಗಿದೆ.

ಎಸ್. ರೇವಣ್ಣ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು, ಕೋಲಾರ
ಉಪವಿಭಾಗ, ಕೋಲಾರ.

ಪಿ.ಆರ್.1183

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ, ಸಾಗರ

ಅಧಿಸೂಚನೆ ಸಂ: ಬಿ3:ಅಮೊ.ವಾಹನ.19/10–11, ದಿನಾಂಕ1ನೇ ಜುಲೈ, 2010

ಸಾಗರ ವಿಭಾಗದ ವ್ಯಾಪ್ತಿಯಲ್ಲಿ ಶ್ರೀಗಂಧದ ಹಾಗೂ ಇತರೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದ ವಾಹನಗಳನ್ನು ಸಾಗರ ವಿಭಾಗದ ಇಲಾಖಾ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡ ಸದರಿ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಪ್ರಕಾರ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಲಾದ ವಾಹನಗಳ ತಪಶೀಲು ಕೆಳಕಂಡಂತಿರುತ್ತದೆ.

ಕ್ರ. ಸಂ.	ವಾಹನಗಳ ವಿವರ	ಅರಣ್ಯ ಮೊಕದ್ದಮೆ ಸಂಖ್ಯೆ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1	2	3	4	5
1.	ಟಾಟಾ ಸುಮೋ ಕೆಎ–03–ಬಿ–9183	ಅರಣ್ಯ ಸಂಚಾರಿದಳ, ಶಿಕಾರಿಪುರ ಇವರ ಕಛೇರಿ ಅ.ಮೊ. ಸಂ:02/2010–11 ದಿ:09–04–2010	483-DL-51 BUZ-704313	446252-B4-2908535
2.	ಮಾರುತಿ ವ್ಯಾನ್ ಸಿಕೆಡಿ–725	ಶಿರಾಳಕೊಪ್ಪ ವಲಯದ ಅ.ಮೊ. ಸಂ:02/10–11 ದಿ:05–04–2010	Not Visible	Not Visible
3.	ಟಾಟಾ ಸುಮೋ ಕೆಎ–17–ಎನ್–6910	ಶಿಕಾರಿಪುರ ವಲಯದ ಅ.ಮೊ. ಸಂ:02/2010–11 ದಿ:16–04–2010	254701153815	385003080911618
4.	ಲಗೇಜ್ ಆಟೋ ಕೆಎ–15–4883	ಅಂಬ್ಲಿಗೊಳ ವಲಯದ ಅ.ಮೊ. ಸಂ:24/2010–11 ದಿ:31–05–2010	BBM-BPG-18215	MD-2-ALAL-22 PUC-12199

ಕ್ರ. ಸಂ.	ವಾಹನಗಳ ವಿವರ	ಅರಣ್ಯ ಮೊಕದ್ದಮೆ ಸಂಖ್ಯೆ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1	2	3	4	5
5.	ಟಾಟಾ ಏಸ್ ಕೆಎ-27-ಎ-4419	ಅನವಟ್ಟಿ ವಲಯದ ಅ.ಮೊ. ಸಂ: 31/2010-11 ದಿ:05-06-2010	275 IDLO 5A52 507326	44 5010 ASZ-RO 8750
6.	ಮಾರುತಿ ವ್ಯಾನ್ ಜಿಎ-01-ಎನ್-0462	ಅಂಬ್ಲಿಗೊಳ ವಲಯದ ಅ.ಮೊ. ಸಂ:32/10-11 ದಿ:22-06-2010	Not Visible	Not Visible
7.	ಮಾರುತಿ ವ್ಯಾನ್ ಜಿಎ-01-ಆರ್-4330	ಅಂಬ್ಲಿಗೊಳ ವಲಯದ ಅ.ಮೊ. ಸಂ:34/10-11 ದಿ:29-06-2010	Not Visible	ST-91-IN-960665

ಈ ಮೇಲ್ಕಂಡ ವಾಹನದ ಬಗ್ಗೆ ಯಾರು ವಾರಸುದಾರರು ಇಲ್ಲಿಯವರೆಗೆ ಹಾಜರಾಗದೇ ಇರುವುದರಿಂದ ಸದರಿ ವಾಹನಗಳ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಕೆಳ ಸಹಿ ಮಾಡಿರುವವರ ಸಮ್ಮುಖದಲ್ಲಿ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನಗಳನ್ನು ಶ್ರೀಗಂಧ ಮತ್ತು ಇತರೇ ಅರಣ್ಯ ಉತ್ಪನ್ನವನ್ನು ಕಳ್ಳಸಾಗಣೆ ಮಾಡಲು ಉಪಯೋಗಿಸಿದಕ್ಕಾಗಿ ವಾಹನಗಳನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿ ಮಾಡಿದವರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಈ ಮೇಲ್ಕಂಡ ವಾಹನಗಳ ಬಗ್ಗೆ ಯಾವ ವಾರಸುದಾರರು ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮನೋಜ್ ಕುಮಾರ್ ತ್ರಿಪಾಠಿ
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಗರ ವಿಭಾಗ, ಸಾಗರ.

ಪಿ.ಆರ್.1036

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ

ಬಿ3:ಅಮೊ:ವಾಹನ-27/06-07, ದಿನಾಂಕ:17ನೇ ಜುಲೈ, 2010

ಉಪಸ್ಥಿತರು: ಶ್ರೀ ಮನೋಜ್ ಕುಮಾರ್ ತ್ರಿಪಾಠಿ, ಭಾ.ಅ.ಸೇ.,
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು : ವಲಯ ಅರಣ್ಯಾಧಿಕಾರಿ,
ಸಾಗರ ವಲಯ, ಸಾಗರ. (ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಭಾದ್ಯತೆದಾರರು : ಶ್ರೀ ಪ್ರವೀಣ್ ಬಿನ್ ದೇವಪ್ಪ ಗೌಡ ಎಂ.ಎನ್.,
ಕೇಸ್ತೂರು ವಾಸಿ, ದೂರ್ವಾಸಪುರಂ ಅಂಚೆ, ತೀರ್ಥಹಳ್ಳಿ ತಾಲ್ಲೂಕು.
(ಮಾನ್ಯ ಶ್ರೀ ಕೆ.ಎನ್.ಶ್ರೀಧರ, ವಕೀಲರು, ಸಾಗರ)

ಪ್ರಸ್ತಾವನೆ:

ದಿನಾಂಕ:02-03-2007 ರಂದು ವಲಯ ಅರಣ್ಯಾಧಿಕಾರಿ, ಸಾಗರ ಇವರಿಗೆ ಮಾರುತಿ ಓಮ್ನಿಯಲ್ಲಿ ನಾಟಾ ಸಾಗಾಣಿಕೆಯಾಗುತ್ತಿದೆಂದು ಬಂದ ಖಚಿತ ವರ್ತಮಾನದ ಮೇರೆಗೆ ತಿರುವಂತೆ ಶಾಖೆಯ ವನಪಾಲಕರು ಮತ್ತು ಅರಣ್ಯ ರಕ್ಷಕರು ಸೇರಿ ಸಾಗರ ತಾಲ್ಲೂಕು ಪವಿತ್ರವನದ ಎದುರು ಭಾಗದ ಸಾಗರದಿಂದ ಕರ್ಕಿಕೊಪ್ಪಕ್ಕೆ ಹೋಗುವ ರಸ್ತೆಯಲ್ಲಿ ಕಾಯುತ್ತಿರುವಾಗ ಕರ್ಕಿಕೊಪ್ಪ ಕಡೆಯಿಂದ ಒಂದು ವಾಹನ ಸಂಜೆ 7-00 ಗಂಟೆ ಸಮಯದಲ್ಲಿ ಬರುತ್ತಿದ್ದುದನ್ನು ನಿಲ್ಲಿಸಲು ರಸ್ತೆಗೆ ಅಡ್ಡವಾಗಿ ಕಲ್ಲುಗಳನ್ನಿಟ್ಟು ಬ್ಯಾಟರಿ ಬೆಳಕಿನಿಂದ ವಾಹನ ನಿಲ್ಲಿಸಿ, ಇಲಾಖಾ ಸಿಬ್ಬಂದಿಯವರು ವಾಹನ ಸುತ್ತುವರಿದಾಗ

ಒಬ್ಬನು ಓಡಿಹೋದದ್ದನ್ನು ವಾಹನ ಚಾಲಕನನ್ನು ಹಿಡಿಯಲಾಯಿತು. ವಾಹನದೊಳಗೆ ಬ್ಯಾಟರಿ ಬೆಳಕಿನಿಂದ ನೋಡಲಾಗಿ ಕೆಲವು ಮರದ ತುಂಡುಗಳಿದ್ದು, ಅವುಗಳನ್ನು ನಾಡ ಗರಗಸದಿಂದ ಕೊಯ್ದು ಒರಟು ಕೆತ್ತನೆಯ ತುಂಡುಗಳಾಗಿದ್ದು, ಈ ತುಂಡುಗಳ ತುದಿ ಬುಡದಲ್ಲಿ ಇಲಾಖೆಯ ಯಾವುದೇ ಛಾಪಾದ ಗುರುತಿರಲಿಲ್ಲ. ವಾಹನ ಚಾಲಕನನ್ನು ವಿಚಾರಿಸಿದಾಗ ಅವನ ಬಳಿ ರಹದಾರಿ ಇರಲಿಲ್ಲವೆಂದು ಪ್ರಸನ್ನ ಬಿನ್ ದೇವಪ್ಪಗೌಡ, 23 ವರ್ಷ, ಕೆಸ್ತೂರು ವಾಸಿ, ದೂರ್ವಾಸಪುರ ಅಂಚೆ, ತೀರ್ಥಹಳ್ಳಿ ತಾಲ್ಲೂಕು ಎಂದು ತಿಳಿಸಿದ ಮೇರೆಗೆ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ಬೀಟೆ ತುಂಡುಗಳನ್ನು ಕಾರಿನಿಂದ ಕೆಳಗಿಳಿಸಿ, ಎಣಿಸಿ ಸಂಖ್ಯೆಕೊಟ್ಟು, ಅಳತೆ ಮಾಡಿ 10=0.504 ಎಂ3 ಇದ್ದು, ಅವುಗಳಿಗೆ ಅಮಾನತ್ತು ಛಾಪಾ KNFDG-E6E ಗುರುತು ಹೊಡೆದು ಅರಣ್ಯ ಮೊಕದ್ದಮೆ ಸಂಖ್ಯೆ: 137/06-07ನ್ನು ಕೆಂಪು ಬಣ್ಣದಿಂದ ಬರೆದು ವಾಹನ ಮಾರುತಿ ಓಮ್ನಿ ಕೆಎ-03-ಎನ್-6975, ಛಾಸಿಸ್ಸ ನಂ: 158425, ಇಂಜಿನ್ ನಂ: 1332355 ಇದ್ದು, ಕರ್ನಾಟಕ ಕಾಯಿದೆ 1963 ಸೆಕ್ಷನ್ 62, 71(ಎ,104(ಎ) ಮತ್ತು ಕರ್ನಾಟಕ ಅರಣ್ಯ ಕಾನೂನು 1969 ಉಪನಿಯಮ 144, 165ರ ಪ್ರಕಾರ ಪ್ರಥಮ ವರ್ತಮಾನ ವರದಿ, ಮಹಜರ್ ಕ್ರಮ, ಜಪ್ತು ವರದಿಯೊಂದಿಗೆ ಕೇಸು ದಾಖಲಿಸಿ ನಂತರ ಆಸಾಮಿಯನ್ನು ಜೆ.ಎಂ.ಎಫ್.ಸಿ. ಸಾಗರಕ್ಕೂ, ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರ್ಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿರುವ ವಾಹನ ಶೆಡ್ಡಿನಲ್ಲಿ ಸುರಕ್ಷೆತೆಗಾಗಿ ಇಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಈ ನ್ಯಾಯಾಲಯದಿಂದ ದಿ:05-03-2007 ರಂದು ಆದೇಶವಾಗಿದೆ.

ನಂತರ ಈ ವಾಹನವನ್ನು ಮಧ್ಯಂತರ ಅವಧಿಗೆ ಬಿಟ್ಟುಕೊಡಲು ದಿ:05-04-2007 ರಂದು ಮನವಿಯನ್ನು ಶ್ರೀ ಕೆ.ಎನ್.ಶ್ರೀಧರ್ ವಕೀಲರು, ಸಾಗರ ಇವರ ವಕಾಲತನಾಮದೊಂದಿಗೆ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಇವರ ಅರ್ಜಿಯನ್ನು ದಿ:28-02-2009 ರಂದು ತಿರಸ್ಕರಿಸಿ ಆದೇಶವಾಗಿದೆ.

ನಂತರ ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎಸ್.ಎಸ್.ಚಂದ್ರಶೇಖರ, ವಲಯ ಅರಣ್ಯಾಧಿಕಾರಿ, ಆನೇಕಲ ವಲಯ, ಇವರು ದಿ:01-08-2009ರಂದು ಕರೆಸಿ ಹೇಳಿಕೆ ಪಡೆಯಲಾಯಿತು. ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ "ನಾನು 2005 ರಿಂದ 2008 ರವರೆಗೆ ಸಾಗರ ವಲಯದ ವಲಯ ಅರಣ್ಯಾಧಿಕಾರಿಯಾಗಿ, ಕರ್ತವ್ಯ ನಿರ್ವಹಿಸುತ್ತಿದ್ದೆ. ದಿ:02-03-2007 ರಂದು ಸಂಜೆ 6-00 ಗಂಟೆ ಸಮಯದಲ್ಲಿ ದೂರವಾಣಿ ಮೂಲಕ ಬಂದ ವರ್ತಮಾನದ ಮೇರೆಗೆ ಸಿಬ್ಬಂದಿಗಳೊಂದಿಗೆ ಪವಿತ್ರವನದ ಎದುರು ಕರ್ಕಿಕೊಪ್ಪ ರಸ್ತೆಯಲ್ಲಿ ಒಂದು ಮಾರುತಿ ಓಮ್ನಿ ಕರ್ಕಿಕೊಪ್ಪ ಕಡೆಯಿಂದ ಬರುತ್ತಿದ್ದು, ಅದನ್ನು ಬ್ಯಾಟರಿ ಸೂಚನೆ ಕೊಟ್ಟು ನಿಲ್ಲಿಸುವಂತೆ ಹೇಳಿದಾಗ ವಾಹನದಲ್ಲಿ ಇಬ್ಬರು ಇದ್ದು, ಒಬ್ಬ ಓಡಿಹೋದ ಚಾಲಕನನ್ನು ಹಿಡಿದುಕೊಂಡೆವು. ವಿಚಾರಿಸಿದಾಗ ಆತನ ಹೆಸರು ಪ್ರಸನ್ನ ಎಂದು ಓಡಿಹೋದವನು ಕೃಷ್ಣಮೂರ್ತಿ ಎಂದು ತಿಳಿಸಿದನು. ವಾಹನದಲ್ಲಿ ಒಟ್ಟು 10 ಬೀಟೆ ತುಂಡುಗಳಿದ್ದವು. ಅವುಗಳ ಮೇಲೆ ಇಲಾಖಾ ಯಾವುದೇ ಛಾಪಾ ಇರಲಿಲ್ಲ. ಅವು ಕೈ ಕೊಯ್ತದಿಂದ ಮಾಡಿದ ಒರಟು ಕೆತ್ತನೆಯಿಂದ ಕೂಡಿದ ತುಂಡುಗಳಾಗಿದ್ದುವು. ಅವುಗಳನ್ನು ಸಾಗಿಸಲು ರಹದಾರಿ ಇಲ್ಲ ಎಂದು ತಿಳಿಸಿದರು. ತುಂಡುಗಳನ್ನು ಅಳತೆ ಮಾಡಿ, ಕ್ರಮ ಸಂಖ್ಯೆ ಕೊಟ್ಟು, ಇಲಾಖಾ ಛಾಪಾ ಹೊಡೆದವು. ವಾಹನ ಮಾರುತಿ ಓಮ್ನಿ ಆಗಿದ್ದು, ಅದರ ಸಂಖ್ಯೆ: ಕೆಎ-03-ಎನ್-6975 ಆಗಿತ್ತು. ವಾಹನ ಮತ್ತು ತುಂಡುಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡೆವು. ಮಹಜರನ್ನು ನೋಡಿದ್ದು, ಅದನ್ನು ನಿಪಿ-1 ಎಂದು ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದೆ. ಕಛೇರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅರಣ್ಯ ಮೊಕದ್ದಮೆ ಸಂಖ್ಯೆ ಪಡೆದು ವಾಹನದ ಮೇಲೆ ನಮೂದಿಸಿದೆವು. ತುಂಡುಗಳು, ವಾಹನ, ಆರೋಪಿಯೊಂದಿಗೆ ಕಛೇರಿಗೆ ಬಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದು, ಅದನ್ನು ನಿಪಿ-2 ಎಂದು ನನ್ನ ಸಹಿಯನ್ನು 2ಎ ಎಂದು ಗುರ್ತಿಸಿದೆ. ಜಪ್ತು ವರದಿಯನ್ನು ನಿಪಿ-3 ಎಂದು ನನ್ನ ಸಹಿಯನ್ನು ನಿಪಿ-3ಎ ಎಂದು ಗುರ್ತಿಸಿದೆ. ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರ್ಪಡಿಸಿದೆವು. ವಿಚಾರಣಾ ವರದಿ ತಯಾರಿಸಿದ್ದು, ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಹ ಸಲ್ಲಿಸಿರುತ್ತೇನೆ. ವಿಚಾರಣಾ ವರದಿಯನ್ನು ನಿಪಿ-4 ಎಂದು ನನ್ನ ಸಹಿಯನ್ನು ನಿಪಿ-4ಎ ಎಂದು ಗುರ್ತಿಸಿದೆ. ತುಂಡು ಮತ್ತು ವಾಹನವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಆದೇಶದ ಮೇರೆಗೆ ಸರ್ಕಾರಿ ನಾಟಾ ಸಂಗ್ರಹಾಲಯಕ್ಕೆ ಸಾಗಿಸಿದೆವು. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಆದೇಶವನ್ನು ಗುರುತಿಸಿದ್ದು, ಅದನ್ನು ನಿಪಿ-5 ಎಂದು ಗುರ್ತಿಸಿದೆ".

ಪಾಟಿಸವಾಲು: ಕೆ.ಎನ್.ಎಸ್. ವಕೀಲರಿಂದ ಕರ್ತವ್ಯ ನಿರ್ವಹಿಸಿದ ಬಗ್ಗೆ ದಿನಚರಿಯಲ್ಲಿ ನಮೂದಿಸುತ್ತೇನೆ. ದಿ:02-03-2007ರಂದು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಫಾರೆಸ್ಟರ್, ಗಾರ್ಡ್ ಒಟ್ಟು 3 ಜನ ನನ್ನ ಸ್ವಂತ

ವಾಹನದಲ್ಲಿ 6-30 ಸಮಯದಲ್ಲಿ ಹೋಗಿದ್ದೆವು. ಸಾಗರದಿಂದ ವರದಹಳ್ಳಿಗೆ ಹೋಗುವ ರಸ್ತೆಯಲ್ಲಿರುವ ಪವಿತ್ರವನದ ಎದುರು ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟು ರಸ್ತೆ ಬದಿಯಲ್ಲಿ ಕಾಯುತ್ತಿದ್ದೆವು. ನನ್ನ ಮೊಬೈಲಿಗೆ ದೂರವಾಣಿ ಕರೆ ಬಂದಿತ್ತು.

ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಕಡಿಮೆ ಇರುತ್ತದೆ. ನಾವು ರಸ್ತೆ ಪಕ್ಕದಲ್ಲಿ ಮರೆಯಲ್ಲಿ ನಿಂತು ಕಾಯುತ್ತಿದ್ದೆವು. ಸದರಿ ರಸ್ತೆ ನೇರವಾದ ರಸ್ತೆಯಾಗಿರುತ್ತದೆ. ಅಲ್ಲಿರುವ ಹಾಸ್ಟೆಲ್‌ನ ಬಲಗಡೆ ಭಾಗದಲ್ಲಿರುವ ಗಿಡಮರಗಳ ಬದಿಯಲ್ಲಿ ನಿಂತಿದ್ದೆವು. ಟಾರ್ಚ್ ಬೆಳಕಿನಿಂದ ವಾಹನ ನಿಲ್ಲಿಸಲು ಸೂಚನೆ ನೀಡಿದೆವು. ಮೂರು ಜನರಲ್ಲಿ ಯಾರು ಟಾರ್ಚ್ ಹೊಡೆದರೆಂದು ಗೊತ್ತಿಲ್ಲ. ಎಲ್ಲರೂ ಟಾರ್ಚ್ ಬೆಳಕು ಹೊಡೆದೆವು. ಓಡಿಹೋದವನನ್ನು ಹಿಡಿಯಲು ಅವನ ಮನೆಯ ಬಳಿ ಬಹಳಷ್ಟು ಸಾರಿ ಹೋಗಿದ್ದು, ಅವನು ಸಿಗಲಿಲ್ಲ. ಅವನು ತುಂಬೆ ಗ್ರಾಮದ ಕೃಷ್ಣಮೂರ್ತಿ ಎಂಬುವವನಾಗಿದ್ದು, ಅವನಿಗೆ ಮನೆ ಇರುತ್ತದೆ. ದೋಷರೋಪಣಾ ಪಟ್ಟಿಯಲ್ಲಿ ಆತನನ್ನೂ ಸೇರಿಸಿದ್ದೇವೆ. 1ನೇ ಆರೋಪಿ ಬೇರೆ ಊರಿನವನಾಗಿದ್ದು, ಸಾಗರದಲ್ಲಿ ವಾಸವಿರುವುದಾಗಿ ತಿಳಿಸಿದನು. ವಾಹನದ ಮಾಲೀಕರು ಯಾರೆಂದು ಮಾಹಿತಿ ಸಿಕ್ಕಿರುವುದಿಲ್ಲ. ಮಾಲೀಕತ್ವದ ಬಗ್ಗೆ ಪತ್ರ ವ್ಯವಹಾರ ಮಾಡಿರುತ್ತೇವೆ. ಸದರಿ ವಾಹನವನ್ನು ಕೃಷ್ಣಮೂರ್ತಿ ಎಂಬುವರು ಸಾಗರದ ಪ್ರೇಕ್ಷಣೀಯ ಸ್ಥಳ ನೋಡಲು ಬಾಡಿಗೆಗೆ ತಂದಿದ್ದರು ಎಂದರೆ ಸರಿಯಲ್ಲ. ಪ್ರಸನ್ನ ವಾಹನದ ಚಾಲಕನಾಗಿರಲಿಲ್ಲ ಎಂದರೆ ಸರಿಯಲ್ಲ. ಕೃಷ್ಣಮೂರ್ತಿ ವರದಹಳ್ಳಿ ದೇವಸ್ಥಾನದ ಬಳಿ ನಿಲ್ಲಿಸಿದ್ದು, ಅದನ್ನು ನಾವು ತಂದಿದ್ದೇವೆಂದರೆ ಸರಿಯಲ್ಲ. ಅದರಲ್ಲಿ ತುಂಡುಗಳಿರಲಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ವರದಿ ಮಾಡುವ ಸಲುವಾಗಿ ನಿಂತಿದ್ದ ವಾಹನಕ್ಕೆ ತುಂಡುಗಳನ್ನು ಹಾಕಿ ಕೇಸು ದಾಖಲಿಸಿದ್ದೇನೆಂದರೆ ಸರಿಯಲ್ಲ. ಅಮಾನತ್ತು ಪಡಿಸಿದ ಬೀಟೆ ತುಂಡುಗಳನ್ನು ಎಲ್ಲಿಂದ ತಂದರು ಎಂಬ ಬಗ್ಗೆ ಹುಡುಕಿದ್ದು, ಬಡು ಪತ್ತೆಯಾಗಿರುವುದಿಲ್ಲ. ಸದರಿ ಪ್ರದೇಶದಲ್ಲಿ ಸಿಬ್ಬಂದಿಗಳು' ಗಸ್ತು ಮಾಡುತ್ತಾರೆ. ಒಂದು ವೇಳೆ ಆ ಪ್ರದೇಶದಲ್ಲಿ ಮರ ಕಡಿತಲೆಯಾಗಿದ್ದರೆ, ಆ ಬಗ್ಗೆ ನಮಗೆ ಮಾಹಿತಿ ಸಿಗುತ್ತದೆ. ಆ ದಿವಸ ತುಂಬೆ ಅರಣ್ಯ ಪ್ರದೇಶದಲ್ಲಿ ಮರ ಕಡಿದಿರುವ ಬಗ್ಗೆ ಸಿಬ್ಬಂದಿಯಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ದೋಷಾರೋಪಣಾ ಪಟ್ಟಿ ಸಲ್ಲಿಸುವ ಪೂರ್ವದಲ್ಲಿ ತುಂಬೆ ವಲಯದಲ್ಲಿ ಬೀಟೆ ಮರ ಕಡಿದ ಬಗ್ಗೆ ಸಿಬ್ಬಂದಿಗಳಿಂದ ವರದಿ ಬಂದಿದೆ. ಇದನ್ನು ಆಧರಿಸಿ ತಪಾಸಣೆ ಮಾಡಿದಾಗ ಜಪ್ತು ಮಾಡಿದ ತುಂಡುಗಳು ಕೆತ್ತಿರುವುದರಿಂದ ಅದನ್ನು ತಾಳೆ ಮಾಡಲು ಸಾಧ್ಯವಾಗಿರುವುದಿಲ್ಲ. ಕಡಿದ ಮರವನ್ನು ಗರಗಸದಿಂದ ಕೊಯ್ತ ಮಾಡಿರುವುದು ಕಂಡುಬಂದಿರುತ್ತದೆ. ಪ್ರಸನ್ನನನ್ನು ಕರೆದುಕೊಂಡು ಹೋಗಿ ಮರ ಕಡಿಯಲು ಉಪಯೋಗಿಸಿದ ಉಪಕರಣಗಳನ್ನು ಹುಡುಕಲು ಪ್ರಯತ್ನಿಸಲಿಲ್ಲ. ತುಂಡುಗಳನ್ನು ತುಂಬಿದ ಜಾಗ ಬೆಳ್ಳೆಣ್ಣೆ ಬೀಟ್ ಅರಣ್ಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅದನ್ನು ತೋರಿಸಿದನು. ಸದರಿ ಸ್ಥಳದಲ್ಲಿ ಮರಗಳನ್ನು ದಾಸ್ತಾನು ಮಾಡಿ, ತುಂಬಿದ ಬಗ್ಗೆ ಗುರುತು ಇತ್ತು. ಈ ಬಗ್ಗೆ ಯಾವುದೇ ಮಹಜರ್ ಬರೆದಿಲ್ಲ. ಪವಿತ್ರ ವನದ ಎದುರು ನಿಂತು ನಾವು ಮಹಜರ್ ಜರುಗಿಸಿದೆವು. ಸ್ಥಳೀಯರ ಸಹಿಯನ್ನು ಮಹಜರ್‌ನಲ್ಲಿ ತೆಗೆದಕೊಂಡಿರುವುದಿಲ್ಲ. ಪೂರ್ಣ ಪ್ರಕ್ರಿಯೆಯು 2-00 ಗಂಟೆಯಲ್ಲಿ ಮುಗಿದಿರುತ್ತದೆ. ಸದರಿ ಪ್ರದೇಶದಲ್ಲಿ ಕತ್ತಲಿತ್ತು. ಬೆಳ್ಳೆಣ್ಣೆ ಮೀಸಲು ಅರಣ್ಯದಲ್ಲಿ ಬೀಟೆ ಮರಗಳ ಬೆಳವಣಿಗೆ ಇಲ್ಲ ಎಂದರೆ ಸರಿಯಲ್ಲ. ನಾನು ತನಿಖೆ ನಡೆಸಿದ ಜಾಗ ಶಿರುವಂತೆ ಶಾಖೆಗೆ ಬರುತ್ತದೆ. ನಾವು ಜಪ್ತು ಮಾಡಿದ ತುಂಡುಗಳು ಅಂದಾಜು 17 ಅಡಿ ಇತ್ತು. ಸದರಿ ವಾಹನದ ಹಿಂಭಾಗದ ಸೀಟು ಇರಲಿಲ್ಲ. ಬದಲಾಗಿ ತುಂಡುಗಳನ್ನು ದಾಸ್ತಾನು ಮಾಡಿದ ಸ್ಥಳದಲ್ಲಿ ಚಕ್ಕೆ ಕೆತ್ತಿದ ಕುರುಹು ಕಂಡುಬಂದಿರುವುದಿಲ್ಲ. ಸದರಿ ತುಂಡುಗಳ ತೂಕದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ತುಂಡುಗಳ ಉದ್ದ ಮತ್ತು ದಪ್ಪವನ್ನು ಟೇಪಿನಿಂದ ಅಳತೆ ಮಾಡಿರುತ್ತೇವೆ. ಪವಿತ್ರ ವನದ ಸಿಬ್ಬಂದಿಗಳನ್ನು ಸಹಾಯಕರನ್ನಾಗಿ ತೆಗೆದುಕೊಂಡಿರುತ್ತೇವೆ. ವಾಹನದಿಂದ ಎಲ್ಲಾ ತುಂಡುಗಳನ್ನು ಕೆಳಗಿಳಿಸಿ ಅಳತೆ ಮಾಡಿರುತ್ತೇವೆ. ಮಹಜರ್ ಬರೆಯಲು ಪ್ರಾರಂಭಿಸಿ ತುಂಡುಗಳನ್ನು ಕೆಳಗಿಳಿಸಿ ಅಳತೆ ತೆಗೆದುಕೊಂಡು ನಮೂದಿಸಿರುತ್ತೇವೆ. ವಾಹನವನ್ನು ನಿಲ್ಲಿಸಿ ಅದರಲ್ಲಿ ಮರಗಳ ತುಂಡಗಳಿದ್ದ ಬಗ್ಗೆ ನಾವು ಗಮನಿಸಿದ್ದನ್ನು ಮಹಜರ್‌ನಲ್ಲಿ ಬರೆದಿಲ್ಲ ಎನ್ನುವುದು ಸರಿಯಲ್ಲ. ವಾಹನ ಖಾಲಿ ಇದ್ದು, ಇಲಾಖೆಯಲ್ಲಿರುವ ತುಂಡುಗಳನ್ನು ತುಂಬಿ ಅದರ ಮೇಲೆ ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾಹನದ ಮಾಲೀಕರು ವಾಹನವನ್ನು ಬಾಡಿಗೆಗೆ ಕೊಟ್ಟಿದ್ದು, ಅಕ್ರಮ ಸಾಗಾಣಿಕೆ ಕೊಟ್ಟಿರುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಮೇಲಿನ ಆರೋಪಗಳನ್ನು ತಪ್ಪಿಸಿಕೊಳ್ಳಲು ಕೇಸು ದಾಖಲಿಸಿದ್ದೇನೆಂದರೆ ಸರಿಯಲ್ಲ. ಮರು ವಿಚಾರಣೆ ಇರುವುದಿಲ್ಲ.

ಡಿಫೆನ್ಸ್ ಸಾಕ್ಷಿ ವಿಚಾರಣೆ ದಿ:26-09-2009, 21-11-2009ರಂದು 2 ಬಾರಿ ಕಾಲಾವಕಾಶ ನೀಡಿದೆ. ಸದರಿ ದಿನಾಂಕ:26-09-2009 ರಂದು ಡಿಫೆನ್ಸ್ ಕಡೆಯ ವಕೀಲರು ಹಾಜರಿದ್ದು, ಮುಂದಿನ ದಿನಾಂಕದಂದು ಡಿಫೆನ್ಸ್ ಸಾಕ್ಷಿ ವಿಚಾರಣೆ ಮಾಡಲು ಸಮಯ ಕೋರಿದಂತೆ ಕಾಲಾವಕಾಶ ನೀಡಿದ್ದರೂ ದಿ:21-11-2009ರಂದು ಡಿಫೆನ್ಸ್ ಕಡೆ ವಕೀಲರು ಗೈರು ಹಾಜರಾಗಿರುತ್ತಾರೆ. ಡಿಫೆನ್ಸ್ ಕಡೆ ವಾದವನ್ನು ಮಂಡಿಸಲು ದಿ:02-01-2010, 20-02-2010, 17-04-2010 ರಂದು

3 ಬಾರಿ ಕಾಲಾವಕಾಶ ನೀಡಿದ್ದರೂ. ಡಿಫೆನ್ಸ್ ಕಡೆಯಿಂದ ಆರ್.ಸಿ. ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿ ಗಿರುವುದಿಲ್ಲ. ಇದರಿಂದ ಡಿಫೆನ್ಸ್ ಕಡೆಯ ವಾದ ಇಲ್ಲವೆಂದು ಪರಿಗಣಿಸಿದೆ.

ಸಹಾಯಕ ಸರ್ಕಾರಿ ಅಭಿಯೋಜಕರು ದಿ:17–04–2010ರಂದು ವಾದ ಮಂಡಿಸಿ, ದಿ:02–03–2007ರಂದು ಬೀಟೆ ನಾಟಾ ಅಕ್ರಮವಾಗಿ ವಾಹನದಲ್ಲಿ ಸಾಗಿಸುತ್ತಿರುವಾಗ ಆರೋಪಿಗಳ ಸಮೇತ ಇಲಾಖಾ ಪರ ವಶಪಡಿಸಿಕೊಂಡು ಕೇಸು ದಾಖಲಿಸಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯನ್ನು ಈ ನ್ಯಾಯಾಲಯಕ್ಕೆ ಸಾಕ್ಷಿಗಳ ಸಹಿಯೊಂದಿಗೆ ಸಲ್ಲಿಸಿರುತ್ತಾರೆ. ಇದರಿಂದ ಈ ವಾಹನವನ್ನು ಅಕ್ರಮವಾಗಿ ಅರಣ್ಯ ಉತ್ಪನ್ನ ಸಾಗಿಸಲು ಬಳಸಿರುವುದು ಸಾಬೀತಾಗಿದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಾಗ್ರಿಗಳ ತಳಹದಿಯ ಮೇಲೆ ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿದೆ.

1. ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು ಮಾರುತಿ ವ್ಯಾನ್ ನೊಂದಣಿ ಸಂಖ್ಯೆ:KA-03-N-6975 ರಲ್ಲಿ ದಿನಾಂಕ:02–03–2007 ರಂದು ಬೀಟೆ ನಾಟಾ 10=0.504ಎಂ3 ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಲಾಗಿತ್ತೇ ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?
3. ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಮಾರುತಿ ವ್ಯಾನ್‌ನಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಬೀಟೆ ನಾಟಾವನ್ನು ಸಾಗಿಸಲು ಶಾಮಿಲಾಗಿದ್ದಾರೆಯೇ? ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು, ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಗೆ ತೆಗೆದುಕೊಂಡಿರುತ್ತಾರೆಯೇ?
4. ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ
2. ಎರಡನೇ ಅಂಶಕ್ಕೆ ಹೌದು ಎಂತಲೂ
3. ಮೂರನೇ ಅಂಶದ ಮೊದಲ ಭಾಗಕ್ಕೆ ಹೌದು ಎಂತಲೂ ಎರಡನೇ ಭಾಗಕ್ಕೆ ಇಲ್ಲ ಎಂಬುದಾಗಿರುತ್ತದೆ.

ಅಂಶ–1:

ದಿನಾಂಕ:02–03–2007ರಂದು ಸಾಗರ ವಲಯದ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಖಚಿತ ವರ್ತಮಾನದ ಮೇರೆಗೆ ಸಾಗರ ಟೌನ್ ಕರ್ಕಿಕೊಪ್ಪಕ್ಕೆ ಹೋಗುವ ರಸ್ತೆಯಲ್ಲಿ ಸಂಜೆ 7–00 ಗಂಟೆ ಸಮಯದಲ್ಲಿ ಗಸ್ತು ಕಾಯುತ್ತಿರುವಾಗ ಬೀಟೆ ನಾಟಾ ಅಕ್ರಮ ಸಾಗಾಣಿಯಲ್ಲಿ ತೊಡಗಿದ ಒಂದು ವಾಹನ ಬರುತ್ತಿರುವುದನ್ನು ಇಲಾಖಾ ಪರ ವಶಪಡಿಸಿಕೊಂಡು ಕೇಸು ದಾಖಲಿಸಿ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಹಾಜರ್ಪಡಿಸಿರುತ್ತಾರೆ. ಸಲ್ಲಿಸಿದ ದಾಖಲೆಗಳಿಗೂ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ತಾಳೆಯಾಗಿದ್ದು, ಇದರಿಂದ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆ ಎಂದು ನನ್ನ ಉತ್ತರವಾಗಿದೆ.

ಅಂಶ–2:

ಆರ್.ಸಿ. ಮಾಲೀಕರಾದ ಶ್ರೀ ಪ್ರವೀಣ್ ಬಿನ್ ದೇವಪ್ಪ ಗೌಡ ಎಂ.ಎನ್. ಕೆಸ್ತೂರು ವಾಸಿ, ದೂರ್ವಾಸಪುರ ಅಂಚೆ, ತೀರ್ಥಹಳ್ಳಿ ತಾಲ್ಲೂಕು ಇವರು ದಿ:05–04–2007 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ

ಸಲ್ಲಿಸಿರುತ್ತಾರೆ. ಇವರ ಅರ್ಜಿಯಲ್ಲಿ ಮತ್ತು ಬಿ ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ವಿಳಾಸದಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1) ಪ್ರಕಾರ ಕಾರಣ ಕೇಳಿ ಪತ್ರವನ್ನು ದಿ:13-04-2007 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ದಿಗೆ ಬಿಟ್ಟುಕೊಡಲು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ದಿ:28-02-2009ರಂದು ತಿರಸ್ಕರಿಸಿ ಆದೇಶವಾಗಿದೆ. ಡಿಫೆನ್ಸ್ ಸಾಕ್ಷಿ ಹೇಳಿಕೆಗೆ 2 ಬಾರಿ ದಿನಾಂಕ ನೀಡಿರುತ್ತದೆ. ಮತ್ತು ಡಿಫೆನ್ಸ್ ಹೇಳಿಕೆ ನೀಡಲೂ ಮತ್ತು ವಾದ ಮಂಡಿಸಲು 3 ಬಾರಿ ಕಾಲಾವಕಾಶ ನೀಡಿದೆ. ಡಿಫೆನ್ಸ್ ಹೇಳಿಕೆ ನೀಡಲು ಮತ್ತು ವಾದ ಮಂಡಿಸಲು ಡಿಫೆನ್ಸ್ ಸಾಕ್ಷಿಯಾಗಲೀ, ವಕೀಲರಾಗಲೀ ಬಹಳ ಮುಂಚಿತವಾಗಿ ಪತ್ರದ ಮೂಲಕ ತಿಳಿಸಿದ್ದರು ಹಾಜರಾಗಿರುವುದಿಲ್ಲ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ-3:

ದಿನಾಂಕ:02-03-2007ರಂದು ಮಾರುತಿ ವ್ಯಾನ್‌ನಲ್ಲಿ ಬೀಟೆ ನಾಟಾ 10=0.504ಎಂ3ನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಸಾಗರ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಯವರು ಪತ್ತೆ ಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಸಲ್ಲಿಸಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿನಾಂಕ:05-04-2007 ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಈ ವಾಹನವನ್ನು ಜೋಗಫಾಲ್ಸ್ ಮತ್ತು ವರದಹಳ್ಳಿ ನೋಡಲು ತೆಗೆದುಕೊಂಡು ಹೋಗಿದೆಂದು, ಈ ವಾಹನದ ಮೇಲೆ ಅರಣ್ಯ ಇಲಾಖೆಯವರು ಸುಳ್ಳುಕೇಸು ದಾಖಲಿಸಿರುತ್ತಾರೆಂದು ತಿಳಿಸಿದಂತೆ ಈ ಬಗ್ಗೆ ಯಾವುದೇ ಸಾಕ್ಷ್ಯಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಹಾಜರ್ಪಡಿಸಿರುವುದಿಲ್ಲ. ಅಲ್ಲದೇ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿದೆ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮನೋಜ್ ಕುಮಾರ್ ತ್ರಿಪಾಠಿ. ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಹಾಗೂ ಇಲ್ಲಿಯವರೆಗಿನ ತಿದ್ದುಪಡಿ ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ಸಾಗರ ಇವರು ಜಪ್ತು ಮಾಡಿದ ವಾಹನ ಮಾರುತಿ ವ್ಯಾನ್ ನೊಂದಣಿ ಸಂಖ್ಯೆ:KA-15-N-6975 ಮತ್ತು ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತಾದ ಬೀಟೆ ನಾಟಾ 10=0.504 ಎಂ3ನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ ಮಾರುತಿ ವ್ಯಾನ್ ನೊಂದಣಿ ಸಂಖ್ಯೆ:KA-03-N-6975 ಮತ್ತು ಈ ವಾಹನದಲ್ಲಿದ್ದ ಬೀಟೆ ನಾಟಾ 10=0.504 ಎಂ3ನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿ:17-07-2010 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30(ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಗರ ವಿಭಾಗ, ಸಾಗರ.

ಪಿ.ಆರ್.1121

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ವಾಕೈ 23 ಜಕೈಸೇ 2010, ಬೆಂಗಳೂರು, ದಿನಾಂಕ:28ನೇ ಜುಲೈ, 2010

ವಿಷಯ: ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರ ಅಂತಿಮ ಜೇಷ್ಠತಾ ಪಟ್ಟಿ ಕುರಿತು.

ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2010 ರಲ್ಲಿದ್ದಂತೆ ದಿ:19-06-2010ರಂದು ಪ್ರಕಟಿಸಿ, ನಿಗಧಿ ಪಡಿಸಿರುವ ಜೇಷ್ಠತೆಗೆ ಸಂಬಂಧಿಸಿದಂತೆ ಬಾಧಿತ ಅಧಿಕಾರಿಗಳಿಂದ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಅವುಗಳನ್ನು ಸದರಿ ಅಧಿಸೂಚನೆ ಪ್ರಕಟಿಸಿದ 15 ದಿನಗಳ ಕಾಲಾವಕಾಶ ನೀಡಿ, ಕರೆಯಲಾಗಿತ್ತು. ಆದರೆ, ಈ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಬಾರದೇ ಇದ್ದುದರಿಂದ, ಸಹಾಯಕ ನಿರ್ದೇಶಕರ ವೃಂದದ ದಿ:01-01-2010ರಲ್ಲಿದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಗಣಪತಿ

ಸರ್ಕಾರದ ಉಪ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ದಿನಾಂಕ:01-01-2010ರಲ್ಲಿದ್ದಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರ ಅಂತಿಮ ಜೇಷ್ಠತಾ ಪಟ್ಟಿ

ವೇತನ ಶ್ರೇಣಿ ರೂ.12000-22650

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು ಶ್ರೀಯುತರಾದ	ನೇರ ನೇಮಕಾತಿ ಮುಂಬಡ್ತಿ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಹುದ್ದೆಯಲ್ಲಿ ಮುಂಬಡ್ತಿ/ ಹೊಂದಿದ ದಿನಾಂಕ	ಜೇಷ್ಠತೆಗೆ ಅರ್ಹತಾ ದಿನಾಂಕ	ಅರ್ಹತಾ ದಿನಾಂಕ
1	2	3	4	5	6	7	8
1	ಎಸ್.ಜಗದೀಶ್	ಮುಂಬಡ್ತಿ	10-01-1959	16-01-1986	06.02..2008	06.02..2008	-
2	ಎಸ್.ಎಸ್.ಫಡಕೆ	ಮುಂಬಡ್ತಿ	07-07-1963	16-01-1986	06.02..2008	06.02..2008	-
3	ದಿನೇಶ್ ಕೆ ಹೆಬ್ಬಾರ್	ಮುಂಬಡ್ತಿ	30-10-1962	16-01-1986	06.02..2008	06.02..2008	-
4	ವೈ.ಎನ್.ಹಾವರ್ಗಿ	ಮುಂಬಡ್ತಿ	01-06-1962	16-01-1986	06.02..2008	06.02..2008	-
5	ಎಂ.ಎಸ್.ಅತ್ತೀಮರದ್	ಮುಂಬಡ್ತಿ	25-05-1963	16-01-1986	06.02..2008	06.02..2008	-
6	ಬಿ.ಆರ್.ಯೋಗಿಶ್	ಮುಂಬಡ್ತಿ	22-07-1967	22-11-1990	06.02..2008	06.02..2008	-
7	ವೀರೇಶ್ ಎಸ್.ಧವಳೆ	ಮುಂಬಡ್ತಿ	29-11- 1964	16-01-1986	05-05-2008	05-05-2008	-
8	ಆರ್.ಲಿಂಗರಾಜು	ಮುಂಬಡ್ತಿ	01-06-1965	16-01-1986	05-05-2008	05-05-2008	-
9	ಸಿ.ರವಿಕುಮಾರ್	ಮುಂಬಡ್ತಿ	12-03-1965	01-09-1989	05-05-2008	05-05-2008	-
10	ವಾಸುದೇವ ದೊಡ್ಡಮನಿ	ಮುಂಬಡ್ತಿ	01-06-1966	18-12-1990	05-05-2008	05-05-2008	-
11	ಎನ್.ಟಿ.ನೆಗಳೂರು	ಮುಂಬಡ್ತಿ	01-06-1964	12-09-1988	27-02-2009	27-02-2009	-
12	ಸಫಾರೆ ಶ್ರೀನಿವಾಸ	ಮುಂಬಡ್ತಿ	01-06-1966	12-09-1988	27-02-2009	27-02-2009	-
13	ಜನಾರ್ಧನ್	ಮುಂಬಡ್ತಿ	24-05-1964	12-09-1988	27-02-2009	27-02-2009	-
14	ಗಂಗಯ್ಯ	ಮುಂಬಡ್ತಿ	23-02-1963	28-11-1991	27-02-2009	27-02-2009	-

ಎಂ.ಎಸ್. ಗಣಪತಿ

ಪಿ.ಆರ್.1198

ಸರ್ಕಾರದ ಉಪ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ವಾಕೈ 12 ಜಕೈಸೇ 2010, ಬೆಂಗಳೂರು, ದಿನಾಂಕ:27ನೇ ಜುಲೈ, 2010

ವಿಷಯ: ಕೈಮಗ್ಗ ಮತ್ತು ಜವಳಿ ಇಲಾಖೆಯ ಪ್ರವರ್ಧನಾಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿ ಬಗ್ಗೆ.

ಕೈಮಗ್ಗ ಮತ್ತು ಜವಳಿ ಇಲಾಖೆಯ ಜವಳಿ ಪ್ರವರ್ಧನಾಧಿಕಾರಿಗಳ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2010ರಲ್ಲಿದ್ದಂತೆ ತಯಾರಿಸಿ, ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಪ್ರಕಟಿಸಿದೆ. ಈ ಕುರಿತಂತೆ ಯಾವುದೇ ಆಕ್ಷೇಪಣೆ / ಸಲಹೆಗಳಿದ್ದಲ್ಲಿ ಅವುಗಳನ್ನು ಈ ಅಧಿಸೂಚನೆ ಪ್ರಕಟಿಸಿದ 15 ದಿನಗಳೊಳಗೆ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರಿಗೆ ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಗಣಪತಿ

ಸರ್ಕಾರದ ಉಪ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ

ದಿನಾಂಕ:01.01.2010ಕ್ಕೆ ಅನ್ವಯಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಜವಳಿ ಪ್ರವರ್ಧನಾಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿ.

(ವೇತನ ಶ್ರೇಣಿ : ರೂ.10800-20025)

ಕ್ರಮ ಸಂಖ್ಯೆ	ನೌಕರರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಹುದ್ದೆಯಲ್ಲಿ ಮುಂಬಡ್ತಿ/ ಸೇರಿದ ದಿನಾಂಕ	ಜೇಷ್ಠತೆಗೆ ಅರ್ಹತಾ ದಿನಾಂಕ	ಷರಾ
1	2	3	4	5	6	7	8
1	ಜಿ.ಟಿ. ಕುಮಾರ್	ಮುಂಬಡ್ತಿ	27.07.1959	16.01.1986	03.01.2003	12.09.2001	-
2	ಕೀರ್ತೆಪ್ಪ ಗೋಟೂರು	ಮುಂಬಡ್ತಿ	05.05.1963	12.09.1988	03.01.2003	28.02.2008	-
3	ಮಲ್ಲಪ್ಪ ಜಿ. ಕೊಣ್ಣೂರು	ಮುಂಬಡ್ತಿ	01.04.1964	12.09.1988	03.01.2003	28.02.2008	-
4	ಶಿವಕುಮಾರ್	ಮುಂಬಡ್ತಿ	20.06.1964	12.09.1988	03.01.2003	28.02.2008	-
5	ಸುರೇಶ್ ಎನ್. ತಡಕನಹಳ್ಳಿ	ಮುಂಬಡ್ತಿ	15.12.1962	12.09.1988	03.01.2003	28.02.2008	-
6	ಕಾಶೀನಾಥ ಎಂ. ಭಾವಿಕಟ್ಟಿ	ಮುಂಬಡ್ತಿ	15.07.1962	12.09.1988	02.04.2008	28.02.2008	-
7	ಎಸ್.ಎಸ್. ಬೆನಕಲ್	ಮುಂಬಡ್ತಿ	01.06.1961	12.09.1988	28.02.2008	28.02.2008	-
8	ಯೋಗೀಶ್	ಮುಂಬಡ್ತಿ	05.01.1964	12.09.1988	28.02.2008	28.02.2008	-
9	ಬಿ.ಆರ್. ರಾಜ್‌ಕುಮಾರ್	ಮುಂಬಡ್ತಿ	06.01.1962	12.09.1988	29.12.2008	25.10.2008	-

ಕ್ರಮ ಸಂಖ್ಯೆ	ನೌಕರರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ ಇತರೆ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ಹುದ್ದೆಯಲ್ಲಿ ಮುಂಬಡ್ತಿ/ ಸೇರಿದ ದಿನಾಂಕ	ಜೇಷ್ಠತೆಗೆ ಅರ್ಹತಾ ದಿನಾಂಕ	ಷರಾ
1	2	3	4	5	6	7	8
10	ಎಸ್.ಐ. ಸಣಕಲ್	ಮುಂಬಡ್ತಿ	01.06.1964	12.09.1988	08.11.2008	25.10.2008	–
11	ಎ. ಧರಣೇಶ್	ಮುಂಬಡ್ತಿ	15.07.1964	12.09.1988	20.11.2008	25.10.2008	–
12	ಹೆಚ್.ಬಿ. ಪಾಟೀಲ್	ಮುಂಬಡ್ತಿ	01.05.1967	12.09.1988	03.11.2008	25.10.2008	–
13	ಎನ್. ಶಶಿಧರ್	ಮುಂಬಡ್ತಿ	17.11.1967	12.09.1988	31.10.2008	25.10.2008	–
14	ಪಿ.ಕೆ. ಪರಪ್ಪ	ಮುಂಬಡ್ತಿ	18.10.1961	12.09.1988	30.10.2008	25.10.2008	–
15	ಅಜಿತ್ ಜಿ. ನಾಯಕ್	ಮುಂಬಡ್ತಿ	22.07.1967	12.09.1988	12.02.2009	25.10.2008	

ಎಂ.ಎಸ್. ಗಣಪತಿ

ಪಿ.ಆರ್.1190

ಸರ್ಕಾರದ ಉಪ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಚಿಕ್ಕಮಗಳೂರು ಜಿಲ್ಲೆ

ಸಂಖ್ಯೆ: ಕಾಪಕಾ:ಎಫ್:11/2008,

ಅರ್ಜಿದಾರರು:

1) ಶ್ರೀಮತಿ ರತ್ನ ಕೋಂ ಶ್ರೀ ಲೇಟ್ ಮೋನಪ್ಪ
2) ಶ್ರೀ ಪ್ರೇಂ ಕುಮಾರ್ ಬಿನ್ ಶ್ರೀ ಲೇಟ್ ಮೋನಪ್ಪ
3) ಶ್ರೀ ಪ್ರವೀಣ್ ಕುಮಾರ್ ಬಿನ್ ಶ್ರೀ ಲೇಟ್ ಮೋನಪ್ಪ
ಕು: ಪ್ರಸಿಲ್ಲಾ ಡಾಟರ್ ಆಫ್ ಶ್ರೀ ಲೇಟ್ ಮೋನಪ್ಪ,
ತಳಹಾಂದಿ, ಹೊಸಪೇಟೆ, ಹಾಂದಿ ಅಂಚೆ,
ಚಿಕ್ಕಮಗಳೂರು.

ಪ್ರತಿವಾದಿಗಳು:

1) ಶ್ರೀ ಎನ್.ಬಿ. ಜಗದೀಶ್ ಬಿನ್ ಲೇಟ್ ಬಸವೇಗೌಡ,
ಕಾಫಿ ಬೆಳೆಗಾರರು.
ವಾಟಿಗನಹಳ್ಳಿ ಎಸ್ಟೇಟ್, ವಸ್ತಾರೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.
2) ದಿ ಬ್ರಾಂಚ್ ಮ್ಯಾನೇಜರ್ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ., ಬ್ರಾಂಚ್ ಆಫೀಸ್, ಚಿಕ್ಕಮಗಳೂರು.

ಪ್ರಕಟಣೆ

ಮೃತ ಶ್ರೀ ಮೋನಪ್ಪ ಎಂಬುವವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:23.09.2008ರಂದು ಅಪಘಾತ ಉಂಟಾಗಿ ಮೃತಪಟ್ಟಿರುವ ಬಗ್ಗೆ ಪರಿಹಾರ ಕೋರಿ ಮೇಲ್ಕಂಡ ಅರ್ಜಿದಾರರು ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಹೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಮೃತನ ಅವಲಂಬಿತರು ಯಾರು ಇಲ್ಲ ಎಂದು ಪರಿಗಣಿಸಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಎಸ್. ವಿಜಯಕುಮಾರ್

ಪಿ.ಆರ್.1210

ಕಾರ್ಮಿಕ ಅಧಿಕಾರಿ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ-2, ಚಿಕ್ಕಮಗಳೂರು.

ಕಾರ್ಮಿಕ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪವಿಭಾಗ-2, ಕಾರ್ಮಿಕ ಭವನ,
ಬನ್ನೇರುಘಟ್ಟ ರಸ್ತೆ, ಐ.ಟಿ.ಐ. ಆವರಣ, ಬೆಂಗಳೂರು-29

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ/ಬಿ2/ಎನ್ಎಫ್‌ಸಿ/ಸಿಆರ್-30/2004, ದಿನಾಂಕ:29ನೇ ಜೂನ್, 2010

ಅರ್ಜಿದಾರರು:

1) ಶ್ರೀಮತಿ ಮೆಹರ್ ತಾಜ್ ಕೋಂ ಲೇಟ್ ಸೈಯದ್ ಸಲೀಂ, ಸುಮಾರು 45 ವರ್ಷ ವಯಸ್ಸು.
ವಿಳಾಸ: ಡಿ.ಜೆ.ಹಳ್ಳಿ, ರಾಣಿ ರಸ್ತೆ, ಹಸನ್ ಲೈನ್, ಬೆಂಗಳೂರು-45.

2) ಶ್ರೀಮತಿ ಸಲ್ಮ ತಾಜ್ ಕೋಂ ಗಮ್ಮಸರ್, ಸುಮಾರು 23 ವರ್ಷ ವಯಸ್ಸು.
ವಿಳಾಸ: ಶಲಿಪ್ ಮೊಹಲ್ಲಾ, ಕುಣಿಗಲ್, ತುಮಕೂರು ಜಿಲ್ಲೆ.

3) ಶ್ರೀಮತಿ ರೇಷ್ಮಾ ತಾಜ್ ಕೋಂ ಮುಬಾರಕ್ ಸುಮಾರು 22 ವರ್ಷ ವಯಸ್ಸು.
ವಿಳಾಸ: ಕುಣಿಗಲ್, ಗುಜರಿ ಮೊಹಲ್ಲಾ, ತುಮಕೂರು ಜಿಲ್ಲೆ.

4) ತಸೆನಾ ತಾಜ್ ಬಿನ್ ಲೇಟ್ ಸೈಯದ್ ಸಲೀಂ ಸುಮಾರು 20 ವರ್ಷ ವಯಸ್ಸು.

5) ಶ್ರೀಮತಿ ಯಾಸ್ಮೀನ್ ಕೋಂ ಸೈಯದ್ ಸಲೀಂ ಸುಮಾರು 19 ವರ್ಷ ವಯಸ್ಸು.
ವಿಳಾಸ: 1ನೇ ಕ್ರಾಸ್, ಅರಬಿಕ್ ಕಾಲೇಜ್, ಬೆಂಗಳೂರು.

6) ಕು: ಜಯಬ ಬಿನ್ ಲೇಟ್ ಸೈಯದ್ ಸಲೀಂ, ಸುಮಾರು 11 ವರ್ಷ ವಯಸ್ಸು.

7) ಕು: ಅಸ್‌ಮಿಯಾ ಬಿನ್ ಲೇಟ್ ಸೈಯದ್ ಸಲೀಂ ಸುಮಾರು 10 ವರ್ಷ ವಯಸ್ಸು.

8) ಶ್ರೀಮತಿ ಮಲ್ಲಿಕಾ ಬೇಗಂ ಕೋಂ ಸೈಯದ್ ಗದ್ದಾರ್, ಸುಮಾರು 70 ವರ್ಷ ವಯಸ್ಸು,
ವಿಳಾಸ: ಡಿ.ಜೆ.ಹಳ್ಳಿ, ರಾಣಿ ರಸ್ತೆ, ಹಸನ್ ಲೈನ್, ಬೆಂಗಳೂರು-45.

ಪ್ರತಿವಾದಿಗಳು:

1) ಶ್ರೀ ಅಬ್ದುಲ್ ಸಯೀದ್ ಬಿನ್ ಅಬ್ದುಲ್ ರಶೀದ್, ನಂ.4ಇ, 1ನೇ ಸ್ಟ್ರೀಟ್, ಶಿವಾಜಿ ರಸ್ತೆ, ಬೆಂಗಳೂರು-51.

2) ದಿ ಡಿವಿಜನಲ್ ಮ್ಯಾನೇಜರ್ ದಿ ನ್ಯಾಷನಲ್ ಇನ್ಶೂರೆನ್ಸ್ ಕಂ.ಲಿ., ಡಿ.ಒ.ನಂ.5, ನಂ.72, ಮಿಷನ್ ರಸ್ತೆ, ಯುನಿಟಿ ಬಿಲ್ಡಿಂಗ್ ಅನೆಕ್ಸ್, ಬೆಂಗಳೂರು-27.

ಪ್ರಕಟಣೆ

ಅರ್ಜಿದಾರರಾದ ಮೆಹರ್‌ತಾಜ್, ಸಲ್ಮತಾಜ್, ರೇಷ್ಮಾ ತಾಜ್, ತಸೆನಾ ತಾಜ್, ಯಾಸ್ಮೀನ್, ಜಯಬ, ಅಸ್‌ಮಿಯಾ, ಮಲ್ಲಿಕಾ ಬೇಗಂ ಇವರುಗಳು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ದಿವಂಗತ ಸೈಯದ್ ಸಲೀಂ ಇವರು ಪ್ರತಿವಾದಿ-1 ಇವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ದಿನಾಂಕ:14.02.2004 ಅಪಘಾತ ಹೊಂದಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ:01.06.2005 ರಂದು ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೇ ತಾವು ಮೃತರ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

a) Mining lease should be in respect of **Iron Ore** only. If other minerals are found in association with **Iron Ore,** they should be brought to the notice of Government and if the lessee desires to mine these minerals along with **Iron Ore,** he/she/it should do so only after the consent of Government is obtained in writing.

b) If beryl or any other substance prescribed U/S 3 of the Atomic Energy Act, XXIX of 1948 is found to occur in the property under the lease, the lessee shall make available such mineral to the Government of India.

c) The lease shall also be subject to the provisions of Rules in Chapter IV of the Minerals Concession Rules, 1960.

d) The lease shall also be subject to the Rules, issued U/S 18 of the Mines & Minerals (D&R) Act, 1957.

e) The lessee shall pay to the Director of Mines and Geology in Karnataka, Bangalore, necessary Security Deposit for due observance of the terms and conditions of the lease in accordance with Rule 32 of the lease issued to him.

f) The lessee shall be governed by all conditions that may be incorporated in the lease deed. to be executed.

g) The lessee shall abide by the rules contained in the Karnataka State Forest Manual. if the lease area covers any forestland.

h) Government shall have the right of purchasing the ore at current market rates.

i) The lease would be determined if the lessee fails to commence execution of the lease deed.

j) The area mentioned above is subject to verification after actual survey and demarcation

k) The lease shall be for a period of **Thirty Years.**

l) The lessee/s shall pay Royalty, Cesses and Dead rent as prescribed vide Government of India's Notification published in the Gazette of India, Extraordinary, Part II-Section 3-Sub-sectio(i) vide G.S.R.574(E) dated 13th August 2009 and G.S.R. 575(E) dated 13th August, 2009, respectively.

Local & other Cesses: As prevalent in **Chitradurga** District.

Royalty: At the rate prescribed in Second Schedule to the Mines & Minerals (D&R) Act, 1957 and as amended from time to time.

m) The total area held by the applicant/s under mining lease including the present one, shall not exceed 10 Sq.Km.

n)Mining operations shall not be commenced/conducted unless a qualified manager and other supervisory staff are appointed as required under the Matalliferous Mines Regulations, 1961 and relevant notices are sent to the Director-General of Mines Safety, Dhanbad with a copy of the same to the concerned Director of Mines Safety.

o) The minerals should be value added and the Lessee should adhere to existing National Mineral Policy and Karnataka Mineral Policy, 2008.

A.CHANNEGOWDA,

P.R. 729 Under Secretary to Govt. (Mines), Commerce & Industries Department.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಸಇ 331 ಎಂಆರ್‌ಇ (1) 2008, ಬೆಂಗಳೂರು ದಿನಾಂಕ: 31ನೇ ಜುಲೈ 2010

ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿಸಿ/499/ಸಿಎಂಡಿ/75(1), ದಿನಾಂಕ:26/07/1977 ರಲ್ಲಿ ಕಾಯ್ದೆ ಕಲಂ 145(1) ರಲ್ಲಿನ ಅಧಿಕಾರ ಚಲಾಯಿಸಿ ದಿನಾಂಕ:26/07/1977 ರಿಂದ ಜಾರಿಗೆ ಬರುವಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಾಗಲಕೋಟೆಯ ಮಾರುಕಟ್ಟೆ ಕ್ಷೇತ್ರವನ್ನು 3 ಪ್ರತ್ಯೇಕ ಮಾರುಕಟ್ಟೆ ಕ್ಷೇತ್ರವನ್ನಾಗಿ ವಿಭಜಿಸಿದೆ. ಬಾಗಲಕೋಟೆಯ ಮಾರುಕಟ್ಟೆ ಕ್ಷೇತ್ರ, ಬಾಗಲಕೋಟೆ ಹಾಗೂ ಬೀಳಗಿ ತಾಲ್ಲೂಕುಗಳನ್ನು ಹುನಗುಂದ ಮಾರುಕಟ್ಟೆ ಕ್ಷೇತ್ರ ಹುನಗುಂದ ತಾಲ್ಲೂಕು ಮತ್ತು ಬಾದಾಮಿ ಮಾರುಕಟ್ಟೆ ಕ್ಷೇತ್ರ, ಬಾದಾಮಿ ತಾಲ್ಲೂಕು ಒಳಗೊಂಡಿರುತ್ತದೆ ಎಂದು ನಿಗದಿಪಡಿಸಿದೆ.

ಈಗ ಬಾಗಲಕೋಟೆ ಮಾರುಕಟ್ಟೆ ಕ್ಷೇತ್ರದಲ್ಲಿನ ಅಧಿಸೂಚಿತ ಕೃಷಿ ಉತ್ಪನ್ನಗಳ ಪರಿಣಾಮಕಾರಿ ಮಾರಾಟ ನಿಯಂತ್ರಣಕ್ಕಾಗಿ ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ, ಬಾಗಲಕೋಟೆ ಮತ್ತು ಬೀಳಗಿ ತಾಲ್ಲೂಕುಗಳಿಗೆ ಪ್ರತ್ಯೇಕ ಮಾರುಕಟ್ಟೆ ಕ್ಷೇತ್ರ ರಚಿಸುವ ಬಗ್ಗೆ ಪರಿಶೀಲಿಸಿ, ಸದರಿ ಅಧಿಸೂಚನೆ ಸಂಖ್ಯೆ:ಸಇ 331 ಎಂಆರ್‌ಇ 2008, ದಿನಾಂಕ:30/03/2010 ನ್ನು ದಿನಾಂಕ:01/04/2010 ರ ರಾಜ್ಯ ಪತ್ರದಲ್ಲಿ ಹಾಗೂ ದಿನಾಂಕ:14/04/2010 ರ **"ಕನ್ನಡ ಪ್ರಭ"** ದಿನಪತ್ರಿಕೆಯಲ್ಲಿ ಪ್ರಕಟಿಸಿ ಆಸಕ್ತರಿಂದ / ಸಂಬಂಧಿಸಿದವರಿಂದ ಆಕ್ಷೇಪಣೆ / ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈ ಅಧಿಸೂಚನೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ ಇವರಿಂದ ಆಕ್ಷೇಪಣೆ /ಸಲಹೆಗಳು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಸರ್ಕಾರವು ಅದನ್ನು ಪರಿಶೀಲಿಸಿದ ನಂತರ, ಬಾಗಲಕೋಟೆ ಮಾರುಕಟ್ಟೆ ಕ್ಷೇತ್ರವನ್ನು ವಿಭಜಿಸಿ, ಬಾಗಲಕೋಟೆ ಮತ್ತು ಬೀಳಗಿ ತಾಲ್ಲೂಕುಗಳಿಗೆ ಪ್ರತ್ಯೇಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಲು ಸರ್ಕಾರವು ತೀರ್ಮಾನಿಸಿದೆ.

ಆದುದರಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 3 ಮತ್ತು ಕಲಂ 145(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಬಾಗಲಕೋಟೆ ಮಾರುಕಟ್ಟೆ ಕ್ಷೇತ್ರವನ್ನು ಈ ಕೆಳಗಿನ ಅನುಸೂಚಿ-4ನೇ ಅಂಕಣದಲ್ಲಿ ನಮೂದಿಸಿದ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಮಾರುಕಟ್ಟೆ ಕ್ಷೇತ್ರದ ಪರಿಮಿತಿಯನ್ನೊಳಗೊಂಡಂತೆ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರತ್ಯೇಕ ಮಾರುಕಟ್ಟೆ ಕ್ಷೇತ್ರಗಳನ್ನಾಗಿ ವಿಭಜಿಸಲು ಉದ್ದೇಶವನ್ನು ಈ ಮೂಲಕ ಪ್ರಕಟಿಸಿದೆ.

ಕ್ರ ಸಂ.	ಮಾರುಕಟ್ಟೆ ಕ್ಷೇತ್ರ	ಮಾರುಕಟ್ಟೆ ಕ್ಷೇತ್ರದ ಪರಿಮಿತಿ	ಕೃಷಿ ಉತ್ಪನ್ನಗಳು
1.	ಬಾಗಲಕೋಟೆ ಮಾರುಕಟ್ಟೆ ಕ್ಷೇತ್ರ	ಬಾಗಲಕೋಟೆ	1.ಜಾನುವಾರುಗಳು, 2. ಮೇಕೆಗಳು, 3.ಕುರಿಗಳು, 4.ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 5. ಎಲ್ಲಾ ಹೂ.ಗಳು, 6.ಸಜ್ಜೆ, 7.ಜವೆ ಗೋಧಿ, 8.ಜೋಳ, 9.ಕಂಬು, 10.ಮೆಕ್ಕೆಜೋಳ, 11.ನವಣೆ, 12.ಭತ್ತ, 13.ರಾಗಿ, 14.ಅಕ್ಕಿ 15.ಸಾಮೆ (ಸಾವೆ), 16.ಗೋಧಿ, 17.ಅಂಟುವಾಳ, 18.ಬೊಂಬು, 19.ಬೆತ್ತ, 20.ಹಿಪ್ಪೆಬೀಜ, 21.ಹೊಂಗೇಬೀಜ, 22.ಬೇವಿನಬೀಜ, 23.ಸೀಗೇಕಾಯಿ, 24.ಹುಣಸೇಹಣ್ಣು, 25.ಹುಣಸೆಬೀಜ, 26.ಸೇಬು, 27.ಬಾಳೆಹಣ್ಣು, 28.ಬೋರೆಹಣ್ಣು, 29.ಹುಳಿಹಣ್ಣುಗಳು, 30.ಚಕ್ಕೋತನ ಹಣ್ಣು, 31.ಪೇರಲೆಹಣ್ಣು (ಸೀಬೆಹಣ್ಣು), 32.ದ್ರಾಕ್ಷಿ, 33.ಹಲಸಿನಹಣ್ಣು, 34.ಜಂಬುನೇರಳೆಹಣ್ಣು, 35.ನಿಂಬೆಹಣ್ಣು, 36.ಕರಬೂಜ,

			37.ಮಾವಿನಹಣ್ಣು, 38.ಮೂಸಂಬಿ, 39.ಮರಸೇಬು, 40.ಪೈನಾಪಲ್ (ಅನಾನಸ್), 41.ಪಪ್ಪಾಯಿಹಣ್ಣು (ಪರಂಗಿಹಣ್ಣು), 42.ದಾಳಿಂಬೆಹಣ್ಣು, 43.ಸಪೋಟಾ, 44.ಸಿದ್ದೋಟ, 45.ಕಿತ್ತಳೆ, 46.ಕಲ್ಲಂಗಡಿ, 47.ನೆಲಗಡಲೆ(ಶೇಂಗಾ) (ಕಾಯಿ ಮತ್ತು ಬೀಜ), 48.ಹರಳುಬೀಜ, 49.ಹತ್ತಿಬೀಜ, 50.ಅಗಸೆಬೀಜ, 51.ಸಾಸುವೆ, 52.ಹುಚ್ಚೆಳ್ಳು, 53.ಕುಸುಬೆ, 54.ಎಳ್ಳು, 55.ಸೂರ್ಯಕಾಂತಿಬೀಜ, 56.ಸೋಯಾಬಿನ್ 57.ಅಡಿಕೆ, 58.ಗೋಡಂಬಿಬೀಜ, 59.ಒಣಮೆಣಸಿನಕಾಯಿ, 60.ತೆಂಗಿನಕಾಯಿ, 61.ಕೊಬ್ಬರಿ, 62.ಕೊತ್ತಂಬರಿಬೀಜ (ಧನಿಯಾ), 63.ಬೆಳ್ಳುಳ್ಳಿ, 64.ಶುಂಠಿ, 65.ಮೆಂತ್ಯ, 66.ಕಾಳುಮೆಣಸು, 67.ಅರಿಶಿನ, 68.ಅಲಸಂದೆ(ಇಡೀ ಮತ್ತು ಒಡೆದ), 69.ಅವರೆ (ಇಡೀ ಮತ್ತು ಒಡೆದ), 70.ಕಡಲೆ (ಇಡೀ ಮತ್ತು ಒಡೆದ), 71.ಉದ್ದು (ಇಡೀ ಮತ್ತು ಒಡೆದ), 72.ಬುಲ್ಲರ್ (ಇಡೀ ಮತ್ತು ಒಡೆದ), 73.ಹೆಸರು (ಇಡೀ ಮತ್ತು ಒಡೆದ), 74.ಹುರುಳಿ, 75.ಲಾಕ್ (ಇಡೀ ಮತ್ತು ಒಡೆದ), 76.ಮಡಿಕೆ (ಮಟಕಿ) (ಇಡೀ ಮತ್ತು ಒಡೆದ), 77.ಚೆನ್ನಂಗಿ (ಮಸೂರಿ) (ಇಡೀ ಮತ್ತು ಒಡೆದ), 78.ಬಟಾಣಿ, 79.ತೊಗರಿ (ಇಡೀ ಮತ್ತು ಒಡೆದ), 80.ಮೋಠ್ (ಇಡೀ ಮತ್ತು ಒಡೆದ), 81.ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ)(ಗರ್ಕಿನ್ ಹೊರತುಪಡಿಸಿ), 82.ಕಾಯಿಗಳು, 83.ಹಸಿರುಮೆಣಸಿನಕಾಯಿ, 84.ಈರುಳ್ಳಿ, 85.ಆಲೂಗಡ್ಡೆ, 86.ಸುವರ್ಣಗೆಡ್ಡೆ, 87.ಸಿಹಿಗೆಣಸು (ಗೆಣಸು), 88.ಟೊಮ್ಯಾಟೋ, 89.ಬೀಟೆ (ರೋಸ್‌ವುಡ್), 90.ಬಿಲ್ವಾಲ, 91.ಗಂಜಾನ್, 92.ಹಡಗ, 93.ಹಳದಿ, 94.ಹನಿಮತ್ತಲ್, 95.ಹೊನ್ನೆ, 96.ಐಯಾನಿ, 97.ಹಲಸಿನಮರ, 98.ಜಂಬೆ, 99.ಕಲನ್, 100.ಕಿಂಡಲ್, 101.ಮಾವಿನಮರ, 102.ಮತ್ತಿ, 103.ನಂದಿ, 104.ರಾಂಪತ್ರೆ, 105.ತೇಗ (ಸಾಗವಾನಿ), 106.ಬಿಳಿ ದೇವದಾರು (ಕೇದರ), 107.ಸಿಲ್ವರ್ ಓಕ್, 108.ನೀಲಗಿರಿ, 109.ವೀಳ್ಯೆದೆಲೆ, 110.ಬೆಲ್ಲ, 111.ತೆಂಗಿನಕಡ್ಡಿ, 112.ಒಣದ್ರಾಕ್ಷಿ.
2.	ಬೀಳಗಿ ಮಾರುಕಟ್ಟೆ ಕ್ಷೇತ್ರ	ಬೀಳಗಿ ತಾಲ್ಲೂಕು	1.ಜಾನುವಾರುಗಳು, 2. ಮೇಕೆಗಳು, 3.ಕುರಿಗಳು, 4.ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 5. ಎಲ್ಲಾ ಹೂ.ಗಳು, 6.ಸಜ್ಜೆ, 7.ಜವೆ ಗೋಧಿ, 8.ಜೋಳ, 9.ಕಂಬು, 10.ಮೆಕ್ಕೆಜೋಳ, 11.ನವಣೆ, 12.ಭತ್ತ, 13.ರಾಗಿ, 14.ಅಕ್ಕಿ 15.ಸಾಮೆ (ಸಾವೆ), 16.ಗೋಧಿ, 17.ಅಂಟುವಾಳ, 18.ಬೊಂಬು, 19.ಬೆತ್ತ, 20.ಹಿಪ್ಪೆಬೀಜ, 21.ಹೊಂಗೇಬೀಜ, 22.ಬೇವಿನಬೀಜ, 23.ಸೀಗೇಕಾಯಿ, 24.ಹುಣಸೇಹಣ್ಣು, 25.ಹುಣಸೇಬೀಜ, 26.ಸೇಬು, 27.ಬಾಳೆಹಣ್ಣು, 28.ಬೋರೆಹಣ್ಣು, 29.ಹುಳಿಹಣ್ಣುಗಳು, 30.ಚಕ್ಕೋತನ ಹಣ್ಣು, 31.ಪೇರಲೆಹಣ್ಣು (ಸೀಬೆಹಣ್ಣು), 32.ದ್ರಾಕ್ಷಿ, 33.ಹಲಸಿನಹಣ್ಣು, 34.ಜಂಬುನೇರಳೆಹಣ್ಣು, 35.ನಿಂಬೆಹಣ್ಣು, 36.ಕರಬೂಜ, 37.ಮಾವಿನಹಣ್ಣು, 38.ಮೂಸಂಬಿ, 39.ಮರಸೇಬು, 40.ಪೈನಾಪಲ್(ಅನಾನಸ್), 41.ಪಪ್ಪಾಯಿಹಣ್ಣು (ಪರಂಗಿಹಣ್ಣು),
			42.ದಾಳಿಂಬೆಹಣ್ಣು, 43.ಸಪೋಟಾ, 44.ಸಿದ್ದೋಟ, 45.ಕಿತ್ತಳೆ, 46.ಕಲ್ಲಂಗಡಿ, 47.ನೆಲಗಡಲೆ (ಶೇಂಗಾ) (ಕಾಯಿ ಮತ್ತು ಬೀಜ), 48.ಹರಳುಬೀಜ, 49.ಹತ್ತಿಬೀಜ, 50. ಅಗಸೆಬೀಜ, 51.ಸಾಸುವೆ, 52.ಹುಚ್ಚೆಳ್ಳು, 53.ಕುಸುಬೆ, 54.ಎಳ್ಳು, 55.ಸೂರ್ಯಕಾಂತಿಬೀಜ, 56.ಸೋಯಾಬಿನ್ 57.ಅಡಿಕೆ, 58.ಗೋಡಂಬಿ ಬೀಜ, 59.ಒಣಮೆಣಸಿನಕಾಯಿ, 60.ತೆಂಗಿನಕಾಯಿ, 61.ಕೊಬ್ಬರಿ, 62.ಕೊತ್ತಂಬರಿಬೀಜ (ಧನಿಯಾ), 63.ಬೆಳ್ಳುಳ್ಳಿ, 64.ಶುಂಠಿ, 65.ಮೆಂತ್ಯ, 66.ಕಾಳುಮೆಣಸು, 67.ಅರಿಶಿನ, 68.ಅಲಸಂದೆ(ಇಡೀ ಮತ್ತು ಒಡೆದ), 69.ಅವರೆ (ಇಡೀ ಮತ್ತು ಒಡೆದ), 70.ಕಡಲೆ (ಇಡೀ ಮತ್ತು ಒಡೆದ), 71.ಉದ್ದು (ಇಡೀ ಮತ್ತು ಒಡೆದ), 72.ಬುಲ್ಲರ್ (ಇಡೀ ಮತ್ತು ಒಡೆದ), 73.ಹೆಸರು (ಇಡೀ ಮತ್ತು ಒಡೆದ), 74.ಹುರುಳಿ, 75.ಲಾಕ್ (ಇಡೀ ಮತ್ತು ಒಡೆದ), 76.ಮಡಿಕೆ (ಮಟಕಿ) (ಇಡೀ ಮತ್ತು ಒಡೆದ), 77.ಚೆನ್ನಂಗಿ (ಮಸೂರಿ) (ಇಡೀ ಮತ್ತು ಒಡೆದ), 78.ಬಟಾಣಿ, 79.ತೊಗರಿ (ಇಡೀ ಮತ್ತು ಒಡೆದ), 80.ಮೋಠ್ (ಇಡೀ ಮತ್ತು ಒಡೆದ), 81.ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ)(ಗರ್ಕಿನ್ ಹೊರತುಪಡಿಸಿ), 82.ಕಾಯಿಗಳು, 83.ಹಸಿರುಮೆಣಸಿನಕಾಯಿ, 84.ಈರುಳ್ಳಿ, 85.ಆಲೂಗಡ್ಡೆ, 86.ಸುವರ್ಣಗೆಡ್ಡೆ, 87.ಸಿಹಿಗೆಣಸು (ಗೆಣಸು), 88.ಟೊಮ್ಯಾಟೋ, 89.ಬೀಟೆ(ರೋಸ್‌ವುಡ್), 90.ಬಿಲ್ವಾಲ, 91.ಗಂಜಾನ್, 92.ಹಡಗ, 93.ಹಳದಿ, 94.ಹನಿಮತ್ತಲ್, 95.ಹೊನ್ನೆ, 96.ಐಯಾನಿ, 97.ಹಲಸಿನಮರ, 98.ಜಂಬೆ, 99.ಕಲನ್, 100.ಕಿಂಡಲ್, 101.ಮಾವಿನಮರ, 102.ಮತ್ತಿ, 103.ನಂದಿ, 104.ರಾಂಪತ್ರೆ, 105.ತೇಗ (ಸಾಗವಾನಿ), 106.ಬಿಳಿ ದೇವದಾರು (ಕೇದರ), 107.ಸಿಲ್ವರ್ ಓಕ್, 108.ನೀಲಗಿರಿ, 109.ವೀಳ್ಯೆದೆಲೆ, 110.ಬೆಲ್ಲ, 111.ತೆಂಗಿನಕಡ್ಡಿ, 112. ಒಣದ್ರಾಕ್ಷಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಪಿ.ಆರ್. 732

ಅಧಿಸೂಚನೆ

ಸಂಖ್ಯೆ:ಸಇ 331 ಎಂಆರ್ಇ (2) 2008, ಬೆಂಗಳೂರು, ದಿನಾಂಕ: 31ನೇ ಜುಲೈ 2010

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಇ 331 ಎಂಆರ್ಇ (1) 2008 ದಿನಾಂಕ: 31/07/2010 ರಲ್ಲಿ ಸ್ಥಾಪಿಸಲಾಗಿರುವ **ಬೀಳಗಿ** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ.

ಕ್ರಮ ಸಂಖ್ಯೆ	ಶ್ರೀ/ಶ್ರೀಮತಿ	
01.	ಶ್ರೀ ಕೃಷ್ಣಗೌಡ ವೆಂಕನಗೌಡ ಪಾಟೀಲ, ಸಾ: ಅರಕೇರಿ, ತಾ: ಬೀಳಗಿ	ಸದಸ್ಯರು
02.	ಶ್ರೀ ಅನಿಲ್ ಕುಮಾರ್ ಕೇಶವರಾವ್, ದೇಶಪಾಂಡೆ, ಬೀಳಗಿ	ಸದಸ್ಯರು
03.	ಶ್ರೀ ಗೋಪಾಲಪ್ಪ ಚನ್ನಪ್ಪ ನಾಗರ, ಸಾ: ಧವಳೇಶ್ವರ	ಸದಸ್ಯರು
04	ಶ್ರೀ ಚಂದ್ರಕಾಂತ್ ಹೊಲಗೇರಿ, ಸಾ: ಸೊನ್ನ	ಸದಸ್ಯರು
05.	ಶ್ರೀ ಶಿವಪ್ಪ ರಾಮಪ್ಪ ಕದಂಪುರ್, ಸಾ: ಗೋವಿನದಿನ್ನಿ	ಸದಸ್ಯರು
06.	ಶ್ರೀ ಸಿದ್ದು ಯಮುನಪ್ಪ ಮಾದರ್, ಸಾ: ಬೀಳಗಿ	ಸದಸ್ಯರು
07.	ಶ್ರೀ ಮಲ್ಲಿಕಾರ್ಜುನ ಸಿದ್ದಪ್ಪ ಬೆಳವಲ್, ಸಾ: ಕೊಪ್ಪೆಎಸ್ಕೆ	ಸದಸ್ಯರು
08.	ಶ್ರೀ ಸಂಕಪ್ಪ ಗುರಪ್ಪ ಒಡೆಯರ್, ಸಾ: ಸಿದ್ದಾಪುರ್	ಸದಸ್ಯರು
09.	ಶ್ರೀಮತಿ ಶೋಭಾ ಸಿದ್ದಪ್ಪ ಹಂಚಿನಾಳ್, ಸಾ: ಹೆರಕಲ್	ಸದಸ್ಯರು
10.	ಶ್ರೀ ರಜತ್ ಕುಮಾರ್ ಸಂಗಪ್ಪ ಶೆಟ್ಟರ್, ಸಾ: ಗಲಗಲಿ	ಸದಸ್ಯರು
11.	ಶ್ರೀ ಶೈಲ ಸಿದ್ದಲಿಂಗಯ್ಯ, ಯಂಕಂಚಿ, ಸಾ: ಬೀಳಗಿ	ಸದಸ್ಯರು

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10(2)ರಲ್ಲಿನ ಅಧಿಕಾರವನ್ನು ಚಲಾಯಿಸಿ, ಮೇಲೆ ನಮೂದಿಸಿದ ಕೃಷಿಕ ಕ್ಷೇತ್ರದ ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟಿರುವ **ಶ್ರೀ** ಕೃಷ್ಣಗೌಡ ವೆಂಕನಗೌಡ ಪಾಟೀಲ ಇವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮತ್ತು **ಶ್ರೀ** ಅನಿಲ್ ಕುಮಾರ್ ಕೇಶವರಾವ್ ದೇಶಪಾಂಡೆ, ಇವರನ್ನು ಸದರಿ ಸಮಿತಿಯ ಉಪಾಧ್ಯಕ್ಷರನ್ನಾಗಿ ನಾಮಕರಣ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 733

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ:ಸಇ 331 ಎಂಆರ್ಇ (3) 2008, ಬೆಂಗಳೂರು, ದಿನಾಂಕ: 31ನೇ ಜುಲೈ 2010

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಇ 331 ಎಂಆರ್ಇ (1) 2008 ದಿನಾಂಕ: 31/07/2010 ರಲ್ಲಿ ಸ್ಥಾಪಿಸಲಾಗಿರುವ ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ.

ಕ್ರಮ ಸಂಖ್ಯೆ	ಶ್ರೀ/ಶ್ರೀಮತಿ	
01.	ಶ್ರೀ ಪ್ರಭುಸ್ವಾಮಿ ಸರಗಣಾಚಾರಿ	ಸದಸ್ಯರು
02.	ಶ್ರೀ ಎಸ್.ಎಂ. ಹರಗಬಲ್	ಸದಸ್ಯರು
03.	ಶ್ರೀ ರವಿ ಅರಿಶಿಗೋಡಿ	ಸದಸ್ಯರು
04	ಶ್ರೀ ಸುರೇಶ್ ಕೊಣ್ಣೂರು	ಸದಸ್ಯರು
05.	ಶ್ರೀ ಸಂಗಣ್ಣ ಕಲಾದಗಿ	ಸದಸ್ಯರು

ಕ್ರಮ ಸಂಖ್ಯೆ	ಶ್ರೀ/ಶ್ರೀಮತಿ	
06.	ಶ್ರೀ ಉಮೇಶ್ ಜುಮನಾಳ್	ಸದಸ್ಯರು
07.	ಶ್ರೀ ಸಂಗಪ್ಪ ಕೊಪ್ಪದ	ಸದಸ್ಯರು
08.	ಶ್ರೀ ಹಣಮಂತ ಗಣಿ	ಸದಸ್ಯರು
09.	ಶ್ರೀ ಕೃಷ್ಣ ಲಮಾಣಿ	ಸದಸ್ಯರು
10.	ಶ್ರೀ ಅಯ್ಯಪ್ಪ ವಾಲ್ಮೀಕಿ	ಸದಸ್ಯರು
11.	ಶ್ರೀಮತಿ ಸುವರ್ಣ ಪಾಟೀಲ	ಸದಸ್ಯರು
12.	ಶ್ರೀ ಜಿ.ಎಂ. ಅಂಗಡಿ	ಸದಸ್ಯರು
13.	ಶ್ರೀ ರಂಗಪ್ಪ ದಿಡ್ಡಿಮನಿ	ಸದಸ್ಯರು

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 10(2)ರಲ್ಲಿನ ಅಧಿಕಾರವನ್ನು ಚಲಾಯಿಸಿ, ಮೇಲೆ ನಮೂದಿಸಿದ ಕೃಷಿಕ ಕ್ಷೇತ್ರದ ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟಿರುವ ಶ್ರೀ ಪ್ರಭುಸ್ವಾಮಿ ಸರಗಣಾಚಾರಿ ಇವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮತ್ತು ಶ್ರೀ ಎಸ್.ಎಂ. ಹರಗಬಲ್ ಇವರನ್ನು ಸದರಿ ಸಮಿತಿಯ ಉಪಾಧ್ಯಕ್ಷರನ್ನಾಗಿ ನಾಮಕರಣ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 734

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ತಿದ್ದುಪಡಿ

ಸಂಖ್ಯೆ:ಸಇ 331 ಎಂಆರ್‌ಇ (3) 2008, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2010

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 331 ಎಂಆರ್‌ಇ (3)2010 ದಿನಾಂಕ:31/07/2010ರಲ್ಲಿ ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಾಮನಿರ್ದೇಶನ ಮಾಡಲಾದ ಸದಸ್ಯರ ಪಟ್ಟಿಯನ್ನು ಬದಲಿಸಿಕೊಂಡು ಈ ಕೆಳಕಂಡ ಪಟ್ಟಿಯಲ್ಲಿ ನಮೂದಿಸಿರುವ ಸದಸ್ಯರ ಹೆಸರನ್ನು ಎಲ್ಲಾ ಸಂದರ್ಭದಲ್ಲೂ ತಿದ್ದಿಕೊಂಡು ಓದಿಕೊಳ್ಳುವುದು:-

ಕ್ರಮ ಸಂಖ್ಯೆ	ಶ್ರೀ/ಶ್ರೀಮತಿ	ಗ್ರಾಮ	
01.	ಶ್ರೀ ಪ್ರಭುಸ್ವಾಮಿ ಸರಗಣಾಚಾರಿ	ಸಾ: ಮುಚಖಂಡಿ	ಸದಸ್ಯರು
02.	ಶ್ರೀ ಎಸ್.ಎಂ. ಹರಗಬಲ್	ಸಾ: ಬೇವೂರು	ಸದಸ್ಯರು
03.	ಶ್ರೀ ರವಿ ಅರಿಷಿಣಗೋಡಿ	ಸಾ: ಬೆನಕಟ್ಟಿ	ಸದಸ್ಯರು
04	ಶ್ರೀ ಸುರೇಶ್ ಕೊಣ್ಣೂರು	ಸಾ: ರಾಮಪುರ	ಸದಸ್ಯರು
05.	ಶ್ರೀ ಸಂಗಣ್ಣ ಕಲಾದಗಿ	ಸಾ; ಮುಗಳೊಳ್ಳಿ	ಸದಸ್ಯರು
06.	ಶ್ರೀ ಉಮೇಶ್ ಜುಮನಾಳ್	ಸಾ: ಮಣ್ಣಿಕಟ್ಟಿ	ಸದಸ್ಯರು
07.	ಶ್ರೀ ಸಂಗಪ್ಪ ಕೊಪ್ಪದ	ಸಾ: ಬಾಗಲಕೋಟ	ಸದಸ್ಯರು
08.	ಶ್ರೀ ಹಣಮಂತ ಗಣಿ	ಸಾ: ನಾಗರಾಳ	ಸದಸ್ಯರು
09.	ಶ್ರೀ ಕೃಷ್ಣ ಲಮಾಣಿ	ಸಾ:ಮುಚಖಂಡಿ ಎಲ್.ಟಿ	ಸದಸ್ಯರು
10.	ಶ್ರೀ ಅಯ್ಯಪ್ಪ ವಾಲ್ಮೀಕಿ	ಬಾಗಲಕೋಟ	ಸದಸ್ಯರು
11.	ಶ್ರೀಮತಿ ಸುವರ್ಣ ಪಾಟೀಲ	ನವನಗರ	ಸದಸ್ಯರು
12.	ಶ್ರೀ ಜಿ.ಅಯ್.ಅಂಗಡಿ	ಬಾಗಲಕೋಟ	ಸದಸ್ಯರು
13.	ಶ್ರೀ ರಂಗಪ್ಪ ದಿಡ್ಡಿಮನಿ	ಆಚನೂರು	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 735

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಇ 331 ಎಂಆರ್‌ಇ (4) 2008, ಬೆಂಗಳೂರು, ದಿನಾಂಕ: 31ನೇ ಜುಲೈ 2010

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 9(2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ:ಸಇ 331 ಎಂಆರ್‌ಇ (1) 2008 ದಿನಾಂಕ:31/07/2010 ರಲ್ಲಿ ಸ್ಥಾಪಿಸಲಾಗಿರುವ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕನ್ನು ಒಳಗೊಂಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೀಳಗಿ"ಎಂದು ಕರ್ನಾಟಕ ಸರ್ಕಾರವು ಈ ಮೂಲಕ ನಿರ್ಧಿಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 736

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ:ಸಇ 331 ಎಂಆರ್‌ಇ (5) 2008, ಬೆಂಗಳೂರು, ದಿನಾಂಕ: 31ನೇ ಜುಲೈ 2010

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 9(2) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅಧಿಸೂಚನೆ ಸಂಖ್ಯೆ:ಸಇ 331 ಎಂಆರ್‌ಇ (1) 2008 ದಿನಾಂಕ: 31/07/2010 ರಲ್ಲಿ ಸ್ಥಾಪಿಸಲಾಗಿರುವ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕನ್ನು ಒಳಗೊಂಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ"ಎಂದು ಕರ್ನಾಟಕ ಸರ್ಕಾರವು ಈ ಮೂಲಕ ನಿರ್ಧಿಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 737

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಅಧಿಸೂಚನೆ

ಸಂಖ್ಯೆ: ಸಿಒ 135 ಸಿಎನ್‌ಎಸ್ 2008, ಬೆಂಗಳೂರು, ದಿನಾಂಕ: 3ನೇ ಆಗಸ್ಟ್, 2010

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಅಡಿಯಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 135 ಸಿಎನ್‌ಎಸ್ 2008 ದಿನಾಂಕ: 11.11.2008 ಮತ್ತು 02.01.2009 ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ. ಬೆಂಗಳೂರು ದಕ್ಷಿಣ, ಬೆಂಗಳೂರು ನಗರ ಜಿಲ್ಲೆ ಇದರ ಆಡಳಿತ ಮಂಡಳಿಗೆ ಮಾಡಿದ್ದ ಎಲ್ಲಾ ನಾಮನಿರ್ದೇಶನಗಳನ್ನು ಸರ್ಕಾರವು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ನೂಲಿ

ಪಿ.ಆರ್. 731

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 326 ಎಲ್‌ಇಟಿ 2008, ಬೆಂಗಳೂರು, ದಿನಾಂಕ: 13ನೇ ಜುಲೈ, 2010

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ (ಕರ್ನಾಟಕ ಅಧ್ಯಾದೇಶ ಸಂ.8) ಕಲಂ 7(1)ರ ಅಡಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ರಾಷ್ಟ್ರೀಯ ಸ್ವಾಸ್ಥ ಬಿಮಾ ಯೋಜನೆ ಅಡಿ ವಿಮಾ ಯೋಜನೆಗೆ ಒಳಪಡಿಸಲು ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಟೆಂಡರ್ ಕರೆಯುವ ಕುರಿತು ಹಾಗೂ ಈ ಕಲ್ಯಾಣ ಮಂಡಳಿಗೆ ಸಂಬಂಧಿಸಿದ ಯಾವುದೇ ಸಂಗ್ರಹಣೆಗೆ ಕುರಿತಂತೆ ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಬಾಲ ಕಾರ್ಮಿಕ ಕೋಶ, ಇವರನ್ನು ರಾಜ್ಯದ ಟೆಂಡರ್ ಬುಲೆಟಿನ್ ಅಧಿಕಾರಿಯನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ವಿಮಲಾಕುಮಾರಿ

ಪಿ.ಆರ್. 738

ಸರ್ಕಾರದ ಉಪ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಆಗಸ್ಟ್ ೧೯, ೨೦೧೦ (ಶ್ರಾವಣ ೨೮, ಶಕ ವರ್ಷ ೧೯೩೨)	ಸಂಚಿಕೆ ೩೩

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ, ಕೊಡಗು, ಮಡಿಕೇರಿ

ಅಧಿಸೂಚನೆ ಸಂಖ್ಯೆ : 2 : 2010, ದಿನಾಂಕ: 30ನೇ ಜುಲೈ 2010

ವಿಷಯ: ಜವಾನ ಹುದ್ದೆಯ ನೇಮಕಾತಿ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಅಧಿಸೂಚನೆ ಸಂಖ್ಯೆಃ ಲಾ–144 ಎಲ್ಎಸಿ–2009 ದಿನಾಂಕಃ 06.08.2009 ಮತ್ತು 02.11.2009.
2. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ–I 220/96 (Uniform Staff Pattern) ದಿನಾಂಕಃ 26.11.2009.
3. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ– I 220/96 ದಿನಾಂಕಃ 8.3.2010.
4. ಸರ್ಕಾರಿ ಆದೇಶ ಸಂಖ್ಯೆಃ ಲಾ–155 ಎಲ್ಎಸಿ 2009 ದಿನಾಂಕಃ 03.02.2010.
5. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ–II 164/2009 ದಿನಾಂಕಃ 18.03.2010.
6. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ–II 164/2009 ದಿನಾಂಕಃ 18.06.2010.
7. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ–08 ಸಹಿಮ–95 ದಿನಾಂಕ 20.06.1995.
8. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ–97 ಸೇನೆನಿ– 2002 ದಿನಾಂಕಃ 22.11.2002.
9. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ–53 ಸೇನೆನಿ 2007 ದಿನಾಂಕಃ 04.01.2008.
10. ಕರ್ನಾಟಕ ಅಧೀನ ನ್ಯಾಯಾಲಯದ (ಲಿಪಿಕ ಹಾಗೂ ಇತರ ಹುದ್ದೆಗಳ) ನೇಮಕಾತಿ (ತಿದ್ದುಪಡಿ) ನಿಯಮಗಳು 1982.
11. ಕರ್ನಾಟಕ ಅಧೀನ ನ್ಯಾಯಾಲಯದ (ಲಿಪಿಕ ಹಾಗೂ ಇತರ ಹುದ್ದೆಗಳ) ನೇಮಕಾತಿ (ತಿದ್ದುಪಡಿ) ನಿಯಮಗಳು 2007.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.09.2010 ಸಂಜೆ: 5–00 ಗಂಟೆ

ಅರ್ಜಿ ಸಲ್ಲಿಸಬೇಕಾದ ವಿಳಾಸ: ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಜಿಲ್ಲಾ ನ್ಯಾಯಾಲಯ, ಕೊಡಗು, ಮಡಿಕೇರಿ.

ಕೊಡಗು ಜಿಲ್ಲಾ ಸತ್ರ ನ್ಯಾಯಾಲಯದ ಘಟಕದಲ್ಲಿ ಖಾಲಿ ಇರುವ ಒಂದು ಜವಾನ ಹುದ್ದೆಗೆ ನೇರ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಈ ಅಧಿಸೂಚನೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಜವಾನ [Peon] : 1 ಹುದ್ದೆ:

1) ವೇತನಶ್ರೇಣಿ: 4800–100–6000–125–6500–150–7100–175–7275 ಹಾಗೂ ಇತರ ಭತ್ಯೆಗಳು.

2) ಹುದ್ದೆಗಳ ವರ್ಗೀಕರಣ:

ವರ್ಗೀಕರಣ	ಇತರೆ	ಮಹಿಳೆ	ಗ್ರಾಮೀಣ	ಒಟ್ಟು
ಸಾಮಾನ್ಯ ವರ್ಗ	–	1	–	1
ಒಟ್ಟು	–	1	–	1

2) ಶೈಕ್ಷಣಿಕ ವಿದ್ಯಾರ್ಹತೆ:

ಅ) ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ ಅರ್ಜಿಯ ಜೊತೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಇರುವ ಅಂಕಪಟ್ಟಿಯ ಜೆರಾಕ್ಸ್ ನಕಲನ್ನು ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

ಬ) ಕನ್ನಡ ಓದಲು ಬರೆಯಲು ತಿಳಿದಿರಬೇಕು.

I ಸಾಮಾನ್ಯ ನಿಯಮಗಳು:

1) ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

2) **ಗರಿಷ್ಠ ವಯೋಮಿತಿ :**

ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷಗಳು

ಪ್ರವರ್ಗ–1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ 38 ವರ್ಷಗಳು

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 40 ವರ್ಷಗಳು.

3) ಮಾಜಿ ಸೈನಿಕರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಈ ಬಗ್ಗೆ ಮೀಸಲಾತಿ ಕೋರಿದಲ್ಲಿ ಸ್ವಯಂ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸಬೇಕು.

4) ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು **ಪ್ರಸ್ತುತ ಚಾಲ್ತಿಯಲ್ಲಿರುವ** ನಮೂನೆಯಲ್ಲಿ ತಹಶೀಲ್ದಾರರಿಂದ ಪಡೆದಿರುವ ಪ್ರಮಾಣಪತ್ರದ ಪ್ರತಿಯನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

5) ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣಪತ್ರ (ಶೇಕಡಾ 40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಮೀಸಲಾತಿಯನ್ನು ಕೋರಲು ಅರ್ಹರು) ಸ್ವಯಂ ದೃಢೀಕೃತವಾಗಿರಬೇಕು.

II ಆಯ್ಕೆ ವಿಧಾನ :

ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ (ನೇಮಕಾತಿ) (ತಿದ್ದುಪಡಿ) ನಿಯಮ 2007ರ ಪ್ರಕಾರ ನಡೆಸಲಾಗುವುದು.

IIIಇತರೆ ಸೂಚನೆಗಳು :–

1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತಿಸಿದ ನಿಗಧಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

2) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.

3) ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ **ಅಂಕಪಟ್ಟಿಯ ಪ್ರತಿಗಳನ್ನು** ಹಾಗೂ ಇತರ ಪ್ರಮಾಣಪತ್ರಗಳ ಪ್ರತಿಗಳನ್ನು **ಸ್ವಯಂ** ದೃಢೀಕರಿಸತಕ್ಕದ್ದು. ಮೀಸಲಾತಿ ಹಾಗೂ ವಯೋಮಿತಿ ಸಡಿಲಿಕೆ ಕೋರಿರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಯಲ್ಲಿಯೇ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

4) ಈ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಏಳನೇ ತರಗತಿಯ ಅಂಕಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಪಡೆದು ಹಾಜರು ಪಡಿಸತಕ್ಕದ್ದು. ಅಂಕಪಟ್ಟಿಯು ಜನ್ಮ ದಿನಾಂಕದ ವಿವರಗಳನ್ನು ಹೊಂದಿರದಿದ್ದಲ್ಲಿ ವರ್ಗಾವಣೆ ಪ್ರಮಾಣ ಪತ್ರದ ನಕಲನ್ನು ಹಾಗೂ ಇತರ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. ಅರ್ಜಿಯೊಂದಿಗೆ ಮೂಲಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆಯಿರುವುದಿಲ್ಲ. ಲಗತ್ತೀಕರಿಸಿದ ಪ್ರಮಾಣಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ಒಳಗೆ ಪಡೆದಿರಬೇಕು.

5) ಸರ್ಕಾರಿ ಅಥವಾ ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಯನ್ನು ಸಮುಚಿತ ಮಾರ್ಗದ ಮುಖಾಂತರ ಸಲ್ಲಿಸಬೇಕು.
6) ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ನಮೂದಿಸಿರಬೇಕು.
7) ಸಂದರ್ಶನ ಪತ್ರ ಕಳುಹಿಸಲು ಅರ್ಜಿಯ ಜೊತೆಗೆ ರೂ.5 ರ ಅಂಚೆ ಚೀಟಿ ಹಚ್ಚಿರುವ ಸ್ವವಿಳಾಸದ ಲಕೋಟೆಯನ್ನು ಕಡ್ಡಾಯವಾಗಿ ಲಗತ್ತಿಸಬೇಕು ಹಾಗೂ ಸಂದರ್ಶನಕ್ಕೆ ಕರೆದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗಬೇಕಾಗುತ್ತದೆ.
8) ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕ ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.
9) ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಗಳನ್ನು ನಡೆಸಲಾಗುವುದಿಲ್ಲ.
10) ಅಭ್ಯರ್ಥಿಯು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

ಜವಾನ ಹುದ್ದೆಗಾಗಿ ಅರ್ಜಿ ನಮೂನೆ
ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಕೊಡಗು, ಮಡಿಕೇರಿ.
ಪ್ರಕಟಣೆ ಸಂಖ್ಯೆ: 2 : 2010 ದಿನಾಂಕ: 30.07.2010

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ ಸಹಿ ಮಾಡುವುದು.

ಇವರಿಗೆ:

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ–571201.

1.	ಅಭ್ಯರ್ಥಿಯ ಹೆಸರು	
2.	ತಂದೆ/ ತಾಯಿ/ ಗಂಡನ ಹೆಸರು	
3.	ಪೂರ್ಣ ಅಂಚೆ ವಿಳಾಸ	
4.	ಹುಟ್ಟಿದ ದಿನಾಂಕ ಮತ್ತು ವಯಸ್ಸು	
5.	ರಾಷ್ಟ್ರೀಯತೆ : ಧರ್ಮ :	
6.	ಲಿಂಗ ಪುರುಷ/ ಮಹಿಳೆ	

7.	ಪ.ಜಾ, ಪ.ಪಂ. ಪ್ರವರ್ಗ–1, 2–ಎ, 2–ಬಿ, 3–ಎ, 3–ಬಿ ಗುಂಪಿಗೆ ಸೇರಿದವರೇ? ಸಂಬಂಧಪಟ್ಟ ದಾಖಲಾತಿ ಲಗತ್ತಿಸತಕ್ಕದ್ದು				
8.	ಶೈಕ್ಷಣಿಕ ವಿದ್ಯಾರ್ಹತೆ (ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)	ಉತ್ತೀರ್ಣ ಹೊಂದಿದ ವರ್ಷ	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡಾವಾರು ಅಂಕಗಳು
ಎ	ಏಳನೇ ತರಗತಿ ಅಂಕಪಟ್ಟಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ದೃಢೀಕರಿಸತಕ್ಕದ್ದು				
9	8 ನೇ ಕಾಲಂನಲ್ಲಿ ತೋರಿಸಿರುವುದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೆ ಆ ಬಗ್ಗೆ ವಿವರಗಳು				

ಸೂಚನೆ: ಅಭ್ಯರ್ಥಿಗಳು ಎಲ್ಲಾ ಕಾಲಂಗಳನ್ನು ಭರ್ತಿ ಮಾಡತಕ್ಕದ್ದು.

ಈ ಮೇಲ್ಕಂಡ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯ ಹಾಗೂ ಸರಿಯಾಗಿವೆಯೆಂದು ಪ್ರಮಾಣೀಕರಿಸುತ್ತೇನೆ ಮತ್ತು ಒಂದು ವೇಳೆ ಮೇಲ್ಕಂಡ ಮಾಹಿತಿಗಳು ತಪ್ಪು ಎಂದು ಕಂಡುಬಂದಲ್ಲಿ ನನ್ನ ಅಭ್ಯರ್ಥಿತನವನ್ನು ರದ್ದುಪಡಿಸಬಹುದು ಎಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ಅಭ್ಯರ್ಥಿಯ ಸಹಿ

ಸ್ಥಳ:

ಪಿ.ಆರ್. 608

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 38 ಡಿಟಿಇ 2010, ಬೆಂಗಳೂರು, ದಿನಾಂಕ: 16ನೇ ಜುಲೈ 2010

ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಈ ಕೆಳಕಂಡ ಅಭ್ಯರ್ಥಿಯನ್ನು ಆಯ್ಕೆಪಟ್ಟಿಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ **ಸಿನಿಮಾಟೋಗ್ರಫಿ** ಉಪನ್ಯಾಸಕರ ಹುದ್ದೆಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಮೇರೆಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿ ರೂ. 8000–275–13500ರಲ್ಲಿ ನೇಮಕಾತಿ ಮಾಡಲಾಗಿದೆ.

ಕ್ರಮ ಸಂಖ್ಯೆ	ಕೆಪಿಎಸ್‌ಸಿ ಕ್ರಮ ಸಂಖ್ಯೆ	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ : ಶ್ರೀಮತಿ	ನೇಮಿಸಲಾದ ಸ್ಥಳ
01	01	ರವಿಕಿರಣ್ ಟಿ.ಜಿ. ತೋರಣಗಟ್ಟೆ ಪೋಸ್ಟ್, ಜಗಳೂರು ತಾ: ದಾವಣಗೆರೆ ಜಿಲ್ಲೆ–577521	ಸರ್ಕಾರಿ ಫಿಲಂ ಅಂಡ್ ಟಿ.ವಿ. ಇನ್‌ಸ್ಟಿಟ್ಯೂಟ್, ಹೆಸರುಘಟ್ಟ, ಬೆಂಗಳೂರು

ಸದರಿ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೊಳಪಟ್ಟಿರುತ್ತದೆ.

1) ಈ ನೇಮಕಾತಿ ತಾತ್ಕಾಲಿಕವಾಗಿದ್ದು ಆಗಿಂದಾಗ್ಗೆ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
2) ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ಹಾಗೂ ನಡತೆಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
3) ಕರ್ನಾಟಕ ಸೇವಾ (ಸೇವಾ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಗಳು 1974ರ ಅಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಹಾಗೂ ಇತರೆ ಪರೀಕ್ಷೆಗಳಲ್ಲಿ ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
4) ಇವರ ಸೇವಾ ಜ್ಯೇಷ್ಠತೆಯು ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗದ ಆಯಾಯ ವಿಷಯದಲ್ಲಿ ನಿರ್ಧರಿಸಿದಂತೆ ಇರತಕ್ಕದ್ದು. ನಂತರ ಕರ್ನಾಟಕ ಲೋಕ ಸೇವಾ ಆಯೋಗವು ಕ್ರೋಢೀಕೃತ ಜ್ಯೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಹಾಗೂ ತದನಂತರ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.

5) ಇವರ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿನ ರಿಟ್ ಅಪೀಲು ಸಿವಿಲ್ ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.

6) ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.

7) ನೇಮಿಸಲಾದ ಸ್ಥಳಗಳಿಗೆ ನೇಮಕಾತಿ ಆದೇಶವನ್ನು ಸ್ವೀಕರಿಸಿದ 15 ದಿನಗಳೊಳಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 580

ಬಿ.ಎನ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(2)1774/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 21ನೇ ಜುಲೈ 2010

2008ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಆಯೋಗದ ಅಧಿಸೂಚನೆ ಸಂಖ್ಯೆ.ಇಪ(1)905/2008–09/ಪಿಎಸ್‌ಸಿ ದಿನಾಂಕ:10.06.2009ರಡಿ ದಿನಾಂಕ:02.07.2009 ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು, ಸದರಿ ಅಧಿವೇಶನದಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳು ಹಾಗೂ ಬಿ.ಕಾಂ., ಪದವಿಯ ಆಧಾರದ ಮೇಲೆ ವಿನಾಯಿತಿ ನೀಡಿ ಫಲಿತಾಂಶ ಪ್ರಕಟಿಸುವಂತೆ ಅಭ್ಯರ್ಥಿಯಿಂದ ಬಂದ ಮನವಿಯನ್ನು ಪುರಸ್ಕರಿಸಿ ಸಂಬಂಧಿತ ಅಭ್ಯರ್ಥಿಯ ಮಾಹಿತಿಗಾಗಿ ಕೆಳಕಂಡ ತಿದ್ದುಪಡಿಯನ್ನು ಪ್ರಕಟಿಸಲಾಗಿದೆ.

ಅಪೆಂಡಿಕ್ಸ್ "ಬಿ"

ರಾಯಚೂರು ಕೇಂದ್ರ

ಕೋ–ಆಪರೇಟಿವ್ ಆಡಿಟ್

ನೋಂದಣಿ ಸಂಖ್ಯೆ. 62961ನ್ನು ಕೋ–ಆಪರೇಟಿವ್ ಆಡಿಟ್ ಪತ್ರಿಕೆ–1 ಹಾಗೂ ಪತ್ರಿಕೆ–3ರಲ್ಲಿ ಉತ್ತೀರ್ಣ ಎಂದು ಸೇರಿಸಿ ಓದಿಕೊಳ್ಳುವುದು.

ವಿ.ಬಿ. ಪಾಟೀಲ್

ಕಾರ್ಯದರ್ಶಿ

ಪಿ.ಆರ್. 583

ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,

ಕರ್ನಾಟಕ ಲೋಕಸೇವಾ ಆಯೋಗ

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(2)1775–80/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 21ನೇ ಜುಲೈ 2010

2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಆಯೋಗದ ಅಧಿಸೂಚನೆ ಸಂಖ್ಯೆ.ಇಪ(1)3642/3639/2009–10/ಪಿಎಸ್‌ಸಿ, ದಿನಾಂಕ:11/23.03.2010ರಡಿ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 08.04.2010ರಂದು ಪ್ರಕಟಿಸಲಾಗಿದ್ದು, ಸದರಿ ಅಧಿವೇಶನದಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳು ಹಾಗೂ ಹಿಂದಿನ ಅಧಿವೇಶನಗಳಲ್ಲಿ ಪಡೆದಿರುವ ವಿನಾಯಿತಿಗಳನ್ನು ಪರಿಗಣಿಸಿ ಮತ್ತು ಬಿ.ಕಾಂ, ಎಲ್.ಎಲ್.ಬಿ., ಪದವಿಗಳ ಆಧಾರದ ಮೇಲೆ ವಿನಾಯಿತಿ ನೀಡಿ ಫಲಿತಾಂಶ ಪ್ರಕಟಿಸುವಂತೆ ಅಭ್ಯರ್ಥಿಗಳಿಂದ ಬಂದ ಮನವಿಗಳನ್ನು ಪುರಸ್ಕರಿಸಿ ಸಂಬಂಧಿತರ ಮಾಹಿತಿಗಾಗಿ ಕೆಳಕಂಡ ತಿದ್ದುಪಡಿಯನ್ನು ಪ್ರಕಟಿಸಲಾಗಿದೆ.

ಅಪೆಂಡಿಕ್ಸ್ "ಎ"

ಬೆಂಗಳೂರು ಕೇಂದ್ರ

ಎಸ್.ಎ.ಎಸ್. ಭಾಗ–3

ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾದವರಡಿ ನೋಂದಣಿ ಸಂಖ್ಯೆ: 42225 ನ್ನು ಸೇರಿಸಿ ಓದಿಕೊಳ್ಳುವುದು.

ಅಪೆಂಡಿಕ್ಸ್ "ಬಿ"

ಬೆಂಗಳೂರು ಕೇಂದ್ರ

ಜನರಲ್ ಲಾ ಭಾಗ–1

ಜನರಲ್ ಲಾ ಭಾಗ–1ರ ಪತ್ರಿಕೆ–2ರಲ್ಲಿ ಉತ್ತೀರ್ಣರಾದವರಡಿಯಲ್ಲಿ ನೋಂದಣಿ ಸಂಖ್ಯೆ: 45599ನ್ನು ಸೇರಿಸಿ ಓದಿಕೊಳ್ಳುವುದು.

ಕೋ–ಆಪರೇಟಿವ್ ಆಡಿಟ್

ನೋಂದಣಿ ಸಂಖ್ಯೆ.41442 ನ್ನು ಕೋ–ಆಪರೇಟಿವ್ ಆಡಿಟ್ ಪತ್ರಿಕೆ–1 ಹಾಗೂ ಪತ್ರಿಕೆ–3ರಲ್ಲಿ ಉತ್ತೀರ್ಣ ಎಂದು ಸೇರಿಸಿ ಓದಿಕೊಳ್ಳುವುದು.

ಅಪೆಂಡಿಕ್ಸ್ "ಬಿ"

ಬೆಳಗಾಂ ಕೇಂದ್ರ

ಕೋ–ಆಪರೇಷನ್

ನೋಂದಣಿ ಸಂಖ್ಯೆ.–48896 ನ್ನು ಕೋ–ಆಪರೇಷನ್ ಪತ್ರಿಕೆ–1ರಲ್ಲಿ ಉತ್ತೀರ್ಣ ಎಂದು ಸೇರಿಸಿ ಓದಿಕೊಳ್ಳುವುದು.

ಅಪೆಂಡಿಕ್ಸ್ "ಬಿ"

ಬೆಳಗಾಂ ಕೇಂದ್ರ

ಜನರಲ್ ಲಾ ಭಾಗ–1

ನೋಂದಣಿ ಸಂಖ್ಯೆ 47430 ನ್ನು ಜನರಲ್ ಲಾ ಭಾಗ–1ರ ಪತ್ರಿಕೆ–2ರಲ್ಲಿ ಉತ್ತೀರ್ಣ ಎಂದು ಸೇರಿಸಿ ಓದಿಕೊಳ್ಳುವುದು.

ಅಪೆಂಡಿಕ್ಸ್ "ಬಿ"

ರಾಮನಗರ ಕೇಂದ್ರ

ಕೋ–ಆಪರೇಷನ್

ನೋಂದಣಿ ಸಂಖ್ಯೆ 78110ನ್ನು ಕೋ–ಆಪರೇಷನ್ ಪತ್ರಿಕೆ–1ರಲ್ಲಿ ಉತ್ತೀರ್ಣ ಎಂದು ಸೇರಿಸಿ ಓದಿಕೊಳ್ಳುವುದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 584

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(1)1859/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 27ನೇ ಜುಲೈ 2010

ಆಯೋಗವು 2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:08.04.2010 ರಂದು ಪ್ರಕಟಿಸಿದ್ದು, ಅಪೆಂಡಿಕ್ಸ್ "ಡಿ" ಯಲ್ಲಿನ ಅಭ್ಯರ್ಥಿಯ ನೋಂದಣಿ ಸಂಖ್ಯೆಯನ್ನು ರದ್ದುಪಡಿಸಿ, ನೋ.ಸಂಖ್ಯೆ.49224ರ ಅಭ್ಯರ್ಥಿಯ ಫಲಿತಾಂಶವನ್ನು ಅಪೆಂಡಿಕ್ಸ್ "ಡಿ" ಯಲ್ಲಿ ರದ್ದುಪಡಿಸಿ ಅಪೆಂಡಿಕ್ಸ್ "ಎ" ನಲ್ಲಿ ತಿದ್ದುಪಡಿ ಮೂಲಕ ಕೆಳಕಂಡಂತೆ ಫಲಿತಾಂಶವನ್ನು ಪ್ರಕಟಿಸಿದೆ.

ಅಪೆಂಡಿಕ್ಸ್ "ಎ"

ಬೆಳಗಾಂ ಕೇಂದ್ರ

ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್

ಸಾಮಾನ್ಯ ದರ್ಜೆ

ನೋಂದಣಿ ಸಂಖ್ಯೆ: 49224

ನೋಂದಣಿ ಸಂಖ್ಯೆ. 48328 ನಂತರ 49224ನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 585

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(2)1705/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 14ನೇ ಜುಲೈ 2010

ಆಯೋಗವು 2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ:ಇಪ(1)3542/3639/2009–10/ಪಿಎಸ್‌ಸಿ, ದಿನಾಂಕ:11/23.03.2010ನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 08.04.2010 ರಂದು ಪ್ರಕಟಗೊಳಿಸಿದ್ದು, ಸದರಿ ಪರೀಕ್ಷೆಯಲ್ಲಿ ಅಭ್ಯರ್ಥಿಯು 2008ನೇ ಸಾಲಿನ ದ್ವಿತೀಯ ಅಧಿವೇಶನದ ಅಕೌಂಟ್ಸ್ ಹೈಯರ್ ವಿಷಯದ ಪತ್ರಿಕೆ–1ರಲ್ಲಿ ವಿನಾಯಿತಿ ಹೊಂದಿದ್ದು, 2009ನೇ ಸಾಲಿನ ದ್ವಿತೀಯ ಅಧಿವೇಶನದಲ್ಲಿ ಪತ್ರಿಕೆ–2ರಲ್ಲಿ ಉತ್ತೀರ್ಣರಾಗಿರುವುದರಿಂದ ಈ ಕೆಳಕಂಡಂತೆ ತಿದ್ದುಪಡಿ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಅಪೆಂಡಿಕ್ಸ್ "ಎ"

ಶಿವಮೊಗ್ಗ ಕೇಂದ್ರ

ಅಕೌಂಟ್ಸ್ ಹೈಯರ್:

ಸಾಮಾನ್ಯ ದರ್ಜೆ

ನೋಂದಣಿ ಸಂಖ್ಯೆ: 81726

ನೋಂದಣಿ ಸಂಖ್ಯೆ. 81725 ಮತ್ತು 81732ರ ಮಧ್ಯೆ ನೋಂದಣಿ ಸಂಖ್ಯೆ 81726 ನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 586

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(1)1859/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 27ನೇ ಜುಲೈ 2010

ಆಯೋಗವು 2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 08.04.2010 ರಂದು ಪ್ರಕಟಿಸಿದ್ದು, ಅಪೆಂಡಿಕ್ಸ್ "ಡಿ" ಯಲ್ಲಿನ ಅಭ್ಯರ್ಥಿಯ ನೋಂದಣಿ ಸಂಖ್ಯೆಯನ್ನು ರದ್ದುಪಡಿಸಿ, ನೋ.ಸಂಖ್ಯೆ.49224ರ ಅಭ್ಯರ್ಥಿಯ ಫಲಿತಾಂಶವನ್ನು ಅಪೆಂಡಿಕ್ಸ್ "ಡಿ" ಯಲ್ಲಿ ರದ್ದುಪಡಿಸಿ ಅಪೆಂಡಿಕ್ಸ್ "ಎ" ನಲ್ಲಿ ತಿದ್ದುಪಡಿ ಮೂಲಕ ಕೆಳಕಂಡಂತೆ ಫಲಿತಾಂಶವನ್ನು ಪ್ರಕಟಿಸಿದೆ.

ಅಪೆಂಡಿಕ್ಸ್ "ಎ"

ಬೆಳಗಾಂ ಕೇಂದ್ರ

ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್:

ಸಾಮಾನ್ಯ ದರ್ಜೆ

ನೋಂದಣಿ ಸಂಖ್ಯೆ: 49224

ನೋಂದಣಿ ಸಂಖ್ಯೆ. 48328 ನಂತರ 49224ನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 597

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(1)1868/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 21ನೇ ಜುಲೈ 2010

ಆಯೋಗವು 2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ:ಇಪ(1)3542/3639/2009–10/ಪಿಎಸ್‌ಸಿ, ದಿನಾಂಕ:11/23.03.2010ರ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 08.04.2010 ರಂದು ಪ್ರಕಟಿಸಿದ್ದು, ಸದರಿ ಪರೀಕ್ಷೆಯಲ್ಲಿ ನೊಂದಣಿ ಸಂಖ್ಯೆ.49406ರ ಅಭ್ಯರ್ಥಿಯು ಜಿ.ಕಾಂ. ಪದವೀಧರರಾಗಿದ್ದು, ಕೋ–ಆಪರೇಷನ್ ಪತ್ರಿಕೆ–2ಕ್ಕೆ ವಿನಾಯಿತಿಯನ್ನು ಪರಿಗಣಿಸುವಂತೆ ಕೋರಿರುವ ಪ್ರಯುಕ್ತ, ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಫಲಿತಾಂಶವನ್ನು ಪ್ರಕಟಿಸಿದೆ.

ಅಪೆಂಡಿಕ್ಸ್ "ಬಿ"

ಬೆಳಗಾಂ ಕೇಂದ್ರ

ಕೋ–ಆಪರೇಷನ್

ನೋಂದಣಿ ಸಂಖ್ಯೆ. 49406 ಈ ಅಭ್ಯರ್ಥಿಯು ಕೋ–ಆಪರೇಷನ್ ವಿಷಯದಲ್ಲಿ ಉತ್ತೀರ್ಣರಾಗಿದ್ದಾರೆ.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 598

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ", ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(1)1869/2010-11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 29ನೇ ಜುಲೈ 2010

ಆಯೋಗವು 2009ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ:ಇಪ(1)2197/2009-10/ಪಿಎಸ್‌ಸಿ, ದಿನಾಂಕ:09.11.2009ನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 03.12.2009 ರಂದು ಪ್ರಕಟಿಸಿದ್ದು, ಸದರಿ ಪರೀಕ್ಷೆಯಲ್ಲಿ ನೋ.ಸಂಖ್ಯೆ.75052 ಅಭ್ಯರ್ಥಿಯು ಹಿಂದಿನ ಸಾಲಿನ ಅಧಿವೇಶನದ ಪತ್ರಿಕೆ-1ರಲ್ಲಿ ವಿನಾಯಿತಿ ಹೊಂದಿ, 2009ರ ಪ್ರಥಮ ಅಧಿವೇಶನದಲ್ಲಿ ಪತ್ರಿಕೆ-1ರಲ್ಲಿ ಉತ್ತೀರ್ಣರಾಗಿ ಸದರಿ ವಿನಾಯಿತಿಯನ್ನು ಪರಿಗಣಿಸುವಂತೆ ಕೋರಿರುವ ಪ್ರಯುಕ್ತ, ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಫಲಿತಾಂಶವನ್ನು ಪ್ರಕಟಿಸಿದೆ.

ಅಪೆಂಡಿಕ್ಸ್ "ಎ"

ಗುಲ್ಬರ್ಗಾ ಕೇಂದ್ರ

ಅಕೌಂಟ್ಸ್ ಹೈಯರ್
ಸಾಮಾನ್ಯ ದರ್ಜೆ
ನೋಂದಣಿ ಸಂಖ್ಯೆ: 75052

ನೋಂದಣಿ ಸಂಖ್ಯೆ. 75049 ಮತ್ತು 75062 ನಡುವೆ ನೋಂದಣಿ ಸಂಖ್ಯೆ. 75052ನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ

ಪಿ.ಆರ್. 599

(ನಮೂನೆ-1)

9ನೇ ನಿಯಮ ನೋಡಿ

ಪೊಲೀಸ್ ಇಲಾಖೆ

ಪೊಲೀಸ್ ಅಧೀಕ್ಷಕರವರ ಕಛೇರಿ, ಬಾಗಲಕೋಟೆ

ಅಧಿಸೂಚನೆ

ಶ್ರೀ **ಯಮನಪ್ಪಾ. ಈರಪ್ಪಾ ಕಿಳ್ಳಿಕೇತರ** ರವರು CPC 1562 ಆಗಿ ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಯಮನಪ್ಪಾ.ಈರಪ್ಪಾ.ಗಣಾಚಾರಿ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಪಿ.ಡಿ. 93 ನೇಮಕಾಧಿಕಾರಿಯವರ ಸಹಿ ಮತ್ತು ಪದನಾಮ

(ನಮೂನೆ-1)

9ನೇ ನಿಯಮ ನೋಡಿ

ಪೊಲೀಸ್ ಇಲಾಖೆ

ಪೊಲೀಸ್ ಅಧೀಕ್ಷಕರವರ ಕಛೇರಿ, ಬಾಗಲಕೋಟೆ

ಅಧಿಸೂಚನೆ

ಶ್ರೀ **ಮಲ್ಲಪ್ಪಾ. ಭರಮಪ್ಪಾ. ಮಾದರ** ರವರು CPC 1338 ಆಗಿ ಕೆರೂರ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಮಲ್ಲಪ್ಪಾ ಭರಮಪ್ಪಾ ಪೂಜಾರ** ಎಂದು ಬದಲಾಯಿಸಿ ಕೊಳ್ಳಲು ಅನುಮತಿ ನೀಡಲಾಗಿದೆ.

ಪಿ.ಡಿ. 94 ನೇಮಕಾಧಿಕಾರಿಯವರ ಸಹಿ ಮತ್ತು ಪದನಾಮ

FORM - IV

(See Rule 12)

NOTICE

It is hereby notified that the undersigned has changed his/her name from **Dr. SOMALINGAPPA @ VIKRAM VEERANAGOWDA HADLI** to **Dr. VIKRAM VEERANAGOWDA HADLI**

P.D. 95 **Dr. SOMALINGAPPA @ VIKRAM VEERANAGOWDA HADLI**

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ ಕೊಡಗು ಜಿಲ್ಲೆ, ಮಡಿಕೇರಿ–571201

ಅಧಿಕೃತ ಜ್ಞಾಪನ

ಸಂ:ಸಿಬ್ಬಂದಿ(1)ಸಿಆರ್/285/08–09, ದಿನಾಂಕ: 30ನೇ ಜುಲೈ 2010

ವಿಷಯ: ಕೊಡಗು ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ವಿಚಾರ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ/299/ಬಿಎಸ್‌ಸಿ:2006 ದಿ:03–02–2009.
2. ಸರ್ಕಾರದ ನಡವಳಿ ಸಂ:ಆರ್‌ಡಿ/130/ಬಿಎಸ್‌ಸಿ/2007 ದಿ:19–02–2009.
3. ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ/299/ಬಿಎಸ್‌ಸಿ/2006 ದಿ:09–07–2009.
4. ಸರ್ಕಾರದ ಅಧಿಸೂಚನೆ ಸಂ:ಕಂಇ/299/ಬಿಎಸ್‌ಸಿ/2006 ದಿ:24–07–2009 ಮತ್ತು ದಿನಾಂಕ:08–09–2009.
5. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:26–09–2009.
6. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:30–11–2009.
7. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:22–12–2009.
8. ಈ ಕಚೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ:17–06–2010.

ಸರ್ಕಾರದ ಉಲ್ಲೇಖ (1) ರ ಅಧಿಸೂಚನೆಯನ್ವಯ ಕೊಡಗು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ 18 ಹುದ್ದೆಗಳಿಗೆ ಹಾಗೂ ಉಲ್ಲೇಖ (2) ರಲ್ಲಿ ಕೊಡಗು ಜಿಲ್ಲೆಗೆ ಪ್ರತಿ ತಾಲ್ಲೂಕು ಕಚೇರಿಯ ಭೂಮಿ ಕೇಂದ್ರಗಳಿಗೆ ತಲಾ 5 ರಂತೆ 3 ತಾಲ್ಲೂಕು ಕೇಂದ್ರಗಳಿಗೆ ಮಂಜೂರಾತಿ ನೀಡಿರುವ 15 ಹುದ್ದೆಗಳು ಸೇರಿ ಒಟ್ಟು 33 ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಭರ್ತಿಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಅದರಂತೆ, ಕರ್ನಾಟಕ ನಾಗರೀಕ ಸೇವೆ (Revenue Sub Ordinate Branch) (Cadre & Recruitment) (Amendment) ನಿಯಮಗಳು, 2009 ರಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ವಯ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಉಲ್ಲೇಖ (5) ರ ಅಧಿಸೂಚನೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಸ್ವೀಕೃತಿಯಾದ ಅರ್ಜಿಗಳನ್ನು ಅರ್ಹತೆ ಮತ್ತು ಮೀಸಲಾತಿ ಅನ್ವಯ ವಿಂಗಡಿಸಿ, ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ:30–11–2009 ರಂದು ಪ್ರಕಟಿಸಲಾಯಿತು ಹಾಗೂ ಈ ಪಟ್ಟಿಯ ಬಗ್ಗೆ ಆಕ್ಷೇಪಣೆ / ತಕರಾರು ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 14–12–2009 ರವರೆಗೆ ಕಾಲಾವಕಾಶವನ್ನು ನೀಡಲಾಯಿತು ಮತ್ತು ದಿ:15–12–2009 ರಂದು ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಖುದ್ದು ಹಾಜರು ಪಡಿಸುವಂತೆ ತಿಳಿಸಲಾಯಿತು.

ಪರಿಶೀಲನಾ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆಗಳು ಮತ್ತು ಅಭ್ಯರ್ಥಿಗಳು ಖುದ್ದು ಹಾಜರು ಪಡಿಸಿದ ಮೂಲ ದಾಖಲಾತಿಗಳನ್ನು ದಿನಾಂಕ:15–12–2009 ರಂದು ಪರಿಶೀಲಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:5887–5898/2009 ರ ಪ್ರಕರಣಗಳ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿನ ಮೇರೆಗೆ ಅಂತಿಮ ಆಯ್ಕೆ ಪಟ್ಟಿ ಮತ್ತು ಅಂತಿಮ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ದಿನಾಂಕ:22–12–2009 ರಂದು ಪ್ರಕಟಿಸಲಾಯಿತು.

ಮೇಲ್ಕಂಡ ಅಂಶಗಳ ಅವಲೋಕನೆಯಿಂದ, ಪೊಲೀಸ್ ಪರಿಶೀಲನಾ ವರದಿ ಮತ್ತು ಮೀಸಲಾತಿ ಸಿಂಧುತ್ವ ಪ್ರಮಾಣ ಪತ್ರ ಪಡೆದು ಹಾಜರು ಪಡಿಸುವ ಷರತ್ತಿಗೊಳಪಡಿಸಿ ಉಲ್ಲೇಖ (8) ರ ಅಧಿಕೃತ ಜ್ಞಾಪನದ ಮೇರೆ ನೇಮಕಾತಿ ಆದೇಶ ಹೊರಡಿಸಲಾಗಿತ್ತು. ಅಂತೆಯೇ ಕು:ಎಂ.ಎಸ್.ಸುಜಾತ ಇವರಿಗೆ ಷರತ್ತುಗಳ ಕ್ರಮಸಂಖ್ಯೆ:1 ರಲ್ಲಿ ತಿಳಿಸಿದಂತೆ ಸಿಂಧುತ್ವ ಪ್ರಮಾಣ ಪತ್ರ ಸ್ವೀಕಾರವಾದ ನಂತರ ಪ್ರತ್ಯೇಕ ಆದೇಶ ನೀಡಲಾಗುವುದೆಂದು ತಿಳಿಸಿದ್ದು, ಪ್ರಸ್ತುತ ಇವರ ಸಿಂಧುತ್ವ ಪ್ರಮಾಣ ಪತ್ರ ಸ್ವೀಕಾರವಾಗಿದ್ದು, ಗ್ರಾಮಲೆಕ್ಕಿಗರ ಹುದ್ದೆಯ ರೂ.5800–100–6000–125–6500–150–7100–175–7800–200–8600–225–9500–250–10500 ವೇತನ ಶ್ರೇಣಿಯಲ್ಲಿ ಅವರ ಹೆಸರಿನ ಮುಂದೆ ನಮೂದಿಸಲ್ಪಟ್ಟ ಕಾರ್ಯ ಸ್ಥಳಕ್ಕೆ ಈ ಕೆಳಕಂಡ ನಿಬಂಧನೆಗಳಿಗನುಸಾರವಾಗಿ ನೇಮಕಾತಿಗೊಳಿಸಿ ಆದೇಶ ಹೊರಡಿಸಿದೆ.

ಕ್ರ. ಸಂ.	ಆಯ್ಕೆ ಪಟ್ಟಿಯಲ್ಲಿನ ಕ್ರ.ಸಂ.	ಅಭ್ಯರ್ಥಿಯ ಹೆಸರು	ವಿಳಾಸ	ನೇಮಕಗೊಳಿಸಿದ ಹುದ್ದೆ ಮತ್ತು ಗ್ರಾಮ ವೃತ್ತ	ಯಾರಲ್ಲಿ ಹಾಜರಾಗತಕ್ಕದ್ದು
1	28	ಎಂ.ಎಸ್.ಸುಜಾತ	ಬಿನ್.ಎಂ.ಎಸ್. ಸೀನಪ್ಪ, ಅರಮೇರಿ ಗ್ರಾಮ ಮತ್ತು ಅಂಚೆ ವಿರಾಜಪೇಟೆ ತಾಲ್ಲೂಕು ಕೊಡಗು ಜಿಲ್ಲೆ–571218	ಭೂಮಿ ಕೇಂದ್ರ, ತಾಲ್ಲೂಕು ಕಚೇರಿ. ವಿರಾಜಪೇಟೆ	ತಹಶೀಲ್ದಾರರು, ವಿರಾಜಪೇಟೆ

ಅಭ್ಯರ್ಥಿಯು ಗ್ರಾಮೀಣ ಜನರ ಸೇವೆಗೆ ಕಂಕಣಬದ್ಧರಾಗಿ, ನಿಷ್ಠೆ, ಪ್ರಾಮಾಣಿಕತೆ ಹಾಗೂ ನಿಷ್ಪಹತೆಯಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿದೆ.

ಷರತ್ತುಗಳು:

1. ಈ ನೇಮಕಾತಿಯು ಮಾನ್ಯ ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:5887–5898/2009 ಮತ್ತು ಅರ್ಜಿ ಸಂಖ್ಯೆ 2432/2010ರ ಪ್ರಕರಣದ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿಗೊಳಪಟ್ಟಿದೆ.
2. ಮೇಲ್ಕಂಡ ಅಭ್ಯರ್ಥಿ ದಿನಾಂಕ:14–08–2010 ರೊಳಗಾಗಿ ಸಂಬಂಧಿಸಿದ ತಹಶೀಲ್ದಾರ್‌ರವರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಈ ನೇಮಕವನ್ನು ಒಂದು ವೇಳೆ ತಿರಸ್ಕರಿಸಿದಲ್ಲಿ, 07 ದಿವಸಗಳೊಳಗಾಗಿ ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ತಿಳಿಸತಕ್ಕದ್ದು.
3. ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ವೇಳೆಯಲ್ಲಿ ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಬೇಕು. 1) ಪಿ.ಯು.ಸಿ. ಅಂಕಪಟ್ಟಿ 2) ಎಸ್‌ಎಸ್‌ಎಲ್‌ಸಿ / ಹುಟ್ಟಿದ ದಿನಾಂಕದ ದೃಢೀಕರಣ 3) ಶಾಲಾ ವರ್ಗಾವಣೆ ಪ್ರಮಾಣ ಪತ್ರ 4) ವೈದ್ಯಕೀಯ ಪ್ರಮಾಣ ಪತ್ರ 5) ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಮೀಸಲಾತಿ ಪ್ರಮಾಣ ಪತ್ರಗಳು (ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
4. ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾದ ದಿನಾಂಕದಿಂದ 2 ವರ್ಷಗಳ ಅವಧಿಗೆ ಪರಿವೀಕ್ಷಣಾ ಅವಧಿಯಲ್ಲಿದ್ದು (ಪ್ರೋಬೇಷನರಿ) ಅವರು ಈ ಅವಧಿಯಲ್ಲಿ ಕೆಳಗೆ ನಮೂದಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು 1) ಅಕೌಂಟ್ಸ್ ಲೋಯರ್ 2) ರೆವಿನ್ಯೂ ಲೋಯರ್ 3) ಕನ್ನಡ ಭಾಷಾ ಪರೀಕ್ಷೆ (ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳದಿದ್ದಲ್ಲಿ ಕನ್ನಡ ಭಾಷಾ ಪರೀಕ್ಷೆಯನ್ನು ಪಾಸು ಮಾಡತಕ್ಕದ್ದು) ಈ ಅವಧಿಯಲ್ಲಿ ನಿಗಧಿತ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆಯಾಗದಿದ್ದಲ್ಲಿ ಅಥವಾ ಕೆಲಸ ಕಾರ್ಯಗಳು ತೃಪ್ತಿಕರವಾಗಿರದಿದ್ದಲ್ಲಿ ಅವರನ್ನು ಸೇವೆಯಿಂದ ತೆಗೆದುಹಾಕಲಾಗುವುದು.
5. ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ಸರ್ಕಾರವು ಇಚ್ಚಿಸಿದಲ್ಲಿ ಅಥವಾ ಹುದ್ದೆಗಳು ರದ್ದಾದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದಿರುವುದು ಕಂಡು ಬಂದಲ್ಲಿ ಅವರನ್ನು ಯಾವುದೇ ಸಮಯದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಸೇವೆಯಿಂದ ತೆಗೆದುಹಾಕಲಾಗುವುದು.
6. ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತದ ಸಂವಿಧಾನಾತ್ಮಕವಾಗಿ ಗೊತ್ತುಪಡಿಸಿದ ನಮೂನೆಯಲ್ಲಿ ವಚನ ಸ್ವೀಕಾರ ಮಾಡತಕ್ಕದ್ದು.
7. ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ:ಎಫ್‌ಡಿ (ಎಸ್‌ಪಿಎಲ್) 04/ಪಿಇಟಿ/2005 ದಿನಾಂಕ:31–03–2006 ರಲ್ಲಿ ಜಾರಿಗೆ ನೀಡಿದ ಹೊಸ ನಿವೃತ್ತಿ ವೇತನ ನೀತಿಗೆ ಒಳಪಟ್ಟಿರುತ್ತಾರೆ.
8. ಸರ್ಕಾರದ ಸುತ್ತೋಲೆ ಸಂ:ಕಂಇ/54/ಬಿಎಸ್‌ಸಿ/2007 ದಿನಾಂಕ:27–03–2007 ರನ್ವಯ ಅಂತರ್ ಜಿಲ್ಲಾ ವರ್ಗಾವಣೆಗೆ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ಪಕ್ಷ 5 ವರ್ಷಗಳ ಸೇವೆಯನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.
9. ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ ಗುರುತಿನ ಚೀಟಿಯನ್ನು ತಹಶೀಲ್ದಾರರಲ್ಲಿ ಹಾಜರುಪಡಿಸತಕ್ಕದ್ದು. ತಹಶೀಲ್ದಾರರು ಅದನ್ನು ಉದ್ಯೋಗ ವಿನಿಮಯ ಕೇಂದ್ರಕ್ಕೆ ಸರೆಂಡರ್ ಮಾಡುವುದು.
10. ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ಹಾಗೂ ಕಾಲ ಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಇತರೆ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.
11. ಅಭ್ಯರ್ಥಿಯ ಜೇಷ್ಠತೆಯು ನೇರ ನೇಮಕಾತಿ ಪ್ರಾಧಿಕಾರದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯೇ ಇರತಕ್ಕದ್ದು. ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆ/ಕಾನೂನು ತಿದ್ದುಪಡಿಗೆ ಒಳಪಡುತ್ತದೆ.
12. ಗ್ರಾಮ ಲೆಕ್ಕಿಗ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ, ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ರೂ.1000/– (ರೂಪಾಯಿ ಒಂದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು ನಗದು ರೂಪದಲ್ಲಾಗಲೀ ಅಥವಾ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕವಾಗಲೀ ಸಂಬಂಧಪಟ್ಟ ತಹಶೀಲ್ದಾರರಲ್ಲಿ ಹಾಜರುಪಡಿಸತಕ್ಕದ್ದು ಅಥವಾ ಈ ಮೊತ್ತಕ್ಕೆ ಭದ್ರತಾ ಮುಚ್ಚಳಿಕೆ ಪತ್ರವನ್ನು ಛಾಪಾ ಕಾಗದದಲ್ಲಿ ಬರೆಯಿಸಿ ಒಬ್ಬರ ಜಾಮೀನು ಕೊಡತಕ್ಕದ್ದು. ತಹಶೀಲ್ದಾರರು ಈ ಮೊತ್ತದ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕ ಸರ್ಕಾರಕ್ಕೆ ಪ್ಲೆಡ್ಜ್ ಮಾಡಿಕೊಳ್ಳತಕ್ಕದ್ದು.
13. ಅಭ್ಯರ್ಥಿಯು ಇಲಾಖೆಯಿಂದ ಕಾಲ ಕಾಲಕ್ಕೆ ನಿಗಧಿಪಡಿಸಿದ ಹಾಗೂ ನಿಗಧಿಪಡಿಸಲಾಗುವ ವಿವಿಧ ಪರೀಕ್ಷೆ / ತರಬೇತಿಗಳನ್ನು ಯಶಸ್ವಿಯಾಗಿ ಮುಗಿಸತಕ್ಕದ್ದು.

14. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಹಾಗೂ ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು ಹಾಗೂ ಮೇಲೆ ಸೂಚಿಸಿದ ಕಾರ್ಯಸ್ಥಳಗಳಲ್ಲಿ ವರದಿ ಮಾಡಿಕೊಳ್ಳುವ ಮೊದಲು ಮುಂಚಿನ ಸೇವೆಯಿಂದ ಬಿಡುಗಡೆ ಆದೇಶ ಪಡೆದಿರಬೇಕು.

15. ಅಭ್ಯರ್ಥಿಗೆ ಕೆಲಸಕ್ಕೆ ಹಾಜರಾಗುವ ಸಂದರ್ಭದಲ್ಲಿ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

16. ಆಯ್ಕೆಯಾಗಿರುವ ಅಭ್ಯರ್ಥಿಗಳು ಅವರನ್ನು ನೇಮಿಸಿರುವ ಸ್ಥಳದಲ್ಲಿ ಕಡ್ಡಾಯವಾಗಿ ವಾಸ ಮಾಡಬೇಕು. ಈ ಬಗ್ಗೆ ಒಂದು ಪ್ರಮಾಣ ಪತ್ರವನ್ನು (ನಮೂನೆಯಂತೆ) ನೋಟರಿಯವರಿಂದ ಪ್ರಮಾಣೀಕರಿಸಿ ಹಾಜರುಪಡಿಸಬೇಕು.

ಕೆ.ಹೆಚ್. ಅಶ್ವತ್ಥನಾರಾಯಣ ಗೌಡ
ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ ಮತ್ತು
ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್. 614

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ ಕೊಡಗು ಜಿಲ್ಲೆ, ಮಡಿಕೇರಿ–571201

ಅಧಿಕೃತ ಜ್ಞಾಪನ

ಸಂ:ಸಿಬ್ಬಂದಿ(1)ಸಿಆರ್/285/08–09, ದಿನಾಂಕ: 30ನೇ ಜುಲೈ 2010

ವಿಷಯ: ಕೊಡಗು ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ವಿಚಾರ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ/299/ಬಿಎಸ್‌ಸಿ:2006 ದಿ:03–02–2009.
2. ಸರ್ಕಾರದ ನಡವಳಿ ಸಂ:ಆರ್‌ಡಿ/130/ಬಿಎಸ್‌ಸಿ/2007 ದಿ:19–02–2009.
3. ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ/299/ಬಿಎಸ್‌ಸಿ/2006 ದಿ:09–07–2009.
4. ಸರ್ಕಾರದ ಅಧಿಸೂಚನೆ ಸಂ:ಕಂಇ/299/ಬಿಎಸ್‌ಸಿ/2006 ದಿ:24–07–2009 ಮತ್ತು ದಿನಾಂಕ:08–09–2009.
5. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:26–09–2009.
6. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:30–11–2009.
7. ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ:22–12–2009.
8. ಈ ಕಚೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ:17–06–2010.
9. ಮಂಜುನಾಥ.ಜಿ ಇವರ ಅರ್ಜಿ ದಿನಾಂಕ:29–06–2010.
10. ಕು:ಮಾನಸ ಹೆಚ್.ಎಂ. ಇವರ ಅರ್ಜಿ ದಿನಾಂಕ:19–07–2010.
11. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಇವರ ಪತ್ರ ಸಂ:ಬಿಸಿಎಂ/1/ಸಿಂಧುತ್ವ/ಸಿಆರ್/310/09–10 ದಿ:12–03–2010.

ಸರ್ಕಾರದ ಉಲ್ಲೇಖ (1) ರ ಅಧಿಸೂಚನೆಯನ್ವಯ ಕೊಡಗು ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ 18 ಹುದ್ದೆಗಳಿಗೆ ಹಾಗೂ ಉಲ್ಲೇಖ (2) ರಲ್ಲಿ ಕೊಡಗು ಜಿಲ್ಲೆಗೆ ಪ್ರತಿ ತಾಲ್ಲೂಕು ಕಚೇರಿಯ ಭೂಮಿ ಕೇಂದ್ರಗಳಿಗೆ ತಲಾ 5 ರಂತೆ 3 ತಾಲ್ಲೂಕು ಕೇಂದ್ರಗಳಿಗೆ ಮಂಜೂರಾತಿ ನೀಡಿರುವ 15 ಹುದ್ದೆಗಳು ಸೇರಿ ಒಟ್ಟು 33 ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಭರ್ತಿಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಅದರಂತೆ, ಕರ್ನಾಟಕ ನಾಗರೀಕ ಸೇವೆ (Revenue Sub Ordinate Branch) (Cadre & Recruitment) (Amendment) ನಿಯಮಗಳು, 2009 ರಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ವಯ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಉಲ್ಲೇಖ (5) ರ ಅಧಿಸೂಚನೆಯ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಸ್ವೀಕೃತಿಯಾದ ಅರ್ಜಿಗಳನ್ನು ಅರ್ಹತೆ ಮತ್ತು ಮೀಸಲಾತಿ ಅನ್ವಯ ವಿಂಗಡಿಸಿ, ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ:30–11–2009 ರಂದು ಪ್ರಕಟಿಸಲಾಯಿತು ಹಾಗೂ ಈ ಪಟ್ಟಿಯ ಬಗ್ಗೆ ಆಕ್ಷೇಪಣೆ / ತಕರಾರು ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 14–12–2009 ರವರೆಗೆ ಕಾಲಾವಕಾಶವನ್ನು ನೀಡಲಾಯಿತು ಮತ್ತು ದಿ:15–12–2009 ರಂದು ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಖುದ್ದು ಹಾಜರು ಪಡಿಸುವಂತೆ ತಿಳಿಸಲಾಯಿತು.

ಪರಿಶೀಲನಾ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳು ಸಲ್ಲಿಸಿದ ಆಕ್ಷೇಪಣೆಗಳು ಮತ್ತು ಅಭ್ಯರ್ಥಿಗಳು ಖುದ್ದು ಹಾಜರು ಪಡಿಸಿದ ಮೂಲ ದಾಖಲಾತಿಗಳನ್ನು ದಿನಾಂಕ:15–12–2009 ರಂದು ಪರಿಶೀಲಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ

ದಾಖಲಿಸಿರುವ ಅರ್ಜಿ ಸಂಖ್ಯೆ:5887-5898/2009 ರ ಪ್ರಕರಣಗಳ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿನ ಮೇರೆಗೆ ಅಂತಿಮ ಆಯ್ಕೆ ಪಟ್ಟಿ ಮತ್ತು ಅಂತಿಮ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ದಿನಾಂಕ:22-12-2009 ರಂದು ಪ್ರಕಟಿಸಲಾಯಿತು.

ಮೇಲ್ಕಂಡ ಅಂಶಗಳ ಅವಲೋಕನೆಯಿಂದ, ಪೊಲೀಸ್ ಪರಿಶೀಲನಾ ವರದಿ ಮತ್ತು ಮೀಸಲಾತಿ ಸಿಂಧುತ್ವ ಪ್ರಮಾಣ ಪತ್ರ ಪಡೆದು ಹಾಜರು ಪಡಿಸುವ ಷರತ್ತಿಗೊಳಪಡಿಸಿ ಉಲ್ಲೇಖ (7) ರ ಅಧಿಕೃತ ಜ್ಞಾಪನದ ಮೇರೆ ನೇಮಕಾತಿ ಆದೇಶ ನೀಡಲಾಗಿತ್ತು. ನೇಮಕಾತಿ ಆದೇಶದ ಕ್ರಮ ಸಂಖ್ಯೆ:11 ರ ಅಭ್ಯರ್ಥಿ ಶ್ರೀ ಮಂಜುನಾಥ ಜಿ., ತುಮಕೂರು ಇವರು ಬೇರೆ ಕಡೆ ಉದ್ಯೋಗದಲ್ಲಿರುವುದರಿಂದ ಗ್ರಾಮಲೆಕ್ಕಿಗರ ಹುದ್ದೆಗೆ ಹಾಜರಾಗಲು ಸಾಧ್ಯವಿಲ್ಲವೆಂದು ಉಲ್ಲೇಖ (8) ರಲ್ಲಿ ನಮೂದಿಸಿದ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಅಭ್ಯರ್ಥಿಯು 3ಎ ಗುಂಪಿನಲ್ಲಿ ಆಯ್ಕೆಯಾಗಿದ್ದು, ಹೆಚ್ಚುವರಿ ಪಟ್ಟಿಯಲ್ಲಿರುವ ಮಾನಸ ಹೆಚ್.ಎಂ. (3ಎ-ಗ್ರಾಮೀಣ) ಇವರಿಗೆ ನೇಮಕಾತಿ ಆದೇಶ ನೀಡಬೇಕಾಗಿದ್ದು, ಇವರು ಉಲ್ಲೇಖ (10) ರ ಅರ್ಜಿಯಲ್ಲಿ ತಿಳಿಸಿದಂತೆ ಶಿಕ್ಷಕರ ಹುದ್ದೆಯಲ್ಲಿ ಇರುವುದರಿಂದ ಗ್ರಾಮಲೆಕ್ಕಿಗರ ಹುದ್ದೆಗೆ ಹಾಜರಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಅಂತೆಯೇ ಹೆಚ್ಚುವರಿ ಪಟ್ಟಿಯಲ್ಲಿ 3ಎ ಗುಂಪಿನ ಅಭ್ಯರ್ಥಿ ಶ್ರೀ ಡಿ.ಎ.ಚಿಣ್ಣಪ್ಪ (3ಎ-ಕನ್ನಡ ಮಾಧ್ಯಮ) ಇವರಿಗೆ ನೇಮಕಾತಿ ಆದೇಶ ನೀಡಬೇಕಾಗಿದ್ದು, ಉಲ್ಲೇಖ (11) ರ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಡಿಕೇರಿ ಇವರ ಪತ್ರದನ್ವಯ ಇವರು ಶಿಕ್ಷಕರಾಗಿ ನೇಮಕಾತಿಯಾಗಿರುವುದರಿಂದ ಗ್ರಾಮಲೆಕ್ಕಿಗರ ಹುದ್ದೆಗೆ ಬರಲು ಇಚ್ಛಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅಂತೆಯೇ ಹೆಚ್ಚುವರಿ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ 6 ರ ಅಭ್ಯರ್ಥಿಯು 3ಎ ಗುಂಪಿನಲ್ಲಿ ಬರುವುದರಿಂದ ಇವರನ್ನು ಗ್ರಾಮಲೆಕ್ಕಿಗರ ಹುದ್ದೆಯ ರೂ. 5800-100-6000-125-6500-150-7100-175-7800-200-8600-225-9500-250-10500 ರ ವೇತನ ಶ್ರೇಣಿಯಲ್ಲಿ ಅವರ ಹೆಸರಿನ ಮುಂದೆ ನಮೂದಿಸಲ್ಪಟ್ಟ ಕಾರ್ಯಸ್ಥಳಕ್ಕೆ ಈ ಕೆಳಕಂಡ ನಿಬಂಧನೆಗಳಿಗನುಸಾರವಾಗಿ ನೇಮಕಾತಿಗೊಳಿಸಿ ಆದೇಶ ಹೊರಡಿಸಿದೆ.

ಕ್ರ. ಸಂ.	ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿನ ಕ್ರ.ಸಂ.	ಅಭ್ಯರ್ಥಿಯ ಹೆಸರು	ವಿಳಾಸ	ನೇಮಕಗೊಳಿಸಿದ ಹುದ್ದೆ ಮತ್ತು ಗ್ರಾಮ ವೃತ್ತ	ಯಾರಲ್ಲಿ ಹಾಜರಾಗತಕ್ಕದ್ದು
1	6	ಮಾಲಾಶ್ರೀ ಕೆ.ಟಿ.	ಬಿನ್.ತಮ್ಮಯ್ಯ ಕೆ.ಎ. ಮರಗೋಡು ಅಂಚೆ, ಹೊಸ್ಕೇರಿ ಗ್ರಾಮ, ಮಡಿಕೇರಿ ತಾಲ್ಲೂಕು	ಇಬ್ನಿವಳವಾಡಿ	ತಹಶೀಲ್ದಾರ್ ಮಡಿಕೇರಿ.

ಅಭ್ಯರ್ಥಿಯು ಗ್ರಾಮೀಣ ಜನರ ಸೇವೆಗೆ ಕಂಕಣಬದ್ಧರಾಗಿ, ನಿಷ್ಠೆ, ಪ್ರಾಮಾಣಿಕತೆ ಹಾಗೂ ನಿಸ್ಪೃಹತೆಯಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿದೆ.

ಷರತ್ತುಗಳು:

1. ಈ ನೇಮಕಾತಿಯು ಮಾನ್ಯ ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:5887-5898/2009 ಮತ್ತು ಅರ್ಜಿ ಸಂಖ್ಯೆ 2432/2010ರ ಪ್ರಕರಣದ ಅಂತಿಮ ತೀರ್ಮಾನಕ್ಕೊಳಪಡುವ ಷರತ್ತಿಗೊಳಪಟ್ಟಿದೆ.
2. ಮೇಲ್ಕಂಡ ಅಭ್ಯರ್ಥಿ ದಿನಾಂಕ:14-07-2010 ರೊಳಗಾಗಿ ಸಂಬಂಧಿಸಿದ ತಹಶೀಲ್ದಾರ್‌ರವರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಈ ನೇಮಕವನ್ನು ಒಂದು ವೇಳೆ ತಿರಸ್ಕರಿಸಿದಲ್ಲಿ, 07 ದಿವಸಗಳೊಳಗಾಗಿ ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ತಿಳಿಸತಕ್ಕದ್ದು.
3. ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ವೇಳೆಯಲ್ಲಿ ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಬೇಕು. 1) ಪಿ.ಯು.ಸಿ. ಅಂಕಪಟ್ಟಿ 2) ಎಸ್‌ಎಸ್‌ಎಲ್‌ಸಿ / ಹುಟ್ಟಿದ ದಿನಾಂಕದ ದೃಢೀಕರಣ 3) ಶಾಲಾ ವರ್ಗಾವಣೆ ಪ್ರಮಾಣ ಪತ್ರ 4) ವೈದ್ಯಕೀಯ ಪ್ರಮಾಣ ಪತ್ರ 5) ಸಕ್ಷಮ ಪ್ರಾಧಿಕಾರದಿಂದ ನೀಡಲ್ಪಟ್ಟ ಮೀಸಲಾತಿ ಪ್ರಮಾಣ ಪತ್ರಗಳು (ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)
4. ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾದ ದಿನಾಂಕದಿಂದ 2 ವರ್ಷಗಳ ಅವಧಿಗೆ ಪರಿವೀಕ್ಷಣಾ ಅವಧಿಯಲ್ಲಿದ್ದು (ಪ್ರೊಬೇಷನರಿ) ಅವರು ಈ ಅವಧಿಯಲ್ಲಿ ಕೆಳಗೆ ನಮೂದಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು 1) ಅಕೌಂಟ್ಸ್ ಲೋಯರ್ 2) ರೆವಿನ್ಯೂ ಲೋಯರ್ 3) ಕನ್ನಡ ಭಾಷಾ ಪರೀಕ್ಷೆ (ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳದಿದ್ದಲ್ಲಿ ಕನ್ನಡ ಭಾಷಾ ಪರೀಕ್ಷೆಯನ್ನು ಪಾಸು ಮಾಡತಕ್ಕದ್ದು) ಈ ಅವಧಿಯಲ್ಲಿ ನಿಗಧಿತ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆಯಾಗದಿದ್ದಲ್ಲಿ ಅಥವಾ ಕೆಲಸ ಕಾರ್ಯಗಳು ತೃಪ್ತಿಕರವಾಗಿರದಿದ್ದಲ್ಲಿ ಅವರನ್ನು ಸೇವೆಯಿಂದ ತೆಗೆದುಹಾಕಲಾಗುವುದು.

5. ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ಸರ್ಕಾರವು ಇಚ್ಛಿಸಿದಲ್ಲಿ ಅಥವಾ ಹುದ್ದೆಗಳು ರದ್ದಾದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದಿರುವುದು ಕಂಡು ಬಂದಲ್ಲಿ ಅವರನ್ನು ಯಾವುದೇ ಸಮಯದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಸೇವೆಯಿಂದ ತೆಗೆದುಹಾಕಲಾಗುವುದು.
6. ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತದ ಸಂವಿಧಾನಾತ್ಮಕವಾಗಿ ಗೊತ್ತುಪಡಿಸಿದ ನಮೂನೆಯಲ್ಲಿ ವಚನ ಸ್ವೀಕಾರ ಮಾಡತಕ್ಕದ್ದು.
7. ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ:ಎಫ್‌ಡಿ (ಎಸ್‌ಪಿಎಲ್) 04/ಪಿಇಟಿ/2005 ದಿನಾಂಕ:31–03–2006 ರಲ್ಲಿ ಜಾರಿಗೆ ನೀಡಿದ ಹೊಸ ನಿವೃತ್ತಿ ವೇತನ ನೀತಿಗೆ ಒಳಪಟ್ಟಿರುತ್ತಾರೆ.
8. ಸರ್ಕಾರದ ಸುತ್ತೋಲೆ ಸಂ:ಕಂಇ/54/ಜಿಎಸ್‌ಸಿ/2007 ದಿನಾಂಕ:27–03–2007 ರನ್ವಯ ಅಂತರ್ ಜಿಲ್ಲಾ ವರ್ಗಾವಣೆಗೆ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ಪಕ್ಷ 5 ವರ್ಷಗಳ ಸೇವೆಯನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.
9. ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ ಗುರುತಿನ ಚೀಟಿಯನ್ನು ತಹಶೀಲ್ದಾರರಲ್ಲಿ ಹಾಜರುಪಡಿಸತಕ್ಕದ್ದು. ತಹಶೀಲ್ದಾರರು ಅದನ್ನು ಉದ್ಯೋಗ ವಿನಿಮಯ ಕೇಂದ್ರಕ್ಕೆ ಸರೆಂಡರ್ ಮಾಡುವುದು.
10. ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ಹಾಗೂ ಕಾಲ ಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಇತರೆ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.
11. ಅಭ್ಯರ್ಥಿಯ ಜೇಷ್ಠತೆಯು ನೇರ ನೇಮಕಾತಿ ಪ್ರಾಧಿಕಾರದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯೇ ಇರತಕ್ಕದ್ದು. ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆ/ಕಾನೂನು ತಿದ್ದುಪಡಿಗೆ ಒಳಪಡುತ್ತದೆ.
12. ಗ್ರಾಮ ಲೆಕ್ಕಿಗ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ, ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವಾಗ ರೂ.1000/– (ರೂಪಾಯಿ ಒಂದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು ನಗದು ರೂಪದಲ್ಲಾಗಲೀ ಅಥವಾ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕವಾಗಲೀ ಸಂಬಂಧಪಟ್ಟ ತಹಶೀಲ್ದಾರರಲ್ಲಿ ಹಾಜರುಪಡಿಸತಕ್ಕದ್ದು ಅಥವಾ ಈ ಮೊತ್ತಕ್ಕೆ ಭದ್ರತಾ ಮುಚ್ಚಳಿಕೆ ಪತ್ರವನ್ನು ಛಾಪಾ ಕಾಗದದಲ್ಲಿ ಬರೆಯಿಸಿ ಒಬ್ಬರ ಜಾಮೀನು ಕೊಡತಕ್ಕದ್ದು. ತಹಶೀಲ್ದಾರರು ಈ ಮೊತ್ತದ ರಾಷ್ಟ್ರೀಯ ಉಳಿತಾಯ ಪತ್ರದ ಮೂಲಕ ಸರ್ಕಾರಕ್ಕೆ ಪ್ಲೆಡ್ಜ್ ಮಾಡಿಕೊಳ್ಳತಕ್ಕದ್ದು.
13. ಅಭ್ಯರ್ಥಿಯು ಇಲಾಖೆಯಿಂದ ಕಾಲ ಕಾಲಕ್ಕೆ ನಿಗಧಿಪಡಿಸಿದ ಹಾಗೂ ನಿಗಧಿಪಡಿಸಲಾಗುವ ವಿವಿಧ ಪರೀಕ್ಷೆ / ತರಬೇತಿಗಳನ್ನು ಯಶಸ್ವಿಯಾಗಿ ಮುಗಿಸತಕ್ಕದ್ದು.
14. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಹಾಗೂ ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು ಹಾಗೂ ಮೇಲೆ ಸೂಚಿಸಿದ ಕಾರ್ಯಸ್ಥಳಗಳಲ್ಲಿ ವರದಿ ಮಾಡಿಕೊಳ್ಳುವ ಮೊದಲು ಮುಂಚಿನ ಸೇವೆಯಿಂದ ಬಿಡುಗಡೆ ಆದೇಶ ಪಡೆದಿರಬೇಕು.
15. ಅಭ್ಯರ್ಥಿಗೆ ಕೆಲಸಕ್ಕೆ ಹಾಜರಾಗುವ ಸಂದರ್ಭದಲ್ಲಿ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
16. ಆಯ್ಕೆಯಾಗಿರುವ ಅಭ್ಯರ್ಥಿಗಳು ಅವರನ್ನು ನೇಮಿಸಿರುವ ಸ್ಥಳದಲ್ಲಿ ಕಡ್ಡಾಯವಾಗಿ ವಾಸ ಮಾಡಬೇಕು. ಈ ಬಗ್ಗೆ ಒಂದು ಪ್ರಮಾಣ ಪತ್ರವನ್ನು (ನಮೂನೆಯಂತೆ) ನೋಟರಿಯವರಿಂದ ಪ್ರಮಾಣೀಕರಿಸಿ ಹಾಜರುಪಡಿಸಬೇಕು.

ಕೆ.ಹೆಚ್. ಅಶ್ವತ್ಥನಾರಾಯಣ ಗೌಡ
ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ ಮತ್ತು
ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್. 615

DISTRICT AND SESSIONS COURT, HAVERI.

AT: HAVERI.

NOTIFICATION NO. 02/2010, DATED: 4th AUGUST 2010.

Sub: Recruitment of candidate for the post of Peon.

Read: Letter No.LCA-II 164/2009, Dated: 18/06/2010 of the Hon'ble High Court of Karnataka, Bangalore, directing to fill up one post in the cadre of Peon.

Applications are invited in the prescribed proforma for one post of Peon in the unit of District and Sessions Court, Haveri, from eligible candidates who are qualified as on the last date fixed for receipt of applications. The details of classification of vacancy is as follows:

Note 1: Candidates already applied for the post of Peons in response to Notification No.01/2010 Dtd: 22/04/2010, need not apply.

Note 2: Candidates belonging to Category-I [Physically Handicapped] shall only apply. Applications of candidates belonging to other categories will be summarily rejected.

POST: PEON:

i. No., of Vacancy : 01. [ONE ONLY.]

ii. Classification of vacancy.

Reservation.	Roster Point.		Physically Handicapped.	Total Vacancy.
	Vertical.	Horizontal.		
Category-I	79	04	01	01
TOTAL.			**01**	**01**

SCALE OF PAY: Rs.4800-100-6000-125-6500-150-7100-175-7275/- with admissible allowance.

QUALIFICATIONS: The candidate must have passed VII standard Examination and be able to read and write Kannada language.

MODE OF SELECTION: Through interview to ascertain the candidate's ability and suitability to hold the post. The candidate must be able to read and write Kannada language.

1. Age Limit:

[a] Must have attained the age of 18 years and must not have crossed the age of 40 years as on the last date fixed for receipt of applications.

[b] The upper age limit shall be relaxed by 10 years in case of candidate who is physically handicapped / widow.

[c] In case of Ex. Military Personals, maximum age limit plus three years plus the number of years of service rendered by him or her, in the Armed Forces of the Union.

[d] Candidates claiming the benefit of reservation under the reservation categories should furnish the certificate/s in the prescribed form. Such certificate/s should have been issued by the competent authority. The candidates should note that, if on verification the certificate is found to be false, the candidates who concocted and produced such false certificate will be prosecuted in accordance with the relevant provision of IPC and such candidates will also forfeit their claims for such selection.

2. **PROBATION**:

Candidate will be appointed on probation for a period of two years and the provision of K.C.S. [Probation] Rules 1977 shall *MUTATIS MUTANDIS* apply to candidates so selected.

3. Candidate will be recruited as per the rules prevailing.

4. Applicants when called for interview are required to appear at their own expenses.

5. **LAST DATE FIXED FOR RECEIPT OF APPLICATION IS 04/09/2010 TILL 5-45 P.M.**

6. [a] Candidates should submit their Typed / Computerized applications, complete in all aspects, together with copies of all the testimonials attested by the candidates in support of age, qualification, caste and disabled certificate in the prescribed form issued by the competent authority so as to reach the District and Sessions Judge Court, Haveri, on or before last date fixed. Envelope containing the applications should be superscrebed as **"APPLICATION FOR SELECTION TO THE POST OF PEON."**

[b] In service candidates shall submit their applications through their proper channel.

[c] Defective / Incomplete applications are liable to be rejected.

[d] Applications received after due date will be summarily rejected.

[e] The candidate who attempts to obtain extraneous support for his or her candidature will not be eligible for selection.

[f] A self-addressed envelope duly stamped with postal stamp worth Rs.5/- should be enclosed to the applications.

7. Applications in the prescribed proforma should be filled in by the candidates in their own hand writing and must be accompanied by the following:

[a] A certificate of character, issued by the Head of the institution in which he or she had last studied.

[b] Two certificates of character issued by two respectable persons of his / her locality unconnected with him / her testifying to his / her character. The character certificates of two respectable persons should have been issued prior to 6 months from the last date fixed for receipt of applications.

[c] Copies of marks card and other documents shall be self-attested.

[d] Candidates who claim benefit of reservation for Cat-I and disability [P.H.] must furnish certificate in the prescribed form issued by the competent authority.

[e] Copy of VII Standard Marks card shall be enclosed.

[f] One recent passport size photo of candidate shall be affixed on the application form with self-attestation.

8. Intimation for the interview will be sent in the ratio of **1:10** for the post of Peon, from amongst the list of candidates prepared on the basis of merit in the qualifying examination for the post.

9. If any candidate does not get intimation for the interview, it may be presumed that he or she is not eligible for the interview. No correspondence will be entertained in this regard.

K.C. RAMAKRISHNAIAH
DISTRICT AND SESSIONS JUDGE,
HAVERI.

APPLICATION FORM.

APPLICATION FOR THE POST OF _PEON_IN HAVERI UNIT.

Affix recent passport Size photo with self-attestation.

TO,

THE HON'BLE DISTRICT & SESSIONS JUDGE,
H A V E R I.

Sir,

In response to the District and Sessions Court, Haveri, Notification No.02/2010 Dtd: 04/08/2010, I am submitting the application furnishing the following information for the Post of **PEON**.

01.	Full Name of the Candidate. [IN BLOCK LETTERS.]	
02.	Name of his / her Father or Mother or Husband.	

03.	Date of Birth and Age.[Copy Enclosed.]			
04.	Gender.	MALE // FEMALE.		
05.	Postal Address.			
06.	Permanent Address.			
07.	Contact Mobile No. or Phone No., if any.			
08.	Qualification.	Maximum Marks.	Marks Obtained.	Percentage of Marks.
	[i] VII Examination [Marks card enclosed.]			
09.	[i] Candidate's religion, caste or community.			
	[ii] Whether the candidate belongs to Category-I ? [A copy of the certificate in support of the claims should be enclosed]			
10.	Whether the candidate claims reservation under the category reserved for Physical Handicapped?			
11.	Whether the applicant has more than one living Wife / Husband?			
12.	Whether the candidate is prosecuted for any offence previously?			

I hereby solemnly declare that the information and particulars furnished above are true and correct to the best of my knowledge and belief.

PLACE: Signature of the Candidate.

DATE :

P.R. 625

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ

ವಿವಿಧ ಫಸಲಿನ ಸಂಕ್ಷಿಪ್ತ ಟೆಂಡರ್ ಕಂ ಹರಾಜು ಪ್ರಕಟಣೆ

ಟೆಂಡರ್ ಕಂ ಹರಾಜು ಪ್ರಕಟಣೆ

ಸಂಖ್ಯೆ : ಎಸಿಟಿಎ1/ಸೇಲ್ಸ್/ವಿವಿಧ ಫಸಲು/ಸಿಆರ್–9/2010–11, ದಿನಾಂಕ: 3ನೇ ಆಗಸ್ಟ್ 2010

ವಿಷಯ: ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ, ಅಂಟುವಾಳ ಗಳ ಟೆಂಡರ್ / ಹರಾಜು ಕುರಿತು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್, ಮೈನರ್ ಫಾರೆಸ್ಟ್, ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ, ಅಂಟುವಾಳ 2010–11ರ (ವಾರ್ಷಿಕ) ಅವಧಿಗೆ ಅಂದರೆ **ದಿನಾಂಕ: 01–07–2010** ರಿಂದ **30–06–2011** ರ ಅವಧಿಗೆ ಅಥವಾ ಟೆಂಡರ್ / ಹರಾಜು ಒಪ್ಪಿಕೊಂಡ ದಿನದಿಂದ **30ನೇ ಜೂನ್ 2011** ರವರೆಗೆ ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗೆ ತಪ್ಶೀಲಿನಲ್ಲಿ ಸೂಚಿಸಿರುವ ಪ್ರಕಾರವಾಗಿ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಇಷ್ಟವುಳ್ಳ ನೊಂದಾಯಿತ ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು.

ಪ್ರಕಟಣೆಯಲ್ಲಿ ನಮೂದಿಸಿರುವ ಅರಣ್ಯೋತ್ಪನ್ನವು ನಿರ್ಧರಿತ ಬಂಜರು ಭೂಮಿ, ಗೋಮಾಳ, ಹರಾಜು ಗ್ರಾಮ ಠಾಣ ಮತ್ತು ಸಮುದಾಯ ಉದ್ದೇಶಕ್ಕಾಗಿ ಬಿಟ್ಟಿರುವ ಪ್ರದೇಶಗಳು ತಹಶೀಲ್ದಾರರಿಂದ ಪ್ರತ್ಯೇಕವಾಗಿ ಮಾರಾಟ ಮಾಡಿರುವ ಮತ್ತು ಮಾರಲ್ಪಡುವ ಪ್ರದೇಶಗಳು, ಮುನ್ಸಿಪಲ್, ನಗರಸಭೆ, ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್, ಗ್ರಾಮಪಂಚಾಯತ್ ಹಾಗೂ ಈ ವಿಭಾಗದ ನಿಯಂತ್ರಣಕ್ಕೆ ಒಳಪಡದೆ ಇರುವ ಪ್ರದೇಶಗಳನ್ನು ಹೊರತುಪಡಿಸಿ ಈ ಟೆಂಡರ್ ಕಂ ಹರಾಜಿನಲ್ಲಿ ಕೈಬಿಟ್ಟಿರುತ್ತದೆ.

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸ ಬೇಕಾದ ಠೇವಣಿ / ಹರಾಜಿನ ಹಣ
I). ಸಿಟ್ರಿಡೋರ ಎಲೆ ಫಸಲು.					
1	ಮಾಗಡಿ ತಾಲ್ಲೂಕು	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ	ದಿನಾಂಕ: 02–09–10 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು ಒಂದು ಪಕ್ಷ ಮೇಲ್ಕಂಡ ಅರಣ್ಯ ಉತ್ಪನ್ನ ಟಂಡರ್ ಕಂ ಹರಾಜಿನಲ್ಲಿ ಮಾರಾಟವಾಗದಿದ್ದಲ್ಲಿ ದಿನಾಂಕ: 13–09–10 ರಂದು ಮರು ಟೆಂಡರ್ ಕಂ ಹರಾಜು ಮಾಡಲಾಗುವುದು.	ದಿನಾಂಕ: 02–09–10 ಮಧ್ಯಾಹ್ನ 3.30 ಗಂಟೆಗೆ	ರೂ 5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಡ್ ಡ್ರಾಫ್ಟ್

ಕ್ರ. ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸ ಬೇಕಾದ ಠೇವಣಿ / ಹರಾಜಿನ ಹಣ

II). ತೂಪ್ರ ಎಲೆ (ಬೀಡಿ ಎಲೆ) ಫಸಲು

1.	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –

III). ಹುಣಸೆ ಫಸಲು

1.	ಚನ್ನಪಟ್ಟಣ ತಾಲ್ಲೂಕು	– " –	– " –	– " –	– " –
2.	ರಾಮನಗರ ತಾಲ್ಲೂಕು (ಕೂನಗಲ್ ಕಿರು ಅರಣ್ಯ ಪ್ರದೇಶ ಹೊರತುಪಡಿಸಿದೆ)	– " –	– " –	– " –	– " –
3.	ಕನಕಪುರ ತಾಲ್ಲೂಕು, ಕನಕಪುರ ಭಾಗ–1, ತೋಕಸಂದ್ರ ಬೀಟ್, ಮರಳವಾಡಿ ಬೀಟ್, ತೇರುಬೀದಿ ಬೀಟ್, ಗೌಡಹಳ್ಳಿ ಬೀಟ್ (ರಾಮಸ್ವಾಮಿ ದೇವಸ್ಥಾನ ಪ್ರದೇಶ)	– " –	– " –	– " –	– " –
4.	ಕನಕಪುರ ತಾಲ್ಲೂಕು, ಕನಕಪುರ ಭಾಗ–2, ರ ಕಾಡುಶಿವನಹಳ್ಳಿ ಬೀಟ್, ಹಂಚಿಗುಳಿ ಬೀಟ್, ಗೌಡಹಳ್ಳಿ ಭಾಗ (ಕಾಳೇಗೌಡನಹಳ್ಳಿ ಕೆರೆ ಪ್ರದೇಶ)	– " –	– " –	– " –	– " –
5.	ಕನಕಪುರ ತಾಲ್ಲೂಕು, ಕನಕಪುರ ಭಾಗ–3, ಚವರ್‌ಕಲ್ ಬೀಟ್, ಮುಗ್ಗೂರು ಬೀಟ್ (ವನ್ಯಪ್ರಾಣಿ ವಿಭಾಗಕ್ಕೆ ಸೇರಿದ ಪ್ರದೇಶವನ್ನು ಬಿಟ್ಟು) ಕೋಟೆಕೊಪ್ಪ ಬೀಟ್ ದಿಂಬದಹಳ್ಳಿ ಬೀಟ್, ಮುನೇಶ್ವರ ಬೀಟ್	– " –	– " –	– " –	– " –
6.	ಕನಕಪುರ ತಾಲ್ಲೂಕು, ಕನಕಪುರ ಭಾಗ–4, ಮಂಜುನಾಥ್ ಬೀಟ್, ರಾಮದೇವರ ಬೆಟ್ಟ ಬೀಟ್, ಗರಳಾಪುರ ಬೀಟ್, ನಾರಾಯಣಪುರ ಬೀಟ್	– " –	– " –	– " –	– " –

ಕ್ರ ಸಂ.	ಫಸಲಿನ ರೂಡಿಸುವ ಪ್ರದೇಶ	ಮಾರಾಟ ಮಾಡುವ ಸ್ಥಳ	ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ	ಹರಾಜು ದಿನಾಂಕ ವೇಳೆ	ಟೆಂಡರ್ ಫಾರಂ ಲಗತ್ತಿಸ ಬೇಕಾದ ಠೇವಣಿ / ಹರಾಜಿನ ಹಣ
7.	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಅರಣ್ಯ ಕೃಷಿಕರು ಮಾಡುತ್ತಿದ್ದ 35 ಹುಣಸೆಮರ ಸೇರಿ (280 ಹೆಕ್ಟರ್ ಎಂ.ಪಿ.ಸಿ.ಎ, 300 ಹೆಕ್ಟರ್ ಎ.ಎಫ್.ಸಿ ಪ್ರದೇಶ ಬಿಟ್ಟು)	– " –	– " –	– " –	– " –
8.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	– " –	– " –	– " –	– " –

IV). ಕಿರು ಅರಣ್ಯ ಉತ್ಪನ್ನ ಅಂದರೆ ಬೇಲ, ನೆಲ್ಲಿ

1	ಕನಕಪುರ ತಾಲ್ಲೂಕು	– " –	– " –	– " –	– " –
2	ಮಾಗಡಿ ತಾಲ್ಲೂಕು ಸಾವನದುರ್ಗ ಸ್ಟೇಟ್ ಫಾರೆಸ್ಟ್‌ನಲ್ಲಿ ಸಂಶೋಧನಾ ಉದ್ದೇಶಕ್ಕಾಗಿ ಕಾಯ್ದಿರಿಸಿದ ಬೀಜಗಳನ್ನು ಸಂಗ್ರಹಿಸಲು ಅರಣ್ಯ ಕೃಷಿಕರು ಕೇಂದ್ರ ವಲಯ ಬೆಂಗಳೂರು ಇವರಿಗೆ ಕಾಯ್ದಿರಿಸಿದ ಮರಗಳು ಸೇರಿಕೊಂಡಿರುತ್ತವೆ. ಗ್ರಾಮ ಅರಣ್ಯ ಸಮಿತಿಯ 300 ಹೆಕ್ಟರ್ ಪ್ರದೇಶ ಮತ್ತು 280 ಹೆಕ್ಟರ್ ಎಂ.ಪಿ.ಸಿ.ಎ. ಹಾಗೂ ಎಂ.ಪಿ.ಡಿ.ಎ. ಪ್ರದೇಶಗಳನ್ನು ಹೊರತುಪಡಿಸಿದೆ.	– " –	– " –	– " –	– " –
3.	ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು)	– " –	– " –	– " –	– " –

ವಿ. ಗೀತಾಂಜಲಿ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಪಿ.ಆರ್. 624

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಟೆಂಡರ್ ಪ್ರಕಟಣೆ

No.EE/MID/BGM/AE/TND/2010-11/2465, Dated: 4th August 2010

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಈ ಕೆಳಗಿನ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ ಪ್ರೋಕ್ಯುರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಡಗಂಟು ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರ್ಮ ಬೆಲೆ (ರೂ.ಗಳಲ್ಲಿ)	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ	ಷರಾ
	Standard Tender Document KW-2 ರಂತೆ					
1	ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮದ ಹತ್ತಿರ ಬ್ರಿಡ್ಜ ಕಂ ಬ್ಯಾರೇಜ್ ನಿರ್ಮಾಣ (Work Indent-1248)	49.73	99500.00	1250/–	6 ತಿಂಗಳು (ಮಳೆಗಾಲ ಸೇರಿ)	1ನೇ ಕರೆ
2	ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಹಾಲಳ್ಳಿ ಗ್ರಾಮದ ಹತ್ತಿರದ ಇಂಗು ಕೆರೆ ನಿರ್ಮಾಣ (Work Indent-1299)	37.53	75100.00	1250/–	6 ತಿಂಗಳು (ಮಳೆಗಾಲ ಸೇರಿ)	1ನೇ ಕರೆ
3	ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ದಾಸನಟ್ಟಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ (Work Indent-1298)	49.33	98700.00	1250/–	6 ತಿಂಗಳು (ಮಳೆಗಾಲ ಸೇರಿ)	1ನೇ ಕರೆ
4	ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ವಡೆರಟ್ಟಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ (Work Indent-718/Call-5)	27.13	54500.00	1250	4 ತಿಂಗಳು (ಮಳೆಗಾಲ ಸೇರಿ)	5ನೇ ಕರೆ

ಗುತ್ತಿಗೆದಾರರು ಕರ್ನಾಟಕ ಸರ್ಕಾರದ "ಇ ಪ್ರೋಕ್ಯೂರಮೆಂಟ್" ವೆಬಸೈಟ್ https://eproc.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ 12/**08/2010 ರಿಂದ Download** ಮಾಡಿಕೊಳ್ಳಬಹುದು.

ಕಾಮಗಾರಿ ಪಡೆಯಲು ಅರ್ಹತೆ ಷರತ್ತುಗಳು ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ.6.9.2010ರ 17–30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ **"ಇ–ಪ್ರೋಕ್ಯುರಮೆಂಟ"** ಹೆಲ್ಪ ಡೆಸ್ಕನಿಂದ ಪಡೆಯಬಹುದು. 080–25501216/25201227.

ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ್ ಶುಲ್ಕದೊಂದಿಗೆ (ವೆಬಸೈಟ್‌ನಲ್ಲಿ ನಿಗದಿ ಮಾಡಿರುವ ಯಾವುದಾದರು ಒಂದುಮಾದರಿಯಲ್ಲಿ ಆನ್ ಲೈನ್ ಪೇಮೆಂಟ್ ಮಾತ್ರ) 'ಇ–ಪ್ರೋಕ್ಯುರಮೆಂಟ್" ವೆಬಸೈಟ್ https://eproc.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **10/9/2010ರ 16–00ಘಂಟೆವರೆಗೆ ಸ್ವೀಕರಿಸಲಾಗುವುದು. ಸದರಿ ಗುತ್ತಿಗೆಯನ್ನು 13.09.2010 ರಂದು ತೆರೆಯಲಾಗುವುದು. (ಸಾಧ್ಯವಾದಲ್ಲಿ)**

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 621 ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ ಬೆಳಗಾವಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಟೆಂಡರ್ ಪ್ರಕಟಣೆ

No.EE/MID/BGM/AE/TND/2010-11/2466, Dated:- 4th August 2010

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಈ ಕೆಳಗಿನ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ

ಪ್ರೋಕ್ಯುರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ ಶುಲ್ಕ (ರೂ.ಗಳಲ್ಲಿ)	ಕೆಲಸವನ್ನು ಮುಗಿಸುವ ಕಾಲಮಿತಿ ಮಳೆಗಾಲ ಸೇರಿ
	Standard Tender Document KW--3 ರಂತೆ				
1	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಬೆಳಗಲಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ ಕಂ ಬ್ಯಾರೇಜ್ ನಿರ್ಮಾಣ (Work Indent-1216)	54.05	10100.00	2500/–	6 ತಿಂಗಳು (ಮಳೆಗಾಲ ಸೇರಿ)
2	ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಹಿರೇನಂದಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ ಕಂ ಬ್ಯಾರೇಜ್ ನಿರ್ಮಾಣ (Work Indent-1329)	91.13	182500.00	2500/–	6 ತಿಂಗಳು (ಮಳೆಗಾಲ ಸೇರಿ)

ಗುತ್ತಿಗೆದಾರರು ಕರ್ನಾಟಕ ಸರ್ಕಾರದ "ಇ ಪ್ರೋಕ್ಯೂರಮೆಂಟ್" ವೆಬಸೈಟ್ https://eproc.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **12/08/2010** ರಿಂದ **Download** ಮಾಡಿಕೊಳ್ಳಬಹುದು.

ಕಾಮಗಾರಿ ಪಡೆಯಲು ಅರ್ಹತೆ ಷರತುಗಳು ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ.6/9/2010ರ 17–30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ" ಹೆಲ್ಪ ಡೆಸ್ಕ್‌ನಿಂದ ಪಡೆಯಬಹುದು. 080–25501216/25201227.

ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ್ ಶುಲ್ಕದೊಂದಿಗೆ (ವೆಬಸೈಟ್‌ನಲ್ಲಿ ನಿಗದಿ ಮಾಡಿರುವ ಯಾವುದಾದರು ಒಂದು ಮಾದರಿಯಲ್ಲಿ ಆನ್ ಲೈನ್ ಪೇಮೆಂಟ್ ಮಾತ್ರ) 'ಇ–ಪ್ರೋಕ್ಯುರಮೆಂಟ್" ವೆಬಸೈಟ್ https://eproc.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ 10/9/2010ರ 16–00 ಗಂಟೆವರೆಗೆ ಸ್ವೀಕರಿಸಲಾಗುವುದು. ಸದರಿ ಗುತ್ತಿಗೆಗಳನ್ನು (ತಾಂತ್ರಿಕ ಬಿಡ್) 13.09.2010 ರಂದು ತೆರೆಯಲಾಗುವುದು. (ಸಾಧ್ಯವಾದಲ್ಲಿ)

ವ್ಹಿ.ಬಿ. ಕುಲಕರ್ಣಿ

ಪಿ.ಆರ್. 622 ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ವಿಭಾಗ ಬೆಳಗಾವಿ

WATER RESOURCES DEPARTMENT (MINOR IRRIGATION)

OFFICE OF THE EXECUTIVE ENGINEER M.I.DIVISION, BELGAUM.

TENDER NOTIFICATION

No.EE /MID/BGM/TND/AE/10-11/2470, Date: 4th August 2010

As per KTTP Act-2000 and Amendment the Executive Engineer M.I Division Belgaum has invited the item rate tender for the following work in E-Procurement Portal System.

Sl. No	Name of work	Amount put to tender (Rs. In lakhs)	Earnest Money Deposit (Rs.)	Tender Processing Fee (Rs.)	Period of completion (including monsoon)	Remarks
	(Standard Tender Document KW-4)					
1	Construction of Bridge Cum Barrage near Upparhatti Gokak Tq. Belgaum Dist. (Work Indent No.761/Call-2)	121.10	200000.00	5000.00	9 months (including monsoon)	2nd Call
2	Improvements to Bridge Cum Barrage across Ghataprabha River near Hunashyal Village in Gokak Tq. Belgaum Dist. (Work Indent No.1332)	114.78	172500.00	5000.00	9 months (including monsoon)	1st Call

The Contractors may log-in and Download from Govt. of Karnataka E-Procurement Web Site https://eproc.karnataka.gov.in from **23/08/2010**.

The details of the works and other conditions may be obtained in the Division Office or E-Procurement Help Desk 080-25501216/25201227 up to 06/09/2010.

Date of Pre-tender meeting : 06-09-2010 (In the office of the Executive Engineer, M.I. Division, Belgaum at 11.00 AM

The Tender will be received along with Tender processing fee and E.M.D (as prescribed in the Web-Site in any one of the mode by on-line payment only.) in https://eproc.karnataka.gov.in on or before **15/09/2010 upto 16.00 hrs. The tenders (Technical Bid) will be opened on 18.09.2010 (If possible)**

V.B.Kulkarni

P.R. 623 Executive Engineer, M.I. Division, Belgaum.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ ಇಲಾಖೆ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು

ಪ್ರಕಟಣೆ ಸಂಖ್ಯೆ: 09/10-11, ದಿನಾಂಕ: 28ನೇ ಜುಲೈ 2010

ಐಟಂವಾರು ಟೆಂಡರ್

1. ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ -2000ರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ-4 ರ ಸೂಚನೆ ಮತು ನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪದ್ದತಿಯ ಮುಖಾಂತರ ಅಹ್ವಾನಿಸಲಾಗಿದೆ.
2. ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ದಿ:31.08.2010 ರ ವರಗೆ ಪಡೆಯಬಹುದಾಗಿದೆ.
3. ಟೆಂಡರ್ ದಸ್ತಾವೇಜುಗಳನ್ನು ಇ.ಪೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ 04.09.2010 ರ 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ.
4. ತಾಂತಿಕ ಬಿಡ್‌ನ್ನು ದಿ:07.09.2010 ರಂದು ಬೆಳಿಗ್ಗೆ 11.00 ಕ್ಕೆ ತೆರೆಯಲಾಗುವುದು.
5. ತಾಂತಿಕ ಬಿಡ್ ಅರ್ಹತೆಗೊಂಡ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿ:15.09.2010 ರಂದು ಬೆಳಿಗ್ಗೆ11.00 ಕ್ಕೆ ತೆರೆಯಲಾಗುವುದು.
6. ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್‌ರ ಐ.ಟಿ.ಟಿ. ನಿಬಂಧನೆ 2 ಮತ್ತು 3ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.
7. ಎಲ್ಲಾ ಟೆಂಡರನ್ನು ಅಥವಾ ಯಾವುದಾದರೂ ಟೆಂಡರನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
8. ಹೆಚ್ಚಿನ ವಿವರಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ https://www.eproc.karnataka.gov.in_ರಲ್ಲಿ ಪಡೆಯಬಹುದಾಗಿದೆ.

ವಿವರ

ಪ್ಯಾಕೇಜ್ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿಯ ಹೆಸರು	ಲೆಕ್ಕ ಶೀರ್ಷಿಕೆ	ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ (ರೂ.ಲಕ್ಷ)	ಇ.ಎಂ.ಡಿ. (ರೂ.ಗಳಲ್ಲಿ)	ಟೆಂಡರ್ ಪ್ರೊಸೆಸಿಂಗ್ ಫಿ (ರೂ.ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಿದ ಅವಧಿ
1	970	ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಮೈಸೂರಮ್ಮನದೊಡ್ಡಿ (ಬಗ್ಗನ ದೊಡ್ಡಿ) ಕೆರೆ ಅಭಿವೃದ್ಧಿ ಕಾಮಗಾರಿ	4702 ವಿಶೇಷ ಘಟಕ ಯೋಜನೆ	141.46	2,13,000/-	5000/-	6 ತಿಂಗಳು (ಮಳೆಗಾಲ ಸೇರಿ)

ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

WATER RESOURCES DEPARTMENT (MINOR IRRIGATION)

OFFICE OF THE EXECUTIVE ENGINEER, M.I.DIVISION, BANGALORE

Tender Notification No.09/10-11, dated 28th July 2010

(ITEM RATE TENDER)

1. Executive Engineer, M.I.Division, Bangalore invites Tenders on behalf of Governor of Karnataka for the following work as per Karnataka transparency in public procurement ordinance act 2000 and standard tender document KW-4 through e-Procurement System.

2. Any information's regarding this tender may be obtained from this office up to 31.08.2010 during office hours
3. Tender documents may be downloaded and submitted through e-procurement portal upto 16.00 hours on dt. 04.09.2010
4. Technical bids of contractors for all the works will be opened on 07.09.2010 at 11.00 AM
5. Technically qualified contractor`s finanacial bid will be opened on 15.09.2010 at 11.00 AM
6. Tenderers are advised to note the minimum qualification criteria specified in clause 2 and 3 of ITT in Standard Tender document.
7. All the rights are reserved for postponement or cancellation of all or any tender.
8. Terms and conditions and other details can be obtained through e-procurement portal at the website address https://www.eproc.karnataka.gov.in

TABLE

Package No.	Indent Number	Name of the work	Head of account	Approximate value of work (Rs. lakhs)	Earnest Money Deposit (Rs.)	Tender processing fee (Rs.	Period of completion
1	970	IMPROVEMENT WORKS TO MYSORAMMANA DODDI (BAGGANADODDI) TANK IN ANEKAL TALUK, BANGALORE URBAN DISTRICT.	4702 (SCP)	141.46	2,13,000/-	5000/-	6 months (including monsoon)

Executive Engineer,
Minor Irrigation Division, Bangalore.

P.R. 619

ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

ಇ-ಟೆಂಡರ್ ಅಧಿಸೂಚನೆ

ಅಧಿಸೂಚನೆ ಸಂಖ್ಯೆ:ಪಿಸಿಸಿಎಫ್:ಪಿ:ಸಿಆರ್- 1/ಪಾ.ಚೀ/:2010-11, ದಿನಾಂಕ : 12ನೇ ಆಗಸ್ಟ್ 2010.

ವಿಷಯ : ಪಾಲಿಥೀನ್ ಚೀಲ / ಹಾಳೆ / ನೇಯ್ದ ಚೀಲಗಳ ಪೂರೈಕೆಗಾಗಿ ಅರ್ಹತಾಪೂರ್ವ "ಇ" ಟೆಂಡರ್ ದರದ ಪ್ರಕಟಣೆ ಬಗ್ಗೆ

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2010-11 ನೇ ಸಾಲಿನಲ್ಲಿ ಅರಣ್ಯ ಸಸ್ಯಕ್ಷೇತ್ರದಲ್ಲಿ 01-09-2010 ರಿಂದ 31-08-2011ರವರೆಗಿನ ಅವಧಿಯಲ್ಲಿ ವಿವಿಧ ಅಳತೆಯ ಪಾಲಿಥೀನ್ ಚೀಲ / ಹಾಳೆ / ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಆಸಕ್ತ ಎಲ್.ಡಿ.ಪಿ.ಇ. ಚೀಲ/ಹಾಳೆ ಮತ್ತು ಹೆಚ್.ಡಿ.ಪಿ.ಇ. ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಸರ್ಕಾರದಿಂದ ಪರವಾನಗಿ ಪಡೆದ ಆಸಕ್ತ ಉದ್ದಿಮೆ / ಉತ್ಪಾದಕರಿಂದ ಅರ್ಜಿಗಳನ್ನು ಈ ಕಚೇರಿಯ ಅಧಿಸೂಚನೆ ದಿನಾಂಕ 12-08-2010 ರಲ್ಲಿ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಸಂಕ್ಷಿಪ್ತ ಟೆಂಡರ್ ದರ / ಪ್ರಕಟಣೆಯನ್ನು ಪ್ರಕಟಣೆಯ ಮೂಲಕ ಸೆಳೆಯಲಾಗಿದೆ ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಇಲಾಖೆಯ ವೆಬ್‌ಸೈಟ್ www.karnatakaforest.gov.in ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪಾಲಿಥೀನ್ ಚೀಲ / ಹಾಳೆ / ನೇಯ್ದ ಚೀಲಗಳಿಗೆ ಒಂದು ಸಾವಿರ ಚೀಲಗಳಿಗೆ ಅನ್ವಯಿಸುವ ದರವನ್ನು ನಮೂದಿಸಿ ಆಸಕ್ತಿಯಿರುವ ಸರಬರಾಜುದಾರರು ತಮ್ಮ ಅರ್ಜಿಯನ್ನು ದಿನಾಂಕ: 26-08-2010 ರೊಳಗೆ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಸಲ್ಲಿಸತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮುಖ್ಯಸ್ಥರು, ಅರಣ್ಯ ಪಡೆ)

Karnataka Forest Department

Principal Chief Conservator of Forests,

Aranya Bhavan, 18th Cross, Malleshwarm, Bangalore-560003

NOTIFICATION NO.PCCF.C.CR-1-PA.CHI/2010-11, DATED: 12th August 2010.

Prequalification Tenders to shortlist Manufacturers Industries for supply of Polythene Bags/Sheets, Woven Sacks

The Karnataka Forest Department intends to short list promising prospective manufacturing Industries to Supply Polythene Bags, Polythene Sheets, Woven Sacks in the manner specified for the

Forest Nursery season 2010-11 between the period -1.09.2010 to 31.08.2011, and hence applications are called for from the desirous in the notification dated: 12-08-2010. The attention of the Industries manufacturing LDPE Polythene bags, Polythene Sheet and HDPE Woven sacks is invited to this brief notification. The details can be obtained from the website of e-Governance http://eproc.karnataka.gov.in and also from the department website **www.karnatakaforest.gov.in**. The rate per Ton of Polythene bags/Sheets and rate per 1000 nos. of Woven sacks will be determined from among the prospective manufacturers for further receiving Rate Tenders from such of the short listed participants subsequently. Such of the intending suppliers may express their interest in the prescribed pro-forma and submit as per directions available in e-procurement portal on or before 26-08-2010.

P.R. 632 Principal Chief Conservator of Forests

ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಅಡ್ಡರಸ್ತೆ,

ಮಲ್ಲೇಶ್ವರಂ, ಬೆಂಗಳೂರು–560 003

ಇ–ಟೆಂಡರ್ ಅಧಿಸೂಚನೆ

ಅಧಿಸೂಚನೆ ಸಂಖ್ಯೆ:ಪಿಸಿಸಿಎಫ್:ಸಿ:ಸಿಆರ್– 3/ಮು.ತಂತಿ/:2010–11, ದಿನಾಂಕ: 12ನೇ ಆಗಸ್ಟ್ 2010.

ವಿಷಯ : ಮುಳ್ಳುತಂತಿ, ಚೈನ್‌ಲಿಂಕ್ ಮೆಶ್ ಹಾಗೂ ಸಾದಾ ತಂತಿ ಪೂರೈಕೆಗಾಗಿ ಅರ್ಹತಾಪೂರ್ವ "ಇ" ಟೆಂಡರ್ ದರದ ಪ್ರಕಟಣೆ ಬಗ್ಗೆ.

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2010–11 ನೇ ಸಾಲಿನಲ್ಲಿ ಅರಣ್ಯ ಸಸ್ಯಕ್ಷೇತ್ರದಲ್ಲಿ 01–09–2010 ರಿಂದ 31–08–2011ರವರೆಗಿನ ಅವಧಿಯಲ್ಲಿ ಮುಳ್ಳುತಂತಿ, ಚೈನ್‌ಲಿಂಕ್ ಮೆಶ್ ಹಾಗೂ ಸಾದಾ ತಂತಿಯನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭವ್ಯ ಪಟ್ಟಿಯನ್ನು ತಯಾರಿಸಲು ಸರ್ಕಾರದಿಂದ ಪರವಾನಗಿ ಪಡೆದ ಆಸಕ್ತ ಉದ್ದಿಮೆ / ಉತ್ಪಾದಕರಿಂದ ಅರ್ಜಿಗಳನ್ನು ಈ ಕಚೇರಿಯ ಅಧಿಸೂಚನೆ ದಿನಾಂಕ 12–08–2010 ರಲ್ಲಿ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಸಂಕ್ಷಿಪ್ತ ಟೆಂಡರ್ ದರ / ಪ್ರಕಟಣೆಯನ್ನು ಪ್ರಕಟಣೆಯ ಮೂಲಕ ಸೆಳೆಯಲಾಗಿದೆ ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಇಲಾಖೆಯ ವೆಬ್‌ಸೈಟ್ www.karnatakaforest.gov.in ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮುಳ್ಳುತಂತಿಗೆ ಮತ್ತು ಸಾದಾ ತಂತಿಗೆ ಪ್ರತಿ ಟನ್ನಿಗೆ ಮತ್ತು ಚೈನ್ ಲಿಂಕ್ ಮೆಶ್‌ಗೆ ಒಂದು ಚದರ ಅಡಿಗೆ ಅನ್ವಯಿಸುವ ದರವನ್ನು ನಮೂದಿಸಿ ಆಸಕ್ತಿಯಿರುವ ಸರಬರಾಜುದಾರರು ತಮ್ಮ ಅರ್ಜಿಯನ್ನು ದಿನಾಂಕ: 26–08–2010 ರೊಳಗೆ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಸಲ್ಲಿಸತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮುಖ್ಯಸ್ಥರು, ಅರಣ್ಯ ಪಡೆ)

Karnataka Forest Department

Principal Chief Conservator of Forests,

Aranya Bhavan, 18th Cross, Malleshwarm, Bangalore-560003

NOTIFICATION NO.PCCF.C.CR-03 -MulluThanthi.2010-11, DATED: 12th August 2010.

Prequalification Tenders to shortlist Manufacturers for supply of Barbed wire, Chain Link Mesh & Plain Wire.

The Karnataka Forest Department intends to short list promising prospective manufacturing Industries to Supply Barbed wire, Chain Link Mesh & Plain Wire Manufacturers, that the Karnataka Forest Department between the period -1.09.2010 to 31.08.2011, and hence applications are called for from the desirous in the notification dated: 12-08-2010. The attention of the Industries manufacturing Barbed wire, Chain Link Mesh & Plain Wire is invited to this brief notification. The details can be obtained from the website of e-Governance http://eproc.karnataka.gov.in and also from the department website **www.karnatakaforest.gov.in**. The Rate Per MT of Barbed Wire & Plain Wire and Rate pet Sq. Ft. of Chain Link Mesh will be determined from among the prospective manufacturers for further receiving Rate Tenders from such of the short listed participants subsequently. Such of the intending suppliers may express their interest in the prescribed pro-forma and submit as per directions mentioned in e-procurement portal on or before 26-08-2010.

P.R. 633 Principal Chief Conservator of Forests

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001.

ಅಧಿಸೂಚನೆ

ಸಂಖ್ಯೆ, ಇಪ(1)1932/2010–11/ಪಿಎಸ್‌ಸಿ, ಬೆಂಗಳೂರು, ದಿನಾಂಕ: 12ನೇ ಆಗಸ್ಟ್ 2010.

ವಿಷಯ: 2010ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಆಯೋಗದಿಂದ ನಡೆಸಲಾಗುವ **2010**ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಬಗ್ಗೆ ಸೂಚನೆಗಳನ್ನು ಆಯೋಗದ ವೆಬ್‌ಸೈಟ್ **"http://kpsc.kar.nic.in"** ನಲ್ಲಿ ಬಿತ್ತರಿಸಲಾಗಿದೆ. ಈ ಪರೀಕ್ಷೆಗಳನ್ನು ಡಿಸೆಂಬರ್ 2010ರ ಮಾಹೆಯಲ್ಲಿ ನಡೆಸಲಾಗುವುದು. ಪರೀಕ್ಷೆಗಳ ವೇಳಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧ "ಎ" ನಲ್ಲಿ ಎಲ್ಲಾ ಕೇಂದ್ರಗಳಲ್ಲಿ ನಡೆಯುವ ಪರೀಕ್ಷೆಗಳ ಬಗ್ಗೆ ಹಾಗೂ ಅನುಬಂಧ "ಬಿ" ನಲ್ಲಿ ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಯುವ ಪರೀಕ್ಷೆಗಳ ಬಗ್ಗೆ ವಿವರವಾಗಿ ನೀಡಲಾಗಿದೆ. ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಒಂದು ಅರ್ಜಿಯಲ್ಲಿ ಗರಿಷ್ಠ ಆರು ವಿಷಯಗಳನ್ನು ಆಯ್ಕೆಮಾಡಿ– ಕೊಳ್ಳಬಹುದು. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿಮಾಡುವಾಗ ವಿಷಯ ಮತ್ತು ವಿಷಯ ಸಂಕೇತಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಲು ಸೂಚಿಸಿದೆ.

1. **ಅರ್ಜಿ ಸಲ್ಲಿಸುವ ವಿಧಾನ/ಶುಲ್ಕ ಪಾವತಿಸುವ ವಿಧಾನ:**

(ಎ) ಅಭ್ಯರ್ಥಿಗಳು ಅನ್‌ಲೈನ್ ಮೂಲಕ ಅರ್ಜಿಗಳನ್ನು ಭರ್ತಿಮಾಡಬೇಕು ಆಯೋಗದ ವೆಬ್‌ಸೈಟ್ **"http://kpsc.kar.nic.in/ HOME PAGE "** ನಲ್ಲಿ **ON LINE** ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಯು ಆಯೋಗದ ಅಧಿಕೃತ ವೆಬ್‌ಸೈಟ್ **"http://kpsc.kar.nic.in"** ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಬಲಭಾಗದಲ್ಲಿ **"ON LINE APPLICATION "** ಎಂಬುದು **" BLINK "** ಆಗುತ್ತಲಿದ್ದು, ಅದರ ಮೇಲೆ ಕ್ಲಿಕ್ ಮಾಡಿದ ಕೂಡಲೇ ವಿವಿಧ ಅಧಿಸೂಚನೆಗಳ ವಿವರ ಲಭ್ಯವಾಗುತ್ತದೆ. ಅದರಲ್ಲಿ ಅಭ್ಯರ್ಥಿಗಳಿಗೆ ಅನ್ವಯವಾಗುವ ಅಧಿಸೂಚನೆಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು, ಅದರಲ್ಲಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನ ಅನುಸರಿಸಬೇಕಾದ ಸೂಚನೆಗಳನ್ನು ನೀಡಲಾಗಿದ್ದು ಅವುಗಳನ್ನು ಪೂರ್ಣವಾಗಿ ತಿಳಿದುಕೊಂಡು ನಂತರ **"Apply "** ಎಂಬುದರ ಮೇಲೆ ಕ್ಲಿಕ್ ಮಾಡಿ ನಿಗದಿಪಡಿಸಿದ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿ ಅರ್ಜಿ **Submit** ಮಾಡಬೇಕು.

(ಬಿ) ಅಭ್ಯರ್ಥಿಯು ಇತ್ತೀಚಿಗಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಶುದ್ಧವಾದ ಬಿಳಿ ಹಾಳೆಯ ಮೇಲೆ ಅಂಟಿಸಿ ಅದರ ಕೆಳಗೆ ಬಾಕ್ಸ್‌ನಲ್ಲಿ ಕಪ್ಪು ಶಾಹಿಯ ಸ್ಕೆಚ್‌ಪೆನ್/ಮಾರ್ಕರ್ ಪೆನ್‌ನಲ್ಲಿ ಸಹಿಯನ್ನು ಮಾಡಿ ಇದನ್ನು ಸ್ಕ್ಯಾನ್ ಮಾಡಿ ಅರ್ಜಿಗೆ **Upload** ಮಾಡಬೇಕು. ಸಹಿ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಭರ್ತಿ ಮಾಡಿದ ಆನ್‌ಲೈನ್ ಅರ್ಜಿಯ ಪ್ರತಿಯು ಎರಡು ಭಾಗಗಳಲ್ಲಿ ಇರುತ್ತದೆ. (ಭಾಗ–1 ಮತ್ತು ಭಾಗ–2) ಅವೆರಡನ್ನು **Down load** ಮಾಡಿಕೊಂಡು ಭಾಗ–1ನ್ನು ಅಭ್ಯರ್ಥಿಗಳು ತಮ್ಮಲ್ಲಿ ಇರಿಸಿಕೊಳ್ಳತಕ್ಕದ್ದು ಹಾಗೂ ಆಯೋಗವು ಕೇಳಿದಾಗ ಅದನ್ನು ಹಾಜರುಪಡಿಸತಕ್ಕದ್ದು.

(ಸಿ) ಮೇಲಧಿಕಾರಿಯ ಪ್ರಮಾಣಪತ್ರದ ಅರ್ಜಿಯ ಭಾಗ–2ರ ಪ್ರತಿಯನ್ನು **Down load** ಮಾಡಿಕೊಂಡು ನಿಗದಿಪಡಿಸಿದ ಅಂಕಣದಲ್ಲಿ ಶುಲ್ಕ ಪಾವತಿಸಿದ ವಿವರಗಳನ್ನು ಭರ್ತಿಮಾಡಿ ಮೇಲಧಿಕಾರಿಯವರಿಂದ ದೃಢೀಕರಿಸತಕ್ಕದ್ದು. ಮತ್ತು ನಿಗದಿತ ಶುಲ್ಕವನ್ನು "ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001" ಇವರ ಹೆಸರಿಗೆ ಡಿ.ಡಿ/ಐ.ಪಿ.ಓ.ಗಳನ್ನು ಪಡೆದು ಅವುಗಳ ಹಿಂಬದಿಯಲ್ಲಿ ಅಭ್ಯರ್ಥಿಯ ಹೆಸರು, ಮತ್ತು ಆನ್‌ಲೈನ್ ಅರ್ಜಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಮೇಲಧಿಕಾರಿಗಳಿಂದ ದೃಢೀಕರಿಸಿದ ಪ್ರಮಾಣಪತ್ರ ಮತ್ತು ನಿಗದಿತ ಶುಲ್ಕದೊಡನೆ (ಡಿ.ಡಿ./ಐ.ಪಿ.ಓ. ಮೂಲಕ) ದಿನಾಂಕ: 20–9–2010ರ ಒಳಗೆ ತಮ್ಮ ಮೇಲಧಿಕಾರಿಗಳ ಮೂಲಕ "ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001"ಇವರಿಗೆ ರವಾನಿಸುವುದು. ನಿಗದಿತ ದಿನಾಂಕದ ನಂತರ ಬರುವ ಹಾಗೂ ಮೇಲಧಿಕಾರಿಗಳ ಪ್ರಮಾಣಪತ್ರವಿಲ್ಲದ ಮತ್ತು ಡಿ.ಡಿ./ಐ.ಪಿ.ಓ. ಲಗತ್ತಿಸಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2. **ಅರ್ಜಿಗಳನ್ನು ಸಲ್ಲಿಸುವ ದಿನಾಂಕ:**

ಅರ್ಜಿಗಳನ್ನು 18–08–2010 ರಿಂದ 20–09–2010ರ ಒಳಗಾಗಿ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರ **ON LINE** ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ರಜೆ ದಿನವಾಗಿದ್ದಲ್ಲಿ ಮುಂದಿನ ಕಛೇರಿ ದಿನವನ್ನು ಕೊನೆಯ ದಿನಾಂಕ ಎಂದು ಪರಿಗಣಿಸಲಾಗುವುದು.

V -F3-(0)

ಸೂಚನೆಗಳು:

(1) ಅನುದಾನಿತ/ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

(2) ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೊದಲ ಪ್ರಯತ್ನದಿಂದಲೇ ಕಡ್ಡಾಯವಾಗಿ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(3) ಶುಲ್ಕ ಪಾವತಿಸದ ಹಾಗೂ ಅಪೂರ್ಣ ಅರ್ಜಿಗಳನ್ನು ಮತ್ತು ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವ ಸೂಚನೆಯನ್ನು ನೀಡದೇ ತಿರಸ್ಕರಿಸಲಾಗುವುದು.

ವಿಶೇಷ ಸೂಚನೆ: (1) ON LINE ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) No. 9740977411 ಮತ್ತು **080-30574944/30574945** ಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

(2) ON LINE ಮೂಲಕ ಸಲ್ಲಿಸಿದ ಅರ್ಜಿಯ ಸ್ಥಿತಿಯನ್ನು ತಿಳಿಯಲು ಅಭ್ಯರ್ಥಿಗಳು ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ 15 ದಿನಗಳ ನಂತರ "welcome to on-line applicaton" ಪರದೆಯ ಮೇಲೆ ಮೂಡಿದ ನಂತರ ಅದರಲ್ಲಿ " Check Status " ಎಂಬುದರ ಮೇಲೆ " click" ಮಾಡಿದರೆ, ಅರ್ಜಿಯು ಸ್ವೀಕೃತವಾಗಿರುವ ಬಗ್ಗೆ ಮಾಹಿತಿ ದೊರೆಯುವುದು, ಅಭ್ಯರ್ಥಿಗಳು ಇದನ್ನು ಖಚಿತ ಪಡಿಸಿಕೊಳ್ಳತಕದ್ದು.

3. **ವಿಷಯ, ಸಂಕೇತಗಳು ಮತ್ತು ನಿಗದಿಪಡಿಸಿದ ಶುಲ್ಕ:** (ಎ) ಇಲಾಖಾ ಪರೀಕ್ಷೆಯ ವಿವಿಧ ವಿಷಯಗಳು, ಅವುಗಳ ಸಂಕೇತಗಳು ಹಾಗೂ ಸರ್ಕಾರವು ಆದೇಶ ಸಂಖ್ಯೆ. ಸಿಆಸುಇ 6 ಸೇಲೋಸೇ 2010, ದಿನಾಂಕ: 06–08–2010ರನ್ವಯ ಪರಿಷ್ಕತ ಶುಲ್ಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

ವಿ ಷ ಯ	ವಿಷಯ ಸಂಕೇತ	ನಿಗದಿಪಡಿಸಲಾದ ಶುಲ್ಕ ರೂ.
ಅಕೌಂಟ್ಸ್ ಲೋಯರ್	1.	50–00
ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1	2.	50–00
ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2	3.	50–00
ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್	4.	50–00
ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್	5.	50–00
ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	6.	50–00
ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	7.	50–00
ಜನರಲ್ ಲಾ ಭಾಗ–2	8.	50–00
ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್	9.	50–00
ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಆಂಡ್ ಚೈಲ್ಡ್ ಡೆವಲಪ್‌ಮೆಂಟ್	10.	50–00
ಮೋಟಾರ್ ವೆಹಿಕಲ್ಸ್	11.	50–00
ಮೈನಿಂಗ್ ಭಾಗ–1	12.	50–00
ಮೈನಿಂಗ್ ಭಾಗ–2	13.	50–00
ಪ್ರಿಸನ್ಸ್	14.	50–00
ಪೋರ್ಟ್ಸ್ ಹೈಯರ್	15.	50–00
ಪೋರ್ಟ್ಸ್ ಲೋಯರ್	16.	50–00
ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1	17.	50–00
ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2	18.	50–00
ಯೂಥ್ ಸರ್ವಿಸ್ ಮ್ಯಾನುಯಲ್	19.	50–00

ವಿಷಯ	ವಿಷಯ ಸಂಕೇತ	ನಿಗದಿಪಡಿಸಲಾದ ಶುಲ್ಕ ರೂ.
ಎಕ್ಸೈಸ್	20.	50-00
ಪೊಲೀಸ್ ಮ್ಯಾನ್ಯುಯಲ್	21.	50-00
ಅಕೌಂಟ್ಸ್ ಹೈಯರ್	22.	100-00
ಕಮರ್ಷಿಯಲ್ ಟ್ಯಾಕ್ಸ್ ಭಾಗ-2 (ಲೋಯರ್)	23.	100-00
ಫಾರೆಸ್ಟ್	24.	100-00
ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್	25.	100-00
ಲೇಬರ್	26.	100-00
ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್	27.	100-00
ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್	28.	100-00
ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್	29.	100-00
ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-1	30.	100-00
ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-2	31.	100-00
ಪಿ.ಡಬ್ಲ್ಯೂ.ಡಿ ಲೋಯರ್	32.	100-00
ರಿಜಿಸ್ಟ್ರೇಷನ್	33.	100-00
ಸಿರಿಕಲ್ಚರ್	34.	100-00
ಕೋ-ಆಪರೇಷನ್	35.	100-00
ಜನರಲ್ ಲಾ ಭಾಗ-1	36.	100-00
ಮುನಿಸಿಪಲ್ ಆಂಡ್ ಲೋಕಲ್ ಬೋರ್ಡ್ಸ್	37.	100-00
ಮಾರ್ಕೆಟಿಂಗ್	38.	100-00
ರೆವಿನ್ಯೂ ಹೈಯರ್ ಭಾಗ-1	39.	100-00
ರೆವಿನ್ಯೂ ಹೈಯರ್ ಭಾಗ-2	40.	100-00
ರೆವಿನ್ಯೂ ಲೋಯರ್	41.	100-00
ಕಮರ್ಷಿಯಲ್ ಟ್ಯಾಕ್ಸ್ ಭಾಗ-1 ಹೈಯರ್	42.	100-00
ಕೋ-ಆಪರೇಟಿವ್ ಆಡಿಟ್	43.	100-00
ಇನ್ಸೂರೆನ್ಸ್ ಅಡ್ವಾನ್ಸಡ್	44.	100-00
ಇನ್ಸೂರೆನ್ಸ್ ಹೈಯರ್	45.	100-00
ಇನ್ಸೂರೆನ್ಸ್ ಲೋಯರ್	46.	100-00
ಕನ್ನಡ ಭಾಷಾ ಪರೀಕ್ಷೆ	47.	100-00
ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್	48.	100-00
ಕರ್ನಾಟಕ ಕನ್ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್	49.	100-00
ಇಂಡಿಯನ್ ಕಾಂಟ್ರಕ್ಟ್ ಆಕ್ಟ್	51.	50-00
ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್	52	50-00
ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್	53.	50-00
ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-1	54.	100-00
ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-2	55.	50-00

ವಿ ಷ ಯ	ವಿಷಯ ಸಂಕೇತ	ನಿಗದಿಪಡಿಸಲಾದ ಶುಲ್ಕ ರೂ.
ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್	56.	50–00
ಟ್ರಾನ್ಸಲೇಷನ್ ಟೆಸ್ಟ್	58.	50–00
ಎಸ್.ಎ.ಎಸ್ ಭಾಗ–1	61.	100–00
ಎಸ್.ಎ.ಎಸ್ ಭಾಗ–2	62.	100–00
ಎಸ್.ಎ.ಎಸ್ ಭಾಗ–3	63.	100–00
ಟ್ರೆಜರಿ ಅಕೌಂಟ್ಸ್ ಭಾಗ–1	64.	100–00
ಟ್ರೆಜರಿ ಅಕೌಂಟ್ಸ್ ಭಾಗ–2	65.	100–00
ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್	66.	100–00
ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1	67.	50–00
ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಭಾಗ–2	68.	50–00
ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್	70.	50–00
ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್	71.	50–00
ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)	72.	100–00
ಕನ್ನಡ ಭಾಷಾ ಮೌಖಿಕ ಪರೀಕ್ಷೆ	73.	––

4. ಇಲಾಖಾ ಪರೀಕ್ಷೆಗಳಲ್ಲಿ ಕೆಳಕಂಡ ವಿಷಯಗಳಿಗೆ ವಸ್ತುನಿಷ್ಠ ಬಹುಆಯ್ಕೆ ಮಾದರಿಯ (**OBJECTIVE TYPE MULTIPLE CHOICE**) ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು.

1. ಅಕೌಂಟ್ಸ್ ಲೋಯರ್
2. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1
3. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2
4. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್
5. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
6. ಫಾರೆಸ್ಟ್ ಪತ್ರಿಕೆ–1
7. ಫಾರೆಸ್ಟ್ ಪತ್ರಿಕೆ–2
8. ಜನರಲ್ ಲಾ ಭಾಗ–2
9. ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್
10. ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್
11. ಮೋಟಾರ್ ವೆಹಿಕಲ್ಸ್
12. ಮೈನಿಂಗ್ ಭಾಗ–1
13. ಮೈನಿಂಗ್ ಭಾಗ–2
14. ಪ್ರಿಸನ್ಸ್
15. ಪೋರ್ಟ್ಸ್ ಹೈಯರ್
16. ಪೋರ್ಟ್ಸ್ ಲೋಯರ್
17. ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–1
18. ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–2
19. ಯೂಥ್ ಸರ್ವೀಸ್ ಮ್ಯಾನ್ಯುಯಲ್
20. ಎಕ್ಸೈಸ್
21. ಪೊಲೀಸ್ ಮ್ಯಾನ್ಯುಯಲ್
22. ಅಕೌಂಟ್ಸ್ ಹೈಯರ್

23. ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್)
24. ಫಾರೆಸ್ಟ್
25. ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್
26. ಲೇಬರ್
27. ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್
28. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–1
29. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್
30. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1, ಪತ್ರಿಕೆ–2
31. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2
32. ಪಿ.ಡಬ್ಲ್ಯೂ.ಡಿ ಲೋಯರ್
33. ರಿಜಿಸ್ಟ್ರೇಷನ್
34. ಸಿರಿಕಲ್ಚರ್
35. ಕೋ–ಆಪರೇಷನ್
36. ಜನರಲ್ ಲಾ ಭಾಗ–1
37. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್
38. ಮಾರ್ಕೆಟಿಂಗ್
39. ರೆವಿನ್ಯೂ ಹೈಯರ್ ಭಾಗ–1
40. ರೆವಿನ್ಯೂ ಹೈಯರ್ ಭಾಗ–2
41. ರೆವಿನ್ಯೂ ಲೋಯರ್
42. ಕಮರ್ಷಿಯಲ್ ಟ್ಯಾಕ್ಸ್ ಭಾಗ–1 ಹೈಯರ್
43. ಕೋ–ಆಪರೇಟಿವ್ ಆಡಿಟ್
44. ಇನ್ಶೂರೆನ್ಸ್ ಅಡ್ವಾನ್ಸಡ್
45. ಇನ್ಶೂರೆನ್ಸ್ ಹೈಯರ್, ಪತ್ರಿಕೆ–1 ಮತ್ತು 3
46. ಇನ್ಶೂರೆನ್ಸ್ ಲೋಯರ್, ಪತ್ರಿಕೆ–1 ಮತ್ತು 3
47. ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್
48. ಕರ್ನಾಟಕ ಕನ್ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್
49. ಇಂಡಿಯನ್ ಕಾಂಟ್ರಕ್ಟ್ ಆಕ್ಟ್
50. ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್
51. ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್
52. ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–1
53. ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
54. ಎಸ್.ಎ.ಎಸ್ ಭಾಗ–1, ಪತ್ರಿಕೆ–2 ಮತ್ತು 3
55. ಎಸ್.ಎ.ಎಸ್ ಭಾಗ–2,
56. ಎಸ್.ಎ.ಎಸ್ ಭಾಗ–3
57. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–2 ಮತ್ತು 3
58. ಟ್ರೆಜರಿ ಅಕೌಂಟ್ಸ್ ಭಾಗ–2
59. ಎಲೆಕ್ಟ್ರಿಸಿಟಿ ಲಾಸ್
60. ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್)ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–1
61. ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್)ಎಕ್ಸಾಮಿನೇಷನ್
62. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್.

ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ (**Syllabus**) ಯಾವುದಾದರೂ ನಿಯಮಗಳು/ ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ (**Repealed**) ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಪ್ರಸಕ್ತ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ನಿಯಮ/ ಅಧಿನಿಯಮ– ಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಈ ವಿಷಯಗಳಲ್ಲಿನ ಪ್ರಶ್ನೆಪತ್ರಿಕೆಗಳಲ್ಲಿ ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಪ್ರತಿ ಪ್ರಶ್ನೆಗೆ ನೀಡಲಾದ ನಾಲ್ಕು ಉತ್ತರಗಳ ಪೈಕಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಬೇಕಿರುತ್ತದೆ. ಪ್ರತಿ ಪ್ರಶ್ನೆಗೂ ಆಯ್ಕೆ ಮಾಡಲಾದ ಉತ್ತರವು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿರುತ್ತದೆಯೆಂದು ಅರಿತು, ತೃಪ್ತಿಹೊಂದಿದ ನಂತರವೇ ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪೆನ್ನಿನಿಂದ ಎನ್‌ಕೋಡ್ (ಸಂಕೇತ ಗುರುತು) ಮಾಡಬೇಕು, ತರುವಾಯ ತಪ್ಪು ಉತ್ತರಗಳನ್ನು ಯಾವುದೇ ಸಂದರ್ಭದಲ್ಲಿ ಅಳಿಸಲು ಸಾಧ್ಯವಿರುವುದಿಲ್ಲ.

ಮೇಲ್ಕಂಡ ವಿಷಯಗಳ ಪರೀಕ್ಷೆಯಲ್ಲಿ ನಿಗದಿಪಡಿಸಲಾದ ವಿಷಯಗಳಿಗೆ ಮಾತ್ರ ನಿಯಮದಂತೆ ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದು. ವಸ್ತುನಿಷ್ಠ ಬಹುಆಯ್ಕೆ ಮಾದರಿಯ ಪರೀಕ್ಷೆಗೆ ನೀಡಲಾಗುವ ಉತ್ತರಪತ್ರಿಕೆಯ (OMR SHEET) ಮಾದರಿ ಪ್ರತಿಯನ್ನು ಹಾಗೂ ಅಭ್ಯರ್ಥಿಗಳಿಗೆ ನೀಡಲಾದ ಸೂಚನೆಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ನೋಡಬಹುದು.

5. ಈ ಕೆಳಕಂಡ ವಿಷಯಗಳಿಗೆ ಎಂದಿನಂತೆ ವಿವರಣಾತ್ಮಕ ಮಾದರಿಯಲ್ಲಿ (Descriptive Type) ಪರೀಕ್ಷೆ ನಡೆಸಲಾಗುವುದು.

1. ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–2,ಪತ್ರಿಕೆ–1
2. ಎಸ್.ಎ. ಎಸ್. ಭಾಗ–1, ಪತ್ರಿಕೆ–1
3. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–1
4. ಇನ್ಶೂರೆನ್ಸ್ ಹೈಯರ್, ಪತ್ರಿಕೆ–2
5. ಇನ್ಶೂರೆನ್ಸ್ ಲೋಯರ್, ಪತ್ರಿಕೆ–2
6. ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ–1, ಪತ್ರಿಕೆ–1
7. ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–2
8. ಕನ್ನಡಭಾಷೆ, ಪತ್ರಿಕೆ–1 ಮತ್ತು 2
9. ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)ಪತ್ರಿಕೆ–1 ಮತ್ತು2.
10. ಟ್ರಾನ್ಸಲೇಷನ್ ಟೆಸ್ಟ್
11. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–2

6. ವಿನಾಯಿತಿ ಪಡೆದ ಬಗ್ಗೆ ನಮೂದಿಸುವುದು:

ಅಭ್ಯರ್ಥಿಗಳು ಪ್ರಸ್ತುತ ಅರ್ಜಿಸಲ್ಲಿಸಿರುವ ವಿಷಯಗಳಲ್ಲಿ ಹಿಂದಿನ ಎರಡು ವರ್ಷಗಳ ಅವಧಿಯೊಳಗಿನ ಅಧಿವೇಶನಗಳಲ್ಲಿ (ಫಲಿತಾಂಶ ಪ್ರಕಟಗೊಂಡ ದಿನಾಂಕದಿಂದ ಯಾವುದಾದರೂ ಪತ್ರಿಕೆಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕಗಳಿಸಿ ವಿನಾಯಿತಿ ಹೊಂದಿದ್ದಲ್ಲಿ ಅದರ ವಿವರಗಳನ್ನು ಅಂದರೆ ವಿನಾಯಿತಿ ಪಡೆದ ವಿಷಯ, ವಿಷಯಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ ಮತ್ತು ಪರೀಕ್ಷಾಕೇಂದ್ರ ಇತ್ಯಾದಿಗಳನ್ನು **ಆನ್‌ಲೈನ್ ಅರ್ಜಿಯಲ್ಲಿ ನಿಗದಿಪಡಿಸಿದ ಅಂಕಣದಲ್ಲಿ** ನಿರ್ದಿಷ್ಟವಾಗಿ ನಮೂದಿಸಬೇಕು. ಇಲ್ಲವಾದಲ್ಲಿ ಫಲಿತಾಂಶವನ್ನು ಸಿದ್ಧಪಡಿಸುವಾಗ ಹಿಂದೆ ಪಡೆದ ವಿನಾಯಿತಿಯನ್ನು ಪರಿಗಣಿಸಲಾಗುವುದಿಲ್ಲ. ಕನ್ನಡಭಾಷಾ ಪರೀಕ್ಷೆ ಪತ್ರಿಕೆ–1 ಮತ್ತು ಪತ್ರಿಕೆ–2 ರಲ್ಲಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು, ಸದರಿ ಅಧಿವೇಶನಕ್ಕೆ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಹಾಗೂ ನಿಗದಿತ **ಪರೀಕ್ಷಾ ಶುಲ್ಕ ರೂ. 100/–**ಗಳನ್ನು ಪಾವತಿಸಬೇಕು ಇಲ್ಲದಿದ್ದಲ್ಲಿ ವಿನಾಯಿತಿಯನ್ನು ಪರಿಗಣಿಸುವುದಿಲ್ಲ.

ಸೂಚನೆಗಳು:

(ಎ) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಕಾನೂನು ಮೇರೆಗೆ ರಚಿಸಲಾದ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನಿಗದಿತ ಶುಲ್ಕಗಳನ್ನು ಸಂದಾಯ ಮಾಡಿದಲ್ಲಿ ಮಾತ್ರ ಅವರಿಗೆ ಅನ್ವಯವಾಗುವ ಸೇವೆಯ ನೇಮಕಾತಿ ಷರತ್ತುಗಳನ್ನೊಳಗೊಂಡಂತೆ ಅವರು ತೇರ್ಗಡೆಯಾಗಬೇಕಾಗಿರು ವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

(ಬಿ) ಕೇಂದ್ರ ಪರಿಹಾರ ಸಮಿತಿಯು ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾಗಿರುವ ಕಾರಣ ಅಲ್ಲಿಯ ಸಿಬ್ಬಂದಿಗೆ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಅಕೌಂಟ್ಸ್ ಲೋಯರ್, ಜನರಲ್ ಲಾ ವಿಷಯಗಳು ಅಲ್ಲದೆ ಅವರುಗಳೂ ನಿಗದಿಪಡಿಸಿರುವ ವಿಷಯಗಳಲ್ಲಿ ತೇರ್ಗಡೆಯಾಗಬೇಕಿರುವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

(ಸಿ) ಸ್ಥಳೀಯ ಅಭ್ಯರ್ಥಿಗಳು, ಕೈಂಕರ್ಯ ಪದವೀಧರರು, ದೈನಿಕ ಹಾಜರಾತಿ ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಕರಾರು ಆಧಾರದಲ್ಲಿ ಹಾಗೂ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

(ಡಿ) ಸೇವಾ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯ ಆನ್‌ಲೈನ್ ಅರ್ಜಿಯಲ್ಲಿ ಮೇಲಧಿಕಾರಿಯ ಪ್ರಮಾಣಪತ್ರವನ್ನು ದೃಢೀಕರಿಸುವ ಮೊದಲು ಅಭ್ಯರ್ಥಿಯು ಸೇವೆಸಲ್ಲಿಸುತ್ತಿರುವ ಕಛೇರಿ ಮುಖ್ಯಸ್ಥರು ಅಭ್ಯರ್ಥಿಯು ಭರ್ತಿ ಮಾಡಿ **Down load** ಮಾಡಿಟ್ಟುಕೊಂಡ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ವಾಸ್ತವತೆಯನ್ನು ಖಚಿತಪಡಿಸಿಕೊಂಡು ಸತ್ಯಾಪನೆ ಮಾಡಿ ನಂತರ ದೃಢೀಕರಿಸತಕ್ಕದ್ದು.

(ಇ) ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ "ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯ ನವದೆಹಲಿ ಇವರು ಪ್ರಕಟಿಸಿರುವ ಎಂಪ್ಲಾಯ್‌ಮೆಂಟ್ ಸರ್ವೀಸ್ **ಮ್ಯಾನ್ಯುಯಲ್"** ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

ಎಫ್) ಸರ್ಕಾರವು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಎಸ್‌ಆರ್ 2007 ದಿನಾಂಕ: 26–04–2008ರಲ್ಲಿ ಕರ್ನಾಟಕ ನಾಗರೀಕ ಸೇವಾ (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅನುಸೂಚಿ–I ಮತ್ತು IIರಲ್ಲಿ ನಿಗದಿಪಡಿಸಿರುವ ವಿವಿಧ ವಿಷಯಗಳ ಪಠ್ಯ ಕ್ರಮಕ್ಕೆ ತಿದ್ದುಪಡಿ ಮಾಡಿರುವ ವಿವರಗಳನ್ನು ಈ ಕೆಳಗೆ ನೀಡಿದೆ.

1. Title and commencement:- (1) These rules may be called the Karnataka Civil Services (Service and Kannada Language Examinations) (First Amendment) Rules, 2008.

2. They shall come into force from the date of their publication in the Official Gazette.

2. Amendment of SCHEDULE- I.- In the Karnataka Civil Services (Service and Kannada Language Examinations) Rules, 1974, (hereinafter referred to as the said rules) in **SCHEDULE-I**, under the heading " II service examination ", in the " Note" specifying syllabi for various examinations",-

(1) Under the heading,-" 3. Revenue (Higher) Examination-Part-I" under the sub-heading Paper-II, under " Minor Acts and Rules" items (vii), and (ix) and (x) and entries relating thereto shall be omitted.

(2) Under the heading " 4. Revenue (Lower)" under sub-heading ' Paper-II' , under " Minor Acts and Rules" items (vii), (ix) and (x) and entries relating thereto shall be omitted.

(3) Under the heading "5. General Law Part-I" under sub-heading "Paper-II" ,-

(a) for serial number 3 and entries relating thereto, the following shall be substituted, namely:-

"3. Motor Vehicles Act, 1988 (Central Act 59 of 1988)."

(b) for serial number 6 and entries relating thereto, the following shall be substituted, namely:-

"6. Prevention of corruption Act, 1988 (Central Act 49 of 1988)"

(c) after serial number 8 and entries relating thereto, the following shall be inserted, namely:-

"9. The Right to Information Act, 2005 (Central Act 22 of 2005) and the rules made thereunder"

(4) Under the heading "Community Development Examination Part-II", Note (1) and (2) shall be Omitted.

(5) for the entries under the heading " 19, Marketing Examination" Under the sub-heading " Paper-II', the following shall be substituted namely:-

"The Weights and Measures (Enforcement) Act,1985 and Rules".

(6) Under the heading "22. Motor Vehicles Examination" , for Serial number 1 and the entries relating thereto the following shall be substituted, namely:-

" 1. Motor Vehicles Act, 1988 (Central Act 59 of 1988) and the Rules made thereunder".

(7) Under the heading "23. Karnataka Police Manual Examination" in chapter XLVIII,-

(a) for item (i) and entries relating thereto the following shall be substituted, namely:-

"(i) Karnataka State Police including Ministerial Services (Recruitment) Rules, 2004"

(b) item (iii) and entries relating thereto shall be omitted;

(8) The heading " 24. Stores Purchase Department Manual Examination" and the entries relating thereto shall be omitted.

(9) Under the heading "26. Departmental Examination in Mining" under sub-heading "Part-II," for item (e) and entries relating thereto, the following shall be substituted, namely:-

"(e) Karnataka Minor Mineral Concession Rules, 1994".

(10) Under the heading "36. Public Works Departmental (Higher) Examination Part-I", under the sub-heading " Paper-II" for the words, figures and brackets "Karnataka Irrigation Act, 1959 (Edition) as amended form time to time" the words, figures and brackets " Karnataka Irrigation Act, 1965 (16 of 1965)" shall be substituted.

(11) Uner the heading " 44. Examination in Recruitment Rules" for item (d) an the entries relating thereto the following shall be substituted, namely:-

"(d) The Karnataka Civil Services (Direct Recruitment by Competitive Examinations and Selection) (General) Rules, 2006."

(12) Under the heading "49. Food and Civil Supplies Examinations" under the sub-heading " Paper-II'. for Serial number 2 and the entries relating thereto the following shall be substituted namely:-

"The Weights and Measures (Enforcement) Act, 1985 and Rules".

3. Amendment of Schedule II.- In schedule II to the said rules, in the **TABLE,** Serial number 33 and the entries relating thereto shall be omitted.

7. ಪರೀಕ್ಷಾ ಕೇಂದ್ರಗಳು: ಪ್ರತಿಯೊಬ್ಬ ಅಭ್ಯರ್ಥಿಯು ಪ್ರಸ್ತುತ ಆತನು ಕೆಲಸ ಮಾಡುತ್ತಿರುವ ಜಿಲ್ಲಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು. ಆದರೆ, ಯಾವುದೇ ಒಬ್ಬ ಅಭ್ಯರ್ಥಿಯು ಅನಂತರ ಬೇರೆ ಕೇಂದ್ರಕ್ಕೆ ವರ್ಗಾವಣೆಯಾದಲ್ಲಿ ಅಥವಾ ಅವನು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಗಳಿಕೆ ರಜೆಯ ಮೇಲಿರುವುದು ಮುಂತಾದ ನಿರ್ದಿಷ್ಟ ವಿಶೇಷ

ಕಾರಣಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳು ಈ ಬಗ್ಗೆ ಲಿಖಿತ ರೂಪದಲ್ಲಿ ಆಯೋಗದ ಗಮನಕ್ಕೆ ತರತಕ್ಕದ್ದು. ಹಾಗೂ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಒದಗಿಸತಕ್ಕದ್ದು. ಆಯೋಗವು ಅಂತಹ ಅಭ್ಯರ್ಥಿಗಳಿಗೆ ಬೇರೆ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗುವುದಕ್ಕೆ ಕ್ರಮತೆಗೆದುಕೊಳ್ಳಲಾಗುವುದು. ಆಯೋಗದ ನಿರ್ದಿಷ್ಟ ಅನುಮತಿ ಇಲ್ಲದೆ ಅಭ್ಯರ್ಥಿಗಳು ಬೇರೆ ಕೇಂದ್ರದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಂತಿಲ್ಲ. ಆ ರೀತಿ ಮಾಡಿದ ಅಭ್ಯರ್ಥಿಗಳು ಆಯೋಗ ತೆಗೆದುಕೊಳ್ಳುವ ಕ್ರಮಕ್ಕೆ ಹೊಣೆಯಾಗುವರು.

ಎ(1) ಖಜಾನೆ ಅಕೌಂಟ್ಸ್, ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸ್,ಎಲೆಕ್ಟ್ರಿಸಿಟಿ ಮತ್ತು ಅಖಿಲ ಭಾರತಸೇವಾ (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್) ಅಧಿಕಾರಿಗಳಿಗೆ ಕನ್ನಡ ಭಾಷಾ ಪರೀಕ್ಷೆಗಳನ್ನು **ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.**

(2) ಸಬಾರ್ಡಿನೇಟ್ ಅಕೌಂಟ್ಸ್ ಸೇವಾ(ಎಸ್.ಎ.ಎಸ್) ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗುವ ನೌಕರರು ಪ್ರಥಮ ದರ್ಜೆ/ದ್ವಿತೀಯ ದರ್ಜೆ ಸಹಾಯಕರಾಗಿದ್ದಲ್ಲಿ ಅವರು ಸೇವೆಗೆ ನೇಮಕಗೊಂಡ ದಿನಾಂಕದಿಂದ ಪ್ರಥಮ ದರ್ಜೆಸಹಾಯಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇರದ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿ ಆರು ವರ್ಷಗಳಿಗಿಂತ ಕಡಿಮೆ ಇರದ ಅವಧಿಯ ಸೇವೆ ಸಲ್ಲಿಸಿದ್ದು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ. ಅಂತಹ ಅಭ್ಯರ್ಥಿಗಳು ಅವರ ಸೇವಾ ಅವಧಿಯನ್ನು ಮತ್ತು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ) ತೇರ್ಗಡೆಯಾದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಬಿ) ಸಚಿವಾಲಯದ ಕೈಪಿಡಿ ಪರೀಕ್ಷೆ, ಭಾಷಾಂತರ ಇಲಾಖೆಯ ಭಾಷಾಂತರ ಪರೀಕ್ಷೆ ಭಾರತದ ಕರಾರು ಅಧಿನಿಯಮ, ವಿಶೇಷ ಕಾನೂನು ಮತ್ತು ಸೇವಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ, ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ನಿಯಮಗಳ ಪರೀಕ್ಷೆಗಳು ಮತ್ತು ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.

ಸಿ) ಮುದ್ರಣಾಲಯ ಕೈಪಿಡಿಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು, ಧಾರವಾಡ, ಮಡಿಕೇರಿ ಮತ್ತು ಗುಲ್ಬರ್ಗಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಡಿ) ಬಂದರುಗಳ ಇಲಾಖೆಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳನ್ನು ಮಂಗಳೂರು ಮತ್ತು ಕಾರವಾರ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಇ) ಉಳಿದಂತೆ ಇತರೆ ಪರೀಕ್ಷೆಗಳು ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದ್ದು, ಜಿಲ್ಲಾ ಸಂಕೇತ ಸಂಖ್ಯೆಗಳನ್ನು ಅವುಗಳ ಎದುರಿಗೆ ನೀಡಿದೆ. ಈ ಸಂಕೇತ ಸಂಖ್ಯೆಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು:–

ಜಿಲ್ಲೆ	ಸಂಕೇತ	ಜಿಲ್ಲೆ	ಸಂಕೇತ
ಬೆಂಗಳೂರು	01	ಕಾರವಾರ	17
ಬೆಳಗಾವಿ	02	ಕೋಲಾರ	18
ಬಳ್ಳಾರಿ	03	ಕೊಪ್ಪಳ	19
ಬೀದರ್	04	ಮಂಡ್ಯ	20
ಬಿಜಾಪುರ	05	ಮಂಗಳೂರು	21
ಬಾಗಲಕೋಟೆ	06	ಮಡಿಕೇರಿ	22
ಚಾಮರಾಜನಗರ	07	ಮೈಸೂರು	23
ಚಿಕ್ಕಬಳ್ಳಾಪುರ	08	ರಾಮನಗರ	24
ಚಿಕ್ಕಮಗಳೂರು	09	ರಾಯಚೂರು	25
ಚಿತ್ರದುರ್ಗ	10	ಶಿವಮೊಗ್ಗ	26
ಧಾರವಾಡ	11	ತುಮಕೂರು	27
ದಾವಣಗೆರೆ	12	ಉಡುಪಿ	28
ಗುಲ್ಬರ್ಗಾ	13	ನವದೆಹಲಿ	29
ಗದಗ	14	ಮುಸ್ಸೂರಿ	30
ಹಾಸನ	15	ಯಾದಗಿರಿ	31
ಹಾವೇರಿ	16		

8. ಪರೀಕ್ಷಾ ಕೇಂದ್ರದ ಬದಲಾವಣೆ:

ಪರೀಕ್ಷಾ ಕೇಂದ್ರದ ಬದಲಾವಣೆಗೆ ಸಲ್ಲಿಸುವ ಕೋರಿಕೆಗಳನ್ನು ಪರೀಕ್ಷೆ ಪ್ರಾರಂಭವಾಗುವ ಕನಿಷ್ಠ 15 ದಿನಗಳ ಮೊದಲು ಸಲ್ಲಿಸತಕ್ಕದ್ದು. ಆ ದಿನಾಂಕದ ತರುವಾಯ ಸಲ್ಲಿಸಲ್ಪಡುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಧಿಕೃತ ಕಾರಣಗಳ

ಮೇಲೆ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸುವ ನೌಕರರು ವರ್ಗಾವಣೆಯ ಅಥವಾ ಸ್ಥಳ ನಿಯುಕ್ತಿಯ ಆದೇಶಗಳ ದೃಢೀಕೃತ ನಕಲನ್ನು ಅಥವಾ ಸಂದರ್ಭಾನುಸಾರ ಗಳಿಕೆರಜೆ ಮಂಜೂರು ಮಾಡಲಾದ ಅಧಿಕೃತ ಜ್ಞಾಪನಪತ್ರದ ದೃಢೀಕೃತ ನಕಲಿನೊಂದಿಗೆ ಆ ಬಗ್ಗೆ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು. ಸ್ವವಿಳಾಸ ಬರೆದ ಹಾಗೂ ಅವಶ್ಯಕ ಅಂಚೆಚೀಟಿ ಹಚ್ಚಲಾದ ಲಕೋಟೆಯನ್ನು ಪತ್ರ ವ್ಯವಹಾರಕ್ಕಾಗಿ ಲಗತ್ತಿಸತಕ್ಕದ್ದು. (ರಿಜಿಸ್ಟರ್ಡ್ ಅಂಚೆಯಲ್ಲಿ ಕಳುಹಿಸಬೇಕಾದರೆ ಅದಕ್ಕೆ ತಗಲುವ ಸಾಕಷ್ಟು ಅಂಚೆಚೀಟಿ ಹಚ್ಚಿರಬೇಕು).

ಎ) ವಿವರಣಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸೇವಾ ಪರೀಕ್ಷೆಗಳನ್ನು ಆಂಗ್ಲಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಉತ್ತರಿಸಲು ಅನುಮತಿಸಲಾಗುವುದು.

ಬಿ) ಅಭ್ಯರ್ಥಿಯು ಉತ್ತರಗಳನ್ನು ಬರೆಯಲು ಆಂಗ್ಲ ಅಥವಾ ಕನ್ನಡದ ಯಾವುದೇ ಒಂದು ಮಾಧ್ಯಮವನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು. ಅರ್ಧ ಆಂಗ್ಲಭಾಷೆಯಲ್ಲಿ ಮತ್ತು ಅರ್ಧ ಕನ್ನಡದಲ್ಲಿ ಉತ್ತರಿಸಿದಲ್ಲಿ ಅಂತಹ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

ಸಿ) ಓಎಂಆರ್ ಉತ್ತರ ಹಾಳೆಯಲ್ಲಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ನೋಂದಣಿ ಸಂಖ್ಯೆ ಮತ್ತು ವರ್ಷನ್ ಕೋಡನ್ನು ಸರಿಯಾಗಿ ನಮೂದಿಸಿ ಗುರುತಿಸಬೇಕು. ಇಲ್ಲವಾದಲ್ಲಿ ಅಂತಹ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

9. <u>ವಿನಾಯಿತಿ:</u>

ಎ) ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ., ಅಥವಾ ಬಿ.ಎಲ್ ಪದವಿ ಪಡೆದಂತಹ ಕಾನೂನು ಪದವೀಧರರಿಗೆ ಜನರಲ್ ಲಾ ಭಾಗ–1ರ ಪತ್ರಿಕೆ–(1) ಕ್ಕೂ ಮತ್ತು ಜನರಲ್ ಲಾ ಭಾಗ–2 ಕ್ಕೂ ಹಾಗೂ ಬಿ.ಕಾಂ. ಅಥವಾ ಐ.ಕಾಂ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ವಿಷಯದಲ್ಲಿ ತೇರ್ಗಡೆಯಾದವರಿಗೆ ಕಮರ್ಷಿಯಲ್ ಟ್ಯಾಕ್ಸ್ ಹೈಯರ್ ವಿಷಯದ ಪತ್ರಿಕೆ–3ಕ್ಕೂ, ಕೋ–ಆಪರೇಷನ್ ವಿಷಯದ ಪತ್ರಿಕೆ–2ಕ್ಕೂ ಹಾಗೂ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ಓದಿ ಬಿ.ಕಾಂ., ಬಿ.ಬಿ.ಎಂ. ಅಥವಾ ತತ್ಸಮಾನ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕೋ–ಆಪರೇಟಿವ್ ಆಡಿಟ್ ಪರೀಕ್ಷೆಯ 2ನೇ ಪತ್ರಿಕೆಗೆ ವಿನಾಯಿತಿ ಇದೆ. ಹಾಗೆಯೇ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ವಿಷಯವನ್ನು ಓದಿರುವ ಬಿ.ಕಾಂ. ಪದವೀಧರರಿಗೆ ಎಸ್.ಎ.ಎಸ್. ಭಾಗ–3ರ ಪತ್ರಿಕೆ–1 ಕ್ಕೂ ಹಾಗೂ ಟ್ರೆಜರಿ ಅಕೌಂಟ್ಸ್ ಭಾಗ–2ರ ಪತ್ರಿಕೆ–1ಕ್ಕೂ ವಿನಾಯಿತಿ ಇರುತ್ತದೆ. ವಿನಾಯಿತಿ ಕೋರುವ ಅಭ್ಯರ್ಥಿಗಳು ಈ ತತ್ಸಂಬಂಧ ವಿಷಯಗಳನ್ನು ಅಭ್ಯಸಿಸಿದ್ದ ಬಗ್ಗೆ ಬಿ.ಕಾಂ., ಎಲ್.ಎಲ್.ಬಿ. ಅಥವಾ ತತ್ಸಮಾನ ಪದವಿಯ ದೃಢೀಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಮೇಲಧಿಕಾರಿಯವರಿಂದ ದೃಢೀಕರಿಸಿದ ಪ್ರಮಾಣಪತ್ರ, ಹಾಗೂ ಡಿ.ಡಿ/ಐ.ಪಿ.ಓ.ಗಳೊಂದಿಗೆ ಲಗತ್ತಿಸಿ ರವಾನಿಸತಕ್ಕದ್ದು. ಮತ್ತು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಅಭ್ಯರ್ಥಿಯು ಪಡೆದಿರುವ ಪದವಿಯ ಬಗ್ಗೆ ಕಡ್ಡಾಯವಾಗಿ ನಮೂದಿಸತಕ್ಕದ್ದು. ತಪ್ಪಿದಲ್ಲಿ ಅಂತಹ ವಿನಾಯಿತಿಗಳನ್ನು ಪರಿಗಣಿಸಲಾಗುವುದಿಲ್ಲ.

(ಬಿ) <u>ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 76, ದಿನಾಂಕ 10ನೇ ಜನವರಿ 1987</u>ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ 649 ಇಎನ್ ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅರಣ್ಯ ಪರೀಕ್ಷೆಯ ಪತ್ರಿಕೆ–2 ರಲ್ಲಿ ತೇರ್ಗಡೆಯಾಗು ವುದರಿಂದ ವಿನಾಯಿತಿ ನೀಡಲಾಗಿದೆ.

(ಸಿ) ಯಾವುದೇ ಪರೀಕ್ಷೆಯು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದು ಅಭ್ಯರ್ಥಿಯು ಆ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೂ ಅದೇ ವಿಷಯದ ಇತರ ಪತ್ರಿಕೆಗಳಲ್ಲಿ ಆ ಪತ್ರಿಕೆಗೆ ನಿರ್ದಿಷ್ಟಪಡಿಸಲಾದ ಗರಿಷ್ಟ ಅಂಕಗಳಲ್ಲಿ ಶೇಕಡಾ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದಿದ್ದಲ್ಲಿ ಅಂತಹವರನ್ನು ಆ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿರುವರೆಂದು ಪರಿಗಣಿಸಲಾಗುವುದು. ಅಂತಹವರು ಪರೀಕ್ಷೆಗಳ ಫಲಿತಾಂಶ ಘೋಷಿಸಿದ ನಿಯಮಾನುಸಾರ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ಪರೀಕ್ಷೆಯ ಉಳಿದ ಪತ್ರಿಕೆಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದು. ಇಲ್ಲದಿದ್ದಲ್ಲಿ ಅಂತಹ ವಿನಾಯಿತಿಯು ರದ್ದಾಗುವುದು.

10. **<u>ಪ್ರವೇಶ ಪತ್ರ:</u>**

<u>ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುತ್ತಿರುವುದರಿಂದ ಪ್ರವೇಶಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ.</u>

ವೇಳಾ ಪಟ್ಟಿಯನ್ನೊಳಗೊಂಡ ಪ್ರವೇಶ ಪತ್ರವನ್ನು ಪರೀಕ್ಷೆಗೆ ಮೊದಲು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಅಭ್ಯರ್ಥಿಗಳು ಪ್ರವೇಶಪತ್ರಗಳನ್ನು Down load ಮಾಡಿಕೊಂಡು ನಿಗದಿತ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ವೇಳೆಯಲ್ಲಿ ಪ್ರವೇಶಪತ್ರವನ್ನು ಹಾಜರುಪಡಿಸತಕ್ಕದ್ದು. ಸದರಿ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳು ಜೋಪಾನವಾಗಿಟ್ಟಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಪರೀಕ್ಷೆಗಳು ಮುಗಿದ ನಂತರ ಪ್ರವೇಶ ಪತ್ರದ ನಕಲನ್ನು ನೀಡಲಾಗುವುದಿಲ್ಲ.

11. **<u>ಪಠ್ಯಪುಸ್ತಕಗಳು:</u>**

ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೆ ಯಾವುದೇ ಖಾಸಗಿ ಪ್ರಕಾಶಕರ ಪಠ್ಯ ಪುಸ್ತಕಗಳನ್ನು ನಿಷೇಧಿಸಲಾಗಿದೆ.

12. ತೇರ್ಗಡೆಗೆ ಗಳಿಸಬೇಕಾದ ಅಂಕಗಳು:

ಎ) ಯಾವುದೇ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಒಂದು ಪತ್ರಿಕೆಯ ಪರೀಕ್ಷೆಗೆ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಬಿ.ಕಾಂ. ಹಾಗೂ ಕಾನೂನು ಪದವೀಧರರು, ಹಾಗೂ ಲೋಕಸೇವಾ ಆಯೋಗವು ನಡೆಸುವ ವಿಷಯದ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು.

ಬಿ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳನ್ನು ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾಗಿರುವುದಾಗಿ ಫಲಿತಾಂಶ ಘೋಷಿಸಲಾಗುವುದು.

13. ಹಾಜರಿ ಪ್ರಮಾಣ ಪತ್ರಗಳು:

ಪರೀಕ್ಷೆಗೆ ಹಾಜರಾದ ಬಗ್ಗೆ ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ನೀಡಲಾಗುವುದಿಲ್ಲ.

14. ಕನ್ನಡಭಾಷಾ ಲಿಖಿತ ಪರೀಕ್ಷೆಗೆ ಮೌಖಿಕ ಪರೀಕ್ಷೆ:

(1) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರಕಛೇರಿ, ಪಾರ್ಕ್‌ಹೌಸ್, ಬೆಂಗಳೂರು–560001 ಇಲ್ಲಿ ಹಾಗೂ ಆಯೋಗದ ಪ್ರಾಂತೀಯ ಕಛೇರಿಗಳಾದ ಬೆಳಗಾಂ, ಗುಲ್ಬರ್ಗಾ, ಮೈಸೂರು ಹಾಗೂ ಶಿವಮೊಗ್ಗ ಕೇಂದ್ರಗಳಲ್ಲಿ ನಡೆಸಲಾಗುವುದು.

ಸೂಚನೆ: (1) ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

(2) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 81 ಎಸ್ಎಸ್ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ, ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

3) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್ಎಸ್ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

15. (ಅ) ಆಯೋಗದ ಆದೇಶ ಸಂಖ್ಯೆ ಇ.ಪ(2)3774/94–95/ಪಿಎಸ್‌ಸಿ ದಿನಾಂಕ 18ನೇ,ಫೆಬ್ರವರಿ 1995ರ ಮೇರೆಗೆ ಬ್ಯಾಟರಿ ಚಾಲಿತ ಪ್ರೋಗ್ರಾಮ್ ಮಾಡದೆ ಇರುವಂತಹ ಕ್ಯಾಲುಕ್ಯುಲೇಟರ್‌ಗಳನ್ನು ಎಸ್.ಎ.ಎಸ್ ಪರೀಕ್ಷೆಗಳಲ್ಲಿ ಉಪಯೋಗಿಸಲು ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ.

(ಆ) ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಪೋನ್‌ಗಳನ್ನು ತರುವುದು ಮತ್ತು ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇದಿಸಲಾಗಿದೆ.

16. ತೇರ್ಗಡೆ ಪ್ರಮಾಣ ಪತ್ರಗಳು:

ಪ್ರತಿಯೊಂದು ವಿಷಯಕ್ಕೆ ತೇರ್ಗಡೆ ಪ್ರಮಾಣಪತ್ರವನ್ನು ಆಯೋಗದಿಂದ ಫಲಿತಾಂಶವು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾದ ನಂತರ ಅಂಚೆಯ ಪ್ರಮಾಣಪತ್ರ (Certificate of Posting) ದ ಮೂಲಕ ಕಳುಹಿಸಲಾಗುವುದು. ಪ್ರಮಾಣ ಪತ್ರದಲ್ಲಿ ಮುದ್ರಿತವಾದ ಹೆಸರು ಅಥವಾ ಇನ್ನಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅಭ್ಯರ್ಥಿಗಳು ಕೂಡಲೇ ತಿದ್ದುಪಡಿಗಾಗಿ ಸೂಕ್ತ ದಾಖಲೆಗಳೊಂದಿಗೆ ಆಯೋಗದ ಕಛೇರಿಯನ್ನು ಸಂಪರ್ಕಿಸುವುದು.

(ಸೂಚನೆ: ಪರೀಕ್ಷೆಯ ಪ್ರತಿಭಾಗವನ್ನು ಈ ಉದ್ದೇಶಕ್ಕೆ ಒಂದು ಪ್ರತ್ಯೇಕ ಪರೀಕ್ಷೆ ಎಂದು ಪರಿಗಣಿಸಲಾಗುವುದು)

ಅಂಕಪಟ್ಟಿಗಳು: ಇಲಾಖಾ ಪರೀಕ್ಷೆಯ ಎಲ್ಲಾ ಅಭ್ಯರ್ಥಿಗಳ ಅಂಕಗಳನ್ನು ಆಯೋಗದ ವೆಬ್ ಸೈಟ್ **http://kpsc.kar.nic.in** ನಲ್ಲಿ ಫಲಿತಾಂಶ ಪ್ರಕಟವಾದ ದಿನಾಂಕದಂದೇ ಪ್ರಕಟಿಸಲಾಗುವುದು ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ನೀಡಲಾಗುವುದಿಲ್ಲ.

17. ಅಂಕಗಳ ಮರು ಎಣಿಕೆ:

ಎ) ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ಪತ್ರಿಕೆಯ ಅಂಕಗಳ ಮರು ಎಣಿಕೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು, ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಪ್ರತಿ ವಿಷಯಕ್ಕೆ **ರೂ. 100/–** ಗಳನ್ನು ಕಾರ್ಯದರ್ಶಿ ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ/ಐಪಿಓ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಅಂತಹ ಮೊತ್ತವನ್ನು ಸಂದಾಯ ಮಾಡಿದ ಪುರಾವೆಯನ್ನು, ತನ್ನ ಹೆಸರು, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯದ ವಿವರಗಳನ್ನು ಅರ್ಜಿಯೊಂದಿಗೆ ಒದಗಿಸತಕ್ಕದ್ದು.

ಬಿ) ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ.

18. ದುರ್ವರ್ತನೆ:

ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ ಅನುಚಿತ ಮಾರ್ಗವನ್ನನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ (ಎ) ಅಭ್ಯರ್ಥಿಯ ಆಯ್ಕೆಗಾಗಿ ಆಯೋಗದಿಂದ ನಡೆಸಲಾಗುವ ಯಾವುದೇ ಪರೀಕ್ಷೆಗೆ ಪ್ರವೇಶ ನೀಡುವುದಕ್ಕೆ ಅಥವಾ ಯಾವುದೇ ಸಂದರ್ಶನಕ್ಕೆ ಹಾಜರಾಗುವುದಕ್ಕೆ ಖಾಯಂ ಆಗಿ ಅಥವಾ ಒಂದು ನಿರ್ದಿಷ್ಟ ಅವಧಿಗೆ ಅನರ್ಹಗೊಳಿಸಲಾಗುವುದು ಮತ್ತು (ಬಿ) ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಸಂವೀಕ್ಷಕರು/ಮೇಲ್ವಿಚಾರಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು ತಪ್ಪಿದಲ್ಲಿ ಅದನ್ನು ದುರ್ವರ್ತನೆಯನ್ನಾಗಿ ಪರಿಗಣಿಸಲಾಗುವುದು ಮತ್ತು ಈ ಬಗ್ಗೆ ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

19. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 69 ಎಸ್‌ಎಸ್‌ಆರ್ 76, ದಿನಾಂಕ 16ನೇ ಜುಲೈ 1977ರ ಅನುಸಾರವಾಗಿ ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗದಿಂದ ಉಪನಿವಾಸ ಆಯುಕ್ತರು, ಕರ್ನಾಟಕ ಭವನದ ನಿವಾಸ ಆಯುಕ್ತರ ಕಛೇರಿ, ನವದೆಹಲಿ ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

20. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಸಿ 83, ದಿನಾಂಕ 12ನೇ ಅಕ್ಟೋಬರ್ 1983 ಇದರ ಅನುಸಾರವಾಗಿ ಮುಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿರುವ ಕರ್ನಾಟಕ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಮತ್ತು ಐ.ಎಫ್.ಎಸ್ ಪ್ರೊಬೇಷನರುಗಳಿಗೆ ಇಲಾಖಾ ಪರೀಕ್ಷೆ ಗಳನ್ನು ಆಯೋಗವು ಪರೀಕ್ಷೆಗಳ ನಿಯಂತ್ರಣಾಧಿಕಾರಿ, ಲಾಲ್‌ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಾಸನ ಅಕಾಡೆಮಿ, ಮುಸ್ಸೂರಿ, ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

21. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳಿಗೊಳಪಟ್ಟು ಒಬ್ಬ ಅನುಲೇಖಕನ ಸಹಾಯವನ್ನು ಪಡೆಯುವುದಕ್ಕೆ ಅನುಮತಿಸಲಾಗಿದೆ:

1. ಅನುಲೇಖಕನ ಸಹಾಯವನ್ನು ಬಯಸುವ ಅಭ್ಯರ್ಥಿಯು ಅರ್ಜಿಯ ಭಾಗ–2ರೊಂದಿಗೆ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ನೀಡಲಾದ ಒಂದು ಪ್ರಮಾಣ ಪತ್ರದೊಂದಿಗೆ ಅರ್ಜಿಯ ಭಾಗ–2ನ್ನು ಅವನ ಮೇಲಧಿಕಾರಿಯ ಮೂಲಕ ಕಳುಹಿಸತಕ್ಕದ್ದು.
2. ಮೇಲಧಿಕಾರಿಯು ವೈದ್ಯಕೀಯ ಪ್ರಮಾಣಪತ್ರ ಮತ್ತು ಭಾಗ–2ನ್ನು ಆಯೋಗಕ್ಕೆ ಕಳುಹಿಸುವ ಮೊದಲು ಅಭ್ಯರ್ಥಿಯು ನಿಜವಾಗಿ ಅಸಮರ್ಥನಾಗಿರುವನೆ ಮತ್ತು ಅವನಿಗೆ ಅನುಲೇಖಕನ ಸಹಾಯ ಅವಶ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಆಯೋಗವು ಅನುಲೇಖಕನ ಸಹಾಯಕ್ಕೆ ಮಂಜೂರಾತಿ ನೀಡಿದಾಗ ಸಂಬಂಧಪಟ್ಟ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗೆ ಒಬ್ಬ ಅನುಲೇಖಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಕಾರ್ಯದರ್ಶಿ ಮತ್ತು ಇಲಾಖಾ ಪರೀಕ್ಷೆಯ ನಿಯಂತ್ರಣಾಧಿಕಾರಿಗೆ ತಿಳಿಸತಕ್ಕದ್ದು.
4. ಹಾಗೆ ನೇಮಕ ಮಾಡಲಾದ ಅನುಲೇಖಕನು ಅಭ್ಯರ್ಥಿಗಿಂತ ಕೆಳಗಿನ ದರ್ಜೆಯವನು ಅಥವಾ ಕಡಿಮೆ ಶಿಕ್ಷಣ ಪಡೆದವನು ಆಗಿರತಕ್ಕದ್ದು ಮತ್ತು ಅವನು ಅಭ್ಯರ್ಥಿಯ ಸಂಬಂಧಿಕನಾಗಿರಬಾರದು.
5. ಅಭ್ಯರ್ಥಿಗಳು ಪರೀಕ್ಷೆಯ ಪ್ರತಿಯೊಂದು ಪತ್ರಿಕೆಗೆ ರೂ. 5/–(ಐದು ರೂಪಾಯಿಗಳು) ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಪರೀಕ್ಷೆಯ ಪತ್ರಿಕೆ ಮುಗಿದ ಕೂಡಲೇ ಅನುಲೇಖಕನಿಗೆ ಸಂದಾಯ ಮಾಡತಕ್ಕದ್ದು.
6. ಅನುಲೇಖಕನನ್ನು ನೇಮಕ ಮಾಡಲಾಗಿದ್ದರೆ ಅಭ್ಯರ್ಥಿಗೆ ಹದಿನೈದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು.
7. ಅನುಲೇಖಕನ ಸಹಾಯ ಬಯಸುವ ಅಭ್ಯರ್ಥಿಗಳು ಅವಶ್ಯಕ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೇಲಧಿಕಾರಿಗಳ ದೃಢೀಕರಣವನ್ನು ತಮ್ಮ ಅರ್ಜಿಯ ಭಾಗ–2ರ ಜೊತೆಯಲ್ಲಿಯೇ ಲಗತ್ತಿಸಿ ಕಳುಹಿಸತಕ್ಕದ್ದು. ಅರ್ಜಿಯ ಭಾಗ–2ರೊಂದಿಗೆ ಸಲ್ಲಿಸದಂತಹ ಕೋರಿಕೆಯನ್ನು ಅನಿವಾರ್ಯ ಹಾಗೂ ಸಕಾರಣವಿಲ್ಲದ ಹೊರತು ಇತರ ಯಾವುದೇ ಸಂದರ್ಭಗಳಲ್ಲೂ ನಿಗದಿಪಡಿಸಲಾದ ಕಡೆಯ ದಿನಾಂಕದ ನಂತರ ಪರಿಗಣಿಸಲಾಗುವುದಿಲ್ಲ.
8. ಅಭ್ಯರ್ಥಿಗಳು ಅನುಲೇಖಕನ ಸಹಾಯ ಕೋರಿ ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅನುಮಾನಸ್ಪದ ಸಂದರ್ಭದಲ್ಲಿ ಮಾತ್ರ ವೈದ್ಯಕೀಯ ಮಂಡಳಿಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು. ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಅವಶ್ಯಕವೆನಿಸಿದರೆ ಅಂತಹವರನ್ನು ವೈದ್ಯಕೀಯ ಪರಿಶೀಲನೆಗೂ ಗುರಿಪಡಿಸಲಾಗುವುದು. ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿದ್ದು ಅದು ಸಾಬೀತಾದ ಸಂದರ್ಭಗಳಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೆ ಅಂತಹವರ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

22. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 24 ಎಸ್ಎಸ್ಆರ್ 2006, ದಿನಾಂಕ:15–11–2006 ರಲ್ಲಿ "ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–I ಮತ್ತು ಭಾಗ– II" ರ ವಿಷಯದ ಪಠ್ಯ ಕ್ರಮಕ್ಕೆ ಮಾಡಲಾದ ತಿದ್ದುಪಡಿ ಈ ಕೆಳಕಂಡಂತಿದೆ:–

PAPER – 1

MARKS: 100
TIME: 2 HOURS

(1) In the heading `` Secretariat Manual Examination Part-I``, at serial number 32,
(a) for the entries under the sub-heading ``Paper-1``, the following shall be substituted namely:-
"Karnataka Government Secretariat Manual of Office Procedure (Revised) 2005 and connected orders."

PAPER –II

MARKS: 100
TIME: 2 HOURS

(b) in the entries under the sub-heading "Paper-II", for item 4 and 5 and entries relating thereto, the following shall be substituted, namely:-
"(4) Karnataka Civil Services (General Recruitment) Rules, 1977;)
(5) Karnataka Public Service Commission (Consultation) Regulations, 2000"

SECRETARIAT MANUAL PART-II

MARKS: 100
TIME: 2 HOURS

(2) under the heading "Secretariat Manual Examination Part-II", for item (ii) and the entries relating thereto, the following items shall be substituted, namely:-
"(ii) The Karnataka Government (Transaction of Business) Rules, 1977
(iii) The Karnataka Government (Allocation of Business) Rules, 1977"

23. ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 35 ಎಸ್ಎಸ್ಆರ್ 2004 ದಿನಾಂಕ:28–08–2006 ರ ಆದೇಶದಲ್ಲಿ "ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ– I" ರಲ್ಲಿ ಕೆಳಕಂಡ ಪಠ್ಯ ಕ್ರಮವನ್ನು ಬದಲಾಯಿಸಿದೆ

ELECTRICITY (AUDIT AND ACCOUNTS) LAWS (HIGHER) EXAMINATION
PART-I

MARKS: 100
TIME: 2 HOURS

(1) In the sub-heading "Electricity Laws Examination Paper-1",at Sl.No.50,-
(a) for item (1) and the entries relating thereto, the following shall be substituted, namely:-
(b) for item (3)and the entries relating thereto, the following shall be substituted, namely:-
"(3) The Karnataka Electricity Reforms Act, 1999 and the rules framed thereunder",

(2) In the entries under the sub-heading "Electricity (Audit and Accounts) Laws (Higher) Examination, Part I" at Sl.No. 51,for item (1) and the entries relating thereto, the following shall be subtituted, namely:-

"(1) The Electricity Act, 2003 (Central Act 36 of 2003) and the rules made thereunder".
ಪ್ರಶ್ನೆ ಪತ್ರಿಕೆಯು 2 ಗಂಟೆಗಳ ಅವಧಿಯಾಗಿದ್ದು 100 ಅಂಕಗಳನ್ನು ಒಳಗೊಂಡಿರುತ್ತದೆ.

24. ಐಎಎಸ್, ಐಪಿಎಸ್ ಮತ್ತು ಐಎಫ್ಎಸ್ ಪ್ರೊಬೇಷನರ್ಸ್‌ಗಳಿಗೆ/ಅಧಿಕಾರಿಗಳಿಗೆ ಕನ್ನಡಭಾಷಾ ವಿಷಯದ ಇಲಾಖಾ ಪರೀಕ್ಷೆ ಅಭ್ಯರ್ಥಿಗಳಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ:ಡಿಪಿಎಆರ್ 168 ಎಸ್ಎಂಇ 94, ದಿನಾಂಕ: 12–07–1995ರಲ್ಲಿ ನಿಗದಿಪಡಿಸಲಾಗಿದ್ದ ಕನ್ನಡ ಪತ್ರಿಕೆ–1ರಲ್ಲಿ 10ನೇ ತರಗತಿಯ ಪಠ್ಯಪುಸ್ತಕ "ಸಾಹಿತ್ಯ ಮಂಜರಿ–3" ಪುಸ್ತಕದ ಬದಲಾಗಿ 10ನೇ ತರಗತಿಯ ಕನ್ನಡ ದ್ವಿತೀಯ ಹಾಗೂ ತೃತೀಯ ಭಾಷಾಪುಸ್ತಕ "ತಿಳಿಗನ್ನಡ–6" ಎಂಬ ಪುಸ್ತಕವನ್ನು ನಿಗದಿಪಡಿಸಲಾಗಿದೆ.

25. ಮೇಲಿನ ಅಧಿಸೂಚನೆಗೆ ಅನುಗುಣವಾಗಿಲ್ಲದ, ಹಾಗೂ ಆನ್‌ಲೈನ್ ಅರ್ಜಿಯಲ್ಲಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿಯ ಸಹಿ ಇಲ್ಲದಂತಹ ನಿಗದಿತ ಶುಲ್ಕ ಪಾವತಿಸದಂತಹ, ಸಂಬಂಧಿತ ಮೇಲಧಿಕಾರಿಗಳಿಂದ ಅಭ್ಯರ್ಥಿಯ ಭಾವಚಿತ್ರಗಳನ್ನು ದೃಢೀಕರಿಸದಂತಹ ಹಾಗೂ ಮೇಲಧಿಕಾರಿಯ ಸಹಿ ಮತ್ತು ಮೊಹರುಗಳನ್ನೊಳಗೊಂಡಿಲ್ಲದಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

26. ನಕಲು ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಪ್ರಮಾಣಪತ್ರವು ಲಭ್ಯವಿಲ್ಲದ ಬಗ್ಗೆ ರೂ. 20/–ಗಳ ಛಾಪಾ ಕಾಗದದ ಮೇಲೆ ನೋಟರಿಯವರ ಮುಂದೆ ಪ್ರಮಾಣಮಾಡಿರುವ "ಅಫಿಡವಿಟ್" ಹಾಗೂ ಪ್ರವೇಶಪತ್ರ

ನೆರಳಚ್ಚು (ಜೆರಾಕ್ಸ್) ಪ್ರತಿಯನ್ನು ಅಥವಾ ನೋಂದಣಿ ಸಂಖ್ಯೆ ಅಧಿವೇಶನ. ಪರೀಕ್ಷಾಕೇಂದ್ರ, ಇತ್ಯಾದಿ ವಿವರಗಳನ್ನೊಳಗೊಂಡ ಸೇವಾ ಪುಸ್ತಕದ ಭಾಗ-1ರ ಉದೃತಭಾಗವನ್ನು ದೃಢೀಕರಿಸಿ ಲಗತ್ತಿಸಬೇಕು ಹಾಗೂ ಯಾವುದೆ ಅವಧಿಯ ಇಲಾಖಾ ಪರೀಕ್ಷೆಯ ಪ್ರತಿಯೊಂದು ವಿಷಯದ ಪ್ರಮಾಣಪತ್ರಕ್ಕೆ **ರೂ. 100/-** ಗಳ ಶುಲ್ಕವನ್ನು, ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದ **ಬ್ಯಾಂಕ್ ಡಿ.ಡಿ/ಐ.ಪಿ.ಓ.**ಅನ್ನು ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಶಾಖೆಗಳು	ದೂರವಾಣಿ ಸಂಖ್ಯೆಗಳು
ಮಾಹಿತಿ ಕೇಂದ್ರ	080-30574957
ಇಲಾಖಾ ಪರೀಕ್ಷಾ ಶಾಖೆ-1	080-30574944
ಇಲಾಖಾ ಪರೀಕ್ಷಾ ಶಾಖೆ-2	080-30574945
ಪ್ರಾಂತೀಯ ಕಛೇರಿ ಮೈಸೂರು	0821-2445956
ಪ್ರಾಂತೀಯ ಕಛೇರಿ ಬೆಳಗಾವಿ	0831-2475345
ಪ್ರಾಂತೀಯ ಕಛೇರಿ ಗುಲ್ಬರ್ಗಾ	08472-227944
ಪ್ರಾಂತೀಯ ಕಛೇರಿ ಶಿವಮೊಗ್ಗ	08182-228099
ಸಹಾಯವಾಣಿ	9740977411

ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:-

1. ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರವನ್ನು ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001 ಈ ವಿಳಾಸಕ್ಕೆ ಮಾಡತಕ್ಕದ್ದು.
2. ಪರೀಕ್ಷೆಗಳ ಸಂಬಂಧದಲ್ಲಿ ಯಾವುದೇ ಮಾಹಿತಿ ಕೋರುವ ಅಭ್ಯರ್ಥಿಗಳು ಮನವಿಯಲ್ಲಿ ಎಲ್ಲಾ ಮಾಹಿತಿ ನೀಡಿ ಅದರೊಂದಿಗೆ ಸಾಕಷ್ಟು ಅಂಚೆ ಚೀಟಿಗಳನ್ನು ಹಚ್ಚಿದ ಸ್ವವಿಳಾಸ ಬರೆದ ಒಂದು ಲಕೋಟೆಯನ್ನು ಲಗತ್ತಿಸಿದರೆ ಆಯೋಗದ ಉತ್ತರವು ಅಡಚಣೆ ಆಗದೇ ಬೇಗ ತಲುಪುವುದು.
3. ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸುವ ಮನವಿಗಳಲ್ಲಿ ನೋಂದಣಿ ಸಂಖ್ಯೆ, ಅಧಿವೇಶನ, ವಿಷಯ ಮತ್ತು ಪರೀಕ್ಷಾಕೇಂದ್ರ ಮುಂತಾದ ಸ್ಪಷ್ಟ ವಿವರಗಳನ್ನು ಸೂಚಿಸದಿದ್ದಲ್ಲಿ ಅಂತಹವುಗಳನ್ನು ಪುರಸ್ಕರಿಸಲಾಗುವುದಿಲ್ಲ.
4. ಅಭ್ಯರ್ಥಿಗಳು ಪೊಲೀಸ್ ಸಮವಸ್ತ್ರವನ್ನು ಧರಿಸಿ ಪರೀಕ್ಷೆ ಬರೆಯುವುದನ್ನು ನಿಷೇಧಿಸಲಾಗಿದೆ.
5. ಅಭ್ಯರ್ಥಿಗಳು ತಮ್ಮ ಸಹ ನೌಕರರನ್ನು/ಇತರರನ್ನು ಕರೆತರುವುದನ್ನು ಮತ್ತು ಪರೀಕ್ಷೆ ನಡೆಯುತ್ತಿರುವಾಗ ಅವರನ್ನು ಭೇಟಿ ಮಾಡಲು ಕೋರುವುದನ್ನು ನಿಷೇಧಿಸಲಾಗಿದೆ.
6. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ತರುವುದನ್ನು ನಿಷೇಧಿಸಲಾಗಿದೆ.

ವಿ.ಬಿ. ಪಾಟೀಲ್
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ," ಉದ್ಯೋಗ ಸೌಧ", ಬೆಂಗಳೂರು-560001.
ಅಧಿಸೂಚನೆ ಸಂಖ್ಯೆ ಇ.ಪ.(1)1932/2010-11/ಪಿಎಸ್‌ಸಿ, ದಿನಾಂಕ:12-08-2010
ಅನುಬಂಧ " ಎ "

2010ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು
ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
1.	ಶನಿವಾರ	18-12-2010	ಬೆಳಿಗ್ಗೆ 10.00 ರಿಂದ 12-00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಲೋಯರ್ ಜನರಲ್ ಲಾ ಭಾಗ- II
2	ಭಾನುವಾರ	19-12-2010	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ- I ಪತ್ರಿಕೆ- 1 ಜನರಲ್ ಲಾ ಭಾಗ- I ಪತ್ರಿಕೆ- 2
3.	ಸೋಮವಾರ	20-12-2010	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ-1 ಅಕೌಂಟ್ಸ್ ಹೈಯರ್ ಪತ್ರಿಕೆ-2
4.	ಮಂಗಳವಾರ	21-12-2010	ಬೆಳಿಗ್ಗೆ 10.00 ರಿಂದ 12.00 ಗಂಟೆ ಮಧ್ಯಾಹ್ನ 2.00 ರಿಂದ ಸಂಜೆ 3.00 ಗಂಟೆ	ಕನ್ನಡ ಪತ್ರಿಕೆ-1 (ಪುಸ್ತಕಗಳಿಲ್ಲದೆ) ಕನ್ನಡ ಪತ್ರಿಕೆ-2 (ಪುಸ್ತಕಗಳಿಲ್ಲದೆ)
5.	ಬುಧವಾರ	22-12-2010	ಬೆಳಿಗ್ಗೆ 10.00 ರಿಂದ 1.00 ಗಂಟೆ ಮೇಲಿನಂತೆ ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ-2 (ಪುಸ್ತಕಗಳಿಲ್ಲದೆ) ಪಿ.ಡಬ್ಲ್ಯೂ.ಡಿ ಹೈಯರ್ ಭಾಗ- I ಪತ್ರಿಕೆ-1, (ಪುಸ್ತಕಗಳಿಲ್ಲದೆ) ಇನ್ಸೂರೆನ್ಸ್ ಲೋಯರ್ ಪತ್ರಿಕೆ-2 {ಪುಸ್ತಕಗಳಿಲ್ಲದೆ} ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-2,

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
6	ಗುರುವಾರ	23–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಲೇಬರ್ ಪತ್ರಿಕೆ–1
			ಮೇಲಿನಂತೆ	ಪ್ರಿಸನ್ಸ್
			ಮೇಲಿನಂತೆ	ಎಕ್ಸೈಸ್
			ಮೇಲಿನಂತೆ	ಮೋಟಾರ್ ವೆಹಿಕಲ್ಸ್
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ– I ಪತ್ರಿಕೆ–1
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–1
			ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ	ಲೇಬರ್ ಪತ್ರಿಕೆ–2
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–2
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ– I ಪತ್ರಿಕೆ–2
7.	ಶುಕ್ರವಾರ	24–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ರೆವಿನ್ಯೂ ಹೈಯರ್ ಭಾಗ– II ಪತ್ರಿಕೆ–1
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ–1
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ– I ಪತ್ರಿಕೆ–1
			ಮೇಲಿನಂತೆ	ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–3
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ರೆವಿನ್ಯೂ ಹೈಯರ್ ಭಾಗ– II ಪತ್ರಿಕೆ–2
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ–2
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ– I, ಪತ್ರಿಕೆ–2
			ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ–1
8.	ಭಾನುವಾರ	26–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪೊಲೀಸ್ ಮ್ಯಾನ್ಯುಯಲ್
			ಮೇಲಿನಂತೆ	ಕೋ–ಆಪರೇಷನ್ ಪತ್ರಿಕೆ–1
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ–1
			ಮೇಲಿನಂತೆ	ಮೈನಿಂಗ್ ಭಾಗ– I
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ–1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ– I ಪತ್ರಿಕೆ–3 ಮತ್ತು ಕೋ–ಆಪರೇಷನ್ ಪತ್ರಿಕೆ–2 (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ)
			ಮೇಲಿನಂತೆ	ಇನ್ಸೂರೆನ್ಸ್ ಹೈಯರ್ ಪತ್ರಿಕೆ–3
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ–2
			ಮೇಲಿನಂತೆ	ಮೈನಿಂಗ್ ಭಾಗ– II
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ–2
9.	ಸೋಮವಾರ	27–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಸಿರಿಕಲ್ಚರ್ ಪತ್ರಿಕೆ–1
			ಮೇಲಿನಂತೆ	ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ– I
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ–3
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ– II ಪತ್ರಿಕೆ–1
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–1
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ–1
			ಮೇಲಿನಂತೆ	ಪೋರ್ಟ್ಸ್ ಹೈಯರ್
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ–1
			ಮೇಲಿನಂತೆ	ಯೂಥ್ ಸರ್ವೀಸಸ್ ಮ್ಯಾನ್ಯುಯಲ್
			ಮಧ್ಯಾಹ್ನ 2.00ರ ರಿಂದ ಸಂಜೆ 4.00 ಗಂಟೆ	ಸಿರಿಕಲ್ಚರ್ ಪತ್ರಿಕೆ–2
			ಮೇಲಿನಂತೆ	ಪಿ.ಡಬ್ಲ್ಯೂಡಿ ಹೈಯರ್ ಭಾಗ– I, ಪತ್ರಿಕೆ–2
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ–2
			ಮೇಲಿನಂತೆ	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ– II
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ– II ಪತ್ರಿಕೆ–2
			ಮೇಲಿನಂತೆ	ಪೋರ್ಟ್ಸ್ ಲೋಯರ್
10	ಮಂಗಳವಾರ	28–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್‌ಲಾಸ್ ಪತ್ರಿಕೆ–1
			ಮೇಲಿನಂತೆ	ಇನ್ಸೂರೆನ್ಸ್ ಲೋಯರ್ ಪತ್ರಿಕೆ–3
			ಮೇಲಿನಂತೆ	ಪಿ.ಡಬ್ಲ್ಯೂಡಿ ಹೈಯರ್ ಭಾಗ– II ಪತ್ರಿಕೆ–1

ಕ್ರ. ಸಂ.	ವಾರ	ದಿನಾಂಕ	ವೇಳೆ	ವಿಷಯ
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ–1
			ಮೇಲಿನಂತೆ	ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್‌ಲಾಸ್ ಪತ್ರಿಕೆ–2
			ಮೇಲಿನಂತೆ	ಪಿ.ಡಬ್ಲ್ಯೂಡಿ ಹೈಯರ್ ಭಾಗ– II, ಪತ್ರಿಕೆ–2
			ಮೇಲಿನಂತೆ	ಪ್ರೆಸ್‌ಮ್ಯಾನ್ಯುಯಲ್ ಲೋಯರ್ ಪತ್ರಿಕೆ–2
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–1
11	ಬುಧವಾರ	29–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪಿ.ಡಬ್ಲ್ಯೂಡಿ. ಲೋಯರ್ ಪತ್ರಿಕೆ–1
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ– I
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ–1
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ–2
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ–1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಹೋಂ ಗಾರ್ಡ್ಸ್ ಮ್ಯಾನ್ಯುಯಲ್
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ– II
			ಮೇಲಿನಂತೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ–2
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ–2
			ಮೇಲಿನಂತೆ	ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ–3
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ–2
12	ಗುರುವಾರ	30–12–2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ–1
			ಮೇಲಿನಂತೆ	ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್– ಪತ್ರಿಕೆ–1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ–2
			ಮೇಲಿನಂತೆ	ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್– ಪತ್ರಿಕೆ–2

ವಿ. ಬಿ. ಪಾಟೀಲ್

ಕಾರ್ಯದರ್ಶಿ ಹಾಗೂ ನಿಯಂತ್ರಕರು,

ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು.

ಕರ್ನಾಟಕ ಲೋಕಸೇವಾ ಆಯೋಗ,"ಉದ್ಯೋಗ ಸೌಧ", ಬೆಂಗಳೂರು–560001.

ಅಧಿಸೂಚನೆ ಸಂಖ್ಯೆ ಇ.ಪ.(1)1932/2010–11/ಪಿಎಸ್‌ಸಿ, ದಿನಾಂಕ:12–08–2010

ಅನುಬಂಧ–"ಬಿ"

2010ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು

ಬೆಂಗಳೂರು, ಕೇಂದ್ರದಲ್ಲಿ ಮಾತ್ರ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
1.	ಮಂಗಳವಾರ	04–01–2011	ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ	ಎಸ್.ಎ.ಎಸ್.ಭಾಗ– I, ಪತ್ರಿಕೆ–1 ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್‌ಲಾಸ್ (ಹೈಯರ್) ಭಾಗ– II (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– I ಪತ್ರಿಕೆ–1 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ–1(ಐಎಎಸ್,ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)

ಕ್ರ. ಸಂ.	ವಾರ	ದಿನಾಂಕ	ವೇಳೆ	ವಿಷಯ
			ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ	ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
			ಮೇಲಿನಂತೆ	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಷನ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಎಸ್.ಎ.ಎಸ್.ಭಾಗ– I ಪತ್ರಿಕೆ–2 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– I ಪತ್ರಿಕೆ–2 (ಪುಸ್ತಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ– II
			ಮೇಲಿನಂತೆ	ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ–2 (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)
2.	ಬುಧವಾರ	05–01–2011	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– I ಪತ್ರಿಕೆ–3
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– I ಪತ್ರಿಕೆ–3
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– II ಪತ್ರಿಕೆ–1 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– II ಪತ್ರಿಕೆ–1 (ಎಲಿಮೆಂಟರಿ ಬುಕ್ ಕೀಪಿಂಗ್)
3	ಗುರುವಾರ	06–01–2011	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– II ಪತ್ರಿಕೆ–2
			ಮೇಲಿನಂತೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–1
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– II ಪತ್ರಿಕೆ–2 (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–2
			ಮೇಲಿನಂತೆ	ಎಸ್.ಎ.ಎಸ್ ಭಾಗ– II ಪತ್ರಿಕೆ–3
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ– II ಪತ್ರಿಕೆ–3
4.	ಶುಕ್ರವಾರ	07–01–2011	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– III ಪತ್ರಿಕೆ–1
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– III ಪತ್ರಿಕೆ–2 (ಪುಸ್ತಕಗಳಿಲ್ಲದೆ)
5.	ಶನಿವಾರ	08–01–2011	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ– III ಪತ್ರಿಕೆ–3
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಎಸ್.ಎ.ಎಸ್. ಭಾಗ– III ಪತ್ರಿಕೆ–4 (ಪುಸ್ತಗಳಿಲ್ಲದೆ)
			ಮೇಲಿನಂತೆ	ಎಲೆಕ್ಟ್ರಿಸಿಟಿ(ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಲೋಯರ್ ಪರೀಕ್ಷೆ
6.	ಭಾನುವಾರ	09–01–2011	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ– I
			ಮೇಲಿನಂತೆ	ಎಸ್.ಎ.ಎಸ್ ಭಾಗ– III ಪತ್ರಿಕೆ–5
			ಮೇಲಿನಂತೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ– I ಪತ್ರಿಕೆ–1
			ಮೇಲಿನಂತೆ	ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್
			ಮೇಲಿನಂತೆ	ಕರ್ನಾಟಕ ಲೋಕಸೇವಾ ಆಯೋಗ ಮ್ಯಾನುಯಲ್
			ಮಧ್ಯಾಹ್ನ 2–00 ರಿಂದ ಸಂಜೆ 4–00ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ– I ಪತ್ರಿಕೆ–2
			ಮೇಲಿನಂತೆ	ಕರ್ನಾಟಕ ಲೋಕಸೇವಾ ಆಯೋಗ ರಿಕ್ರೂಟ್‌ಮೆಂಟ್ ರೂಲ್ಸ್

ಎ. ಬಿ. ಪಾಟೀಲ್
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 634

ವಿಶೇಷ ನೇಮಕಾತಿ ಸಮಿತಿ
ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದರಾವ್ ವೃತ್ತ, ಬೆಂಗಳೂರು-560 009

ಅಧಿಸೂಚನೆ

ಸಂಖ್ಯೆ: ಎಸ್ಆರ್ ಸಿ/100/2009-10, ದಿನಾಂಕ: 29ನೇ ಜೂನ್ 2010

ವಿಷಯ: ಆರೋಗ್ಯ ಸಲಕರಣಾಧಿಕಾರಿ/ಕ್ಷ-ಕಿರಣ ಅಭಿಯಂತರರು ಹುದ್ದೆಯ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಅಧಿಸೂಚನೆ ಸಂಖ್ಯೆ: ಹೆಚ್ಎಫ್‌ಡಬ್ಲ್ಯೂ/388/ಹೆಚ್ ಎಸ್ ಎಂ/2007, ದಿನಾಂಕ: 26.02.2009.

2. ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್ಆರ್‌ಸಿ/78/2007-08, ದಿನಾಂಕ: 27.02.2009.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಆರೋಗ್ಯ ಸಲಕರಣಾಧಿಕಾರಿ/ಕ್ಷ-ಕಿರಣ ಅಭಿಯಂತರರು ಹುದ್ದೆಗೆ ದಿನಾಂಕ: 13.05.2010ರಂದು ಅಧಿಸೂಚನೆ ಸಂಖ್ಯೆ: ಎಸ್ಆರ್‌ಸಿ/100/2009-10 ರಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಭಾದಿತ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಹಾಗೂ ರಿಜಿಸ್ಟ್ರಾರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ದಿನಾಂಕ: 04.12.2009ರ ವಿದ್ಯಾರ್ಹತೆಯ ಬಗ್ಗೆ ನೀಡಿರುವ ಸ್ಪಷ್ಟೀಕರಣವನ್ನು ಪರಿಶೀಲಿಸಿದ ನಂತರ ಅಂತಿಮ ಆಯ್ಕೆಪಟ್ಟಿಯನ್ನು ಮೇಲೆ ಉಲ್ಲೇಖಿಸಿದ ಆದೇಶಗಳನ್ವಯ ಈ ಕೆಳಕಂಡಂತೆ ತಯಾರಿಸಿದ್ದು, ಇದನ್ನು ಸಂಬಂಧಪಟ್ಟವರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕ್ರ. ಸಂ.	ಅಭ್ಯರ್ಥಿ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1	ಶ್ರೀ ಎನ್. ಮುನಿರಾಜು	105411/K20	01.06.1969	ಪ.ಜಾ.	ಬಿ.ಇ. (ಎಲೆಕ್ಟ್ರಿಕಲ್ ಇಂಜಿನಿಯರಿಂಗ್ 53.98%

ಈ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-

1. ಈ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಅಭ್ಯರ್ಥಿಯ ಆಯ್ಕೆಯು ನ್ಯಾಯಾಲಯದಲ್ಲಿ ಹೂಡಲಾಗಿರುವ / ಹೂಡಲಾಗುವ ಪ್ರಕರಣಗಳಲ್ಲಿನ ತೀರ್ಪಿನನ್ವಯ ಪುನರ್‌ವಿಲೋಕನೆಗೆ ಒಳಪಡಿಸುವ ಹಾಗೂ ಅನರ್ಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿಶೀಲನೆಗೆ ಒಳಪಡಿಸಲಾಗುವುದು. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ, ರದ್ದುಗೊಳಿಸಲಾಗುವುದು.
4. ಮೀಸಲಾತಿಯಡಿಯಲ್ಲಿ ಆಯ್ಕೆಗಾಗಿ ಪರಿಗಣಿಸಲಾಗಿರುವ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿ ಯಾವುದೇ ಪ್ರಮಾಣ ಪತ್ರ ನಮೂದಿಸಿದ ಅಂಶಗಳು ವ್ಯತಿರಿಕ್ತವಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಪುನರ್ ಪರಿಶೀಲಿಸಿ, ಆಯ್ಕೆಯನ್ನು ರದ್ದುಗೊಳಿಸಲಾಗುವುದು.
5. ಅಂತಿಮ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಯು ಜಾತಿ/ಆದಾಯ/ಸಿಂಧುತ್ವ ಪ್ರಮಾಣ ಪತ್ರಗಳು/ವೈದ್ಯಕೀಯ ಪರಿಶೀಲನಾ ವರದಿಗಳು/ಆರಕ್ಷಕ ವಿಚಾರಣಾ ವರದಿಗಳ ಸ್ವೀಕೃತಿ / ಪರಿಶೀಲನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಎಲ್ಲಾ ಅಗತ್ಯ ವರದಿಗಳು ಸ್ವೀಕೃತವಾಗಿ ಅಂಗೀಕೃತವಾಗದೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.

ಪಿ.ಡಿ. 115

V -F4-B/B

ವಿಶೇಷ ನೇಮಕಾತಿ ಸಮಿತಿ
ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದರಾವ್ ವೃತ್ತ, ಬೆಂಗಳೂರು–560 009

ಅಧಿಸೂಚನೆ

ಸಂಖ್ಯೆ: ಎಸ್‌ಆರ್‌ಸಿ/101/2009–10, ದಿನಾಂಕ: 29ನೇ ಜೂನ್ 2010

ವಿಷಯ: ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ/388/ಹೆಚ್‌ಎಸ್‌ಎಂ/2007, ದಿನಾಂಕ: 26.02.2009.
2. ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/78/2007–08, ದಿನಾಂಕ: 27.02.2009.
3. ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ/16/ಸೆನೆನಿ/2008, ದಿನಾಂಕ: 1.9.2008.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಗಳಿಗೆ ದಿನಾಂಕ: 06.05.2010ರಂದು ಅಧಿಸೂಚನೆ ಸಂಖ್ಯೆ: ಎಸ್‌ಆರ್‌ಸಿ/101/2009–10 ರಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಭಾದಿತ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರು ವಿದ್ಯಾರ್ಹತೆಯ ಬಗ್ಗೆ, ಪತ್ರ ಸಂಖ್ಯೆ:ಎಸಿಎ:ಸಿಡಿಸಿ: ಜಿಒಕೆ:2009–10, ದಿನಾಂಕ: 06.03.2010ರಲ್ಲಿ ನೀಡಿರುವ ಸ್ಪಷ್ಟೀಕರಣದೊಂದಿಗೆ ಪರಿಶೀಲಿಸಲಾಯಿತು. ಹಾಗೂ ಅಂತಿಮ ಆಯ್ಕೆಪಟ್ಟಿಯನ್ನು ಮೇಲೆ ಉಲ್ಲೇಖಿಸಿದ ಆದೇಶಗಳನ್ವಯ ಈ ಕೆಳಕಂಡಂತೆ ತಯಾರಿಸಿದ್ದು, ಇದನ್ನು ಸಂಬಂಧಪಟ್ಟವರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕ್ರ ಸಂ.	ಅಭ್ಯರ್ಥಿ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1	ಶ್ರೀಮತಿ ಕೆ.ಎಂ. ರಾಜೇಶ್ವರಿ	117255/0178	02.06.1975	ಸಾ.ಅ (ಮ)	ಎಂ.ಎಸ್ಸಿ ಸೈಕಾಲಜಿ (ಕ್ಲಿನಿಕಲ್) 58.40
2	ಶ್ರೀಮತಿ ಎಂ.ಎಸ್. ಮೈಥಿಲಿ	60642/0106	17.06.1985	ಸಾ.ಅ (ಮ)	ಎಂ.ಎಸ್ಸಿ ಸೈಕಾಲಜಿ (ಕ್ಲಿನಿಕಲ್) 53.85

ಈ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:–

1. ಈ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಅಭ್ಯರ್ಥಿಗಳ ಆಯ್ಕೆಯು ನ್ಯಾಯಾಲಯದಲ್ಲಿ ಹೂಡಲಾಗಿರುವ / ಹೂಡಲಾಗುವ ಪ್ರಕರಣಗಳಲ್ಲಿನ ತೀರ್ಪಿನನ್ವಯ ಪುನರ್‌ವಿಲೋಕನೆಗೆ ಒಳಪಡಿಸುವ ಹಾಗೂ ಅನರ್ಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿಶೀಲನೆಗೆ ಒಳಪಡಿಸಲಾಗುವುದು. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ, ರದ್ದುಗೊಳಿಸಲಾಗುವುದು.
4. ಅಂತಿಮ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಯು ವೈದ್ಯಕೀಯ ಪರಿಶೀಲನಾ ವರದಿಗಳು/ಆರಕ್ಷಕ ವಿಚಾರಣಾ ವರದಿಗಳ ಸ್ವೀಕೃತಿ / ಪರಿಶೀಲನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಎಲ್ಲಾ ಅಗತ್ಯ ವರದಿಗಳು ಸ್ವೀಕೃತವಾಗಿ ಅಂಗೀಕೃತವಾಗದೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.

ಪಿ.ಡಿ. 116

ವಿಶೇಷ ನೇಮಕಾತಿ ಸಮಿತಿ
ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದರಾವ್ ವೃತ್ತ, ಬೆಂಗಳೂರು-560 009
ಅಧಿಸೂಚನೆ
ಸಂಖ್ಯೆ: ಎಸ್‌ಆರ್‌ಸಿ/78/ಎ/2009-10, ದಿನಾಂಕ: 21ನೇ ಜೂನ್ 2010

ವಿಷಯ: ಕಿರಿಯ ಕೆಮಿಸ್ಟ್ 09 ಹುದ್ದೆಗಳಿಗೆ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ/388/ಹೆಚ್‌ಎಸ್‌ಎಂ/2007, ದಿನಾಂಕ: 26.02.2009.
2. ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್‌ಆರ್‌ಸಿ/78/2007-08, ದಿನಾಂಕ: 27.02.2009.
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/26/ಸೇಹಿಮ/2002, ದಿನಾಂಕ: 11.04.2003.
4. ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ/16/ಸೆನೆನಿ/2008, ದಿನಾಂಕ: 1.9.2008.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ 09 ಕಿರಿಯ ಕೆಮಿಸ್ಟ್ ಹುದ್ದೆಗಳಿಗೆ ದಿನಾಂಕ: 06.04.2010ರಂದು ಅಧಿಸೂಚನೆ ಸಂಖ್ಯೆ: ಎಸ್‌ಆರ್‌ಸಿ/78/ಎ/2009-10 ರಲ್ಲಿ ತಾತ್ಕಾಲಿಕ ಮುಖ್ಯ ಮತ್ತು ಹೆಚ್ಚುವರಿ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಭಾದಿತರಾದ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆಪಟ್ಟಿಯನ್ನು/ಹೆಚ್ಚುವರಿ ಆಯ್ಕೆಪಟ್ಟಿಯನ್ನು ಉಲ್ಲೇಖ (1) (3) ಮತ್ತು (4)ರ ಆದೇಶದನ್ವಯ ಈ ಕೆಳಕಂಡಂತೆ ತಯಾರಿಸಿದ್ದು, ಇದನ್ನು ಸಂಬಂಧಪಟ್ಟವರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಮುಖ್ಯಪಟ್ಟಿ

ಕ್ರ. ಸಂ.	ಅಭ್ಯರ್ಥಿ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1	ಬಬಿತಾ ಕೆ.ಎಸ್	88624/ಎ171	5.7.1982	ಸಾ.ಅ (ಮ)	ಎಂ.ಎಸ್‌ಸಿ (ಕೆಮಿಸ್ಟ್ರಿ 79.33
2	ಶ್ರೀಧರ್ ಪಂಚಮುಖಿ	1011261/99	7.2.1985	ಪ.ಜಾ/ಸಾ.ಅ (ಸಾ)	ಎಂ.ಎಸ್‌ಸಿ (ಆರ್ಗಾನಿಕ್ ಕೆಮಿಸ್ಟ್ರಿ 75.16
3	ಯಶವಂತ ಕುಮಾರ್ ಜಿ.ಎಸ್.	82218/ಎ4	11.7.1982	ಪ.ಜಾ (ಸಾ)	ಎಂ.ಎಸ್‌ಸಿ (ಇಂಡಸ್ಟ್ರಿಯಲ್ ಕೆಮಿಸ್ಟ್ರಿ 73.82
4	ಸರಸ್ವತಿ ಕಲಾಸ್ಕರ್	84119/ಎ72	12.4.1985	ಪ್ರವರ್ಗ-2ಎ (ಸಾ)	ಎಂ.ಎಸ್.ಸಿ 73.12
5	ಶಾರದಾ ಹೆಚ್. ರುದ್ರಮ್ಮನವರ್	65973/ಎ92	1.1.1984	ಪ.ಪಂ (ಸಾ)	ಎಂ.ಎಸ್‌ಸಿ (ಆರ್ಗಾನಿಕ್) 72.37
6	ದೇವಿಕಾ ಆರ್.ಎಸ್.	100702/ಎ115	14.12.1983	ಪ.ಜಾ (ಮ)	ಎಂ.ಎಸ್‌ಸಿ (ಕೆಮಿಸ್ಟ್ರಿ) 71.86
7	ಚೇತನಾ ಟಿ.ಪಿ	57809/ಎ205	23.3.1985	ಸಾ.ಅ. (ಗ್ರಾ)	ಎಂ.ಎಸ್‌ಸಿ (ಇಂಡಸ್ಟ್ರಿಯಲ್ ಕೆಮಿಸ್ಟ್ರಿ) 71.50
8	ಶಂಭುಲಿಂಗ ಎಂ.	54936/ಎ24	19.12.1979	ಪ್ರವರ್ಗ-1 (ಸಾ)	ಎಂ.ಎಸ್‌ಸಿ (ಇಂಡಸ್ಟ್ರಿಯಲ್ ಕೆಮಿಸ್ಟ್ರಿ) 70.17
9	ಶ್ರೀ ಶೈಲಾ ಹೆಬ್ಬಳ್ಳಿ	120148/ಎ156	1.4.1981	ಪ್ರವರ್ಗ 2ಎ/ಸಾ (ಅಂ.ವಿ)	ಎಂ.ಎಸ್‌ಸಿ (ಕೆಮಿಸ್ಟ್ರಿ) 58.88

ಹೆಚ್ಚುವರಿ ಪಟ್ಟಿ

ಕ್ರ. ಸಂ.	ಅಭ್ಯರ್ಥಿ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
1	ವಿಜಯ್‌ಕುಮಾರ್ ಪಿ.	106630/ಎ206	1.11.1985	ಸಾ.ಅ	ಎಂ.ಎಸ್‌ಸಿ (ಕೆಮಿಸ್ಟ್ರಿ) 74.10

ಕ್ರ ಸಂ.	ಅಭ್ಯರ್ಥಿ ಹೆಸರು	ಅರ್ಜಿ ಸಂಖ್ಯೆ	ಜನ್ಮ ದಿನಾಂಕ	ಮೀಸಲಾತಿ	ಅರ್ಹತೆ ಮತ್ತು ಶೇಕಡವಾರು ಅಂಕ
2	ಮಂಜುಳಾ ಎಸ್.	100809/ಎ181	3.10.1977	ಪ್ರವರ್ಗ 2ಎ	ಎಂ.ಎಸ್‌ಸಿ (ಬಯೋ ಕೆಮಿಸ್ಟ್ರಿ) 71.14
3	ಸರಳ ಪಿ.	100788/ಎ106	10.4.1984	ಪ.ಪಂ	ಎಂ.ಎಸ್‌ಸಿ (ಕೆಮಿಸ್ಟ್ರಿ) 70.40
4	ಹರ್ಷಿತಾ	113065/ಎ110	29.10.1983	ಪ್ರವರ್ಗ-1	ಎಂ.ಎಸ್‌ಸಿ (ಕೆಮಿಸ್ಟ್ರಿ) 68.95
5	ರಾಘವೇಂದ್ರ ನಾಯಕ್ ಆರ್.	82900/ಎ122	6.5.1981	ಪ.ಜಾ	ಎಂ.ಎಸ್‌ಸಿ (ಇಂಡಸ್ಟ್ರಿಯಲ್ ಕೆಮಿಸ್ಟ್ರಿ) 65.60

ಈ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-

1. ಈ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಮುಖ್ಯಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಯಾವುದೇ ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಅದೇ ಮೀಸಲಾತಿಯಡಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಸ್ಥಾನ ಹೊಂದಿರುವ ಅಭ್ಯರ್ಥಿಯನ್ನು ನೇಮಕಾತಿಗೆ ಪರಿಗಣಿಸುವ ಸಲುವಾಗಿ ಮಾತ್ರ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಹೆಚ್ಚುವರಿ ಪಟ್ಟಿಯಲ್ಲಿ ಸ್ಥಾನಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
3. ಅಭ್ಯರ್ಥಿಗಳ ಆಯ್ಕೆಯು ನ್ಯಾಯಾಲಯದಲ್ಲಿ ಹೂಡಲಾಗಿರುವ / ಹೂಡಲಾಗುವ ಪ್ರಕರಣಗಳಲ್ಲಿನ ತೀರ್ಪಿನನ್ವಯ ಪುನರ್‌ವಿಲೋಕನೆಗೆ ಒಳಪಡಿಸುವ ಹಾಗೂ ಅನರ್ಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.
4. ಮೀಸಲಾತಿಯಡಿಯಲ್ಲಿ ಆಯ್ಕೆಗಾಗಿ ಪರಿಗಣಿಸಲಾಗಿರುವ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿ ಯಾವುದೇ ಪ್ರಮಾಣ ಪತ್ರ ನಮೂದಿಸಿದ ಅಂಶಗಳು ವ್ಯತಿರಿಕ್ತವಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ಪುನರ್ ಪರಿಶೀಲಿಸಿ, ಆಯ್ಕೆಯನ್ನು ರದ್ದುಗೊಳಿಸಲಾಗುವುದು.
5. ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿಶೀಲನೆಗೆ ಒಳಪಡಿಸಲಾಗುವುದು. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ, ರದ್ದುಗೊಳಿಸಲಾಗುವುದು.
6. ಅಂತಿಮ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಯು ಜಾತಿ/ಆದಾಯ/ಸಿಂಧುತ್ವ ಪ್ರಮಾಣ ಪತ್ರಗಳು/ವೈದ್ಯಕೀಯ ಪರಿಶೀಲನಾ ವರದಿಗಳು/ಆರಕ್ಷಕ ವಿಚಾರಣಾ ವರದಿಗಳ ಸ್ವೀಕೃತಿ / ಪರಿಶೀಲನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಎಲ್ಲಾ ಅಗತ್ಯ ವರದಿಗಳು ಸ್ವೀಕೃತವಾಗಿ ಅಂಗೀಕೃತವಾಗದೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.

ಪಿ ಡಿ. 117

IN THE COURT OF THE CITY CIVIL JUDGE, CIVIL STATION, BANGALORE CCH-21

P & S.C.NO. 25028/2010

PETITIONER Sri P. Raju
Son of Late Pungavanam, Hindu, Aged about 40 years,
Residing at No.15, 'B' Block, K.H.B. Quarters, Sant John Road,
Bangalore-560 042

AND

RESPONDENT NIL

PUBLIC NOTICE

Whereas notice is hereby given that a petition has been made to this court under Section 372 of the Indian Succession Act, prays for grant of issue succession certificate in favour of the Petitioner for sum of Rs. 50,000/- along with interest and maturity amount of deceased Late. Aiyamma who died on 17.12.2009 at, No.850, 9th Cross, Rajendra Nagar, Koramangala, Bangalore-560034.

Be it to know that no caveat has been entered and the said petition is posted for hearing on 27.08.2010 at 11.00 A.M., any persons claiming to have any interest may come and participate in the proceeding before grant of succession certificate.

SCHEDULE

A sum of Rs.50,000/- along with interest and maturity amount payable by the Manager, Canara Bank, Trinity Circle branch, Bangalore to the Petitioner.

Given under my hand and seal of the court this the 27th day of July 2010.

Assistant Registrar,
City Civil Court, Mayo Hall Unit, Bangalore.

P.D. 120

ಜಲಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ ಇಲಾಖೆ
ಕಾರ್ಯಪಾಲಕ ಅಭಿಯಂತರರು ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು
ಪ್ರಕಟಣೆ ಸಂಖ್ಯೆ: 08/2010–11 ದಿನಾಂಕ: 23ನೇ ಜುಲೈ 2010
ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪದ್ಧತಿ ಕೆ.ಡಬ್ಲ್ಯೂ–1
(ಐಟಂವಾರು ಟೆಂಡರ್)

4702 ಯೋಜನೆ (ವಿಶೇಷ ಘಟಕ) ಲೆಕ್ಕ ಶೀರ್ಷಿಕೆಯಡಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಲೋಕೋಪಯೋಗಿ/ಜಲಸಂಪನ್ಮೂಲ/ಸಣ್ಣ ನೀರಾವರಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000 ರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ನಲ್ಲಿನ ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ರವರಿಂದ ದ್ವಿಪ್ರತಿಗಳಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ ಭರ್ತಿ ಮಾಡಿದ ಟೆಂಡರ್‌ಗಳನ್ನು ನಿಗದಿಪಡಿಸಿದ ದಿನಾಂಕದಂದು ಸಾಯಂಕಾಲ 16.00 ಗಂಟೆಯವರೆಗೆ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಅದೇ ದಿನ ಸಾಯಂಕಾಲ 16.30 ಗಂಟೆಗೆ ಹಾಜರಿರುವ ಗುತ್ತಿಗೆದಾರರ/ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಟೆಂಡರನ್ನು ತೆರೆಯಲಾಗುವುದು.

ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು–1)ರ ನಿಬಂಧನೆ 2 ಮತ್ತು 3 (ಐ.ಟಿ.ಟಿ) ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪರಿಮಾಣ, ಗಣಿ ನಕ್ಷೆ, ರೇಖಾ ಚಿತ್ರಗಳು, ಮತ್ತು ಇತರೆ ವಿವರಗಳನ್ನು ಒಳಗೊಂಡ ಯೋಜನಾ ವರದಿಯನ್ನು ಕರಾರು ಷರತ್ತುಇಗಳನ್ನು ಒಳಗೊಂಡ ದಾಖಲಾತಿಗಳನ್ನು ಎಲ್ಲಾ ಸರ್ಕಾರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ. ಗುತ್ತಿಗೆದಾರರು ಖಾಲಿ ಟೆಂಡರ್ ದಸ್ತಾವೇಜುಗಳನ್ನು ಮೂಲ ನೋಂದಣಿ ಪುಸ್ತಕವನ್ನು ಹಾಜರುಪಡಿಸಿ ಮತ್ತು ನಿಗದಿಪಡಿಸಿದ ಟೆಂಡರ್ ದಾಖಲೆ ಪತ್ರಗಳ ಬೆಲೆಯನ್ನು ಡಿ.ಡಿ. ಅಥವಾ ಪೇ ಆರ್ಡರ್ ಮೂಲಕ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಂಗಳೂರಿನಲ್ಲಿ ಪಾವತಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವ ಮೂಲಕ ಪ್ರಕಟಣೆಯಲ್ಲಿ ನಿಗದಿ ಪಡಿಸಿದ ದಿನಾಂಕಗಳಂದು ಪಡೆಯಬಹುದಾಗಿದೆ.

ಅಪೇಕ್ಷಿತ ಗುತ್ತಿಗೆದಾರರು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು–1) ರಲ್ಲಿ ನಿಗದಿಪಡಿಸಿರುವ ವಿವರವಾದ ಸೂಚನೆಗಳು ಮತ್ತು ಷರತ್ತುಗಳು, ಗುತ್ತಿಗೆದಾರರ ಅರ್ಹತೆ, ಮುಂಗಡ ಠೇವಣಿ ಮೊತ್ತ, ಅದರ ಅವಧಿ, ಹಾಗೂ ಯಾವ ತರಹ ನೀಡಬೇಕೆಂಬುದನ್ನು ಗುತ್ತಿಗೆದಾರರು ದಾಖಲುಗಳನ್ನು ತುಂಬುವ ಬಗ್ಗೆಯೂ ಹಾಗೂ ಅವುಗಳನ್ನು ಪಾಲಿಸಬೇಕಾದ ನಿಯಮಗಳು, ನಿಗದಿತ ಸಮಯ, ಗುತ್ತಿಗೆಯನ್ನು ಸ್ವೀಕರಿಸುವ ಹಾಗೂ ತೆರೆಯಲು ನಿಗದಿಪಡಿಸಿರುವ ದಿನಾಂಕ ಹಾಗೂ ಸಮಯ ಗುತ್ತಿಗೆಯಲ್ಲಿ ತಪ್ಪುಗಳು ಹಾಗೂ ಅವುಗಳನ್ನು ಸರಿಪಡಿಸುವ ಬಗ್ಗೆ, ಭದ್ರತಾ ಠೇವಣಿ ಹಾಗೂ ವ್ಯತ್ಯಾಸದ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚುವರಿ ಭದ್ರತಾ ಠೇವಣಿ ಇತರೆ ಹೆಚ್ಚಿನ ವಿವರ/ಸ್ಪಷ್ಟೀಕರಣಗಳು ಏನಾದರೂ ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯುವುದು.

ಸೂಚನೆ: ಅಧಿಸೂಚಿಸಿದ ದಿನಾಂಕವು ರಜಾದಿನವಾಗಿದ್ದಲ್ಲಿ, ಮುಂದಿನ ಕೆಲಸದ ದಿನ ಮತ್ತು ಸಮಯ ಅನ್ವಯವಾಗುತ್ತದೆ.

ಎಂ.ಟಿ. ರಾಜಶೇಖರಯ್ಯ
ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು

ಜಲಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ ಇಲಾಖೆ

ಕಾರ್ಯಪಾಲಕ ಅಭಿಯಂತರರು ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು

ಪ್ರಕಟಣೆ ಸಂಖ್ಯೆ: 08/2010–11 ದಿನಾಂಕ: 23ನೇ ಜುಲೈ 2010

ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪದ್ಧತಿ ಕೆ.ಡಬ್ಲ್ಯೂ–1

(ಐಟಂವಾರು ಟೆಂಡರ್)

ಕ್ರ. ಸಂ.	ಸಾಮಗಾರಿಯ ಹೆಸರು	ಗುತ್ತಿಗೆ ಕೆಲಸದ ಮೊತ್ತ (ರೂ.ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ.ಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ (ಹಿಂದಿರುಗಿ ಸಲಾರ ದಂತದ್ದು) (ರೂ.ಗಳಲ್ಲಿ)	ಕೆಲಸ ಪೂರ್ಣ ಗೊಳಿಸಲು ನಿಗದಿತ ಅವಧಿ (ಮಳೆಗಾಲ ಸೇರಿ)	ಗುತ್ತಿಗೆ ದಾಖಲು ಪತ್ರಗಳನ್ನು ವಿತರಿಸಲು ಕೊನೆಯ ದಿನಾಂಕ	ಗುತ್ತಿಗೆ ದಾಖಲು ಪತ್ರಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ
1	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು. ಕಾಗೀಮಡು ಪಿಕಪ್‌ಗೆ ರಕ್ಷಣಾ ಕಾಮಗಾರಿ (ವೀರಸಾಗರ ಬಳಿ ನಿರ್ಮಿಸಿದೆ)	6.72	17,000	1250+ ವ್ಯಾಟ್	2 ತಿಂಗಳು	26.8.2010 (17.00 ಗಂಟೆಯ ವರೆಗೆ)	30.8.2010 (16.00 ಗಂಟೆಯ ವರೆಗೆ)

ಎಂ.ಟಿ. ರಾಜಶೇಖರಯ್ಯ

ಪಿ.ಆರ್. 618 ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ ಇಲಾಖೆ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು

ಟೆಂಡರ್ ಪ್ರಕಟಣೆ ಸಂಖ್ಯೆ: 06/10–11, ದಿನಾಂಕ: 24ನೇ ಜುಲೈ 2010

ಐಟಂವಾರು ಟೆಂಡರ್

1. ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ –2000ರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ ರ ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಮುಖಾಂತರ ಅಹ್ವಾನಿಸಲಾಗಿದೆ.
2. ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ದಿ:26.08.2010 ರ ವರಗೆ ಪಡೆಯಬಹುದಾಗಿದೆ.
3. ಟೆಂಡರ್ ದಸ್ತಾವೇಜುಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ 26.08.2010 ರ 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ.
4. ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್‌ಗ ಐ.ಟಿ.ಟಿ. ನಿಬಂಧನೆ 2 ಮತ್ತು 3ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.
5. ಎಲ್ಲಾ ಟೆಂಡರನ್ನು ಅಥವಾ ಯಾವುದಾದರೂ ಟೆಂಡರನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
6. ಹೆಚ್ಚಿನ ವಿವರಗಳನ್ನು ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ https://www.eproc.karnataka.gov.in_ರಲ್ಲಿ ಪಡೆಯಬಹುದಾಗಿದೆ.

ವಿವರ

ಪ್ಯಾಕೇಜ್ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿಯ ಹೆಸರು	ಲೆಕ್ಕ ಶೀರ್ಷಿಕೆ	ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ (ರೂ.ಲಕ್ಷ)	ಇ.ಎಂ.ಡಿ. (ರೂ.ಗಳಲ್ಲಿ)	ಟೆಂಡರ್ ಪ್ರೊಸೆಸಿಂಗ್ ಫಿ (ರೂ.ಗಳಲ್ಲಿ)	ಕಾಮಗಾರಿ ಪೂರ್ಣ ಗೊಳಿಸಲು ಅವಧಿ
1	701	ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಉತ್ತರ ತಾಲ್ಲೂಕುಬಾಗಲೂರು ಕೆರೆ ಅಭಿವೃದ್ಧಿ ಕಾಮಗಾರಿ	4702 ನಬಾರ್ಡ್–15	16.06	40500/–	1250/–	3 ತಿಂಗಳು (ಮಳೆಗಾಲ ಸೇರಿ)

ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

WATER RESOURCES DEPARTMENT (MINOR IRRIGATION)

OFFICE OF THE EXECUTIVE ENGINEER, M.I.DIVISION, BANGALORE

Tender Notification No.06/10-11, dated 24th July 2010

(ITEM RATE TENDER)

1. Executive Engineer, M.I.Division, Bangalore invites Tenders on behalf of Governor of Karnataka for the following work as per Karnataka transparency in public procurement ordinance act 2000 and standard tender document KW-1 through e-Procurement System.
2. Any information's regarding this tender may be obtained from this office up to 26.08.2010 during office hours
3. Tender documents may be downloaded and submitted through e-procurement portal upto 16.00 hours on dt. 26.08.2010
4. Tenderers are advised to note the minimum qualification criteria specified in clause 2 and 3 of ITT in Standard Tender document.
5. All the rights are reserved for postponement or cancellation of all or any tender.
6. Terms and conditions and other details can be obtained through e-procurement portal at the website address https://www.eproc.karnataka.gov.in

TABLE

Package No.	Indent Number	Name of the work	Head of account	Approximate value of work (Rs. lakhs)	Earnest Money Deposit (Rs.)	Tender processing fee (Rs.	Period of completion
1	701	IMPROVEMENT TO BAGALUR TANK IN BANGALORE NORTH TALUK, BANGALORE URBAN DISTRICT	4702 (NABARD-15)	16.06	40500/-	1250/-	3 months (including monsoon)

Executive Engineer,

P.R. 620 Minor Irrigation Division, Bangalore.

ಭಾಗ–ಎ

ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು

ಟೆಂಡರ್ ಅಧಿಸೂಚನೆ

ಟೆಂಡರ್ ಪ್ರಕಟಣೆ ಸಂಖ್ಯೆ:01/2010–11, ದಿನಾಂಕ: 31ನೇ ಜುಲೈ 2010

ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ 76 CSX ಉಪಕರಣಗಳನ್ನು ಅಧಿಕೃತ ತಯಾರಕರು / ಅಧಿಕೃತ ಮಾರಾಟಗಾರರಿಂದ ಮೊಹರು ಮಾಡಿದ ಎರಡು ಲಕೋಟೆಯಲ್ಲಿ ತಾಂತ್ರಿಕ ಲಕೋಟೆ / ಹಣಕಾಸು (ದರ) ಮೌಲ್ಯದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ನಮೂನೆ ವೆಚ್ಚ ರೂ.500+ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ (ರೂ.68/–)
2. ಟೆಂಡರ್ ನಮೂನೆ ವಿತರಿಸುವ ದಿನಾಂಕ: 13.08.2010 ರಿಂದ 24.08.2010.
3. ಟೆಂಡರ್ ಸ್ವೀಕರಿಸುವ ಕೊನೆ ದಿನಾಂಕ: 02.09.2010 (4.00 ಅಪರಾಹ್ನ)
4. ಟೆಂಡರ್ ನಮೂನೆ ತೆರೆಯುವ ದಿನಾಂಕ: 04.09.2010 (11.30 ಬೆಳಿಗ್ಗೆ)

ಟೆಂಡರ್ ನಮೂನೆ ಶುಲ್ಕವನ್ನು ನಗದು / ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರ ಪದನಾಮದಲ್ಲಿ ಪಡೆಯತಕ್ಕದ್ದು. ಟೆಂಡರ್ ಫಾರಂ ಜೊತೆ ವಿವರವಾದ ಷರತ್ತು ನಿಬಂಧನೆಗಳನ್ನು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು ರವರಿಂದ ಪಡೆಯಬಹುದು.

ಮೊಹರು ಮಾಡಿದ ಟೆಂಡರ್‌ಗಳನ್ನು ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ದಿನಾಂಕ. 04.09.2010 (ಬೆಳಿಗ್ಗೆ 11.30 ಗಂಟೆಗೆ) ರಂದು ತೆರೆಯಲಾಗುವುದು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ನಿರ್ದೇಶಕರು

ಗಣಿ ಮತ್ತು ಭೂ ವಿಜ್ಞಾನ ಇಲಾಖೆ

PART-A
DEPARTMENT OF MINES & GEOLOGY, BANGALORE
TENDER INVITING NOTICE
TENDER / NOTIFICATION NO.01/2010-11 DATED: 31st July 2010

Tender Notification No. DMG/STS-2/Global positioning System 76 CSX TENDER/2010-11 Wax sealed two cover system Technical Bid / Financial Bid tender will be received from authorized manufactured / authorized dealer for the supply of Global Positioning System 76 CSX by the under signed at the office of the Director, Department of Mines and Geology, Khanijabhavan, Race Course Road, Bangalore – 560 001.

Cost of the Tender Form is Rs. 500.00 + 68.00 VAT (Not refundable)

The cost of tender form by cash / Demand Draft drawn in favour of the Director of Mines and Geology, Bangalore.

1. Date of issue of tender form : 13.08.2010 to 24.08.2010.
2. Last date for submission of Tender is 02.09.2010 (Up to 4.00 PM)
3. Tender will be opened on 04.09.2010 (at 11.30 AM) in the presence of Tenders or their authorized representatives if present at the time of opening.

The Director, Department of Mines & Geology, Bangalore resolves the right of accepting or rejecting any or all tenders without assigning any reasons.

Director
Department of Mines & Geology

P.R. 617

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಇ–ಟೆಂಡರ್ – ಟೆಂಡರ್ ಪ್ರಕಟಣೆ
ಲೋ.ಇ:ಮಂವಿ:ಟ.ಎನ್.ಡಿ(11ಇ):2010–11:ಜ.ಇ.–I, ದಿನಾಂಕ: 2ನೇ ಆಗಸ್ಟ್ 2010

1 ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಟೆಂಡರ್‌ನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಅರ್ಹರಾದ ಗುತ್ತಿಗೆದಾರರಿಂದ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಕೆಳಕಂಡಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ.

2. ದಿನಾಂಕ: 30.08.2010 ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. (Download).
3. ಟೆಂಡರುಗಳು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಬೇಕು. ಇ.ಎಂ.ಡಿ.ಯನ್ನು ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬಹುದಾಗಿರುತ್ತದೆ ಮತ್ತು ಅದರ ಊರ್ಜಿತ ಅವಧಿಯು ಟೆಂಡರು ಊರ್ಜಿತ ಅವಧಿಗಿಂತ 45 ದಿನಗಳು ಹೆಚ್ಚಾಗಿ ಇರಬೇಕು.
4. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 6.9.2010ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.
5. ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಅರ್ಹತೆ	ಇ.ಎಂ.ಡಿ ಠೇವಣಿ (ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಹೊರತುಪಡಿಸಿ)
1	**ಲೆಕ್ಕಶೀರ್ಷಿಕೆ: 8443 – ಠೇವಣಿ ಕೊಡುಗೆ** ಮಂಗಳೂರು ನಗರ ಕೇಂದ್ರ ಗ್ರಂಥಾಲಯ ಇಲ್ಲಿನ ಕಟ್ಟಡ ಸಂರಕ್ಷಣೆ	29.00	ಒಂದನೇ ದರ್ಜೆ	58,000.00	6 ತಿಂಗಳು

ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 626

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಆಗಸ್ಟ್ ೧೯, ೨೦೧೦ (ಶ್ರಾವಣ ೨೮, ಶಕ ವರ್ಷ ೧೯೩೨)	ಸಂಚಿಕೆ ೩೩

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ. 79 ರಲ್ಲಿ 2–00 ಎಕರೆ ಜಮೀನನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಂಗಮಂದಿರ ನಿರ್ಮಿಸಲು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂ.ಆರ್.ಡಿ. 70 ಎಲ್.ಜಿ.ಪಿ.2008, ದಿನಾಂಕ:8.8.2008.

2) ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರ ಪತ್ರದ ಸಂಖ್ಯೆ: ಎಲ್.ಎನ್.ಡಿ.ಸಿ.ಆರ್: 687/09–10, ದಿನಾಂಕ:23.1.2010.

3) ಇದೇ ಸಮ ಸಂಖ್ಯೆಯ ಆದೇಶ ದಿನಾಂಕ: 11.2.2010.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ. 79 ರ ಜಮೀನು ಸರ್ಕಾರಿ ಗೋಮಾಳ ಜಮೀನಾಗಿದ್ದು, ಒಟ್ಟು ವಿಸ್ತೀರ್ಣ 23.36 ಎಕರೆ:ಗುಂಟೆ ಜಮೀನಿರುತ್ತದೆ. ಆ ಪೈಕಿ 14–26 ಎಕರೆ:ಗುಂಟೆ ಜಮೀನನ್ನು ಮೆ:ಸನ್‌ರೈಸ್ ಇಂಟರ್‌ಆಕ್ಟಿವ್ (ಇಂಡಿಯಾ) ಲಿ., ರವರಿಗೆ ಮಂಜೂರಾಗಿರುತ್ತದೆ ಹಾಗೂ 2–05 ಎಕರೆ:ಗುಂಟೆ ಜಮೀನು ಕೆ.ಐ.ಎ.ಡಿ.ಬಿ. ರವರಿಗೆ ಭೂ ಸ್ವಾಧೀನವಾಗಿರುತ್ತದೆ. ಉಳಿಕೆ 7–05 ಎಕರೆ:ಗುಂಟೆ ಸರ್ಕಾರದ ಹೆಸರಿನಲ್ಲಿ ಸರ್ಕಾರಿ ಗೋಮಾಳ ಶೀರ್ಷಿಕೆಯಲ್ಲಿರುತ್ತದೆ. ಈ ಪೈಕಿ 2–00 ಎಕರೆ ಜಮೀನನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ರಂಗಮಂದಿರ ನಿರ್ಮಾಣದ ಉದ್ದೇಶಕ್ಕಾಗಿ ಕಾಯ್ದಿರಿಸಲು ನಕ್ಷೆಯನ್ನು ದೃಢೀಕರಿಸಿ, ರಾಜಸ್ವ ನಿರೀಕ್ಷಕರ ವರದಿಯೊಂದಿಗೆ ತಹಶೀಲ್ದಾರ್ ರವರು ಪ್ರಸ್ತಾವನೆ ಸಲ್ಲಿಸಿದ್ದರು. ಇದರ ಆಧಾರದ ಮೇಲೆ ನಲ್ಲೂರಹಳ್ಳಿ ಗ್ರಾಮದ ಸ.ನಂ.79 ರಲ್ಲಿ 2–00 ಎಕರೆ ವಿಸ್ತೀರ್ಣದ ಜಮೀನನ್ನು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 1964 ರ ಕಲಂ 71 ರಡಿ ಕಾಯ್ದಿರಿಸಲು ಉಲ್ಲೇಖ (3) ರಂತೆ ಆದೇಶಿಸಲಾಗಿತ್ತು.

ಆದರೆ ನಕ್ಷೆಯಲ್ಲಿ ತೋರಿಸಿದ್ದ ಈ ಜಮೀನು ಮೆ:ಸನ್‌ರೈಸ್ ಇಂಟರ್‌ಆಕ್ಟಿವ್ (ಇಂಡಿಯಾ) ಲಿ., ರವರಿಗೆ ಮಂಜೂರಾಗಿದ್ದ, 14–26 ಎಕರೆ:ಗುಂಟೆ ವಿಸ್ತೀರ್ಣದ ಜಮೀನಿನಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ರಂಗಮಂದಿರ ನಿರ್ಮಾಣ ಮಾಡಲು ಕಾಯ್ದಿರಿಸಿರುವ 2–00 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಸುಮಾರು 1–34.08 ಎಕರೆ:ಗುಂಟೆ ಸೇರಿರುವುದು ತಿಳಿದುಬಂದಿರುವ ಕಾರಣ ಈ ಕೆಳಕಂಡ ಆದೇಶ.

ಆದೇಶ

ಸಂಖ್ಯೆ:ಎಲ್.ಎನ್.ಡಿ(ಪೂ)ಸಿ.ಆರ್:242/09-10, ದಿನಾಂಕ: 14ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ನಲ್ಲೂರಹಳ್ಳಿ ಗ್ರಾಮದ ಸ.ನಂ. 79 ರಲ್ಲಿ 2-00 ಎಕರೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಂಗಮಂದಿರ ನಿರ್ಮಾಣಕ್ಕಾಗಿ ಕಾಯ್ದಿರಿಸಲು ಹೊರಡಿಸಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ.

ಹೆಚ್. ರಾಮಾಂಜನೇಯ

ಪಿ.ಆರ್. 241 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಂತಿಮ ಅಧಿಸೂಚನೆ

ನಂ. ಕೆ.ಎಸ್.ಎ. : ಸಿ.ಆರ್: 17/07-08, ಬೆಂಗಳೂರು, ದಿನಾಂಕ: 22ನೇ ಜುಲೈ 2010

ನಂ.ಕೆ.ಎಸ್.ಎ:ಸಿ.ಆರ್:17/07-08, ದಿನಾಂಕ: 6.1.2010 ರ ಪ್ರಿಲಿಮಿನರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರಲ್ಲಿ ಸದರಿ ಅಧಿಸೂಚನೆಯ ಷೆಡ್ಯೂಲ್‌ನಲ್ಲಿರುವ ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಾಲಿ ಮೊಹಲ್ಲಾ ಕಾರ್ಟ್ ಸ್ಟ್ಯಾಂಡ್ ರಸ್ತೆಯಲ್ಲಿರುವ 0-03.08 ಗುಂಟೆ ವಿಸ್ತೀರ್ಣದಲ್ಲಿನ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಸೆಕ್ಷನ್ 3 ರಡಿಯಲ್ಲಿ ಪ್ರಾರಂಭಿಕವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿ ಸಂಬಂಧಿಸಿದವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಈ ಬಗ್ಗೆ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇವರು ಮೇಲ್ಕಂಡ ಕೊಳಚೆ ಪ್ರದೇಶವನ್ನು ಮಂಡಳಿ ಕಾಯ್ದೆ, ಅಧಿನಿಯಮ 3 ರಂತೆ ಕೊಳಚೆ ಪ್ರದೇಶವೆಂದು ಘೋಷಿಸಿ ಅಧಿಸೂಚನೆ ಹೊರಡಿಸುವಂತೆ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯವರು ವರದಿ ಸಲ್ಲಿಸಿರುತ್ತಾರೆ.

ಪ್ರಶ್ನಿತ ಕೊಳಚೆ ಪ್ರದೇಶದಲ್ಲಿ ಗುಡಿಸಲು/ಮನೆಗಳು ದುರಸ್ಥಿ ಇಲ್ಲದೇ ಕುಡಿಯುವ ನೀರು, ದೀಪ, ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದೇ ಅನಾರೋಗ್ಯದ ವಾತಾವರಣ ಉಂಟಾಗಿರುತ್ತದೆ. ಸದರಿ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದು ಅತ್ಯಗತ್ಯವಾಗಿರುತ್ತದೆ. ಆದ್ದರಿಂದ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3 ರಡಿಯಲ್ಲಿ ದತ್ತವಾಗಿರುವ ಅಧಿಕಾರದಂತೆ ಈ ಕೆಳಕಂಡ ಷೆಡ್ಯೂಲ್ ನಲ್ಲಿ ನಮೂದಿಸಿರುವ ಪ್ರದೇಶವನ್ನು ಮೇಲ್ಕಂಡ ಕಾಯ್ದೆಯ ಸೆಕ್ಷನ್ 3 ರಡಿಯಲ್ಲಿ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿರುತ್ತೇನೆ.

ಷೆಡ್ಯೂಲ್

ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಾಲಿ ಮೊಹಲ್ಲಾ ಕಾರ್ಟ್ ಸ್ಟ್ಯಾಂಡ್ ರಸ್ತೆಯಲ್ಲಿರುವ ಕೊಳಚೆ ಪ್ರದೇಶದ ಚಕ್ಕುಬಂದಿ ಹಾಗೂ ಹದ್ದುಬಸ್ತು ತಃಖ್ತೆ.

ಕ್ರ. ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ:ಗುಂ.	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	ಜಾಲಿಮೊಹಲ್ಲಾ ಕಾರ್ಟ್‌ಸ್ಟ್ಯಾಂಡ್ ರಸ್ತೆಯಲ್ಲಿರುವ ಕೊಳಚೆ ಪ್ರದೇಶ	ಬೆಂಗಳೂರು ಮಹಾನಗರ ಪಾಲಿಕೆ	ರಸ್ತೆಯ ಮೇಲೆ	0-03.08 ಗುಂಟೆ	ಖಾಸಗಿ ಮನೆ	ಸಿ.ಟಿ.ಎಸ್ ನಂ.3229	ಸಿ.ಟಿ.ಎಸ್. ನಂ.3227 ಮತ್ತು ಶೌಚಾಲಯ ಖಾಸಗಿ ಮನೆಗಳು	ಸಿ.ಟಿ.ಎಸ್. ನಂ. 3246, 3247, 3249, 3250, 3252

ಎಂ.ಕೆ. ಅಯ್ಯಪ್ಪ

ಪಿ.ಆರ್. 245 ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು

ಪುರಸಭಾ ಕಾರ್ಯಾಲಯ, ಮುಳಬಾಗಿಲು

ಸಾರ್ವಜನಿಕ ಪ್ರಕಟಣೆ

ಕ್ರಸಂ: ಪುಸಮು/ಯೋಪ್ರಾ/ಮು/ಪ್ರಕಟಣೆ/01/2010-11, ದಿನಾಂಕ: 3ನೇ ಆಗಸ್ಟ್ 2010

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(1)ರನ್ವಯ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ:ನಅಇ/78/ಮೈಅಪ್ರಾ/2009, ಬೆಂಗಳೂರು ದಿನಾಂಕ: 16.06.2009ರನ್ವಯ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಈ ಯೋಜನೆಯ ನಕ್ಷೆ ಮತ್ತು ವರದಿಯನ್ನು ಪುರಸಭೆಯಲ್ಲಿ ಕಛೇರಿ ವೇಳೆಯಲ್ಲಿ ಸಾರ್ವಜನಿಕ ಅವಗಾಹನೆಗೆ ಪ್ರಕಟಿಸಲಾಗಿದೆ.

ಸದರಿ ಮಹಾ ಯೋಜನೆ-1ರ ಬಗ್ಗೆ ಯಾವುದಾದರೂ ಆಕ್ಷೇಪಣೆ ಅಥವಾ ಸಲಹೆ ಸೂಚನೆ ಮಾಡುವುದಿದ್ದಲ್ಲಿ ಈ ಪ್ರಕಟಣೆಯನ್ನು ಪ್ರಕಟಿಸಿದ 60 ದಿನದೊಳಗೆ ಮುಳಬಾಗಿಲು ಪುರಸಭೆಗೆ ಖುದ್ದಾಗಲಿ ಅಥವಾ ನೊಂದಾಯಿಸಿದ ಅಂಚೆ ಮೂಲಕವಾಗಿ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು.

ಮುಖ್ಯಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು

ಪಿ.ಡಿ. 15 ಪುರಸಭಾ ಯೋಜನಾ ಪ್ರಾಧಿಕಾರ ಮುಳಬಾಗಿಲು

ಕಂದಾಯ ಸಚಿವಾಲಯ

ಭೂಸ್ವಾಧೀನ ಅಧಿನಿಯಮದ 6(1) ನೇ ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ: ಕಂಇ 30 ಭೂಸ್ವಾತು 2010, ದಿನಾಂಕ: 15ನೇ ಜುಲೈ 2010

